# ಎನ್.ಇ.ಪಿ. ಕನ್ನಡ ಭಾಷಾ ಪಠ್ಯ

# ವಾಣಿಜ್ಯ ಸೌರಭ–IV

ನಾಲ್ಕನೇ ಸೆಮಿಸ್ಟರ್ ಬಿ.ಕಾಂ.


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ ನಾಯಕ**

ಸಂಪಾದಕರು

**ಡಾ.ರಿಯಾಜ್ ಪಾಷ**

**ಪ್ರೊ. ರಮೇಶ್.ಎಂ**

**ಡಾ.ಸುಭಾಷ್ ರಾಜಮಾನೆ**



ಬೆಂಗಳೂರು ನಗರ ವಿಶ್ವವಿದ್ಯಾಲಯ BENGALURU CITY UNIVERSITY

ಆಗು ನೀ ಅನಿಕೇತನ BE BOUNDLESS

SAHITHYA SOURABHA: A- Kannada-04
A Prescribed NEP Text Book for B.Com Degree Course (Third Semister);

Chief Editor:
Prof. Prashanth G. Nayak
Professor of Kannada & Director. Kannada Bharathi, Kuvempu University.
Shankaraghatta, B.R. Project. Shimoga Dist

Edited By:
Dr. Riyaz Pasha
Prof.Ramesh M
Dr. Subhash Rajmaane

Publishd by: Bengaluru City University, BENGALURU
Pp: 99+ vii
Bengaluru City University,
First print: 2022

ಪ್ರಧಾನ ಸಂಪಾದಕರು
ಡಾ. ಪ್ರಶಾಂತ ಜಿ. ನಾಯಕ

ಸಲಹಾ ಸಮಿತಿ
ಡಾ. ಕೆ.ವೈ. ನಾರಾಯಣಸ್ವಾಮಿ
ಡಾ. ಎಂ.ಎಸ್.ಆಶಾದೇವಿ

ಸಂಯೋಜಕರು
ಡಾ. ಬೆಳಕೆರೆ ಲಿಂಗರಾಜಯ್ಯ

ಬೆಲೆ: 00/–
ಪ್ರಕಾಶಕರು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ **'**ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ**'**.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು ೨೦೨೦-೨೦೨೧ರ ವರ್ಷವನ್ನು ಕನ್ನಡ ಕಾಯಕ ವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನುತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಆತ್ಮೀಯರಾದ ಡಾ.ಲಿಂಗರಾಜಯ್ಯನವರ ಶ್ರಮವನ್ನು ಸ್ಮರಿಸಲೇಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ.ಲಿಂಗರಾಜಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ.ರಮೇಶ್.ಬಿ ಮಾನ್ಯ ಕುಲ ಸಚಿವರು ಪರೀಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

# ಬಿ.ಕಾಂ ನಾಲ್ಕನೇ ಸೆಮಿಸ್ಟರ್ ಪಠ್ಯ ಪರಿವಿಡಿ


**I.** **ಕಡಲು**

೧. ನೀರೊಳಗಿರ್ದುಂ ಬೆಮರ್ತನುರಗಪತಾಕಂ – ರನ್ನ ೦೭
೨. ಹೃದಯ ಸಮುದ್ರ – ದ.ರಾ.ಬೇಂದ್ರೆ ೧೦
೩. ಸಮುದ್ರ ಗೀತೆಗಳು– ವಿ.ಕೃ.ಗೋಕಾಕ್ ೧೧
೪. ಲಕ್ಷದ್ವೀಪಯಾನ – ರಹಮತ್ ತರೀಕೆರೆ (ಓದು ಪಠ್ಯ) ೧೬

**II.** **ಸಹಬಾಳ್ವೆ**

೧. ಹೊಸಬಾಳು ನಮ್ಮದಿದೆ – ಚನ್ನವೀರ ಕಣವಿ ೨೬
೨. ಸಂಗಾತಿಗಳು – ಕರೀಗೌಡ ಬೀಚನಹಳ್ಳಿ ೨೯
೩. ಅಕ್ಕಯ್ – ಅಕ್ಕಯ್ ಪದ್ಮಶಾಲಿ, ನಿರೂಪಣೆ: ಡಾ.ಡೊಮಿನಿಕ್ ಡಿ ೪೭
೪. ಹುಲಿ ಬಂತು ಹುಲಿ – ಎ.ಸಿ.ಲಕ್ಷ್ಮಣ್ (ಓದು ಪಠ್ಯ) ೫೨

**III.** **ಸಾವು**

೧. ಕೆರೆಗೆ ಹಾರ –ಜನಪದ ಕಥನ ಗೀತೆ ೫೯
೨. ಒಬ್ಬನಿಗೆ ಎಷ್ಟು ಭೂಮಿ ಬೇಕು– ಲಿಯೋ ಟಾಲ್‌ಸ್ಟಾಯ್
(ಅನು:ರಂಗನಾಥ ರಾವ್) ೬೩
೩. ಸಾವೇ ಮನೆಗೆ ಭೂಷಣ – ಕೆ.ಸತ್ಯ ನಾರಾಯಣ ೮೧
೪. ಪರಿಸ್ಥಿತಿ– ಮನಸ್ಥಿತಿಗಳಿಗೆ ಆತ್ಮಹತ್ಯೆಯೇ ಪರಿಹಾರವಲ್ಲ!
ಆರ್.ಎಮ್. ತಿಮ್ಮಾಪುರ– (ಓದು ಪಠ್ಯ) ೮೮

**IV.** **ಸಂಕೀರ್ಣ**

೧. ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ – ಕುವೆಂಪು ೯೪
೨. ಕೊಳಗೇರಿಗಳ ಸುಧಾರಣೆಯ ಸಾಧ್ಯತೆಗಳು–ಲಾರಿ ಬೇಕರ್
(ಅನು:ಜಸವಂತ ಜಾದವ್) ೯೯
೩. ಭಾಷೆಯ ಮಾಂತ್ರಿಕತೆ – ಡಾ. ಕೆ.ವಿ.ನಾರಾಯಣ ೧೦೭
೪. ತೆರೆದ ಮನ –ಎ.ಎನ್.ಮೂರ್ತಿರಾವ್ (ಓದು ಪಠ್ಯ) ೧೧೨

# I. ಕಡಲು

೧. ನೀರೊಳಗಿರ್ದುಂ ಬೆಮರ್ತನುರಗಪತಾಕಂ – ರನ್ನ
೨. ಹೃದಯ ಸಮುದ್ರ – ದ.ರಾ.ಬೇಂದ್ರೆ
೩. ಸಮುದ್ರಗೀತೆಗಳು – ವಿ.ಕೃ.ಗೋಕಾಕ್
೪. ಲಕ್ಷದ್ವೀಪಯಾನ – ರಹಮತ್ ತರೀಕೆರೆ (ಓದು ಪಠ್ಯ)

**ಆಶಯ:**

ಹನಿ ಹನಿ ಸೇರಿ ಹಳ್ಳ. ಹಳ್ಳಗಳು ತೊರೆಯಾಗಿ, ಭೋರ್ಗರೆವ ನದಿಯಾಗಿ ಹರಿದು ಬಂದು ಕಡಲು ಸೇರುತ್ತದೆ. ಈ ಪಯಣದಲ್ಲಿ ನದಿ ಅದೆಷ್ಟು ಊರುಗಳ ಬೆಟ್ಟ, ಗುಡ್ಡ, ಕಾಡುಗಳ ಮೂಲಕ ಹಾಯ್ದು ಬಂದಿರುತ್ತದೆಯಲ್ಲವೇ? ಹಾಗಾದರೆ ಅದು ಅದೆಷ್ಟು ಸತ್ವಗಳ ತನ್ನೊಳಗೆ ಮೈಗೂಡಿಸಿಕೊಂಡಿರಬಹುದು!

ಕಾಡಿನ ಗಿಡ ಮೂಲಿಕೆಗಳ ಔಷಧೀಯ ಗುಣಗಳನ್ನೂ, ನಾಡಿನ ಪ್ರೇಮಿಗಳ ಪಿಸುಮಾತುಗಳನ್ನೂ, ಅನ್ನ ಬೆಳೆವ ರೈತನ ಆನಂದ ಬಾಷ್ಪವನ್ನೂ ಒಟ್ಟೊಟ್ಟಿಗೆ ಹೊತ್ತು ಹರಿಯುತ್ತದೆ ನದಿ. ನದೀತೀರಗಳು ನಾಗರೀಕತೆಗಳನ್ನು ಬೆಳೆಸಿದವು. ಬೃಹತ್ ನಗರಗಳು ನದಿಯ ಕೃಪೆಯಿಂದ ಉದಿಸಿದವು. ಅದೇ ನದಿಯ ಪ್ರವಾಹವು ನಗರಗಳನ್ನು ಅಳಿಸಿಯೂ ಹಾಕಿತು. ಹೀಗೆ ಹರಿಯುತ್ತಾ, ಬೆಳೆಯುತ್ತಾ, ಕಟ್ಟುತ್ತಾ, ಕೆಡವುತ್ತಾ ತನ್ನಿಚ್ಛೆಯಂತೆ ಹರಿಯುವ ಅವೆಷ್ಟೋ ನದಿಗಳು ಬಂದು ಕಡಲು ಸೇರುತ್ತವೆ. ಹಾಗಂತ ಕಡಲು ಯಾವತ್ತಾದರೂ ತನ್ನತನವನ್ನು ಬಿಟ್ಟು ಕೊಟ್ಟಿದೆಯೇ? ನದಿ ಅದೆಷ್ಟು ದೊಡ್ಡದಾಗಿದ್ದರೂ ಕಡಲು ಸದಾ ಕಡಲಾಗಿಯೇ ಉಳಿದಿರುತ್ತದೆ ಅಲ್ಲವೇ? ತನ್ನ ಪ್ರಶಾಂತತೆ ಮತ್ತು ಭೋರ್ಗರೆತವನ್ನು ಸಮದೂಗಿಸುತ್ತಾ ಗಂಭೀರವಾಗಿಯೇ ಇರುತ್ತದೆ; ಅಲ್ಲವೆ?

ಹನಿಗಳು ಇಂಗಿಹೋಗುತ್ತವೆ. ಅಥವಾ ಇನ್ಯಾವುದರಲ್ಲೋ ಬೆರೆತು, ತಾವೂ ಅದರಂತಾಗಿ ತಮ್ಮನ್ನು ಕಳೆದುಕೊಳ್ಳುತ್ತವೆ, ಬದಲಾಗಿಹೋಗುತ್ತವೆ. ಆದರೆ ಅಂಥಾ ಅಗಣಿತ ಹನಿಗಳಿಂದಾದ ಕಡಲು ಬತ್ತುವುದೂ ಇಲ್ಲ, ಕಳೆಯುವುದೂ ಇಲ್ಲ. ಎಷ್ಟೆಲ್ಲ ನದಿಗಳು ಬಂದು ಬೆರೆತರೂ ಅದು ಬದಲಾಗುವುದೂ ಇಲ್ಲ!

ನಾವು ಕೂಡ ಜೀವನದಲ್ಲಿ ಹಲವು ಬಗೆಯ ಜನರ ಸಂಪರ್ಕಕ್ಕೆ ಬರುತ್ತೇವೆ. ಅವೆಷ್ಟೋ ಜನರ ಆಲೋಚನೆಗಳು, ತತ್ವ, ಸಿದ್ಧಾಂತಗಳು ನದಿಗಳಂತೆ ನಮ್ಮ ತಲೆ ಹೊಕ್ಕುತ್ತವೆ. ಕೆಲವೊಮ್ಮೆ ಯಾರದೋ ಮಾತಿನ ಮೋಡಿಗೆ ಸಿಕ್ಕು ನಮ್ಮತನವನ್ನೇ ಕಳಕೊಂಡು ಬಿಡುತ್ತೇವೆ. ಅಲ್ಲಿಗೆ ನಮ್ಮ ಸ್ವಂತವಾಗಿ ಯೋಚಿಸುವ ಶಕ್ತಿಯೂ ಇಲ್ಲವಾಗಿ ಬಿಡುತ್ತದೆ. ಹಾಗಾಗಬಾರದು ಎಂದಾದರೆ ನಾವು ಕಡಲಾಗಬೇಕು. ಪ್ರತಿಯೊಂದನ್ನೂ ಕಡಲಿನಂತೆ ಸ್ವೀಕರಿಸಬೇಕು. ನಂತರ ಅವು ನಮ್ಮೊಳಗೆ ಮಥನವಾಗಬೇಕು. ಆಮೇಲಷ್ಟೇ ಅದನ್ನು ಉಳಿಸಿಕೊಳ್ಳಲು ಅಥವಾ ತಿರಸ್ಕರಿಸಲು ನಾವು ಸಮರ್ಥರಾಗುತ್ತೇವೆ ಮತ್ತು ನಮ್ಮತನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತೇವೆ.

# ೧. ನೀರೊಳಗಿರ್ದುಂ ಬೆಮರ್ತನುರಗಪತಾಕಂ – ರನ್ನ

ವ॥ ಎಂಬುದುಂ ಧೃತರಾಷ್ಟ್ರನಂದನಂ ಮುನ್ನೆ ಗೆಯ್ದ ಅಧರ್ಮಮಂ ನೆನೆಯದೆ
ಕುಲಕ್ರಮಯುಕ್ತಮಪ್ಪ ನಿರ್ಮಲಕ್ಷತ್ರಧರ್ಮಮನೆ ಬಗೆದು ಧರ್ಮನಂದನ ನಿಂತೆಂದಂ–

ಭರತನ್ವಾಯದೊಳಂದಿನಿಂದಿನೆಡೆಯೊಳ್ ಸಾಪತ್ನ್ಯ(ದೊ)ಳ್ ಬದ್ಧಮ
ತ್ಸರಮಿಲ್ಲೆಮ್ಮನಕಾರಣಂ ಕದಡಿದಯ್ ಸಾವೆಯ್ದಿದಯ್ ನಷ್ಟಸೋ
ದರಮಾಯಿತ್ತೆನಗಂ ಸ್ವಗೋತ್ರವಧೆಯಪ್ಪಾ ಪಾತಕಂ ಕೌರವೇ
ಶ್ವರ ನೀಂ ಸಂಧಿಗೊಡಂಬಡಿಂತು ಕೊಳನಂ ಪೊಕ್ಕಿರ್ಪುದೇಂ ತಕ್ಕುದೇ ॥೧॥

ವ// ಎಂಬುದುಂ ಆ ನುಡಿಗೆ ಸೈರಿಸದೆ ಈ ಬೂತೆನ್ನ ಸರಂಗೇಳ್ದೊಡಲ್ಲದೆ ಪೊರ
ಮಡುವನಲ್ಲನಿವಂಗಾನೆ ಬಲ್ಲೆನೆಂದು ಭೀಮಸೇನನುದ್ದಾಮ
ಕೋಪಾಟೋಪ ವಿರಚಿತ ಬದ್ಧಭ್ರುಕುಟಿಯಾಗಿ–

ಬಳವದ್ವಿಗ್ರಹದೊಳ್ ನೀ
ನೊಳಗಿರ್ದಯ್ ಮುನ್ನೆ ನಿನ್ನ ಕುಲಮೆಲ್ಲಮನಾಂ
ಮುಳಿದಿರೆದುಂ ಪಿಂದನೆ ಬರೆ
ಕೊಳದೊಳಗುಳಿದಿರ್ದು ಮರುಳೆ ಬರ್ದುಕಲ್ ಬಗೆವಾ /೨/

ಸ್ವರಮಂ ಕೇಳಲ್ಕೆನ್ನು
ಗ್ರರೂಪಮಂ ನಿಂದು ನೋಡಲಣ್ಮದೆ ಸಮರಾ
ಕರಮಂ ಬಿಸುಟ್ಟು ಕಮಲಾ
ಕರಮಂ ಪೊಕ್ಕೆಲವೊ ಮರುಳೆ ಬರ್ದುಕಲ್ ಬಗೆವಾ /೩/

ಜಳದೊಳ್ ಮೀನಿರ್ಪವೊಲ್ ನೀಂ ಕೊಳದೊಳೆ ಮುಳುಗಿರ್ದಕ್ಕಟಾ ಕೋಡ ಸೇಡಿಂ
ಗೊಳಗಾದಯ್ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ ತೋರೆದಯ್ ನಿ
ನ್ನೆಳವಂ ಚೀಃ ಸತ್ತರೇಂ ಪುಟ್ಟರೆ ಪೊರಮಡು ನೀಂ ಕಯ್ದುಗೊಳ್ ಕೌರವೇಂದ್ರಾ
ಚಳವಜ್ರಂ ಬಂದನೀತಂ ಕುರುಕುಲಮಥನೋದ್ಭೀಕರಂ ಭೀಮಸೇನಂ ॥೪ ॥

ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೋ ಕೃಷ್ಣಾಂ
ಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ಮ
ಚ್ಚರದಿಂ ಕಾಂತಾರದೊಳ್ ತಿರ್ರನೆ ತಿರಿಪಿದ ಸೊರ್ಕಿಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮಭೀಮಂ ॥೫॥

ವ// ಅಂತು ಮುಟ್ಟಿ ಮೂದಲಿಸಿ ನುಡಿದುಮೆಂತುಂ ಪೊಱಮಡಿಸಲಾರದೆ–

ಎನಿತಂ ಪೊಕ್ಕಿರ್ದಪಯ್ ನೀಂ ಪೊಱಮಡು ಕೊಳದಿಂ ದ್ರೌಪದೀದ್ರೋಹ ದುಶ್ಶಾ
ಸನದುಷ್ಟಜ್ಯೇಷ್ಠ ಭೀಷ್ಮಪ್ರಮುಖನಿಖಿಲಬಂಧುಕ್ಷಯೋತ್ಪನ್ನ ದುಃಖ
ಧ್ವನಿವಾರಿಚ್ಛಿನ್ನ ಧೈರ್ಯದ್ರುಮ ಯಮಸುತನಿಷ್ಕಾರಣದ್ವೇಷಿ ಭೀಮ
ಧ್ವನಿಯಂ ಕೇಳ್ದಿನ್ನುಮಿರ್ದಯ್ ಕುರುಕುಲವಿಲಯೋತ್ಪಾತನೋತ್ಪಾತಕೇತೂ.//೦೬//

ಎಂದು ಮತ್ತಮಿರದೆ–

ಒಡೆಯಲಜಾಂಡಂ ಕುಲಗಿರಿ
ಕೆಡೆಯಲ್ ಪಿಳಿಯಲ್ಕೆ ಧಾತ್ರಿ ದಿವಿಜರ್ ನಡುಗ
ಲ್ಕೊಡರಿಸುವಿನಂ ಜಟಾಸುರ
ಹಿಡಿಂಬ ಬಕವೈರಿ ಸಿಂಹನಾದಂಗೆಯ್ದಂ //೦೭//

ಅನಿಲತನೂಜನ ಸಿಂಹ
ಧ್ವನಿಯಂ ಕೇಳ್ದಳ್ಕಿ  ತತ್ಸರೋವರದೆರ್ದೆ ಪ
ವ್ವನೆ ಪಾಱುವಂತೆ ಪಾಱುದು
ವನಾಕುಳಂ ಕೊಳದೊಳಿರ್ದ ತದ್ವಿಹಗಕುಳಂ //೦೮//

ಅರೆಬೆಂದುವು ತಾವರೆ ಖಗ
ಮರೆಬೆಂದುವು ಭೀಮಕೋಪಶಿಖಿ ಮುಟ್ಟೆ ಸರೋ
ವರದ ಮಳಲ್ ಪುರಿಗಡಲೆಗೆ
ಪುರಿದ ಮಳಲ್ ಕಾಯ್ವ ತೆಱದೆ ಕಾಯ್ದತ್ತೆತ್ತಂ //೦೯//

ಬಂದಂ ಬಕಾಂತಕಂ ಪೋ
ಕೊಂದಂ ಬಕವೆಸರ್ಗೆ ಮುನಿದು ನಮ್ಮುಮನಿನ್ನೆಂ
ಬಂದದೊಳೆ ಪಾರೆ ಪೋದುವು
ನಿಂದಿರದುರವಣಿಸಿ ಬಕನಿಕಾಯಕಮದರೊಳ್ //೧೦//

ಕುಪಿತಮರುತ್ಸುತರವಕ
ಳ್ಕಿ ಪಯಶ್ಚರನಿಕರಸಂಭ್ರಮೋಲ್ಲಹರಿಕೆ ಭಾ
ವಿಪೊಡೆ ಜನಕ್ಕೆ ಕೊಳಂ ಕಿ
ಳ್ತು ಪಾರುವಂತಾಯ್ತು ಕಮಲಜಾಂಡಂ ಬರೆಗಂ //೧೧//

ಅಳುರ್ದು ಕೊಳೆ ಭೀಮ ಕೋಪಾ
ನಳನೆಸರ್ವೊಯ್ದಿಟ್ಟ ಜಲದವೊಲ್ ಮಱುಗಿದುದಾ
ಕೊಳದ ಜಲಮೆಯ್ದೆ ಕಾಯ್ದೆಸ
ರೊಳೆ ಕೂಳ್ ಕುದಿವಂತೆ ಕುದಿದುವನಿಮಿಷತತಿಗಳ //೧೨//

ವ॥ ಅಂತು ಜಲಚರಜೀವಿರಾಶಿಗಳೆಲ್ಲವಸುಂಗೊಳೆ ಗೋಳುಂಡೆಗೊಳೆ
ಕೂಳ್ಗುದಿಗೊಳೆ ಮಹೋತ್ತುಂಗಸಿಂಹಕೇತನಂ ಸಿಂಹನಾದಂಗೆಯ್ಯೆ–

ಆ ರವಮಂ ನಿರ್ಜಿತಕಂ–
ಠೀವರಮಂ ನಿರಸ್ತಘನರವಮಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ //೧೩//

**ಕವಿ ಪರಿಚಯ: ರನ್ನ**

ರನ್ನನು (೯೪೯–೧೦೨೦) ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಇವನ ಊರು ಬೆಳುಗುಲಿ(ರನ್ನ ಬೆಳಗಲಿ). ಹಳಗನ್ನಡದ ಮಹತ್ವದ ಕವಿ. ಪಂಪನ ಕಿರಿಯ ಸಮಕಾಲೀನ. ರನ್ನನು ಐದು ಕೃತಿಗಳನ್ನು ರಚಿಸಿದ್ದು ಮೂರು ಕೃತಿಗಳು ಮಾತ್ರ ಲಭ್ಯವಿವೆ. ರನ್ನನ ಜೀವನ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಚಾರಗಳು ಇವನ ಎರಡೂ ಕೃತಿಗಳಿಂದ ದೊರೆಯುತ್ತವೆ. ಅಜಿತ ತೀರ್ಥಂಕರ ಪುರಾಣ ತಿಲಕಂ, ಸಾಹಸಭೀಮ ವಿಜಯ (ಗದಾಯುದ್ಧ) ಎಂಬ ಕಾವ್ಯಗಳ ಕರ್ತೃ. ಶಕ್ತಿಕವಿ ಎಂದೇ ಖ್ಯಾತನಾಗಿದ್ದಾನೆ.

ರನ್ನನಿಗೆ ಕವಿರತ್ನ, ಕವಿ ಮುಖಚಂದ್ರ, ಕವಿಚಕ್ರವರ್ತಿ, ಕವಿರಾಜಶೇಖರ, ಕವಿಜನ ಚೂಡಾರತ್ನ, ಕವಿಚತುರ್ಮುಖ, ಉಭಯಕವಿ ಮೊದಲಾದ ಬಿರುದುಗಳಿವೆ.

# ೨. ಹೃದಯ ಸಮುದ್ರ
## – ದ.ರಾ.ಬೇಂದ್ರೆ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ,
ಮಿಂಚುಬಳಗ ತೆರೆತೆರೆಗಳಾಗಿ ಅಲೆಯುವದು ಪುಟ್ಟಪೂರಾ,
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊ ಧೀರಾ,
ಅದರೊಳಗೆ ನಾವು, ನಮ್ಮೊಳಗೆ ತಾವು ಅದು ಇಲ್ಲವಣ್ಣ ದೂರಾ.

ಕರೆ ಬಂದಿತಣ್ಣ, ತೆರೆ ಬಂದಿತಣ್ಣ, ನೆರೆ ಬಂದಿತಣ್ಣ ಬಳಿಗೆ,
ಹರಿತದ ಭಾವ, ಬೆರಿತದ ಜೀವ ಅದರೊಳಗೆ ಒಳಗೆ ಒಳಗೆ.
ಇದೆ ಸಮಯವಣ್ಣ ಇದೆ ಸಮಯ ತಮ್ಮ ನಮ್ ನಿಮ್ಮ ಆತ್ಮಗಳಿಗೆ.
ಅಂಬಿಗನು ಬಂದ, ನಂಬಿಗನು ಬಂದ ಬಂಧದ ದಿವ್ಯಗಳಿಗೆ.

ಇದು ಉಪ್ಪು ನೀರ ಕಡಲಲ್ಲೊ; ನಮ್ಮ ಒಡಲಲ್ಲೆ ಇದರ ನೆಲೆಯು.
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿಧದ ಇದರ ಬೆಲೆಯು.
ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆಯುವದು ಇದರ ಸೆಲೆಯು,
ಕಣ್ಣರಳಿದಾಗ ಕಣ್ ಹೊರಳಿದಾಗ ಹೊಳೆಯುವದು ಇದರ ಕಳೆಯು.

ಬಂದವರ ಬಳಿಗೆ ಬಂಧದ ಮತ್ತು ನಿಂದವರ ನೆರೆಗು
ಬಂಧದೋ ಬಂಧದ,
ನವಮನುವು ಬಂದ ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ
ಅಂಥದೋ ಅಂಥದ.

***

**ಕವಿ ಪರಿಚಯ: ದ.ರಾ.ಬೇಂದ್ರೆ**

ಕನ್ನಡ ಕಾವ್ಯದ ಸೊಬಗು–ಸೊಗಸು ಹೆಚ್ಚಿಸಿದ 'ಅಂಬಿಕಾತನಯದತ್ತ' ಕಾವ್ಯನಾಮದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರನ್ನು 'ವರಕವಿ', 'ಗಾರುಡಿಗ' ಎಂದು ಗುರುತಿಸಲಾಗುತ್ತದೆ. ತಂದೆ ರಾಮಚಂದ್ರ ತಾಯಿ ಅಂಬವ್ವ. ಧಾರವಾಡದಲ್ಲಿ ೧೮೯೬ರ ಜನವರಿ ೩೧ರಂದು ಜನಿಸಿದರು.

ಬೇಂದ್ರೆ ಅವರಿಗೆ ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ (೧೯೬೮) ಪದವಿ, ಕಾಶಿಯ ವಿದ್ಯಾಪೀಠ ಗೌರವ ಡಾಕ್ಟರೇಟ್ (೧೯೭೬) ನೀಡಿದವು. ಕೇಂದ್ರ ಸರ್ಕಾರ ಪದ್ಮಶ್ರೀ (೧೯೬೮) ಪ್ರಶಸ್ತಿ ನೀಡಿತು. ಕೇಂದ್ರದ ಸಾಹಿತ್ಯ ಅಕಾಡೆಮಿ ಫೆಲೋ ಗೌರವಕ್ಕೆ ಪಾತ್ರರಾಗಿದ್ದ ಬೇಂದ್ರೆ ಅವರಿಗೆ ಅದಮಾರು ಮಠದವರು ಕರ್ನಾಟಕ ಕವಿಕುಲತಿಲಕ (೧೯೭೨) ಬಿರುದು ನೀಡಿದ್ದರು. ಶಿವಮೊಗ್ಗದಲ್ಲಿ ನಡೆದ ೨೭ ನೇ ಕನ್ನಡ ಸಾಹಿತ್ಯ ಸಮ್ಮೇಳನದ (೧೯೪೩) ಅಧ್ಯಕ್ಷತೆ ವಹಿಸಿದ್ದರು.

ಅರಳು ಮರಳು ಕವನಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ (೧೯೫೬) ನಾಕುತಂತಿಗೆ ಜ್ಞಾನಪೀಠ ಪ್ರಶಸ್ತಿ (೧೯೭೪) ಸಂದಿದೆ. ಬೇಂದ್ರೆಯವರು ೧೯೮೧ರ ಅಕ್ಟೋಬರ್ ೨೬ರಂದು ಮುಂಬಯಿಯಲ್ಲಿ ನಿಧನರಾದರು.

# ೩. ಸಮುದ್ರ ಗೀತೆಗಳು

**–ವಿ.ಕೃ.ಗೋಕಾಕ್**

..ಇನ್ನು ಹಡಗದ ಮೇಲೆ ನಾನಿದ್ದಾಗ ಸಂಭವಿಸಿದ ಕೆಲವು ವೃತ್ತಾಂತಗಳನ್ನು ವಿವರಿಸುತ್ತೇನೆ. ಅವೂ ಸಹ ಮನೋರಂಜನೆಯ ಸಾಧನೆಯಾಗಬಹುದು. ಮುಂಬಯಿಯಲ್ಲಿ ಹಡಗ ಹತ್ತಿದಾಗ ಸಂಜೆಯ ನಾಲ್ಕು ಗಂಟೆಯಾದ ಮೇಲೆ ಚಹಕ್ಕೆಂದು ನಾವು ಡ್ರಾಯಿಂಗ್ ರೂಮಿಗೆ ನಡೆದೆವು, ಆಗ ಮೂರುವರೆಯಾಗಿದೆಯೆಂದು 'Steward' ನು ಹೇಳಿದನು! ಇಷ್ಟೇ ಅಲ್ಲ! "Your clock must be going back' ನಿಮ್ಮ ಗಡಿಯಾರವು ಹಿಂದೆ ಹೋಗುತ್ತಿರಬೇಕು ಎಂದು ಅವನ ಮತ.

ಮುಂಬಯಿಯನ್ನು ಬಿಟ್ಟ ಮೇಲೆ ದಿವಸಕ್ಕೆ ಅರ್ಧತಾಸಿನಂತೆ ಗಡಿಯಾರವನ್ನು ಹಿಂತಿರುಗಿಸುತ್ತಾರೆ, ವಿಲಾಯತಿಯಲ್ಲಿ ಈಗ ಎರಡೂವರೆ ಗಂಟೆಯಾಗಿದೆ, ಮಧ್ಯಾಹ್ನ ಹಿಂದುಸ್ಥಾನದಲ್ಲಿ ಈಗ ಸಂಜೆಯ ಏಳುವರೆ ಗಂಟೆಯಾಗಿರಬೇಕು. ಭೂಗೋಲದಲ್ಲಿ ಇದನ್ನೆಲ್ಲ ನೀನು ಕಲಿತಿರಬಹುದಲ್ಲ! ಹಡಗದ ಮೇಲಿನ ಆಂಗ್ಲ ಸ್ತ್ರೀಯರ ವ್ಯವಹಾರವು ನೋಡುವಹಾಗಿತ್ತು. ಇಷ್ಟು, 'ಅಂತರ್ ರಾಷ್ಟ್ರೀಯ' ಜೀವನದ ಭಾವನೆಯು ಮತ್ತಾವ ದೇಶದಲ್ಲಿಯೂ ಬೆಳೆದಂತೆ ಕಾಣುವದಿಲ್ಲ. ಗಂಡಿನ ಬೆನ್ನುಹತ್ತಿ ಉತ್ತರಧ್ರುವದವರೆಗೆ ಹೋಗಲು ಸಿದ್ಧರಿರುತ್ತಾರೆ, ಅವರೊಡನೆ ಈಸುತ್ತಾರೆ. ಹಗ್ಗ ಹಾರುತ್ತಾರೆ. ನಗೆಯಾಡುತ್ತಾರೆ. ಸಿಗರೇಟು ಸೇದುತ್ತಾರೆ–ಒಮ್ಮೊಮ್ಮೆ ಗಂಡಸರಂತೆ ವೇಷ–ಭೂಷಣಗಳನ್ನು ಸಹ ಧರಿಸುತ್ತಾರೆ! ಇದೆಲ್ಲ. ನಾಗರಿಕತೆಯ ಫಲವೆಂದಲ್ಲ. 'ಸಾಮ್ರಾಜ್ಯ'ವು ಇದೊಂದು ಹೊಸ ಮಾದರಿಯನ್ನು ನಿರ್ಮಿಸಿದೆ.

ಪ್ರವಾಸದಲ್ಲಿ ಅನೇಕ ಹೊಸ ಪ್ರದೇಶಗಳನ್ನು ನೋಡಲು ನನಗೆ ದೊರೆಯಿತಷ್ಟೆ. ಮುಖ್ಯವಾದವುಗಳನ್ನು ವರ್ಣಿಸುತ್ತೇನೆ. ಏಡನ್ನಿನ ಕಥೆಯು ನನ್ನ ಕವನದಲ್ಲಿ ನಿನಗೆ ದೊರೆಯುವದು, ಅಲ್ಲಿ ನಾವು ನೋಡಿದ ವಿಶೇಷಗಳು ಇವು: ಏಡನ್ ಬಂದರದ ಮೇಲೆ ನಾವಿಳಿದಾಗ ಸುಮಾರು ಎರಡು ಗಂಟೆಯಾಗಿತ್ತು. ಮಟಮಟ ಮಧ್ಯಾಹ್ನ ಉಸುಬಿನ ಬಯಲಲ್ಲಿ, ರಣರಣ ಬಿಸಿಲು ಹೊಡೆಯುತ್ತಿತ್ತು, ಈ ವಿಷಯವನ್ನು ಒಂದು ಕವಿತೆಯಲ್ಲಿ ನಾನು ಕಾಣಿಸಿದ್ದೇನೆ, ಉಳಿದ ಭಾಗವನ್ನು ಇಲ್ಲಿ ಬರೆಯುತ್ತೇನೆ. ಮಹಾಯುದ್ಧದ ಕಾಲದಲ್ಲಿ ಇಲ್ಲಿ ಮರಣ ಹೊಂದಿದ ಸೈನಿಕರ ಸ್ಮಾರಕಶಿಲೆಯೊಂದನ್ನು ಬಂದರದ ಮಹಾದ್ವಾರದಲ್ಲಿ ಇರಿಸಿದ್ದಾರೆ. ಏಡನ್ನದ ಸಂರಕ್ಷಣೆಗಾಗಿ ಅವರು ಹೆಣಗಾಡಿದರು, ಬ್ರಿಟಿಶ್ ವ್ಯಾಪಾರಸ್ಥರು ಈ ಸೈನಿಕರ ಸ್ಮಾರಕವೆಂದು ಆ ಮಹಾದ್ವಾರವನ್ನು ಕಟ್ಟಿಸಿದ್ದಾರೆ. ೬೯ ಆಫೀಸರ ಸ್ಮರಣಾರ್ಥವಾಗಿ ಬ್ರಿಟಿಶ್ ಸರಕಾರವು ಆ ಶಿಲಾಲಿಪಿಯನ್ನು ಇರಿಸಿದೆ.... ಎಷ್ಟೋ ಆಫೀಸರರಿಗೆ ಜಲಸಮಾಧಿಯಾಗಬೇಕು. 'who have no known grave' (ಗೊತ್ತಿದ್ದ ಗೋರಿ ಇಲ್ಲದವರು) ಎಂದಿದೆ. ಶಿಲಾಲಿಪಿಯಲ್ಲಿ "75th Karnatic Infantry' (೭೫ನೆಯ ಕರ್ನಾಟಕ ಕಾಲಾಳು ಸೈನ್ಯ) ಎಂಬ ಉಲ್ಲೇಖವಿದೆ. ವೆಂಕಟರಾಮಣಿ ಮೊದಲಾದ ಹೆಸರುಗಳು ಆಫೀಸರಲ್ಲಿ ಲಿಸ್ಟಿನಲ್ಲಿ ದೊರೆಯುತ್ತವೆ.

ಮೋಟರಿನಲ್ಲಿ ಕುಳಿತುಕೊಂಡು ಹೋಗಿ ಊರನ್ನು ನೋಡಿಬಂದೆವು. ಇಲ್ಲಿ ಟಾಂಗಾ ಅಥವಾ ಎತ್ತಿನ ಬಂಡಿಗಳಿಲ್ಲ, ಒಂಟೆಯ ಗಾಡಿಗಳಿವೆ! *'ಬುರುಖಾ'* ಹಾಕಿದ ಸ್ತ್ರೀಯರು ಆಗೀಗ ಕಣ್ಣಿಗೆ ಬೀಳುತ್ತಾರೆ. ಇಲ್ಲಿಯ ಗಚ್ಚಿನ ಕೆರೆಗಳು ನೋಡುವಂಥವು. ಲೆಫ್ಟನಂಟ್ ಪ್ಲೇಫೇರ್ ಎಂಬುವನು ಇವುಗಳನ್ನು ೧೮೫೪ರಲ್ಲಿ ಶೋಧಿಸಿದನು. ಸುಮಾರು ಆರೇಳು ನೂರು ವರ್ಷಗಳಿಗಿಂತ ಪ್ರಾಚೀನವಾದುವೆಂದು ಕಾಣುತ್ತದೆ, *ಏಡನ್ನಿನಲ್ಲಿ* ಯಾವಾಗಲೂ ನೀರಿನ ಬರಗಾಲ.

ಈ ಬರಗಾಲವನ್ನು ಕಳೆಯಲೆಂದು ಹಿಂದಿನ ಅಮೀರರು ಈ ಕೆರೆಗಳನ್ನು ಕಟ್ಟಿಸಿದರು. ಕೆರೆಗಳ ಮೇಲಿರುವ ಬೆಟ್ಟದ ಸಾಲಿನಿಂದ ಇಲ್ಲಿ ನೀರು ಬರುತ್ತಿರಬೇಕು, ಈಗ ಎಲ್ಲ ಬಂದಾಗಿದೆ.

ನಾವು ನೋಡಲಿಕ್ಕೆ ಹೋದಾಗ ಒಬ್ಬ ಅರಬ್ ಹುಡುಗನು ಮಧ್ಯದಲ್ಲಿಯ ಕೆರೆಯ ತಳದಲ್ಲಿ ನಿಂತುಕೊಂಡು ಹೆಜ್ಜೆ ಬಡಿಯುತ್ತ "ಬಕ್ಷೀಸ್ ಸಾಬ್" ಎಂದು ಒದರುತ್ತಿದ್ದನು! ಇಂದ್ರನಿಗೆ ಇಲ್ಲಿಯ ಜನರ ಪ್ರಾರ್ಥನೆಯು ಇದೇ ಇರಬೇಕು, ಹತ್ತಿರ ಗಡೆಯಿಲ್ಲದ ಒಂದು ಸಣ್ಣ ಬಾವಿಯಿತ್ತು. ಕಲ್ಲೊಗೆದರೆ ಪಾತಾಳಕ್ಕೆ ಮುಟ್ಟುತ್ತಿತ್ತು. ಅಂಥ ಬಾವಿಯದು! ನಾಲ್ಕು ಜನ ಅರಬರು ಹಾಡು ಹೇಳುತ್ತ ಕೊಡಕ್ಕೆ ಕಟ್ಟಿದ ಹಗ್ಗವನ್ನು ಎಳೆದೇ ಎಳೆಯುತ್ತಿದ್ದರು. ಕಡೆಗೊಂದು ಹನಿ ನೀರು ಬಂತು!

ಆಮೇಲೆ 'ಸೆಟಲ್‌ಮೆಂಟ್' ತೋಟಕ್ಕೆ ಹೋದೆವು, ಹೂವಿಲ್ಲದ ತೋಟವದು ಕೆಲವು ಬಾಡಿದ ಅಗೆಗಳು ಮಾತ್ರ ನಿಂತಿದ್ದವು. ಅಗಾಧವೆಂದರೆ ಬೆಟ್ಟದ ಸಾಲಿನ ಕೆಳಗೆ, ಕೆರೆಗಳ ಬದಿಗೆ ಒಂದು ಆಲದ ಮರವು ಬೆಳೆದಿತ್ತು. ಉಸುಬಿನ ಬಯಲಿನಲ್ಲಿ ಇದಷ್ಟೇ ಹಚ್ಚ ಹಸಿರು, ಮಹಮ್ಮದೀಯರ ಹಸಿರು ನಿಶಾನೆಯಂತೆ! ಇಲ್ಲಿಂದ ಮೋಟಾರು ಸಾಗಿ ಒಂದು ಗವಿಯೊಳಗಿಂದ (Tunnel: ಟನೆಲ್) ಹಾಯ್ದು ಹೋಗುವಾಗ ಥಕ್ಕನೆ ನಿಂತುಬಿಟ್ಟಿತು! ನಾವೆಲ್ಲರೂ ಇಳಿದು ಅರ್ಧಫರ್ಲಾಂಗಿನವರೆಗೆ ದೂಡಿದಾಗ ಎಂಜಿನ್ನು ಮತ್ತೆ ಸುರುವಾಯಿತು. ಮೋಟರ್ ಡ್ರೈವರನು ಸೋಮಾಲಿ ದೇಶದವನಿದ್ದ, ಸೋಮಾಲಿ, ಅರಬಸ್ತಾನ, ಅಬಿಸೀನಿಯಾ– ಇಲ್ಲಿಯ ಜನರಿಗೆ 'ಟ' ಕಾರ 'ಡ' ಕಾರಗಳೆಲ್ಲ ವರ್ಜ್ಯವೆಂದು ಕಾಣುತ್ತದೆ. 'ಬಾಟ್ಲಿ'ಗೆ 'ಬಾತಲ್' ಎಂದೂ 'Tunnel' (ಟನೆಲ್)ಗೆ 'ತನೆಲ್' ಎಂದೂ ಹೇಳುತ್ತಿದ್ದ!

ಈಗ ಕೆಲವು 'ಬೋರಿಂಗ್' ಬಾವಿಗಳನ್ನು ಎಲ್ಲ ಕಡೆಗೆ ಅಗೆದಿದ್ದಾರೆ. ಪೇಟೆಯಲ್ಲಿ ಕೆಲವು ಪಾರ್ಸಿ ಅಂಗಡಿಗಳಿವೆ. ಪೇಟೆಯಲ್ಲಿ ಮೂರಾಣೆಗೆ ಒಂದು ಹಸಿರು ಜಪಮಾಲೆಯನ್ನು ಕೊಂಡೆ. ಮಹಮ್ಮದನ ಮೂಲಸ್ಥಾನದ ಗುರುತಿರಲೆಂದು! ನಾಲ್ಕು ತಾಸು ಹಡಗವು ಇಲ್ಲಿ ನಿಂತಾಗ ಸಣ್ಣ ಸಣ್ಣ ದೋಣಿಗಳಲ್ಲಿ ಅದರ ಹತ್ತಿರ ಅರಬರು ಬಂದು 'very nice', "very nice' ಎಂದು ಹೇಳಿ ಸಣ್ಣ ಸಣ್ಣ ಸಾಮಾನುಗಳನ್ನು ಮಾರುತ್ತಿದ್ದರು. ಒಟ್ಟು ಹಡಗದಿಂದ ಹೋಗಿ ತಿರುಗಿ ಬರಲು ಐದು ಶಿಲಿಂಗು ಹಾಗು ಒಂದು ಪೆನ್ಸು ಹಿಡಿಯಿತು. ಸಮುದ್ರದ ಒತ್ತಿನ ಇನ್ನೊಂದು ಮಗ್ಗುಲಿಗೆ ಅರಬ್ಬಿ ಸರಕಾರದ ಅಂಕಿತದಲ್ಲಿದ್ದ ಲಾಹೆಜ್ ಎಂಬ ಪಟ್ಟಣವಿದೆ.

ಏಡನ್ನಿನಲ್ಲಿ ಒಂದು ಸಣ್ಣ ಮ್ಯುಝಿಯಂ ಅಂದರೆ ವಸ್ತು ಸಂಗ್ರಹಾಲಯವಿದೆ. ಇಲ್ಲಿ ಕ್ರಿ.ಪೂ. ೨೦೦ ವರ್ಷದಷ್ಟು ಪುರಾತನವಾದ ಕಲ್ಲು ಕೆತ್ತನೆಯ ಕೃತಿಗಳು ಹಾಗೂ ಮೂರ್ತಿಗಳಿವೆ. ಈ ಆಕೃತಿಗಳಲ್ಲಿ ಒಂಟೆಯ ಮೇಲೆ ಕೂತ ಮನುಷ್ಯನು ಇದ್ದೇ ಇದ್ದಾನೆ! ಈ ಮೂರ್ತಿಗಳಲ್ಲಿ ಭಾರತೀಯ–ವಿಶೇಷತಃ ಬೌದ್ಧ ಯುಗದ ಕಲೆಯ ಪಾಂಗಿದೆ. Paleolithic (ಪ್ಯಾಲಿಯೋಲಿಥಿಕ್) ಕಾಲದ ಆಯುಧಗಳಿವೆ. ಸಂಗಮವರಿ ಕಲ್ಲಿನಲ್ಲಿ ಕಂಡರಿಸಿದ ಕೆಲಸವೂ ಕಣ್ಣಿಗೆ ಬಿದ್ದಿತು. ಈ ಉಸುಬಿನ ಬಯಲಿನಲ್ಲಿ ಅದೆಲ್ಲಿ ಬಂದಿತೊ! ಕ್ರಿ.ಶ. ೧೫೧೭ರಲ್ಲಿ ಏಡನ್ ಬಂದರವು ಇದ್ದ ಸ್ಥಿತಿಯ ಒಂದು ಚಿತ್ರವೂ ಇಲ್ಲಿದೆ.

ಅಲ್ಲದೆ ಅರಬರಿಂದ ಇಂಗ್ಲೀಷರು ಏಡನ್ ಬಂದರವನ್ನು ಕಿತ್ತುಕೊಂಡ ಮಾದರಿಯೂ ಇಲ್ಲಿ ಚಿತ್ರಿತವಾಗಿದೆ. ಮೊದಲು ಪರ್ಸಿಯನ್ನರ ಅಂಕಿತದಲ್ಲಿ ಈ ಬಂದರವಿತ್ತು. ಆಮೇಲೆ ಪೋರ್ಚುಗೀಜ್,

ಅರಬ್, ಇಂಗ್ಲೀಷರು, ಈ ರೀತಿಯಾಗಿ ಇಳಿದುಬಂದಿದೆ. ಇಲ್ಲಿಂದ 'ಸುಡಾನ' ಬಂದರಕ್ಕೆ ಬಂದೆವು.

ಇಲ್ಲಿಯ ಟಗರಿನಂಥ ಜನರು ತಮ್ಮ ಭಾಷೆಯಲ್ಲಿಯ ಜಾನಪ ದ ಗೀತೆಗಳನ್ನು ಹಾಡುತ್ತ ಹಡಗದ ತಳದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿ ನನ್ನ ಮೈ ಜುಮ್ಮೆಂದಿತು.

ಈ ಉಸುಬಿನ ಅರಣ್ಯದಲ್ಲಿ ನಾಗರಿಕತೆಯ ಸಣ್ಣ ಗೆರೆಯಂತೆ ಬಂದರದ ಗುಂಟ ರೇಲ್ವೆ ಹಳಿಗಳು ಹಾಯ್ದಿವೆ. ಇಲ್ಲಿಯ ಸೆಕೆಯು ಸಹಿಸಲಸಾಧ್ಯವಾದುದು. ನಾವು ಮುಂಜಾವಿನಲ್ಲಿ ಹೋಗಿದ್ದರೂ ಬಂದರದಲ್ಲಿ ಬಿಸಿಲು ದಣದಣ ಉರಿಯುತ್ತಿತ್ತು. ಇಲ್ಲಿಂದ ಕೆಂಪು ಸಮುದ್ರವನ್ನು ಸೇರಿ ಅದೇ ಸೆಕೆಯನ್ನು ಅನುಭವಿಸಿದೆವು.

ಸಮುದ್ರದ ತಳದಲ್ಲಿ ಹುಲ್ಲು-ಗಲಗು ಮುಂತಾದ ಹಸಿರು ಬೆಳೆಯುವದಷ್ಟೆ, ಸಣ್ಣ ಸಣ್ಣ ಕೆಂಪು ಬೀಜಗಳನ್ನು ಮೇಲೆ ಬಿಡುವ ಬೇಲಿಯೊಂದು ಈ ಸಮುದ್ರದೊಳಗೆ ಬೆಳೆಯುವದು, ನಾವು ನೋಡಿದಂತೆ ಇಂಥ ಬೀಜಗಳ ತಂಡಗಳು ನೀರಲ್ಲಿ ತೇಲುತ್ತಿದ್ದವು. ಇದರಿಂದ ಈ ಸಮುದ್ರಕ್ಕೆ ಕೆಂಪು ಸಮುದ್ರವೆಂದು ಹೆಸರು ಬಂದಿದೆಯಂತೆ. ಇನ್ನೊಂದು ಕಾರಣವನ್ನೂ ಸೂಚಿಸುತ್ತಾರೆ. ಇಲ್ಲಿ ಗಾಳಿಯೇ ಇಲ್ಲ. ಹಿಂದಿನ ಹಡಗುಗಳೆಲ್ಲ ಗಾಳಿಪಟದಿಂದ ನಡೆಯುತ್ತಿದ್ದವು. ಅನೇಕ ದಿವಸಗಳವರೆಗೆ ಗಾಳಿಯಿಲ್ಲದೆ ಹಡಗಗಳು ನಿಂತಲ್ಲಿಯೇ ನಿಲ್ಲಲು ಜನರು ಕೂಳಿಲ್ಲದೆ ಸಾಯುತ್ತಿದ್ದರು. ಅದಕ್ಕಾಗಿ ಇದು ಕೆಂಪು ಸಮುದ್ರ! ಈ ಸಂದರ್ಭದಲ್ಲಿ ನಾನು ಬರೆದ ಸಮುದ್ರಗೀತೆಯೊಂದು ಹೀಗಿದೆ:

**ಏಕಮೇವ**

ಕಿನ್ನರ ಕಿಂಪುರುಷರ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ
ನೂರೊಂದು ಕಡೆ ತೇಲುತಿಹುದು ನೋಡಾ!
ಬೆಣ್ಣೆ ಕಡಿದ ಮಜ್ಜಿಗೆಯಂತೆ
ಹುಟ್ಟುಕಡಿದ ನೀರು ಅಟ್ಟಿಸುತಿಹುದು ನೋಡಾ!
ತಪತಪನೆ ಕಾಯ್ದು ಕೋಟಿ ಸೂರ್ಯರಂತೆ
ಕಣ್ಣು ಕುಕ್ಕಿಸುವುದು ನೋಡಾ ಸಾಗರವು!
ಹೆಡೆಯಲಿ ಪುಷ್ಪರಾಗವಿಹ ಕಾಳಸರ್ಪಗಳಂತೆ
ಸಾಗಿಹುದು ನೋಡಾ ಸಾವಿರತೆರೆಗಳ ವೈಭವವು!

ಹಚ್ಚಹಸಿರಿತ್ತು ಹಿಂದೂ ಮಹಾಸಾಗರದ ಬಣ್ಣ,
ಕಪ್ಪು ಹಸಿರಿತ್ತು ಮತ್ತೆ!
ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು,
ಮುಂದೆ ಬಂದಿಹುದು ಕೆಂಪು ಸಮುದ್ರವೊಂದು:

ನಿನ್ನ ಬಣ್ಣವಾವದು ಸಮುದ್ರರಾಜ?
ಸಪ್ತವರ್ಣದ ಇಂದ್ರಧನುಸ್ಸನ್ನು ಹಿಡಿದು
ಆಕಾಶರಾಜನ ಸರಿಗಟ್ಟಿದೆ ನೀನು,
ಚಣಕ್ಕೊಮ್ಮೆ ಬಣ್ಣವ ಬದಲಿಸಿ, ಚೆಲುವಿಕೆಯನಾಂತು

ಭೂದೇವಿಯನು ಪಾತಾಳಕೆ ಮೆಟ್ಟಿದೆ ನೀನು!

ಮುಗಿಲಿಗಿಂತ ಮಿಗಿಲು ಸಾಗರದ ನೀಲಿ ।
ಸಾಗರದ ತುದಿ ತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಗಿಲಿನನಂತತೆಯೆಲ್ಲ ಮುನ್ನೀರ ಗರ್ಭಪಿಂಡ!

ಮೋಡಗಳೆಂಬ ಓಡಗಳು ಬಾಂದಳದಿ ತೇಲುವಲ್ಲಿ
ಹಕ್ಕಿಯೆಂಬ ಚಿಕ್ಕ ಮಿನುಗಿದವು ಕಡಲಿನೊಡಲ ಮೇಲ್ಗಡೆಗೆ!
ಗಾಳಿಯಲಿ ರೆಕ್ಕೆ ಬೀಸುತಿದೆ ಪಕ್ಷಿಗಣವು, –
ಈಸುತ್ತಿದೆ. ಗಾಳಿ ನೀರಿನಲಿ ರೆಕ್ಕೆ ಬಡಿದು!

ನೆಲ, ಗಾಳಿ, ಉರಿ, ಮುಗಿಲು –
ಪೆಡಂಭೂತಗಳಿವು ನಾಲ್ಕು
ಸಮುದ್ರದಾಚೆಯಿಂದ
ಈ ಮಹಾಭೂತಗಳ ನುಂಗಿ
ನೀಕುಡಿಯುತ್ತ ಮತ್ತಮದಗಜದಂತೆ ಕ್ರೀಡಿಸುತ ನಿಂತ
ಪಂಚಾನನ ನಿನ್ನೆದುರು ನರನೆಂಬ ಪಿಳ್ಳೆ ಬರಿ ನಿರ್ಗುಳ್ಳಿ :
ಕೆರಳದಿರು । ಕರುಣಿಸು । ಶರಣು । ಶರಣು ।

ಇದಾದ ಮೇಲೆ ಸುಯೇಜ್ ಪಟ್ಟಣಕ್ಕೆ ಬಂದೆವು. ಇಲ್ಲಿಯ ಮನೆಗಳನ್ನು ಮಾಟಾಗಿ ಕಟ್ಟಿದ್ದಾರೆ. ಇಲ್ಲಿಂದ ಸುಯೇಜ್ ಕಾಲುವೆಯನ್ನು ಪ್ರವೇಶಿಸಿ ಭೂಮಧ್ಯ ಸಮುದ್ರವನ್ನು ಸೇರಬೇಕು. ಕಾಲುವೆಯ ಒಂದು ಮಗ್ಗುಲಿಗೆ ಹಸಿರಿದೆ, ತೋಟಗಳಿವೆ. ಇನ್ನೊಂದು ಮಗ್ಗುಲಿಗೆ ಕೊನೆಯಿಲ್ಲದ ಉಸುಬಿನರಣ್ಯ ಹಸಿರು ಇಜಿಪ್ತ ದೇಶದ್ದು. ಉಸುಬಿನ ಮಗ್ಗುಲು ಅರೇಬಿಯ ದೇಶದ್ದು, ಹೀಗೆ ಏಶಿಯ–ಆಫ್ರಿಕ ಖಂಡಗಳ ನಡುವೆ ಹಾಯ್ದು ನಾವು ಸಯ್ಯದ ಬಂದರಕ್ಕೆ ಬಂದೆವು. ಇದು ಇಜಿಪ್ತ ದೇಶದ ಮುಖ್ಯ ಬಂದರಾಗಿದೆ. ಇಲ್ಲಿಯೇ ಕಾಲುವೆಯು ಭೂಮಧ್ಯಸಮುದ್ರವನ್ನು ಕೂಡುವದು ನಮ್ಮ ದೇಶದಲ್ಲಿಗಿಂತ ಇಲ್ಲಿಯ ಜನರ ಮೋರೆಯ ಮೇಲೆ ಸ್ವಾತಂತ್ರ್ಯದ ಕಳೆಯು ಉಕ್ಕುತ್ತದೆ. ಭೂಮಧ್ಯಸಮುದ್ರದಲ್ಲಿ ಹಡಗು ನಡೆದಾಗ ಒಂದು ಮಧ್ಯರಾತ್ರಿಯಲ್ಲಿ ನಾನು ಪಡೆದ ರಸಾನುಭವವು ಕೆಳಗಿನ ಕವನದ ರೂಪ ತಾಳಿತು :

**ಮಧ್ಯರಾತ್ರಿ**

ಮಧ್ಯರಾತ್ರಿಯಲಿ,
ಭೂಮಧ್ವಸಮುದ್ರದ ಮಧ್ಯದಲಿ
ತೇಲುತಿಹ ಹಡಗದಲಿ ನಿದ್ರಿಸುತ
ಸವಿಗನಸು ಕಂಡು ಕಣ್ದೆರೆದು ನೋಡೆ –
ಆಹಾ! ಎನಿತು ನಿಚ್ಚಳವಿಹುದು!
ನೆರೆದಿಹುದು ಮುಗಿಲಿನಲಿ ತಾರೆಗಳ:ನಿಬ್ಬಣವು.
ಕೋಟಿನಕ್ಷತ್ರಗಳು ಕಣ್ಣು ಬಿಡುತಿವೆ ನಭದಿ.

ಬಿಳಿಮುಸುಕನೋಸರಿಸಿ ನೋಡುತಿಹಳಿದೊ! ಇದೊ!
ಆಕಾಶಗಂಗೆ!
ಅವಳ ಕೇಶಕಲಾಪದಲ್ಲಿ ಕಣ್ಣೆವೆಯಿಕ್ಕಿ

ತೆರೆಯುತಿದೆ ನೋಡು ಕೃತ್ತಿಕೆಯ ಮೊಗ್ಗೆಮಾಲೆ!
ಕಾದಲನಿಗಾಗಿ ದಾರಿಕಾಯುವಳು,

ದಾರಿಕಾಯುವಳು ಆಕಾಶಗಂಗೆ!
ಓ ! ಸಮುದ್ರರಾಜ । ಬರಿ ಹಸುಳೆ ನಾನು!
ನಿನ್ನ ಪ್ರಣಯಮುಹೂರ್ತವನ್ನು ಕಂಡೆನೆಂದು ಕೋಪಿಸಬೇಡ ಕಂಡೆಯಾ!
ಪರಮಪಾವಿತ್ರ್ಯವನ್ನು ಪಡೆದಿದೆ ನನ್ನ ಕಣ್ಣಿನಲಿ,
ನಿಮ್ಮಿರ್ವರ ನಗ್ನ–ಸೌಂದರ್ಯವಿದು!

**ಲೇಖಕರ ಪರಿಚಯ: –ವಿ. ಕೃ. ಗೋಕಾಕ್**

ವಿನಾಯಕ ಕೃಷ್ಣ ಗೋಕಾಕರು ೧೯೦೯ರ ಆಗಸ್ಟ್ ೯ರಂದು ಹಾವೇರಿ ಜಿಲ್ಲೆಯ ಸವಣೂರು ಎಂಬಲ್ಲಿ ಜನಿಸಿದರು. ವಿ.ಕೃ.ಗೋಕಾಕರ ಬರಹ ತುಂಬ ವಿಪುಲವೂ, ವ್ಯಾಪಕವೂ ಆದದ್ದು. ಕನ್ನಡ, ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಗೋಕಾಕರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇಂಗ್ಲೀಷಿನಲ್ಲಿ ಅವರು ಬರೆದಿರುವ ಕೃತಿಗಳ ಸಂಖ್ಯೆ ಮೂವತ್ತಕ್ಕೂ ಹೆಚ್ಚು. ಮೊದಲ ಪ್ರಕಟಿತ ಕೃತಿ "ಕಲೋಪಾಸಕರು". ಅವರು ಇಂಗ್ಲೆಂಡಿಗೆ ಸಮುದ್ರದ ಮೂಲಕ ಹೋಗಿ ಬಂದ ಅನುಭವಗಳನ್ನು ಆಧರಿಸಿ ರಚಿಸಿದ "ಸಮುದ್ರ ಗೀತೆಗಳು", "ಸಮುದ್ರದಾಚೆಯಿಂದ"– ಇವು ಮಹತ್ವದ ಕೃತಿಗಳಾಗಿವೆ. ಮುಕ್ತ ಛಂದಸ್ಸು ಮೊದಲ ಬಾರಿ ಬೆಳಕಿಗೆ ತಂದರು.

ಸಮರಸವೇ ಜೀವನ, ಇಜ್ಜೋಡು, ಏರಿಳಿತ, ಸಮುದ್ರಯಾನ, ನಿರ್ವಹಣ ನರಹರಿ ಕಾದಂಬರಿಗಳು ಕಲೋಪಾಸಕ, ಪಯಣ, ಸಮುದ್ರಗೀತೆಗಳು, ನವ್ಯ ಕವಿಗಳು ಮುಂತಾದ ಕವನ ಸಂಕಲನಗಳು ಕವಿಕಾವ್ಯ ಮಹೋನ್ನತಿ, ನವ್ಯ ಮತ್ತು ಕಾವ್ಯ ಜೀವನ, ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು. ಸಾಹಿತ್ಯದಲ್ಲಿ ಪ್ರಗತಿ, ಸಾಹಿತ್ಯ ವಿಮರ್ಶೆಯ ಕೆಲವು ಮೂಲ ತತ್ವಗಳು (ಸಾಹಿತ್ಯ ವಿಮರ್ಶೆ) ಸಮುದ್ರದಾಚೆಯಿಂದ. ಪಯಣಿಗ. ಸಂತೋಷ ಮುಂತಾದ ಪ್ರವಾಸ ಕಥನವನ್ನು ಬರೆದಿರುತ್ತಾರೆ.

# ೪. ಲಕ್ಷದ್ವೀಪಯಾನ – ರಹಮತ್ ತರೀಕೆರೆ (ಓದು ಪಠ್ಯ)

ತಲೆಯೆತ್ತಿ ನೋಡಿದರೆ ನೀಲಾಕಾಶ. ಕಣ್ಣಮುಂದೆ ಆ ಆಕಾಶವೇ ನೆಲಕ್ಕಿಳಿದು ಮಲಗಿದಂತೆ ಕಡಲು. ಹಸಿರುಕೊಡೆಗಳ ತೆಂಗುತೋಟ. ಬಲೆಹಾಕಿದರೆ ಊಟಕ್ಕೆ ಬಗೆಬಗೆಯ ಮೀನು. ಶುದ್ಧಗಾಳಿ. ಲಕ್ಷದ್ವೀಪದ ಜನ ಅದೃಷ್ಟವಂತರು ಅನಿಸಿತು. ಆದರೆ ಆ ನಡುಗಡ್ಡೆಯ ಬಾಳಲ್ಲಿ ಕಷ್ಟಗಳೂ ಇವೆ ಎಂದು ದ್ವೀಪದೊಳಗೆ ಹೋದಾಗ ನಿಧಾನವಾಗಿ ತಿಳಿಯುತ್ತ ಹೋಯಿತು.

ಲಕ್ಷದ್ವೀಪದ ಕಿನಾರೆಗೂ ಕಡಲಿಗೂ ನಡುವೆ ಕೋರಲ್ ದಿಬ್ಬವಿರುವ ಕಾರಣ, ಹಡಗು ಮೂರು ಕಿ.ಮೀ ದೂರದಲ್ಲೇ ಆಳ ಕಡಲಿನಲ್ಲಿ ನಿಂತುಬಿಡುತ್ತದೆ. ಹಡಗಿನಿಂದ ಸಣ್ಣ ದೋಣಿಗಳಿಗೆ ಇಳಿದೇ ಜೆಟ್‌ಗಳಿಗೆ ಹೋಗಬೇಕು. ಹಡಗು ಬಂದೊಡನೆ, ರೈಲು ಬಂದರೆ ಹಮಾಲಿಗಳು ಮುತ್ತಿಕೊಳ್ಳುವಂತೆ, ಜನರನ್ನೂ ಸಾಮಾನನ್ನೂ ಇಳಿಸಿಕೊಳ್ಳಲು ದೋಣಿಗಳು ಧಾವಿಸುತ್ತವೆ. ಹಡಗಿನಿಂದ ದೋಣಿಗೆ ಇಳಿದು ಹತ್ತುವುದೇ ಒಂದು ರೋಮಾಂಚಕ ಅನುಭವ. ಹಡಗನ್ನು ಲಂಗರು ಹಾಕಿ ನಿಲ್ಲಿಸಿ, ನೀರಿನ ಮಟ್ಟಕ್ಕೆ ಇರುವ ಬಾಗಿಲನ್ನು ತೆರೆದು ಅಲ್ಲಿಂದ ಜನರನ್ನು ದೋಣಿಗೆ ಇಳಿಸಲಾಗುತ್ತದೆ. ಕೈಹಿಡಿದು ಇಳಿಸುವುದಕ್ಕೆ ಕೆಳಗೆ ದೋಣಿಯಲ್ಲಿ ಇಬ್ಬರು; ಮೇಲೆ ಹಡಗಿನಲ್ಲಿಬ್ಬರು. ಕೊಂಚ ಹೆಚ್ಚುಕಡಿಮೆ ಆದರೂ ಹಡಗು–ದೋಣಿಗಳ ನಡುವಣ ನೀರಿಗೆ ಬೀಳುವುದು ಖಂಡಿತ. ಈ ಸರ್ಕಸ್ಸು ನೆಗೆತ ಇಲ್ಲಿನ ಬದುಕಿನ ಸಹಜ ಲಯವಾಗಿದೆ.

ಬಾಳಿನ ಪರಿಸ್ಥಿತಿ ಮತ್ತು ನಿಸರ್ಗದ ಒತ್ತಡಗಳು ಎಂತಹ ಧಾರ್ಮಿಕ ಸಾಮಾಜಿಕ ನಂಬಿಕೆಗಳನ್ನೂ ಬದಲಾಯಿಸಬಲ್ಲವು. ಮಹಿಳಾ ಪಯಣಿಗರ್‍ಯಾರೂ ಪರಪುರುಷರ ಕೈಮುಟ್ಟಿಸಿಕೊಳ್ಳಬೇಕಲ್ಲಾ ಎಂದು ಹಿಂಜರಿಯಲಿಲ್ಲ. ಒಂದೊಮ್ಮೆ ನಖರಾ ಮಾಡಿದರೆ ಪ್ರಾಣ ಹೋಗುತ್ತದೆ. ಇದಕ್ಕೆ ನಿದರ್ಶನ ತೋರಿಸುವಂತೆ, ಹಡಗಿನಿಂದ ದೋಣಿಗೆ ಲಗ್ಗೇಜು ಇಳಿಸುವಾಗ ಒಂದು ಗಂಟು ಕಡಲಿಗೆ ಬಿದ್ದು ಹೋಯಿತು. ನೀರು ಪಾರದರ್ಶಕವಾಗಿದ್ದ ಕಾರಣ, ಗಂಟು ಸಮುದ್ರದ ಆಳದವರೆಗೆ ಹೋಗುವ ತನಕ ಕಾಣುತ್ತಿತ್ತು. ಯಾರೂ ಅದನ್ನು ಉಳಿಸಲು ಯತ್ನಿಸಲಿಲ್ಲ. ಅದು ಆಗದ ಕೆಲಸ ಕೂಡ. ಗಂಟಿನವನು ಮಾತ್ರ ಬೊಬ್ಬೆ ಹೊಡೆದುಕೊಳ್ಳುತ್ತಿದ್ದ. ಅದು ಹಲಸಿನಹಣ್ಣಂತೆ. ಕೊಚ್ಚಿಯ ಹಡಗುಕಟ್ಟೆಯಲ್ಲಿ ನೂರಾರು ಹಲಸಿನಕಾಯಿಗಳು, ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ಬಾಣಂತಿಯರು ತಲೆಗೆ ಬಟ್ಟೆಕಟ್ಟಿಕೊಂಡು ಆಟೋಗೆ ಕಾದು ಕುಳಿತಂತೆ, ಕೆಳಗೂ ಮೇಲೂ ಅಡಕೆ ಹಾಳೆಗಳಲ್ಲಿ ಪ್ಯಾಕಾಗಿ ಕುಳಿತಿದ್ದನ್ನು ಗಮನಿಸಿದ್ದೆವು. ತೆಂಗು ಬಿಟ್ಟರೆ ಬೇರೆ ಮರಗಳೇ ಇಲ್ಲದ (ಬಾಳೆ ಪಪ್ಪಾಯಿಗಳಿದ್ದರೂ ಅವು ಲೆಕ್ಕಕ್ಕಿಲ್ಲ) ನಾಡಿಗೆ ಹಲಸು, ಗಣ್ಯ ಅತಿಥಿಯಂತೆ ಗತ್ತಿನಿಂದ ಬಂದಿತ್ತು. ಪಾಪ, ಈ ಯಾರ ಹೊಟ್ಟೆ ಸೇರಬೇಕಿತ್ತೊ ಅದು, ತನ್ನ ಪ್ರಯಾಣದ ಕೊನೆಯನ್ನು ಮುಟ್ಟಲೇ ಇಲ್ಲ.

ಕಡಲು ಬಿರುಸಾದಾಗ ದೋಣಿಯ ಅಂಚು ಕೆಳಬಾಗಿಲ ಸಮೀಪಕ್ಕೆ ಬರಗೊಡದಷ್ಟು ಅಲೆಗಳ ಕುದಿತವಿರುತ್ತದೆ. ಆಗ ಕಡಲ ಮರ್ಜಿಗೆ ಕಾಯಲೇಬೇಕು. ಕವರಟ್ಟಿ ದ್ವೀಪದಲ್ಲಿ ಹಡಗು ಹತ್ತುವಾಗ ಇಂತಹ ಅಲೆಗಳ ಅಬ್ಬರ ಎಲ್ಲವನ್ನು ಆತಂಕದಲ್ಲಿ ಕೆಡವಿತು. ಹಡಗಿನ ಮೈಬಳಿಗೆ ಯಾವ ದೋಣಿಯನ್ನೂ ಸುಳಿಯಗೊಡಲಿಲ್ಲ. ದುಡುಕಿ ಹತ್ತಿರ ಹೋದರೆ, ಹಡಗಿನ ಗೋಡೆಗೆ ಬಡಿದು ಮರದ ದೋಣಿ ನುಚ್ಚು ನೂರಾಗುವ ಸಾಧ್ಯತೆಯಿತ್ತು.

ನಮ್ಮ ಗುಂಪಿನಲ್ಲಿ ನನ್ನ ಸಹೋದ್ಯೋಗಿ ಡಾ.ಉಷಾ ಅವರ ಮಾವನವರೂ ಇದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ದೊಡ್ಡ ಅಧಿಕಾರಿಯಾಗಿ ನಿವೃತ್ತರಾಗಿದ್ದ ಅವರು ಮಹಾ ಆಸ್ತಿಕರು;

ತಮಗೆ ಜಲಕಂಟಕ ಇದೆಯೆಂದು ಜ್ಯೋತಿಷಿಗಳು ಹೇಳಿದ್ದಾರೆಂದೂ ತಾವೂ ಈ ಪ್ರವಾಸಕ್ಕೆ ಬರಬಾರದಿತ್ತು ಎಂತಲೂ, ಈ ಮಕ್ಕಳ ಕಾಟಕ್ಕೆ ಬಂದಿದ್ದೇನೆ ಎಂತಲೂ ನನ್ನ ಬಳಿ ಹಡಗು ಹತ್ತಿದ ದಿನದಿಂದಲೂ ಅವಲತ್ತುಕೊಳ್ಳುತ್ತ ಇದ್ದರು.

'ಈ ಕಾಲದಲ್ಲೂ ಅದನ್ನೆಲ್ಲಾ ನಂಬಿದೀರಲ್ಲ ಸಾರ್ ನೀವು?' ಎಂದು ನಾನು ತಮಾಷೆ ಮಾಡುತ್ತಿದ್ದೆ. ಅವರು ತರಗೆಲೆಯಂತೆ ತೂಗಾಡುತ್ತಿದ್ದ ದೋಣಿಯಲ್ಲಿ ಮೂಕವಾಗಿ ಕೂತು ಈ ಸಲ ಖಂಡಿತ ನನ್ನ ಕತೆ ಮುಗಿಯಿತು ಎಂಬಂತೆ ನನ್ನ ಮುಖ ನೋಡಿದರು– ಎಲ್ಲರಿಗೂ ಲಕ್ಷದ್ವೀಪದ ಹುಗಲುಹಚ್ಚಿ ಎಳೆತಂದ ಪಾಪಿ ನೀನು ಎಂಬಂತೆ. ಹಡಗಿನ ಮೇಲಿಂದ ನಾವಿಕರ ಕೂಗುಗಳು, ದೋಣಿ ಮುಳುಗದಂತೆ ಹರಸಾಹಸ ಮಾಡುತ್ತಿದ್ದ ದೋಣಿಕಾರರ ಆತಂಕ ಕಂಡು ದೋಣಿಯೊಳಗಿನ ಜೀವಗಳು ಉಸಿರು ಬಿಗಿಹಿಡಿದು ಕೂತುಬಿಟ್ಟವು. ನಿಸರ್ಗದ ರೌದ್ರತೆಯ ಮುಂದೆ ಅಸಹಾಯಕರಾಗುವುದು ಬಿಟ್ಟರೆ ಬೇರೇನು ಮಾಡಲು ಸಾಧ್ಯ? ಆದರೆ ಎಷ್ಟೋ ಹೊತ್ತಿನ ಬಳಿಕ ಅಲೆಗಳು ಶಾಂತವಾಗಿ, ಜಲಕಂಟಕ ವಿಧಿಸಿದ್ದ ಜ್ಯೋತಿಷಿಯ ಅಮರವಾಣಿಯನ್ನು ಸುಳ್ಳು ಮಾಡಿದವು. ನಮ್ಮ ಗುಂಪಿನಲ್ಲಿದ್ದ ಬಂಗಾಳಿ ಅಜ್ಜಿ ಮಾತ್ರ ಯಾವ ಆತಂಕವನ್ನೂ ಪಡದೆ, ಆತಂಕ ಪಡುತ್ತಿದ್ದವರನ್ನೆಲ್ಲ ನೋಡಿ ನಗುತ್ತ, ನಿರಾಳವಾಗಿ ಕೂತು ಹಡಗಿಗೆ ದಾಟಿಬಂತು. ಸುದೀರ್ಘ ಜೀವನವನ್ನು ಮಾಡಿದ ಜನ, ಸಾವನ್ನೂ ಹೆದರಿಸಬಲ್ಲರು. 'ಡೆತ್ ಬಿ ನಾಟ್ ಪ್ರೌಡ್!'

ಹಡಗಿನಿಂದ ದೋಣಿಗಿಳಿವಾಗ ಆಳವಾದ ಕಪ್ಪು ಕಡಲು. ಅದನ್ನು ದಾಟಿ ದ್ವೀಪಗಳಿಗೆ ಹೋಗುವ ದಾರಿಯಲ್ಲಿ, ಆಳವಿಲ್ಲದ ನೀಲ ಸರೋವರ ಮಾಡಿದೊಡನೆ, ನೀರು ನಾಟಕೀಯವಾಗಿ ಬದಲಾಗುತ್ತದೆ. ಇದು ನೀರತಳದಲ್ಲಿರುವ ಬಿಳಿಯ ಕೋರಲ್ ಹುಡಿಯೂ ಮೇಲೆ ಸುರಿವ ಸೂರ್ಯನ ಬೆಳಕೂ ನಿರ್ಮಿಸಿದ ಮಾಯಾಜಾಲ. ನೀಲಿ ಹಸುರಿನ ಈ ದೃಶ್ಯ ಎಷ್ಟು ನೋಡಿದರೂ ತಣಿವಾಗದು. ಬೇರೆಬೇರೆ ಆಳ ಬಂದಂತೆ ನೀರು ಬೇರೆ ಬೇರೆ ವರ್ಣಗಳಲ್ಲಿ ಕಾಣುತ್ತದೆ. ಇಡೀ ಸರೋವರವನ್ನು ದಡದ ಮೇಲಿಂದ ಎತ್ತರದಲ್ಲಿ ನಿಂತು ನೋಡಿದರೆ ನೀರು ಬಗೆಬಗೆಯ ಬಣ್ಣಗಳಲ್ಲಿ ಬರೆದ ವರ್ಣಚಿತ್ರದಂತೆ ಕಾಣುತ್ತದೆ.

ನಾವು ಭಾರತದಲ್ಲೇ ಅತ್ಯಂತ ಹಳೆಯ ಲೈಟ್ ಹೌಸ್‌ಗಳಲ್ಲಿ ಒಂದಾದ ಮಿನಿಕಾಯದ ಲೈಟ್ ಹೌಸಿನ ಮೇಲಿಂದ ನೋಡಿದೆವು. ಅದೊಂದು ಮೋಹಕವಾದ ದೃಶ್ಯ. ಲಕ್ಷದ್ವೀಪಗಳು ತಮ್ಮ ಹವಳಗಳಿಗಾಗಿ ಪ್ರಸಿದ್ಧವಾಗಿದೆ. ನಮ್ಮ ಟೂರ್ ಪ್ಯಾಕೇಜಿನ ಹೆಸರೇ ಕೋರಲ್ ಲೀಫ್. ಆದರೂ ಅಂಡಮಾನಿನಂತೆ ಹವಳಗಳನ್ನು ನೋಡಲು ನಮಗೆ ಆಗಲಿಲ್ಲ. ಕಾರಣ ಕರವಟ್ಟಿಯಲ್ಲಿದ್ದ ಹೆಚ್ಚಿನ ಹವಳಗಳು ಸತ್ತಿದ್ದವು. ನೀರಿನೊಳಗೆ ನೂರಾರು ಬಣ್ಣಗಳಿಂದ ಅದ್ಭುತಲೋಕ ನಿರ್ಮಿಸುವ ಅವು, ಮಣ್ಣು ತಿಂದು ಮಾಸಲು ಬಣ್ಣಕ್ಕೆ ತಿರುಗಿದ ಎಲುಬು ರಾಶಿಯಂತೆ ಬಿದ್ದಿದ್ದವು. ಯಾಕೆಂದು ಕೇಳಲು ಗ್ಲೋಬಲ್ ವಾರ್ಮಿಂಗ್ ಎಂದು ಉತ್ತರ ಸಿಕ್ಕಿತು. ಸದ್ಯ ಕೋರಲ್ಲುಗಳು ಸತ್ತಿದ್ದರೂ ಕೋರಲ್ಲುಗಳಲ್ಲೇ ವಾಸಿಸುವ ಸಾವಿರಾರು ಬಣ್ಣದ ಮೀನುಗಳು ಜೀವಂತವಾಗಿವೆ. ಗಾಜುತಳದ ದೋಣಿಗಳಲ್ಲಿ ಅವನ್ನು ನೋಡಬಹುದು. ದೋಣಿಗಿಂತ ಲೈಫ್‌ಜಾಕೆಟ್ ಧರಿಸಿ ತೇಲುತೇಲುತ್ತಾ ನೋಡುವುದರಲ್ಲಿ ಸಿಗುವ ಅನುಭವವೇ ಬೇರೆ. ಮುಖವಾಡದ ಗಾಜು ನೀರಿನಲ್ಲಿ ಭೀತಿ ಹುಟ್ಟಿಸುವ ಆಳದ ಭ್ರಮೆಯನ್ನು ಉಂಟುಮಾಡುತ್ತದೆ. ನಮ್ಮ ದೇಹದ ಕೆಳಗೆ ಅಕ್ಕಪಕ್ಕ ಬಗೆಬಗೆಯ ಮೀನುಗಳು ತಟ್ಟನೆ ಪ್ರತ್ಯಕ್ಷವಾದಾಗ ಜೀವ ಝಲ್ಲೆನ್ನುತ್ತದೆ. ಈಜುಬಾರದವರು ಮೊಣಕಾಲುದ್ದ ನೀರಿರುವ ಕಡೆ ಕೋರಲ್ಲುಗಳನ್ನೂ ಮೀನುಗಳನ್ನೂ ತಿರುಗಾಡಿ ನೋಡಬಹುದು. ಅಂತಹದೊಂದು ಸರೋವರ ಕಲ್ಪನಿಯಲ್ಲಿ ಇದೆ.

ಆದರೆ ಈ ಕಡಲ ಕೊಳಗಳಲ್ಲಿ ತಿರುಗಾಡಿ ಹವಳಗಳನ್ನೂ ಮೀನುಗಳನ್ನೂ ನೋಡಲು ಬಿಡುವುದು ಅವೈಜ್ಞಾನಿಕ. ಮೀನುಗಳಂತೆ ಈಜಿ ತಪ್ಪಿಸಿಕೊಳ್ಳಲಾಗದ ಅನೇಕ ಜೀವಿಗಳು ನೆಲದ ಮೇಲೆ ಸುಮ್ಮನೆ ಮಲಗಿರುತ್ತದೆ. ಅದರಲ್ಲಿ ಕಡಲಸೌತೆ ಎಂಬ ಮೃದ್ವಂಗಿ ಜೀವಿಯೂ ಒಂದು. ಅಂಡಮಾನಿನಲ್ಲಿ ಅಪರೂಪಕ್ಕೆ ಕಾಣುವ ಇವು ರಾಶಿರಾಶಿಯಾಗಿ ಇವೆ.

ಕಡಲಜೀವಿಗಳ ಬಗ್ಗೆ ಜೀವನ ಕ್ರಮದ ಅರಿವಿಲ್ಲದ ಪ್ರವಾಸಿಗರು ವಾಟರ್ ವರ್ಲ್ಡ್ ಗಳ ನೀರಾಟಕ್ಕೆ ಬಂದವರಂತೆ ಕುಣಿದಾಡುತ್ತಾರೆ. ಒಮ್ಮೆ ನೀರಲ್ಲಿ ಮುಳುಗಿಕೊಂಡು ಕಡಲಜೀವಿಗಳನ್ನು ನೋಡುವ ರುಚಿಸಿಕ್ಕರೆ ನೀರ ಹೊರಗೆ ಹೋಗುವುದಕ್ಕೆ ಮನಸ್ಸು ಬರುವುದೇ ಇಲ್ಲ. ನಾನೂ ನನ್ನ ಮಗಳು ಶಮಾ, ಲೈಫ್ ಜಾಕೆಟ್ಟನ್ನೂ ಮುಳುಗು ಮುಖವಾಡವನ್ನು ಧರಿಸಿ ಈಜುತ್ತಾ ದೂರದವರೆಗೆ– ಕಡಲಕೊಳವನ್ನು ದಾಟಿ ಓಪನ್ ಸೀ ಬರುವತನಕ– ಹವಳಗಳನ್ನೂ ಮೀನುಗಳನ್ನೂ ನೋಡುತ್ತಾ ಹೋದೆವು. ಒಂದು ಕಡೆ ನೀರಕುದುರೆ ಸಣ್ಣ ಗೂಡೊಳಕ್ಕೆ ಹೋಗುವುದು, ಮೇಲೆ ಬಂದು ಮಿಣಿಮಿಣಿ ಮೈ ಅಲಗಿಸುವುದು ಮಾಡುತ್ತಿತ್ತು. ಆದರೆ ಸ್ಕೂಬಾ ಡೈವಿಂಗ್ ಮಾಡಿದರೆ ಇದಕ್ಕಿಂತಲೂ ಭಿನ್ನವಾದ ಅನುಭವ ಸಿಗುತ್ತದೆ. ಅವಸರಕ್ಕೆ ಹುಟ್ಟಿದ ಈ ಟ್ರಿಪ್ಪಿನಲ್ಲಿ ಇದನ್ನು ಅನುಭವಿಸಲು ಸಾಧ್ಯವಾಗಲಿಲ್ಲ.

ಕಲ್ಪೆಟ್ಟಾದಲ್ಲಿ ಒಂದು ಮರೀನ್ ಮ್ಯೂಸಿಯಂ ಇದೆ. ಲಕ್ಷದ್ವೀಪದ ಕಡಲೊಳಗಿನ ಚರಿತ್ರೆಯನ್ನೇ ತೆರೆದಿಡುವಂತೆ ಅದನ್ನು ರೂಪಿಸಲಾಗಿದೆ. ದ್ವೀಪಗಳಲ್ಲಿ ಹಿಡಿಯಲಾದ ಭಾರೀ ತಿಮಿಂಗಿಲ ಶಾರ್ಕುಗಳ ಅಸ್ಥಿಪಂಜರಗಳೆಲ್ಲ ಅಲ್ಲಿವೆ. ಲಕ್ಷದ್ವೀಪದ ಕಡಲು ಶಾರ್ಕ್‌ಗಳಿಗೆ ಪ್ರಸಿದ್ಧ. ಮ್ಯೂಸಿಯಮ್ಮಿನಲ್ಲಿ ಒಂದು ಭಾರೀ ಕೊಳ ಕಟ್ಟಿಸಿ ಶಾರ್ಕ್ ಮರಿಗಳನ್ನು ಬಿಟ್ಟಿದ್ದರು. ಅವು ಏರ್ ಪೋರ್ಟುಗಳಲ್ಲಿ ತಿರುಗುವ ವಿಮಾನದಂತೆ ಗಂಭೀರವಾಗಿ ಓಡಾಡಿಕೊಂಡಿದ್ದವು. ಬೃಹದಾಕಾರದ ಬೆಳೆಯುವ ಇವನ್ನು ಎಷ್ಟು ದಿನ ಅಂತ ಕೊಳಗಳಲ್ಲಿ ಇಟ್ಟಾರು? ಒಂದಲ್ಲಾ ಒಂದು ದಿನ ಕಡಲಿಗೆ ಬಿಡಲೇಬೇಕು. ಆಗ ಲಕ್ಷದ್ವೀಪದ ಜನರೂ ಒಂದಲ್ಲಾ ಒಂದು ದಿನ ಈ ದ್ವೀಪಗಳನ್ನು ಖಾಲಿ ಮಾಡಬೇಕು ತಾನೇ? ಫರಕೆಂದರೆ, ಶಾರ್ಕ್ ತನ್ನ ಸ್ವಸ್ಥಾನವಾದ ಕಡಲಿಗೆ ಹೋಗುತ್ತದೆ; ಆದರೆ ಲಕ್ಷದ್ವೀಪದ ಜನ ತಮ್ಮ ಸ್ವಸ್ಥಾನ ಬಿಟ್ಟು ಪರದೇಶಕ್ಕೆ ವಲಸಿಗರಾಗಿ ಹೋಗಿ ಬೀಳುತ್ತಾರೆ. ಅನಿಶ್ಚಿತ ಭವಿಷ್ಯವನ್ನು ಮುಂದಿಟ್ಟುಕೊಂಡು ಬದುಕುವಾಗ ಒಂದು ಬಗೆಯ ಅಭದ್ರತೆಯೂ ಇರುತ್ತದೆ.

ಬದುಕುವುದಕ್ಕೆ ಒಂದು ತೀವ್ರತೆಯೂ ಒದಗುತ್ತದೆ. ದೂರದ ಭವಿಷ್ಯವನ್ನು ಊಹಿಸಿ ಕಂಗೆಡದೆ ದ್ವೀಪವಾಸಿಗಳು ತಮ್ಮ ನಿತ್ಯದ ತರಲೆ ತಾಪತ್ರಯಗಳಲ್ಲಿ ಮುಳುಗಿದಂತಿತ್ತು. ಬಹುಶಃ ಇದು ಸಾವನ್ನು ಹೆದರಿಸುವ ಎರಡನೇ ವಿಧಾನವಿರಬೇಕು.

**ನಡುಗಡ್ಡೆಯ ಜ್ವಾಲಾಮುಖಿಗಳು**

ಲಕ್ಷದ್ವೀಪದ ಹವಳದಿಬ್ಬಗಳ ಮೇಲೆ ಅದ್ಯಾವ ರುಚಿ ಕಂಡಿದೆಯೋ, ತೆಂಗು ಮಾತ್ರ ಅಲ್ಲಿ ಮನಸ್ಸೋ ಇಚ್ಛೆಯಾಗಿ ಪಾರ್ಥೇನಿಯಂ ಕಳೆಯಂತೆ ಬೆಳೆದಿದೆ. ಇದನ್ನು ತೆಂಗು ಸರ್ವಾಧಿಕಾರದ ನಾಡೆಂದು ಕರೆಯಬಹುದು. ಹಡಗಿನಿಂದ ದ್ವೀಪಗಳನ್ನು ನೋಡುವಾಗ ಊರು ಮನೆ ಜನ ಏನೂ ಕಾಣುವುದಿಲ್ಲ. ಕಾಣುವುದು ಬರೀ ತೆಂಗುಹಸಿರಿನ ಕುಪ್ಪೆ ಮತ್ತು ಅದರೊಳಗೆ ನೆಟ್ಟ ರಾಕೆಟ್ಟಿನಂತಹ ಲೈಟ್‌ಹೌಸ್. ದ್ವೀಪದೊಳಗೆ ಕಾಲಿಟ್ಟರೆ ಸೂರ್ಯರಶ್ಮಿ ನೆಲಕ್ಕೆ ತಾಗದ ನೆರಳು. ಆ ನೆರಳಿನೊಳಗೆ ಹೊಕ್ಕರೆ ರಸ್ತೆ ಮನೆ ಜನ ಎಲ್ಲಾ ನಿಧಾನವಾಗಿ ಪ್ರತ್ಯಕ್ಷವಾಗುತ್ತದೆ. ದ್ವೀಪಗಳಲ್ಲಿ ಅಡ್ಡಾಡುವಾಗ ಮೊದಲಿಗೆ ಎರಡು ದೃಶ್ಯಗಳು ಕಣ್ಸೆಳೆಯುತ್ತವೆ. ಮೊದಲನೆಯದು– ತೆಂಗಿನಕಾಯಿಗಳ ಅಧಃಪತನ.

ಇಲ್ಲಿ ತೆಂಗಿನಕಾಯಿಗಳು ಕಸಕ್ಕಿಂತ ಕಡೆಯಾಗಿ ಎಲ್ಲಿಬೇಕಲ್ಲಿ ಬಿದ್ದಿವೆ. ಮರದೊಡೆಯರು ಬೇಕಾದಾಗ ಅವನ್ನು ಆರಿಸಿ ಕುಪ್ಪೆಹಾಕಿ ಸುಲಿಸಿ ಕೊಬ್ಬರಿ ಮಾಡುತ್ತಾರೆಂದು ಗೊತ್ತಾಯಿತು. ಈ ಒಡೆಯರು ತಂತಮ್ಮ ತೋಟ ಎಂದು ಬೇಲಿಗಳನ್ನು ಕಟ್ಟಿಲ್ಲ. ಬೇಲಿ ಇದ್ದದ್ದು ಕೊಬ್ಬರಿ ಒಣಗಿಸುವ ಮನೆಗಳಿಗೆ ಮಾತ್ರ. ಕಾಗೆಗಳಿಂದ ಕೊಬ್ಬರಿ ಉಳಿಸಲು ಕಡಲ ದಂಡೆಗೆ ಕೊಬ್ಬರಿ ಮನೆಗಳನ್ನು ಕಟ್ಟಿಸುತ್ತಾ ಬಲೆ ಕಟ್ಟಿದ್ದರು. ದೀಪಾವಳಿಯಲ್ಲಿ ಸಾಲಾಗಿ ದೀಪಗಳಿಟ್ಟಂತೆ ಕೊಬ್ಬರಿ ಬಟ್ಟಲುಗಳು.

ಎರಡನೆಯದು– ತೆಂಗಿನ ಮರಗಳಿಗೆ ಕಟ್ಟಿ ಹಾಕಿರುವ ಆಡುಗಳದ್ದು. ಈ ದ್ವೀಪದಲ್ಲಿ ನಾವು ಕಂಡ ಏಕೈಕ ನಾಗಾಲಿನ ಜಾನುವಾರೆಂದರೆ ಇದೇ. ನಾಯಿಗಳೂ ಕಾಣಲಿಲ್ಲ. ಆ ಆಡುಗಳು ನಮ್ಮ ಆಡುಗಳಂತೆ ಎತ್ತರವಿಲ್ಲ. ಜಗ್ಗುವ ಕೆಚ್ಚಲಿನ ಗಿಡ್ಡತಳಿಯವು. ಇಂಥ ಆಡುಗಳನ್ನು ಕೇರಳದಲ್ಲೂ ಬಂಗಾಲದಲ್ಲೂ ಕಂಡಿದ್ದೆವು. ನನಗೆ ತಟ್ಟನೆ ವೈಕಂ ಮಹಮದ್ ಬಶೀರರ 'ಪಾತುಮ್ಮಳ ಆಡು ಕತೆ' ನೆನಪಿಗೆ ಬಂತು. ಅಲ್ಲಿ ಆಡು ಮನೆ ತುಂಬಾ ಸುತ್ತಾಡುತ್ತಾ ಅದು ಇದು ಮುರಿದು ಇಡೀ ಕುಟುಂಬದಲ್ಲಿ ಜಗಳ ಹಚ್ಚುತ್ತದೆ, ಆದರೆ ಇಲ್ಲಿ ಅದನ್ನು ಕಡ್ಡಾಯವಾಗಿ ಕಟ್ಟಿ ಮುಂದೆ ತೆಂಗಿನ ಗರಿ ಕಡಿದುಹಾಕಿದ್ದರು. ಆಡು ಒಂದು ಕಡೆ ಒಂದರಗಳಿಗೆ ನಿಲ್ಲುವಂತಹ ಜಾನುವಾರಲ್ಲ. ದಿನವೊಂದಕ್ಕೆ ಸಾವಿರ ಜಾತಿಯ ಗಿಡಗಳಿಗೆ ಬಾಯಿಹಾಕಿ ಎಲೆ ತಿನ್ನುವ ಪ್ರಾಣಿ. ಆದರಿಲ್ಲಿ ಸಿಗುವ ಏಕೈಕ ಹಸಿರಾದ ತೆಂಗಿನಗರಿಯನ್ನು ನಿರ್ವಾಹವಿಲ್ಲದೆ ಕಡಿಯುತ್ತ ಕೈದಿಗಳಂತೆ ತೆಂಗಿನಮರಕ್ಕೆ ಕಟ್ಟಿಸಿಕೊಂಡಿತ್ತು. ಗರಿಯ ಹಸುರನ್ನು ಬಿಡಿಬಿಡಿಸಿ ತಿಂದು, ದಿಂಡಿಗಂಟಿದ ಉಳಿದ ತೆಂಗಿನಕಡ್ಡಿಗಳು ಮೀನಿನ ಅಸ್ಥಿಪಂಜರದಂತೆ ತೋರುತ್ತಿದ್ದವು. ಹುಲ್ಲು ಬೆಳೆಯದ ಇಲ್ಲಿ ಹಸು ಎಮ್ಮೆಗಳಿಗಿರುವುದು ಕಷ್ಟ. ಹೀಗಾಗಿ ಹಾಲಿಗೂ ಮಾಂಸಕ್ಕೂ ಮೇಕೆಯೇ ಗತಿ ಇರಬೇಕು.

ಕೊಚ್ಚಿಯ ಬಂದರಿನಲ್ಲಿರುವ ಲಕ್ಷದ್ವೀಪ ಆಡಳಿತ ಕಛೇರಿಯಲ್ಲಿ ಟಿಕೇಟು, ಗುರುತಿನ ಚೀಟಿ ಇತ್ಯಾದಿ ಸಂಗ್ರಹಿಸಿಕೊಂಡು, ಬೆಳ್ಳಗೆ ಕೊಕ್ಕರೆಯಂತೆ ಹೊಳೆಯುತ್ತಿದ್ದ ಟಿಪ್ಪುಸುಲ್ತಾನ್ ಏರುವಾಗಲೇ ಅನಿಸಿತು– ನಾವು ಹೋಗುತ್ತಿರುವುದು ಕೇರಳದ ವಿಸ್ತರಣೆಯಾಗಿರುವ ನಾಡಿಗೆ ಎಂದು. ಮಾಪ್ಲಾ ಮುಸ್ಲಿಮರು ಹಡಗಿನ ತುಂಬ ಹತ್ತಿಕೊಂಡರು. ಲಕ್ಷದ್ವೀಪ ಮತ್ತು ಕೇರಳದ ಮಾಪ್ಲಾ ಜನರ ಇಸ್ಲಾಮಿಗೂ ಭಾರತದ ಉಳಿದ ಕಡೆಯಿರುವ ಇಸ್ಲಾಮಿಗೂ ಬಹಳ ಫರಕಿದೆ. ಇವರ ಇಸ್ಲಾಂ ನೇರವಾಗಿ ಅರಬರಿಂದಲೇ ಬಂದಿದ್ದು. ಇವರಿಗೆ ಇಸ್ಲಾಂ ಪರಿಚಯಿಸಿದ ಸಂತ ಉಬೇದುಲ್ಲಾನ ದರ್ಗಾ, ಅಂದ್ರೋತ್ ನಡುಗಡ್ಡೆಯಲ್ಲಿದೆ. ಈಗಲೂ ಲಕ್ಷದ್ವೀಪದ ಜನರ ಸಾಂಸ್ಕೃತಿಕ ಸಂಬಂಧಗಳಲ್ಲಿ ಅರಬಸ್ಥಾನದ ಚಹರೆಗಳಿವೆ; ಇವರ ಜಾನಪದವು ಅರಬ್ ಪುರಾಣ ಮತ್ತು ಚರಿತ್ರೆಗಳಿಂದ ತುಂಬಿದೆ. ಹೀಗಾಗಿ ಲಕ್ಷದ್ವೀಪಗಳು ಸಾಂಸ್ಕೃತಿಕವಾಗಿ ಮಲಬಾರು ಮತ್ತು ಅರಬದ ಕಿನಾರೆಗಳು ಮುರಿದು ಚೂರಾಗಿ ತೇಲಿಬಂದಿರುವಂತೆ ಭಾಸವಾಗುತ್ತದೆ.

ಲಕ್ಷದ್ವೀಪಗಳಲ್ಲಿ ಸರ್ವವ್ಯಾಪಿಯಾಗಿರುವ ಮಾಪ್ಲಾ ಸಂಸ್ಕೃತಿಗೆ ಭಿನ್ನವಾದ ದ್ವೀಪವೆಂದರೆ ಮಿನಿಕಾಯ್. ಅದು ಲಕ್ಷ ದ್ವೀಪಗಳಲ್ಲೇ ಶಾನೇ ದೂರವಿದೆ–ಕೊಚ್ಚಿಯಿಂದ ೪೦೦ ನಾಟಿಕಲ್ ಮೈಲಿ ಪಯಣ. ವಾಸ್ತವದಲ್ಲಿ ನಮ್ಮ ಪ್ರವಾಸ ಶುರುವಾಗುವುದೇ ಮಿನಿಕಾಯ್‌ನಿಂದ. ಇಲ್ಲಿಂದ ಜನರನ್ನು ಇಳಿಸುತ್ತಾ ಹತ್ತಿಸಿಕೊಳ್ಳುತ್ತ ದ್ವೀಪಗಳನ್ನು ಸುತ್ತುತ್ತಾ ಹಡಗು ಐದನೇ ದಿನಕ್ಕೆ ಕೊಚ್ಚಿಗೆ ಮರಳುತ್ತದೆ. ಮಿನಿಕಾಯ್‌ನಲ್ಲಿ ಇರುವುದು ಮಾಲ್ಡೀವಿಯನ್ ಸಂಸ್ಕೃತಿ. ಮಾಲ್ಡೀವ್ಸ್ ದೇಶ ಇಲ್ಲಿಗೆ ೭೦–೮೦ ಮೈಲಿ. ಮಾಲ್ಡೀವ್ಸ್ ದೇಶವನ್ನು ಕೆಲವು ಜನ ಪುಂಡರು ದೋಣಿಯಲ್ಲಿ ಹೋಗಿ ಅವರ ರಾಜಧಾನಿ ಮಾಲೆಯನ್ನೇ ಒಮ್ಮೆ ವಶಪಡಿಸಿಕೊಂಡಿದ್ದು ಮತ್ತು ಭಾರತವು ತನ್ನ ಸೇನೆ ಕಳಿಸಿ ಮುಕ್ತಗೊಳಿಸಿಕೊಟ್ಟಿದ್ದು ನೆನಪಿಗೆ ಬಂದಿತು.

ಭಾಷಿಕವಾಗಿ ಸಾಂಸ್ಕೃತಿಕವಾಗಿ ಮಾಲ್ದೀವ್ಸ್‌ನ ಜತೆ ಬೇರುಗಳಿರುವ ಈ ದ್ವೀಪವೀಗ ಭಾರತದ ಆಡಳಿತಕ್ಕೆ ಒಳಪಟ್ಟಿದೆ. ಎರಡು ದೊಡ್ಡ ದೇಶಗಳ ನಡುವೆ ಇರುವ ಯಾವತ್ತೂ ದ್ವೀಪಗಳ ವಿಧಿಯಿದು. ಅವು ತಮ್ಮನ್ನು ಗೆದ್ದುಕೊಳ್ಳುವ ದೇಶಗಳ ಭಾಗವಾಗಿ ಹೋಗುತ್ತವೆ. ಇದರ ಬಗ್ಗೆ ಚರ್ಚೆ ನಡೆದಾಗ, ನಮ್ಮ ಹಡಗಿನಲ್ಲಿ ಹನಿಮೂನಿಗೆಂದು ಬಂದಿದ್ದ ಕನ್ನಡಿಗ ತರುಣ (ಆತ ದಕ್ಷಿಣ ಕನ್ನಡಿಗ ತಂದೆ, ಮಲೆಯಾಳಿ ತಾಯಿಯ ಮಗ. ಈತ ಇಡೀ ಹಡಗಿನಲ್ಲಿ ಎಲ್ಲರನ್ನೂ ಅವರವರ ಭಾಷೆಯಲ್ಲಿ ಮಾತನಾಡಿಸುತ್ತಾ ಬಹಳ ಜನಪ್ರಿಯನಾಗಿದ್ದನು.) 'ರೀ, ಸ್ವಾಮಿ ಇಂಡಿಯಾದಲ್ಲಿ ಇರುವುದು ಮಿನಿಕಾಯ್ ಜನರ ಅದೃಷ್ಟ. ಇವರಿಗೆ ಇಲ್ಲಿ ಇಷ್ಟಾದರೂ ಸೌಲಭ್ಯ ಸಿಕ್ಕಿದೆ. ಮಾಲ್ದೀವ್ಸಿನಲ್ಲಿದ್ದರೆ ನಾಯಿಪಾಡು ಆಗಿರುತ್ತಿತ್ತು' ಎಂದು ಹೇಳಿದ.

ಅವನ ಮಾತಲ್ಲಿ ನಿಜವಿರಬಹುದು. ಭಾರತವು ಈ ದ್ವೀಪಗಳಿಗೆ ಅನೇಕ ಸೌಲಭ್ಯ ಒದಗಿಸಿದೆ. ರಾತ್ರಿಯಾದೊಡನೆ ಕತ್ತಲಲ್ಲಿ ಮುಳುಗುವ ಈ ದ್ವೀಪದಲ್ಲಿ ಡೀಸಲ್ ವಿದ್ಯುತ್ ಸ್ಥಾವರ ಸ್ಥಾಪಿಸಿ ಬೆಳಕು ಕೊಟ್ಟಿದೆ. ಇಲ್ಲಿ ಒಳ್ಳೆ ಶಾಲೆಗಳಿವೆ. ಬಡತನ ಎಂಬುದು ಎಲ್ಲೂ ಕಣ್ಣಿಗೆ ಬೀಳಲಿಲ್ಲ. ಆದರೂ ದುರ್ಬಲರಿಗೆ ಯಾವುದು ಒಳ್ಳೆಯದು ಎಂಬುದನ್ನು ಅಧಿಕಾರಸ್ಥರು, ವಿಜೇತರು ನಿರ್ಣಯ ಮಾಡಿಕೊಂಡು ಬಂದಿರುವುದು ಮೊದಲಿಂದಲೂ ನಡೆದುಕೊಂಡು ಬಂದಿದೆ. ಭಾರತದ ಅಗತ್ಯಗಳನ್ನು ಅಮೆರಿಕವು, ನೇಪಾಳದ ಅಗತ್ಯಗಳನ್ನು ಭಾರತವು ನಿರ್ಣಯ ಮಾಡಿಕೊಂಡು ಬಂದಿದೆ. ಮಾಲ್ದೀವ್ಸ್‌ನ ಕೊಂಚ ಕೆಳಗೆ, ಅರಬ್ಬಿ ಸಮುದ್ರದಲ್ಲಿ 'ಡಿಯಾಗೋ ಗಾರ್ಸಿಯಾ' ಎಂಬ ದ್ವೀಪದಲ್ಲಿ ಬೀಡುಬಿಟ್ಟಿರುವ ಅಮೆರಿಕಾ ಸಾವಿರಾರು ಸೈನಿಕರು, ವಿಮಾನ ಮತ್ತು ಹಡಗುಗಳನ್ನು ಇಟ್ಟುಕೊಂಡು ಮಾಡುತ್ತಿರುವುದು ಇದೇ ಕೆಲಸ ತಾನೇ?

ಮಿನಿಕಾಯದ ಭಾಷೆ ಮಹಾಲಿ. ಭಾತರದ ಅತಿ ಕಡಿಮೆ ಸಂಖ್ಯೆಯ ಜನರು ಆಡುವ ಭಾಷೆಗಳಲ್ಲಿ ಇದೂ ಒಂದು. ಆದರೆ ಇಲ್ಲಿನ ಕೆಲವು ದ್ವೀಪಗಳಲ್ಲಿ ಆಡಳಿತ ಭಾಷೆ ಮಹಾಲಿ. ಅಲ್ಲಿನ ಬೋರ್ಡುಗಳಲ್ಲಿದ್ದ ಮಹಾಲಿ ಲಿಪಿ, ಮಕ್ಕಳು ಆಟಕ್ಕೆ ಬಳೆ ಚೂರು ಜೋಡಿಸಿಕೊಂಡಂತೆ ವಿಚಿತ್ರವಾಗಿತ್ತು. ಭಾರತದ ಅಥವಾ ಕೇರಳದ ಮುಸ್ಲಿಮರ ಯಾವ ನಡಾವಳಿಯೂ ಮಹಾಲಿ ಮುಸ್ಲಿಮರಲ್ಲಿಲ್ಲ. ಮಹಾಲಿ ಸಂಸ್ಕೃತಿಯು ಶ್ರೀಲಂಕೆಯಿಂದ ಹೋದ ಬೌದ್ಧ ಧರ್ಮ, ಅರಬರ ಇಸ್ಲಾಮಿ ಹಾಗೂ ಕೇರಳದಿಂದ ಹೋದ ಹಿಂದು ಧರ್ಮಗಳ ಸಂಕರ. ಮಿನಿಕಾಯದಲ್ಲಿ ಅಪರೂಪದ ಬೌದ್ಧ ವಿಗ್ರಹಗಳು ಸಿಕ್ಕಿವೆ. ಇಸ್ಲಾಂ ಸ್ವೀಕರಿಸಿದ ಮೇಲೂ ದ್ವೀಪವು ತನ್ನ ಬೌದ್ಧಸ್ಮೃತಿಗಳನ್ನು ಬಿಟ್ಟು ಕೊಟ್ಟಿಲ್ಲ. ಮಹಾಲಿ ಹೆಸರುಗಳಲ್ಲಿ ಅದು ಉಳಿದುಕೊಂಡಿದೆ. ಅವರ ಪಂಗಡದ ಹೆಸರುಗಳಲ್ಲಿ ಬೋಧ ಎಂಬ ಶಬ್ದವಿದೆ. ಅವರ ನಾಯಕನ ಹೆಸರು ಬೋಧುದಾತ. ನಮಗೆ ಪರಿಚಯವಾದ ಹುಡುಗಿಯ ಹೆಸರು ಸುನಿಧಾ.

ಮಿನಿಕಾಯದ ಚರಿತ್ರೆ ಮತ್ತು ವರ್ತಮಾನಗಳನ್ನು ತಿಳಿಸಿದ ಸುನಿಧಾ ನಮ್ಮ ಗುಂಪಿಗೆ ಪರಿಚಯವಾದ ಸಂದರ್ಭವೂ ನಾಟಕೀಯವಾಗಿತ್ತು. ಕೊನೆಯ ದಿನ ಮಿನಿಕಾಯದಿಂದ ಲಕ್ಷದ್ವೀಪದ ರಾಜಧಾನಿ ಕರವಟ್ಟಿಗೆ ಹಡಗು ಹೊರಟಿತ್ತು. ಕರವಟ್ಟಿ, ಕದಮತ್, ಅಂದ್ರೋತ್, ಅಗಟ್ಟಿ ಕೊನೆಯಲ್ಲಿ ಕೊಚ್ಚಿಗೆ ಹೋಗುವ ಜನ ಹತ್ತಿಕೊಂಡರು. ಹಡಗು ಹೊರಟ ಕೂಡಲೆ, ಪ್ರಯಾಣಿಕರಿಗೂ ಹಡಗಿನ ಅಧಿಕಾರಿಗಳಿಗೂ ಜಗಳ ಶುರುವಾಯಿತು. ಜಗಳದಲ್ಲಿ ಒಬ್ಬ ತರುಣಿಯ ದನಿ ಕೊಂಚ ಜೋರಾಗಿತ್ತು. ಅವಳು ಬುರಖಾ ಹಾಕಿಕೊಂಡಿರಲಿಲ್ಲ. ತನ್ನ ದುಂಡನೆಯ ಬೆಳ್ಳನೆಯ ಚಂದ್ರಮುಖಕ್ಕೆ ಅಂಚು ಕಟ್ಟಿದಂತೆ ಕಪ್ಪುತಟ್ಟನ್ನು ಸುತ್ತಲೂ ಸುತ್ತಿಕೊಂಡಿದ್ದಳು. ಅವಳ ಇಂಗ್ಲೀಷ್ ಭಾಷೆ, ದಿಟ್ಟತನ, ಅನ್ಯಾಯ ಪ್ರತಿಭಟಿಸುವ ಗುಣ ಚಕಿತಗೊಳಿಸಿದವು. ಅವಳು ಜಗಳ ಮುಗಿಸಿ ಡೆಕ್ಕಿನ ಕಂಬಿಯ ಬಳಿ ಬಂದು ನಿಂತು ಕಡಲ ಕಡೆ ನೋಡುತ್ತಾ ನಿಂತಳು. ಕೋಪದಿಂದ ಮುಖ ಇನ್ನೂ ಧುಮುಗುಡುತ್ತಿತ್ತು. ಹಕ್ಕು ಪ್ರಜ್ಞೆಯುಳ್ಳ ಒಬ್ಬ

ಆಧುನಿಕ ಮುಸ್ಲಿಮ್ ತರುಣಿಯನ್ನು ಕಂಡು ಸಂತೋಷವಾಯಿತು.

ಧೈರ್ಯಮಾಡಿ ಬಳಿ ಹೋಗಿ 'ಕ್ಷಮಿಸಿ, ನೀವು ಹಡಗಿನವರ ಜತೆ ಜಗಳ ಮಾಡಿದಿರಲ್ಲ, ಯಾಕೆಂದು ಕೇಳಬಹುದೇ?' ಎಂದೆ. ಅವಳ ಕೋಪ ಕಡಿಮೆಯಾಗಿದ್ದರೂ ಹೊಗೆಯಾಟ ಇನ್ನೂ ನಿಂತಿರಲಿಲ್ಲ. ನಾನು ಕರ್ನಾಟಕದವನು ಎಂದು ಗೊತ್ತಾದ ಮೇಲೆ ಅವಳ ರೌದ್ರತೆ ಕಡಿಮೆಯಾಯಿತು. ಮಾತಿಗೆ ಮೃದುತ್ವ ಬಂದಿತು. ಸುನಿಧಾ ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿ ಬಿ.ಎ. ಮಾಡುತ್ತಿದ್ದವಳು. ಅವಳು ಈ ಹಡಗಿನವರಿಂದ ದ್ವೀಪದ ಜನರಿಗೆ ಆಗುತ್ತಿರುವ ಕಷ್ಟಗಳನ್ನು ಹೇಳಿಕೊಂಡಳು. ಮಿನಿಕಾಯದ ಸಂಸ್ಕೃತಿ ಉಳಿದ ದ್ವೀಪಗಳ ಮಾಪ್ಳಾಗಿಂತ ಹೇಗೆ ಬೇರೆ ಎಂಬುದನ್ನು ಹೇಳಿದಳು. ಅವಳ ಪ್ರಕಾರ ದ್ವೀಪದ ಜನರ ಮುಖ್ಯ ಸಮಸ್ಯೆ ಎರಡು. ಒಂದನೆಯದು ವಾರಕ್ಕೊಮ್ಮೆ ಬರುವ ಹಡಗಿನದು.

ಎರಡನೆಯದು ಇಲ್ಲಿನ ಹೆಂಗಸರ ಪಾಡಿನದು. ಹೆಂಗಸರ ಮಾತು ಬಂದೊಡನೆ ನಾನು 'ಕೊಂಚ ಇರಿ. ನಮ್ಮ ಗುಂಪಿನ ಸದ್ಯಸರನ್ನು ಕರೆತರುವೆ' ಎಂದು ಓಡಿಹೋಗಿ 'ಬನ್ನಿ ಮಿನಿಕಾಯದ ಒಂದು ಸುಂದರ ಜ್ವಾಲಾಮುಖಿ ತೋರಿಸುತ್ತೇನೆ' ಎಂದು ಹೇಳಿ ಬಾನುವನ್ನೂ ಉಷಾ ಅವರನ್ನೂ ಕರೆತಂದೆ.

ಅಷ್ಟೊತ್ತಿಗೆ ಸುನಿಧಾ ಜಮಖಾನೆ ಹಾಸಿಕೊಂಡು ಡೆಕ್ಕಿನ ಮೇಲೆ ತನ್ನ ಕುಟುಂಬದವರೊಡನೆ ಕುಳಿತಿದ್ದಳು. ನಮ್ಮ ಚರ್ಚೆ ಇಲ್ಲಿ ಮುಂದುವರೆಯಿತು. ಇಲ್ಲಿನ ಮಹಿಳೆಯರ ಕಷ್ಟ ಎಂದರೆ ಯಾವುದು ಎಂದು ಬಾನು ಕೇಳಿದಳು. ಸುನಿಧಾ ತಟ್ಟನೆ ಹೇಳಿದಳು– 'ಹೆರಿಗೆಯಲ್ಲಿ ಸಾಯುವುದು!' ಕಾರಣ, ಇಲ್ಲಿನ ಗರ್ಭಿಣಿಯರಿಗೆ ಹಾಲು, ಹಣ್ಣು, ತರಕಾರಿ ಸಿಕ್ಕುವುದಿಲ್ಲ. ಮಹಿಳೆಯರು ಪ್ರಸವದ ಹೊತ್ತಲ್ಲಿ ಜೀವಬಿಡುತ್ತಾರೆ. ದ್ವೀಪಕ್ಕೊಬ್ಬರಂತೆ ಡಾಕ್ಟರೇನೊ ಇದ್ದಾರೆ. ಹೆರಿಗೆ ಡಾಕ್ಟರ್ ಇರುವುದು ಕರವಟ್ಟಿಯಲ್ಲಿ ಮಾತ್ರ. ಗಂಡಸರು ಮಕ್ಕಳಾಗದ ಆಪರೇಷನ್ ಮಾಡಿಸಿಕೊಳ್ಳುವುದಿಲ್ಲವಾಗಿ, ಮಹಿಳೆಯರು ತಮಗೆ ಮಕ್ಕಳು ಬೇಡವಾದರೆ ತಾವೇ ಆಪರೇಶನ್ ಮಾಡಿಕೊಳ್ಳಬೇಕು. ಸುನಿಧಾ ಹೇಳುತ್ತಿದ್ದ ಕತೆಯನ್ನು ಕೇಳುತ್ತಿದ್ದ ನನ್ನ ಮಗಳು ಭಾವಾವೇಶದಿಂದ ಘೋಷಿಸಿದಳು: 'ಅಪ್ಪಾ ನಾನು ಡಾಕ್ಟರಾದರೆ ಈ ದ್ವೀಪಗಳಿಗೆ ಬಂದು ಕೆಲಸ ಮಾಡುತ್ತೇನೆ.' ನಾನು 'ಆಮೆನ್' ಎಂದೆ. ಈಗ ವೈದ್ಯಳಾಗಿ ಹೊರಬರಲಿರುವ ಆಕೆ ತನ್ನ ಪ್ರತಿಜ್ಞೆಯನ್ನು ಈಡೇರಿಸುತ್ತಾಳೆಯೊ ಅಥವಾ ಅವಳಿಗೆ ಅದರ ನೆನಪಿದೆಯೊ ಇಲ್ಲವೋ ಗೊತ್ತಿಲ್ಲ.

'ದ್ವೀಪಗಳು ಜನರನ್ನು ಬಂಧಿಸುತ್ತವೆ' ಎಂದು ನನಗೆ ಯಾವಾಗಲೂ ಅನಿಸುತ್ತದೆ. ಇಲ್ಲಿನ ಹೆಂಗಸರಿಗೆ ಕಾಯುವುದು ಒಂದು ಕಾಯಕ ಆಗಿದೆಯೇ? ಕಡಲ ಮೇಲೆ ಹೋದ ಗಂಡನಿಗಾಗಿ ಕಾಯಬೇಕು. ಎಲ್ಲ ಗಂಡಸರು ಕಡಲಿಗೆ ಹೋಗಿಲ್ಲ; ಕಡಲನ್ನು ದಾಟಿ ಕೆಲವರು ಕೇರಳಕ್ಕೆ ಮತ್ತೆ ಕೆಲವರು ಕೊಲ್ಲಿ ದೇಶಗಳಿಗೆ ಹೋಗಿದ್ದಾರೆ. ಹೀಗಾಗಿ ಹೆಂಗಸರು ಮುದುಕರು ಮಕ್ಕಳೇ ದ್ವೀಪಗಳಲ್ಲಿರುವುದು. ಈ ಕಾರಣಕ್ಕೆ ಹೆಣ್ಣಿಗೆ ಇಲ್ಲಿ ಸಾಮಾಜಿಕ ಬದುಕು ತೆರೆದಿದೆ. ಆದರೆ ಈ ದ್ವೀಪಗಳಲ್ಲಿ ಎಲ್ಲಿ ಹೋಗಬೇಕು ಅವಳು? ಕೇರಳದ ಮಾಪ್ಳಾಗಳು ಹಾಡುವ ಪಾಟ್ಟುಗಳಲ್ಲಿ ಹೆಣ್ಣಿನ ಇಂತಹ ಏಕಾಂತದ ಕ್ಷಣಗಳ ವರ್ಣನೆ ಇದೆಯೆಂದು ಕೇಳಿದ್ದೇನೆ. ಮಿನಿಕಾಯದ ಸಾಂಪ್ರದಾಯಿಕ ಮನೆಗಳನ್ನು ತೋರಿಸಲು ನಮ್ಮನ್ನು ಒಂದು ದೊಡ್ಡಮನೆಗೆ ಕರೆದುಕೊಂಡು ಹೋಗಲಾಗಿತ್ತು. ಹಾಗೆ ಮತ್ತೊಬ್ಬರ ಮನೆಯೊಳಗೆ ನುಗ್ಗಿ ಅವರ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಕುತೂಹಲದಲ್ಲಿ ನೋಡುವುದು ಮುಜುಗರದ ಕೆಲಸ. ಯಾರದೊ ಖಾಸಗಿ ಬದುಕಿನಲ್ಲಿ ನುಗ್ಗುತ್ತಿರುವ ಹಿಂಜರಿಕೆ ಕತ್ತಿಗೆ ಕೈಹಾಕಿ ಅಮುಕುತ್ತದೆ. ಹಿಮಾಲಯದಲ್ಲಿಯೂ ನನಗೆ ಈ ಅನುಭವವಾಗಿತ್ತು.

ಆದರೆ ನಾವು ನೋಡಲು ಹೋದ ಮನೆಯವರು ಪ್ರವಾಸಿಗರನ್ನು ಸಂಭಾಳಿಸುವಲ್ಲಿ ನಮ್ಮ ಹಂಪಿಯ ಜನರಂತೆ ಪಳಗಿದ್ದರು. ನಮಗೆ ಮಾಲ್ಡೀವಿಗರ ಮನೆಗಳಲ್ಲಿ ಎದ್ದುಕಂಡಿದ್ದು ರಾಜರಂತೆ ಕೂರಲು ಮಾಡಿಕೊಂಡಿರುವ ಮೆತ್ತೆದಿಂಬು ಹಾಗೂ ತೂಗು ಮಂಚಗಳು. ದ್ವೀಪದಲ್ಲಿ ತಿರುಗಾಡಲು ಜಾಗವಿಲ್ಲ, ದ್ವೀಪ ಬಿಟ್ಟು ಹೋಗಲು ಸಾಧ್ಯವಿಲ್ಲ, ಜತೆಗೆ ಗಂಡನಿಲ್ಲ ಎಂಬಂತಹ ಇಕ್ಕಟ್ಟುಗಳಲ್ಲಿ ಹೆಂಗಸರು ಕಾಲುದೂಡಲು ಇದೆಲ್ಲಾ ವ್ಯವಸ್ಥೆ ಮಾಡಿಕೊಂಡಿರಬಹುದೇ? ಆದರೆ ಟೀವಿ ಬಂದು ಈ ಗೃಹಬಂಧಿಗಳಿಗೆ ಹೊರಜಗತ್ತಿನ ಕಿಂಡಿಯೊಂದನ್ನು ಕೊರೆದಿದೆ. ಎಲ್ಲರ ಮನೆಗಳಲ್ಲಿ ಟೀವಿ ಉರಿಯುತ್ತಿತ್ತು. ಸುನಿಧಾ ಹೇಳುವ ಪ್ರಕಾರ ಇಲ್ಲಿ ಪಕ್ಕದ ದ್ವೀಪವನ್ನು ಕೂಡ ನೋಡದೇ ಸಾಯುವ ಹೆಂಗಸರು ಬೇಕಾದಷ್ಟು ಇದ್ದಾರೆ. ನನಗೆ ಇದನ್ನು ಕೇಳಿ ತೆಂಗಿನಮರಕ್ಕೆ ಕಟ್ಟಿಸಿಕೊಂಡು ಗರಿ ತಿನ್ನುತ್ತಿರುವ ದ್ವೀಪದ ಆಡುಗಳೇ ನೆನಪಾದವು. ಆದರೆ ಡೆಕ್ಕಿನ ಮೇಲೆ ಬುರುಖಾ ಧರಿಸದೆ ದಿಟ್ಟವಾಗಿ ಓಡಾಡಿಕೊಂಡಿರುವ ಹೊಸತಲೆಮಾರಿನ ಅನೇಕ ಆಧುನಿಕ ತರುಣಿಯರು ಕಂಡರು. ದ್ವೀಪಗಳಲ್ಲಿ ಕಾಲೇಜಿಲ್ಲದ ಕಾರಣ, ಬಡವರು ಹೆಣ್ಣುಮಕ್ಕಳನ್ನು ಓದಲು ಮೇನ್ ಲ್ಯಾಂಡಿಗೆ ಕಳಿಸುವುದಿಲ್ಲವಂತೆ. ಆದರೆ ಸುನಿಧಾ ಇದಕ್ಕೆ ಅಪವಾದವಾಗಿದ್ದಳು.

ಮಿನಿಕಾಯದ ಒಂದು ಕಡೆ ಕಡಲದಂಡೆಗೆ ಮುಖಮಾಡಿದಂತಹ ಒಂದು ತೆಂಗಿನ ಚಪ್ಪರದಲ್ಲಿ ಏಳೆಂಟು ಮಹಾಲಿ ಹೆಂಗಸರು ಗುಡ್ಡೆ ಹಾಕಿಕೊಂಡು ಕುಳಿತ್ತಿದ್ದರು. ಹೆಚ್ಚಿನವರು ವಯಸ್ಸಾದವರು. ನಾವು ಬಂದುದ್ದನ್ನು ಕಂಡು ಮುದುಡಿಕೊಂಡರು.

ಬಾನು ಫೋಟೋಗಾಗಿ ವಿನಂತಿಸಿದಳು. ಅವರು ಮಹಾಲಿಯಲ್ಲಿ ಬೇಡಬೇಡ ಎಂದು ಸೆರಗು ಹೊದ್ದುಕೊಂಡರು. ಒಂದು ಅಜ್ಜಿ 'ತೋಬಾ ತೋಬಾ' ಎಂದು ಗಲ್ಲ ಬಡಿದುಕೊಂಡಿತು. ಅವರಲ್ಲಿ ಒಬ್ಬಳಿಗೇನೋ ಫೋಟೊಗೆ ಪೋಸು ಕೊಡುವ ಆಸೆಯಿತ್ತು. ಆದರೆ ಇಡೀ ಗುಂಪು ನಿರಾಕರಿಸುವುದನ್ನು ಕಂಡು ಅವಳೂ ಗಪ್ಪಾದಳು. ಕಲ್ಪನಿಯಲ್ಲಿ ಮೇಕೆಗೆ ಬಾಳೆಲೆ ಕಡಿದು ಹಾಕುತ್ತಿದ್ದ ಒಬ್ಬ ಮಾಪ್ಲಾ ಹೆಂಗಸು ಕೂಡ ಫೋಟೊ ತೆಗೆಸಿಕೊಳ್ಳಲು ನಿರಾಕರಿಸಿದಳು. ದೂರದ ಅಂಗಡಿಯಲ್ಲಿ ಕುಳಿತ ಗಂಡಸರು ನಮ್ಮ ಚೇಷ್ಟೆಯನ್ನು ನೋಡುತ್ತಿದ್ದರು. ಇವರ ಧರ್ಮಶ್ರದ್ಧೆ ವಿಚಿತ್ರ ಅನಿಸಿತು. ಆಧುನಿಕ ಲೋಕದ ಕೈಗಳು ತಾಗದ ಅನೇಕ ಮೂಲೆಗಳು ಇಲ್ಲಿರಬಹುದು. ಇದಕ್ಕಾಗಿಯೇ ಸುನಿಧಾ ಮತ್ತೆ ಮತ್ತೆ ಭವಿಷ್ಯದ ಭರವಸೆಯಂತೆ ತೋರಿದಳು. ಸಂತೋಷ ಕೊಟ್ಟಿದ್ದೆಂದರೆ, ಮಿನಿಕಾಯದ ಮಸೀದಿಗಳಲ್ಲಿ ಹೆಂಗಸರಿಗೆ ಪ್ರವೇಶವಿರುವುದು. ಇದು ಇಂಡೋನೇಶಿಯಾದಲ್ಲಿರುವ ಉದಾರವಾದಿ ಇಸ್ಲಾಮಿನ ಪ್ರಭಾವ ಇರಬೇಕು.

ಒಮ್ಮೆ ನಮಗೆ ಮಾಪ್ಲಾ ನೃತ್ಯ ನೋಡುವ ಅವಕಾಶ ಸಿಕ್ಕಿತು. ನೃತ್ಯಗಾರರನ್ನು ಪ್ರವಾಸಿ ಇಲಾಖೆಯೆ ಕರೆಸಿತ್ತು. ಬಿಳಿಯರ ಮೋಜಿಗಾಗಿ ಆಫ್ರಿಕೆಯ ಜನ ತಮ್ಮ ಸಂಸ್ಕೃತಿ ಪ್ರದರ್ಶಿಸುವುದು ನೆನಪಾಯಿತು. ಅದನ್ನು ಬೀದಿ ನಾಟಕದಂತೆ ನೋಡುವುದು ಕಷ್ಟವಾಗುತಿತ್ತು. ಪ್ರವಾಸೋದ್ಯಮದಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಒಂದು ವಸ್ತುವಾಗಿಸುವ ಸ್ಥಳೀಯರನ್ನು ಬಳಸಿಕೊಳ್ಳುವ ಅಂಶವನ್ನು ತೆಗೆದುಹಾಕುವುದು ಸಾಧ್ಯವಿಲ್ಲವೇ? ಇದು ಹಿಂದುಳಿದ ದೇಶಗಳ ಪ್ರವಾಸೋದ್ಯಮದಲ್ಲಿ ಬಿಡಿಸಲಾಗದ ಅವಸ್ಥೆಯೋ? ಪಾಶ್ಚಾತ್ಯ ದೇಶಗಳು ಪ್ರವಾಸಿಗರಿಗೆ ತಮ್ಮ ತಂತ್ರಜ್ಞಾನ ತೋರಿಸಿ ದಂಗುಬಡಿಸಿದರೆ, ನಾವು ನಮ್ಮ ಸಂಸ್ಕೃತಿ ಪ್ರಾಚಿನತೆ ತೋರಿಸಿ ಚಕಿತಗೊಳಿಸುತ್ತೇವೆ. ಪ್ರವಾಸದಲ್ಲಿ ಅನ್ಯ ಸಂಸ್ಕೃತಿಗಳ ದರ್ಶನವಾಗಬೇಕು. ಆದರೆ ಅದು ಟೀ ಕಾಫಿಯನ್ನು ತಟ್ಟೆಯಲ್ಲಿ ತಂದುಕೊಟ್ಟಂತೆ ಆಗಬಾರದು. ಪರಿಜಕ್ಕಳಿ ಎಂಬ ನೃತ್ಯದಲ್ಲಿ ಕುತೂಹಲ ಮೂಡಿಸಿದ್ದು ಕತ್ತಿಗುರಾಣಿ ಹಿಡಿದು ಮಾಡುವ ಯುದ್ಧಾನುಕರಣೆ. ಅರಬ್ಬಿಸಮುದ್ರದ ನಡುವೆ ಅಕ್ಕಿನುಚ್ಚಿನಂತೆ ಇರುವ ಈ ದ್ವೀಪಗಳು ತಮ್ಮ ಚರಿತ್ರೆಯಲ್ಲಿ ಎಷ್ಟೊಂದು ಮಚ್ಚೆಗಳನ್ನು ಕಂಡಿವೆಯೋ? ಅವುಗಳಿಂದ ಇಳಿದುಬಂದ ಎಂತೆಂತಹ ಸ್ನೇಹ–ಜಗಳ ಮಾಡಿವೆಯೋ? ಮೊದಲು ಕಣ್ಣಾನೂರಿನ ರಾಜರು ನಂತರ ಪೋರ್ಚುಗೀಸರು, ಬಳಿಕ ಟಿಪ್ಪು, ಕೊನೆಗೆ ಬ್ರಿಟೀಷರು ಈ ದ್ವೀಪವನ್ನು ಆಳಿದರು. ಇವೆಲ್ಲಾ ಅವರ ಜನಪದ ಸಾಹಿತ್ಯದಲ್ಲಿ ನೃತ್ಯದಲ್ಲಿ ಹೇಗೆ

ಸುಪ್ತವಾಗಿ ಮೂಡಿವೆಯೊ? ಈ ನೃತ್ಯಕಾರರ ಗುಂಪಿನಲ್ಲಿ ಹಾಡುವ ಗಾಯಕ ಕಪ್ಪನೆಯ ಹುಡುಗನಲ್ಲಿದ್ದ ನೀಗ್ರೊ ಲಕ್ಷಣಗಳು, ಈ ದ್ವೀಪಗಳ ಮೇಲೆ ಹಾದುಹೋದ ಚರಿತ್ರೆಯ ಒಂದು ಛಾಯೆಯಂತಿತ್ತು. ಅವನೊಬ್ಬ ಅದ್ಭುತ ಹಾಡುಗಾರ. ಅವನ ರಾಗಗಳು ತುಂಬ ಹಾಂಟಿಂಗ್ ಆಗಿದ್ದವು. ಒಂದು ಪದದ ರಾಗವು ಮುಂಬೈನ ಹಿಂದಿ ಸಿನಿಮಾದ ಹಾಡಿನ ಅನುಕರಣೆಯಾಗಿತ್ತು.

ತೆಂಗು ಹಾಗೂ ಕಡಲು ಲಕ್ಷದ್ವೀಪಗಳ ಜೀವನಾಡಿ. ಆದರೆ ಎಲ್ಲರೂ ಇವೆರಡನ್ನೂ ನೆಚ್ಚಿ ಬದುಕಲಾಗದು. ಕೆಲಸ ಹುಡುಕಿಕೊಂಡು ಗಂಡಸರು ದ್ವೀಪ ಬಿಟ್ಟುಹೋಗುವುದು ಅನಿವಾರ್ಯ. ಅವರ ಕಷ್ಟ ಹೆಂಗಸರ ಕಾಯುವಿಕೆಗಿಂತ ಕಡಿಮೆಯಾದದ್ದಲ್ಲ. ಮನದನ್ನೆಯನ್ನು ಎಳೆಮಕ್ಕಳನ್ನು ಬಿಟ್ಟು ದೂರ ನಾಡಿಗೆ ದುಡಿಯಲು ಹೋಗುವ ತಮ್ಮ ಯೌವನವನ್ನೆಲ್ಲಾ ಸವೆಸಿ ಭಾರತಕ್ಕೆ ವಿದೇಶಿ ವಿನಿಮಯ ಗಳಿಸಿಕೊಟ್ಟು ಅರೆಮುದುಕರಾಗಿ ಕೈತುಂಬಾ ಹಣದೊಂದಿಗೆ ಬಂದು ಭರ್ಜರಿ ಮನೆ ಕಟ್ಟಿಸಿಕೊಂಡು ಬದುಕುವ ಈ ಗಂಡಸರ ಬಗ್ಗೆ ಯೋಚಿಸಿದರೆ ಮರುಕ ಹುಟ್ಟುತ್ತದೆ. ಇಲ್ಲಿನ ಮಕ್ಕಳಲ್ಲೂ ದ್ವೀಪಗಳನ್ನು ಬಿಟ್ಟು ಹೋಗುವ ಉಮೇದು ಕಂಡಿತು. ಅವರ ಆಟಿಕೆಗಳಲ್ಲೂ ವಲಸೆಯ ನೆರಳೂ ಕಂಡಂತಾಯಿತು. ತೆಂಗಿನ ಮರದ ಕೆಚ್ಚಿನಲ್ಲಿ ಮಾಡಿದ ನಾವೆಗಳಲ್ಲಿ ಅವು ಆಡುತ್ತಿದ್ದವು. ಭಟ್ಕಳದ ನವಾಯಿತರು ಹೆಸರಲ್ಲೂ ನಾವೆಯಿದೆ. ದೋಣಿ ಈ ಜನರ ನಿತ್ಯ ಬದುಕಿನ ಸಂಗಾತಿ. ಇದು ಈ ದ್ವೀಪಗಳಾಚೆ ಅವರನ್ನು ಕರೆದೊಯ್ಯುವ ಕನಸಿನ ಸಂಗಾತಿ ಕೂಡ. ದೂರದ ನಾಡುಗಳಿಗೆ ಹೋಗುವ ಕನಸು ಕಾಣುವುದು ದ್ವೀಪಗಳ ಬದುಕಿನಲ್ಲಿ ಸಾಮಾನ್ಯ. ಮೇನ್‌ಲ್ಯಾಂಡಿನ ಜನ ಬದುಕು ಹುಡುಕಿಕೊಂಡು ದ್ವೀಪಗಳಿಗೆ ಹೋಗುತ್ತಿರುವುದನ್ನು ಅಂಡಮಾನಿನಲ್ಲಿ ನೋಡಿದ್ದೆವು; ಆದರೆ ಇಲ್ಲಿನ ದ್ವೀಪವಾಸಿಗಳು ದುಡಿಮೆ ಹುಡುಕಿಕೊಂಡು ಮೇನ್‌ಲ್ಯಾಂಡಿಗೆ ಹೋಗುತ್ತಿದ್ದರು.

ಹೊಸ ಹೊಸಬರು ಬರುವುದು ಈ ದ್ವೀಪಗಳ ಪಾಲಿಗೆ ಶಾಪವೋ ವರವೋ. ನಾನು ಮಾತಾಡಿದ ಬಹಳ ಜನ ಈ ಟೂರಿಸಂನಿಂದ ಖುಶಿಯಾಗಿದ್ದರು. ಟೂರಿಸ್ಟರು ಬಾರದಿದ್ದರೆ ನಮಗೆ ಈಗಿರುವ ನಾಗರಿಕ ಸೌಲಭ್ಯಗಳೂ ಸಿಗುತ್ತಿರಲಿಲ್ಲ ಎಂದು ಹೇಳುತ್ತಾರೆ. ಇಲ್ಲಿನ ಜೀವನದಲ್ಲಿ ತೆಂಗು ಕಡಲು ಬಿಟ್ಟರೆ ಮೂರನೆಯ ಆಸರೆ ಪ್ರವಾಸೋದ್ಯಮ. ಹೀಗಾಗಿ ಟಿಪ್ಪುಸುಲ್ತಾನ ಬಂತೆಂದರೆ ಅವರಿಗೆ ಹೊರಜಗತ್ತಿನ ತುಣುಕೊಂದು ಬಂದಂತೆ; ಕೈತುಂಬ ಕೆಲಸ ಸಿಕ್ಕಂತೆ. ದ್ವೀಪಗಳ ಬದುಕೇ ವಿಚಿತ್ರ. ಅವು ಅತಿಥಿಗಳಿಗಾಗಿ ಕಾಯುತ್ತಾ ಇರುತ್ತದೆ. ಮತ್ತೆಂದೂ ಭೇಟಿಯಾಗದೆ ಹೊರಟುಹೋಗುವ ಅತಿಥಿಗೆ ತಣಿಸಿ, ನೆನಪುಗಳು ತುಂಬಿ ಬೀಳುಕೊಡುತ್ತವೆ. ದ್ವೀಪದ ಜನರಿಗೆ ಕೊಚ್ಚಿಗೆ ಬಂದುಹೋಗಲು ಟಿಕೇಟಿನಲ್ಲಿ ಸಿಕ್ಕಾಪಟ್ಟೆ ರಿಯಾಯಿತಿಯಿದೆ. ಆದರೆ ಸಾಕಾದಷ್ಟು ಹಡಗುಗಳಿಲ್ಲ. ನಿಮ್ಮ ಮುಖ್ಯ ಸಮಸ್ಯೆ ಯಾವುದು ಎಂದರೆ ಎಲ್ಲರೂ ಒಂದು ಹಡಗು ಸಾಲದು ಎಂದೇ ಹೇಳುತ್ತಿದ್ದರು.

ಪ್ರವಾಸಿಗರು ಐಡೆಂಟಿಟಿ ಕಾರ್ಡು ಕಡ್ಡಾಯವಾಗಿ ಧರಿಸಲು ಹೇಳುತ್ತಾರೆ– ನಮ್ಮ ಮಂದೆಯ ಕುರಿ ಎಂದು ಬೇಗ ಗುರುತಿಸಲು ಸಾಧ್ಯವಾಗುವಂತೆ. ಕರವಟ್ಟಿಯಲ್ಲಿ ಮರೀನ್ ಮ್ಯೂಸಿಯಂ ನೋಡಿದ ಮೇಲೆ, ನಾವು ನಡೆದುಕೊಂಡು ಜೆಟ್ಟಿಗೆ ಬರುತ್ತೇವೆ ಎಂದು ನಮ್ಮ ಮಾಗದರ್ಶಿಗೆ ಹೇಳಿದೆವು. ಆತ ಒಪ್ಪಲಿಲ್ಲ. ನಾವು ವ್ಯಾನಿಗೆ ಹತ್ತದೆ ಉಪಾಯವಾಗಿ ತಪ್ಪಿಸಿಕೊಂಡು ಜೆಟ್ಟಿರೋಟಿನಲ್ಲಿ ನಡೆಯುತ್ತ ಹೊರಟೆವು. ತಲೆಯ ಮೇಲಣ ಟೂರಿಸಂ ಹ್ಯಾಟನ್ನು ತೆಗೆಯದೆ ಇದ್ದದ್ದು ತಪ್ಪಾಯಿತು. ನಮ್ಮನ್ನು ಗುರುತಿಸಿದ ಆತ, ವ್ಯಾನು ನಿಲ್ಲಿಸಿ ಬಲವಂತವಾಗಿ ತುಂಬಿಕೊಂಡು ತಂದು ಮೇನ್‌ಕ್ಯಾಂಪಿಗೆ ಒಗೆದ. ಪ್ಯಾಕೇಜು ಟೂರುಗಳ ಹಣೇಬರೆಹವೇ ಇಷ್ಟು. ಜನರ ಜತೆ ಬೆರೆತು, ಅಲ್ಲಿನ ಬದುಕನ್ನು ತಿರುಗಾಡಿ ನೋಡುವ ಆಸೆಯಿದ್ದವರಿಗೆ ಈ ಪ್ರವಾಸ ನಿರಾಶೆ ತರುತ್ತದೆ. ಆದರೆ ಪ್ರವಾಸಿಗರನ್ನು ಅವರ ಮನಬಂದಂತೆ ತಿರುಗಲು ಬಿಟ್ಟರೆ, ಅವರನ್ನು ಹುಡುಕಿ ಕೂಡಿಸಿ ಹಡಗು ಹತ್ತಿಸುವುದು ಅವರಿಗೂ ತಲೆನೋವು. ತಿರುಗಲು ಹೋದವರಿಗೆ ಹಡಗು ಬಂದಿದ್ದು ಹೋಗಿದ್ದು ಗೊತ್ತೂ ಆಗುವುದಿಲ್ಲ.

ಅದು ಎಲ್ಲೋ ಕಡಲಲ್ಲಿ ನಿಂತು, ದೋಣಿಗಳಲ್ಲಿ ಬರುವ ಜನರನ್ನು ಹತ್ತಿಸಿಕೊಂಡು ಸದ್ದಿಲ್ಲದೆ ಹೊರಟು ಹೋಗುತ್ತದೆ. ಹಡಗನ್ನು ತಪ್ಪಿಸಿಕೊಂಡರೆ ಒಂದುವಾರ ಅಲ್ಲೆ ಕೊಳೆಯಬೇಕು. ಹೀಗಾಗಿ ಪ್ರವಾಸಿಗರನ್ನು ಸಾಧ್ಯವಾದಷ್ಟು ಅತ್ತಿತ್ತ ಬಿಡದೆ, ಕೈದಿಗಳನ್ನು ಕಾಯುವಂತೆ ಕಾಯುತ್ತಾರೆ.

ದ್ವೀಪಗಳ ಜೀವನವನ್ನು ನೋಡುತ್ತಾ ಹೋದರೆ ಬೇಗ ಏಕತಾನತೆ ಬರುತ್ತದೆ. ಒಂದು ದ್ವೀಪ ಮತ್ತೊಂದರ ಹಾಗೇ ಕಾಣುತ್ತದೆ. ಅದೇ ತೆಂಗು, ಅದೇ ಕಡಲು, ಅದೇ ಬೆಸ್ತರು, ಅವವೇ ಲಗೂನುಗಳು, ಅವೇ ಮರಕ್ಕೆ ಕಟ್ಟಿದ ಮೇಕೆಗಳು. ಸಂಜೆಯಾಗುತ್ತಿತ್ತು. ಸೂರ್ಯಪ್ಪನ ಹೊಂಗಿರಣಗಳು ತೆಂಗುಕಾಂಡಗಳ ಮೂಲಕ ನುಸುಳಿ ದ್ವೀಪಗಳ ಒಳಗೆ ನೆಳಲಿನ ನಕ್ಷೆ ಬಿಡಿಸಿದ್ದವು.

ನಾವು ಹೋಗಿದ್ದು ಬೇಸಗೆಯಲ್ಲಿ ಸುಡುವ ಬಿಸಿಲಿಗೆ ಬಳಲಿದ್ದ ನಾವು ಸಂಜೆಗೆ ತೀಡುತ್ತಿದ್ದ ತಂಗಾಳಿ ಮೂಸುತ್ತಾ ನಡೆಯುತ್ತಾ ಹೋದೆವು. ಅಷ್ಟು ಹೊತ್ತಿಗೆ ಯಾರೋ ಒಬ್ಬ ಸೈಕಲ್ಲಿನ ಮೇಲೆ ಬರುತ್ತಿದ್ದವನು, ದ್ವೀಪಕ್ಕೆ ಹೊಸಬರಂತಿದ್ದ ನಮ್ಮನ್ನು ನೋಡಿ ಟೂರಿಸ್ಟಾ? ಎಂದು ಕೇಳಿದೆ. 'ಅಯ್ಯೋ! ಟಿಪ್ಪುಸುಲ್ತಾನ ಇಷ್ಟು ಹೊತ್ತಿಗೆ ಹೋಗಿರಬಹುದು' ಎಂದ. ಅವನು ನೆಂಟರನ್ನು ದೋಣಿಯಲ್ಲಿ ಹತ್ತಿಸಿ ಮರಳಿಬರುತ್ತಿದ್ದ; ಎದೆ ಧಸಕ್ಕೆಂದಿತು. ನಮ್ಮ ಬಣ್ಣಗೆಟ್ಟ ಮುಖಗಳನ್ನು ಕಂಡು 'ಸಿಕ್ಕರೂ ಸಿಗಬಹುದು ಓಡಿ' ಎಂದ. 'ಜೆಟ್ಟಿ ಎಷ್ಟು ದೂರ?' ಎನ್ನಲು 'ಮೂರು ಕಿಮಿ! 'ಯಾವುದಾದರೂ ಆಟೋಗೀಟೋ ?' ಇಲ್ಲೆ ಇಲ್ಲೆ ದ್ವೀಪಗಳಲ್ಲಿ ತಿರುಗುವಾಗ ಎಲ್ಲಿ ಹೋಗುತ್ತೇವೆ ಎನ್ನುವುದು ಗೊತ್ತಾಗುವುದಿಲ್ಲ. ದ್ವೀಪ ದುಂಡಗೆ ಇರುತ್ತದೆ. ರಸ್ತೆಗಳು ತಿರುಗು ಮುರುವಾಗಿ ಇರುತ್ತವೆ–ನುಲಿದುಕೊಂಡ ತೆಂಗಿನಮರಗಳಂತೆ. ಎತ್ತಹೋದರೂ ಒಂದೇ ದೃಶ್ಯವಾದ್ದರಿಂದ ಬಂದ ದೂರ ಕೂಡ ಗೊತ್ತಾಗುವುದಿಲ್ಲ. ನಾವು ಜೆಟ್ಟಿಗೆ ಹತ್ತಿರವೇ ಇರಬಹುದೆಂದುಕೊಂಡಿದ್ದೆವು. ಆದರೆ ಇಷ್ಟು ದೂರ ಅದೂ ವಿರುದ್ಧ ದಿಕ್ಕಿನಲ್ಲಿ ಬಂದಿದ್ದೇವೆಂದು ನಂಬಲಾಗಲಿಲ್ಲ. ತಪ್ಪಿನ ಅರಿವಾಗಿ ಓಡತೊಡಗಿದೆವು. ಎಷ್ಟು ಓಡಿದರೂ ಅಲ್ಲೇ ಇರುವಂತೆ ಅನಿಸಿತು. ಎದೆ ಢವಢವ ಎನ್ನುತ್ತಿತ್ತು.

***

**ಲೇಖಕರ ಪರಿಚಯ: ರಹಮತ್ ತರೀಕೆರೆ**

ರಹಮತ್ ತರೀಕೆರೆ ಅವರು ಸಂಶೋಧಕ, ವಿಮರ್ಶಕ, ಲೇಖಕ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಸಮತಳದವರಾದ (ಜ೧೯೫೯) ಇವರು ಮೈಸೂರು ವಿಶ್ವವಿದ್ಯಾಲಯದಿಂದ ಏಳು ಚಿನ್ನದ ಪದಕಗಳೊಂದಿಗೆ ಎಂ.ಎ. ಪದವಿ ಪಡೆದಿದ್ದಾರೆ. 'ಆಧುನಿಕ ಕನ್ನಡ ಕಾವ್ಯ ಮತ್ತು ಪ್ರತಿಭಟನೆ' ವಿಷಯದ ಮೇಲೆ ಪ್ರಬಂಧ ಬರೆದು ಪಿಎಚ್.ಡಿ. ಪದವಿ ಪಡೆದಿರುವ ಅವರ ಮೊದಲ ಕೃತಿ 'ಪ್ರತಿ ಸಂಸ್ಕೃತಿ'.

ಹಂಪಿಯ ಕನ್ನಡ ವಿ.ವಿ.ಯ 'ಪುಸ್ತಕ ಮಾಹಿತಿ' ಮತ್ತು 'ಕನ್ನಡ ಅಧ್ಯಯನ' ನಿಯತಕಾಲಿಕಗಳ ಸಂಪಾದಕರಾಗಿದ್ದ ಇವರು ಕನ್ನಡದ ಪ್ರಮುಖ ದಿನ ಪತ್ರಿಕೆಗಳಲ್ಲಿ ಅಂಕಣ ಬರೆದಿದ್ದಾರೆ. ತಮ್ಮ ಪ್ರವಾಸದ ಅನುಭವಗಳನ್ನು 'ಅಂಡಮಾನ್ ಕನಸು', ಕದಳಿ ಹೊಕ್ಕು ಬಂದೆ' ಪುಸ್ತಕಗಳಲ್ಲಿ ಪ್ರಕಟಿಸಿದ್ದಾರೆ. ಕರ್ನಾಟಕದ ಸೂಫಿಗಳು, ಕರ್ನಾಟಕದ ಶಾಕ್ತಪಂಥ ಸೇರಿದಂತೆ ಸಂಸ್ಕೃತಿ ಸಂಶೋಧನಾ ಕ್ಷೇತ್ರದಲ್ಲಿ ರಹಮತ್ ಮಹತ್ವದ ಕೆಲಸ ಮಾಡಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

## II. ಸಹಬಾಳ್ವೆ

೧. ಹೊಸಬಾಳು ನಮ್ಮದಿದೆ – ಚನ್ನವೀರ ಕಣವಿ

೨. ಸಂಗಾತಿಗಳು – ಕರೀಗೌಡ ಬೀಚನಹಳ್ಳಿ

೩. ಅಕ್ಕಯ್ – ಅಕ್ಕಯ್ ಪದ್ಮಶಾಲಿ, ನಿರೂಪಣೆ: ಡಾ.ಡೊಮಿನಿಕ್ ಡಿ

೪. ಹುಲಿ ಬಂತು ಹುಲಿ – ಎ.ಸಿ.ಲಕ್ಷ್ಮಣ್ (ಓದು ಪಠ್ಯ)

**ಆಶಯ:**

ಪ್ರೀತಿ, ಅನುಕಂಪ, ಸಾಮರಸ್ಯ ಮತ್ತು ಸಹಬಾಳ್ವೆ ಮರೀಚಿಕೆಯಾಗುತ್ತಿರುವ ಈ ದಿನಗಳಲ್ಲಿ ಒಬ್ಬ ಸಹಜ ಮಾನವನಾಗಿ ಪರಸ್ಪರ ಸಂಬಂಧಗಳನ್ನು ಬೆಸೆಯುವ ದಿಸೆಯಲ್ಲಿ ತನ್ನ ಪಾತ್ರವಿದೆಯೆಂಬುದನ್ನು ನಮ್ಮ ಪೈಕಿ ಪ್ರತಿಯೊಬ್ಬನೂ ತನ್ನೊಳಗೆ ಇಣುಕಿ ನೋಡುವ ಹಾಗೂ ತನಗೇ ಪ್ರಶ್ನೆ ಕೇಳುವ ಅಗತ್ಯ ಹಿಂದೆಂದಿಗಿಂತಲೂ ಅಧಿಕವಾಗಿದೆ.

ಒಂದು ಸಮಾಜದ ನೆಮ್ಮದಿಗೆ ತಾನೆಷ್ಟು ಕಾರಣವಾಗುತ್ತಿದ್ದೇನೆ ಅಥವಾ ಸಹಬಾಳ್ವೆಯ ಕನಸಿಗೆ ನಾನೆಷ್ಟು ಮಾರಕವಾಗುತ್ತಿದ್ದೇನೆಂದು ಪ್ರತಿಯೊಬ್ಬರೂ ತನ್ನನ್ನು ತಾನೇ ವಿಮರ್ಶೆಯ ಒರೆಗೆ ಹಚ್ಚಿ ತೋರಬೇಕು. ಕೊಡಲು ಸಾಧ್ಯವಿಲ್ಲದಿದ್ದರೆ ಕಸಿಯುವ ಹಕ್ಕು ನನಗೆಲ್ಲಿಂದ ಬಂತು ಎಂಬುದನ್ನು ಅತ್ಯಂತ ಸೂಕ್ಷ್ಮವಾಗಿ ಪರಾಮರ್ಶಿಸದೆ ಇಂದಿನ ಕಲುಷಿತ ಸಮಾಜವನ್ನು ಸಹಜ ಸ್ಥಿತಿಗೆ ತರುವ ಕನಸು ಕನಸಾಗೇ ಉಳಿಯಬಹುದು.

ಮನುಷ್ಯ ಮನುಷ್ಯರ ನಡುವಿನ ಸಹಬಾಳ್ವೆಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಮನುಷ್ಯ ಮತ್ತು ಪ್ರಕೃತಿಯಲ್ಲಿರುವ ಇತರೆ ಸಹಜೀವಿಗಳಾದ ಅರಣ್ಯ, ಪ್ರಾಣಿ,ಪಕ್ಷಿ ಮತ್ತು ಇತರೆ ಸಹಜೀವಿಗಳ ನಡುವೆಯೂ ಮೂಡಬೇಕಾಗಿದೆ. ಏಕೆಂದರೆ ಈ ಸೃಷ್ಟಿಕ್ರಿಯೆಯಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ.

## ೧. ಹೊಸ ಬಾಳು ನಮ್ಮದಿದೆ – ಚೆನ್ನವೀರ ಕಣವಿ

ಹೊಸ ಜಗವು ರೂಪುಗೊಂಡಿಹುದೀಗ; ಹೊಸ ಬಾಳು
ನಮ್ಮದಿದೆ, ಹೊಸತೆಲ್ಲ ನಮ್ಮದಿನ್ನು!
ಹಳೆಯ ಕಾಲದ ರೂಢಿ – ಜಡಮತೀಯರನೆಲ್ಲ
ಬಿಟ್ಟು ಬಿಡಿ ಅವರವರ ಪಾಡಿಗಿನ್ನು –

ಯುವ ಜನಾಂಗವೆ ಬನ್ನಿ ನವರಂಗಕೆ
ಹೊಸ ಪಾತ್ರಧಾರಿಗಳ ಹೊಸ ಕುಣಿತಕೆ ;
ಮೂಲೆಯಲ್ಲ ವಿತವಗೆ ಬರಿ ಕತ್ತಲು
ಸತ್ವತಮ ಸಾಹಸಕ ಯಶವೆತ್ತಲು!

ಹೊಸ ಮಳೆಯ ಧಾರೆಯಲಿ ಇಂದಿನ ಜೀವನಕ
ಬಂದಿದೆ ಮಹಾಪೂರ, ಬತ್ತದಿನ್ನು !
ಹಳೆಕೊಳೆಯ ತತ್ವಗಳು ಸಂಕುಚಿತ ಭಾವಗಳು
ಕೊಚ್ಚಿ ಹೋಗಿವೆ, ತಿರುಗಿ ಬಾರವಿನ್ನು –

ಮುಂಬಾಳ ಮುಂಜಾವು ನಗೆಯ ಬೀರಿ
ಕೊರಳೆತ್ತಿ ಹಾಡುತಿದೆ ಜಯವ ಕೋರಿ ;
ಮರೆತುಬಿಡಿ ಹಿಂಗತೆಯ ಹೀನತೆಯನು
ಕೊಟ್ಟು ಬಿಡಿ ಆ ವ್ಯಥೆಗೆ ತರ್ಪಣವನು!

ಎಂದಿನಿಂದಲೂ ನಿಮ್ಮ ಎದೆಗಳಲಿ ಹುದುಗಿಹುದು
ಹೊಸ ಸಮಾಜದ ರೂಪರೇಷೆ ಬಯಕೆ ;
ನಿಮ್ಮ ಹೊಂಗನಸುಗಳ ಕಂಡರಿಸಲೆಂದಿಗ
ಹದಗಾಲ ಬಂದಿರಲು ಮುದುರಲೇಕೆ ?

ಬಾಳವೃಕ್ಷದ ಜೀರ್ಣಪರ್ಣಗಳುದುರಿ
ಹೋಗುತಿವೆ ಚಿಗುರೆಲೆಗೆ ಹೊಗರು ಬೀರಿ,
ಜೋಲು ಮೊಗ ಯುವಕರಿಗೆ ಸಲ್ಲ ಹೊಲ್ಲ ;
ನಗುತ ಮುಂಬರಿಯುತಿರೆ ಬಹುದು ಗೆಲ್ಲ!

ಬಡವ ಬಲ್ಲಿದರೆಂಬ ಜಾತಿಗೀತಿಗಳೆಂಬ
ವಿಷಮತೆಯ ನಂಟೇಕೆ ಹೊಸ ಬಾಳಿಗೆ?
ಹೆಣ್ಣೆಂದು ಹೀಗಳೆವ ಕುನ್ನಿ ತನವಿನ್ನೇಕೆ?
ಕಸವೇಕೆ ನಳನಳಿಪ ಹುಲುಸು ಬೆಳೆಗೆ?

ಒಡಕು ಬಾಳಿನಲಿಲ್ಲ. ಚೆಲುವು ಮೋದ
ಒಡಕು ತಂಬೂರಿಯಲಿ ಒಡಕು ನಾದ;
ಮಣ್ಣು ಮಣ್ಣೆ ಹೊನ್ನ ಬೆಳೆಯಬಹುದು
ನಮ್ಮ ದೃಢ ಮುಷ್ಟಿಯಲಿ ಸಗ್ಗವಿಹುದು.

ಮುಗಿದು ಹೋಯಿತು ಬಾಲ್ಯ, ಮುಂದೆ ಬಾರದು ಹರೆಯ
ಚಣಚಣಕು ಆಯುಷ್ಯ ಸವೆಯುತಿಹುದು;
ಕಾಲಗತಿಯೊಡನೆ ಸಮರಸವಾಗಿ ಸಾಗುವದೆ
ಜೀವನ ಪ್ರವಾಹಕ್ಕೆ ದೊರೆತ ಗುರಿಯು,

ನಮ್ಮ ಅನುಭವಗಳೇ ನಮ್ಮ ಗಳಿಕೆ,
ಕಾಲದೊರೆಗಲ್ಲಿನಲಿ ನಿಂತ ಬಾಳೆ ;
ನೊರೆಗೆ ಮರುಳಾಗುವದೆ ಹೇಡಿ ಬದುಕು
ಮುತ್ತು ಪಡೆವರೆ ಆಳ ಮುಳುಗಬೇಕು.

ನಿಮ್ಮೆದೆಯೊಳಿದೆ ಛಲವು ನಿಮ್ಮ ಕೈಗಿದೆ ಬಲವು
ಆದರೇತಕೊ ಹಿಂದೆ ಸರಿಯುತಿಹಿರಿ–
ಅವ್ಯಕ್ತ ತೇಜಗಳೆ ಅಮೃತಪುತ್ರರು ನೀವು
ಪ್ರತಿಗಾಮಿ ಶಕ್ತಿಗಳ ಸದೆಬಡಿಯಿರಿ.

ಜ್ಞಾನವೃದ್ಧರು ತಿಳಿವನೆರೆಯುತಿರಲಿ
ಬೇಡವೆಂದವರಾರು – ಅವರು ಬರಲಿ ;
ಹುಮ್ಮಸಕೆ ತಣ್ಣೀರನೆರಚದಿರಲಿ
ಹೊಸ ಸಮಾಜದ ಗುರಿಯು ನೇರವಿರಲಿ.

ಹೊಸ ಜಗವು ರೂಪುಗೊಂಡಿಹುದೀಗ; ಹೊಸ ಬಾಳು
ನಮ್ಮದಿದೆ, ಹೊಸತೆಲ್ಲ ನಮ್ಮ ದಿನ್ನು!
ಹಳೆಯ ಕಾಲದ ರೂಢಿ ಜಡಮತೀಯರನೆಲ್ಲ
ಬಿಟ್ಟು ಬಿಡಿ ಅವರವರ ಪಾಡಿಗಿನ್ನು !

ಹೊಸಬಾಳು ರಸಬಾಳನಪ್ಪುತಿಹುದು
ಸಮತೆ–ಸಾಮನ್ಯತೆಗೆ ಒಪ್ಪುತಿಹುದು;
ಹೊಸ ಗಂಧ ತಂದಿಹನು ಮಂದಾನಿಲಂ
ಹೊಸಕಾಲದುದಯ ರವಿ–ಸುಸ್ವಾಗತಂ

**ಕವಿಪರಿಚಯ: ಚೆನ್ನವೀರ ಕಣವಿ.**

'ಸಮನ್ವಯ ಕವಿ' ಎಂದು ಗುರುತಿಸಲಾಗುವ ಚೆನ್ನವೀರ ಕಣವಿ ಅವರು ನವೋದಯ ಮತ್ತು ನವ್ಯ ಸಾಹಿತ್ಯಗಳೆರಡರಲ್ಲಿಯೂ ಸಕ್ರಿಯವಾಗಿ ಪಾಲುಗೊಂಡವರು. ಧಾರವಾಡ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ೧೯೨೮ರ ಜೂನ್ ೨೮ರಂದು ಜನಿಸಿದರು.

ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರ, ಮಣ್ಣಿನ ಮೆರವಣಿಗೆ, ದಾರಿ ದೀಪ ಎಂಬ ಕವನ ಸಂಕಲನವನ್ನು, ಸಾಹಿತ್ಯಚಿಂತನ, ಕಾವ್ಯಾನುಸಂಧಾನ ಎಂಬ ವಿಮರ್ಶಾಲೇಖನಗಳು ಹಾಗು ಕನ್ನಡದ ಕಾಲು ಶತಮಾನ, ಸಿದ್ಧಿ ವಿನಾಯಕ ಮೋದಕ ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೧), ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೮೫), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (೧೯೮೯), ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಂಸ್ಕೃತಿ ವಿಭಾಗದ ಎಮರಿಟಿಸ್ ಫೆಲೋಷಿಪ್ (೧೯೯೬–೯೮), ಪಂಪ ಪ್ರಶಸ್ತಿ (೧೯೯೯), ಇತ್ಯಾದಿ ಪ್ರಶಸ್ತಿಗಳು ಸಂದಿವೆ. ಹಾಸನದಲ್ಲಿ ಜರುಗಿದಾಗ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ (೧೯೯೬) ಕಣವಿ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು.

# ೨. ಸಂಗಾತಿಗಳು – ಕರೀಗೌಡ ಬೀಚನಹಳ್ಳಿ

ಬೆಳುದಿಂಗಳಲ್ಲಿ ಮನೆಯ ಅಂಗಳದಲ್ಲಿ ಚೆನ್ನಯ್ಯ, ನಂಜವ್ವ ಇಬ್ಬರೂ ಕೂತು ತಮ್ಮ ಮಗನ ಮುಂದಿನ ಓದಿನ ಬಗ್ಗೆ ಚಿಂತಿಸುತ್ತಿದ್ದರು. ದುರ್ಗದ ಪ್ರೌಢ ಶಾಲೆಯಲ್ಲಿ ಆಸಾರಿ ಪರೀಕ್ಷೆಗೆ ಕೂತಿದ್ದ ನಲವತ್ನಾಲ್ಕು ವಿದ್ಯಾರ್ಥಿಗಳಲ್ಲಿ ಕೇವಲ ನಾಲ್ವರು ಮಾತ್ರ ಪಾಸಾಗಿದ್ದರು. ಅವರಲ್ಲಿ ಅಸ್ತಿಪಾಳ್ಯದ ಚೆನ್ನಯ್ಯನ ಮಗ ರಾಜಣ್ಣನೂ ಒಬ್ಬನಾಗಿದ್ದ.

ನಂಜವ್ವ ತನ್ನ ಮಗನಿಗೆ ಹೇಳಿದಳು: "ನಮ್ಮೂರ ರಾಮಪ್ಪ, ಪುಟ್ಟಣ್ಣ, ಬೋರೇಗೌಡ ಎಲ್ಲ ನಿನ್ನಷ್ಟೆಯಂತೆ ಓದಿರೋದು. ನೀನೂ ಅವ್ರಂಗೆ ಒಂದು ಮೇಷ್ಟ್ರ ಕೆಲಸ ಮಾಡ್ಕೊ. ಮೇಷ್ಟ್ರಾಗಿ ಅವರೇನು ಹೆಂಡ್ತಿ ಮಕ್ಕಳ ಸಾಕ್ತಾ ಇಲ್ವಾ? ಚೆನ್ನಾಗೇ ಅವ್ರೆ! ನಾವಿರೋಸ್ತಿತೀಲಿ ನಿನ್ನ ಮುಂದೆ ಓದಿಸೋದಿಕ್ಕಾಗದ? ನಿನ್ನ ಮುಂದೆ ಓದಕ್ಕೆ ಕಳಿಸ್ಬಿಟ್ಟು ಕಷ್ಟದಲ್ಲಿ ಬ್ಯಾಡ ಅಂದ್ರೆ ಹೇಗೆ? ಹೇಳು" – ಎಂದು. ರಾಜಣ್ಣ, "ಇಲ್ಲ ಕಣವ್ವ! ನಾನು ಮುಂದಕ್ಕೆ ಓದಲೇಬೇಕು. ನಾನು ಬಿ.ಎ.ವರೆಗೂ ಓದಲೇಬೇಕು" ಎಂದ.

ಚೆನ್ನಯ್ಯನಿಗೆ ತನ್ನ ಮಗ 'ಬಿ.ಎ.ವರೆಗೂ ಓದಲೇಬೇಕು' ಎಂದ ಮಾತು ಕಿವಿ ಮೇಲೆ ಬಿದ್ದದ್ದೇ ತಡ ಆತನ ಕಣ್ಮುಂದಕ್ಕೆ ಹೊಸಳ್ಳಿಯ ಲಿಂಗಾಯಿತರ ಸಿದ್ಧಬಸಪ್ಪನವರು ಮೂಡಿ ಬಂದಿದ್ದರು: ಸಿದ್ಧಬಸಪ್ಪನವರು ಬಿ.ಎ. ಮಾಡಿಕೊಂಡು ಯಾವುದೋ ಜಿಲ್ಲೆಯಲ್ಲಿ ಡಪ್ಯುಟಿ ಕಮಿಷನರ್ ಆಗಿದ್ದರು. ಆ ಸುತ್ತಳ್ಳಿಯಲ್ಲಿ ಅವರಷ್ಟು ದೊಡ್ಡ ಹುದ್ದೆಯಲ್ಲಿ ಬೇರೆ ಇನ್ನಾರೂ ಇಲ್ಲವೆಂಬ ಸುದ್ದಿಯನ್ನು ಚೆನ್ನಯ್ಯ ತನ್ನ ಕಿವಿಯಾರೆ ಕೇಳಿದ್ದ. ಅವರು ಹೊಸಳ್ಳಿಗೆ ಹಬ್ಬಕ್ಕೊ ರಜಕ್ಕೋ ಬಂದಾಗ ಕಾರಿನಲ್ಲಿ ಬರುತ್ತಿದ್ದ ಅವರ ಅದ್ದೂರಿ ವೈಭವವನ್ನೂ ಆತ ಕಣ್ಣಾರೆ ಕಂಡಿದ್ದ. ತನ್ನ ಮಗನೂ ಅವರಂತೆ ಬಿ.ಎ. ಮಾಡಿದರೆ ಅವನೂ ಅವರ ಹಾಗೇ ದೊಡ್ಡ ಹುದ್ದೆಗೆ ಹೋಗ್ತಾನೆಂದು ಕನಸು ಕಟ್ಟುತ್ತಾ ಹೆಂಡತಿಗೆ ಹೇಳಿದ: ಹೋಗಲಿ ಬಿಡೆ, ಅವನ್ನ ಯಾಕೆ ತಡೀತಿ, ನಾನು ಮುಂದಕ್ಕೆ ಓದಲೇಬೇಕು ಅಂತಾನೆ. ಓದ್ಲಿ ನಮ್ಗೆ ಯಾವತ್ತೂ ಕಷ್ಟ ಇದ್ದದ್ದೇ. ನಾವಂತು ಸುಖವಾಗಿರ್ಲಿಲ್ಲ ಅಂದ್ರೆ, ನಮ್ಮ ಮಕ್ಕಳಾದ್ರು ಸುಖವಾಗಿರ್ಬಾರ್ದೆ? ನಮ್ ಬಾಳ್ವೆ ಸಾಲ ಮಾಡೋದು, ತೀರ್ಸೋದು ಇದ್ದೇ ಇದೆ. ಹೊಸಳ್ಳಿ ಲಿಂಗಾಯತ್ರು ನಮ್ಗೆ ಸಾಲ ಕೊಡಕ್ಕೆ ಈಸ್ಕೋಳ್ಳಾಕೆ ಗಟ್ಟಿಯಾಗಿ ಇದ್ದೇ ಅವ್ರ, ಈ ವಯಸ್ಗೆ ಇವಕ್ಕೆ ಕೆಲ್ಸವೂ ಸಿಗದಿಲ್ಲಂತೆ. ನಿನ್ನೆ ದಿನ ಹೊಸ, ಹೋಟೆಲ್ ಮಾದೇವಪ್ನೇ ಅಂಗಂದ ಅವಕ್ಕೆ ಇನ್ನೂ ಚಿಕ್ಕೊಯ್ಸು ಓದ್ಸು ಚೆನ್ನಯ್ಯ" ಅಂತ ಅಂದ ಎಂದು ಹೆಂಡತಿಯ ಸಮಾಧಾನ ಮಾಡತೊಡಗಿದ.

ನಿನ್ನೆ ಮಧ್ಯಾಹ್ನ ಚೆನ್ನಯ್ಯ ಹೊಸಳ್ಳಿ, ಮಹದೇವಪ್ಪನ ಹೋಟೆಲ್ಲಿನಲ್ಲಿ ಕಾಫಿ ಕುಡಿಯುತ್ತಾ ಕೂತಿದ್ದಾಗ ಮಹದೇವಪ್ಪ 'ಏನ್ ಚೆನ್ನಯ್ಯ ನಿನ್ ಮಗ ಒಂದೇ ಸರಿಗೆ ಎಸ್ಸೆಸ್ಸೆಲ್ಸಿ ಗೇಟನ್ ಆಗ್ ಬಿಟ್ಟವಂತ್ನಲ್ಲ. ಪರ್ವಾಗಿಲ್ಲ ಕಣಯ್ಯ ನಿನ್ನ ಮಗ ತುಂಬಾ ಬುದ್ಧಿವಂತ' ಅಂತ ಕಾಣಿಸ್ತದೆ,

ಎಂತೆಂತೋರೋ ವಿದ್ಯಾವಂತರ ಮಕ್ಕಳಲ್ಲಾ ಉರುಳೋಗಿಟ್ಟವ್ರೆ ಎಂದಾಗ ಚೆನ್ನಯ್ಯನಿಗೆ ತನ್ನ ಮಗನ ಮೇಲೆ ಮಮತೆ, ಅಭಿಮಾನ ಮೂಡಿತ್ತು. ಅದರಿಂದ ಚೆನ್ನಯ್ಯ ತನಗಾದ ಸಂತೋಷವನ್ನು ನನ್ನೊಳಗೇ ಅನುಭವಿಸಿದ್ದ, ನಂಜವ್ವನಿಗೂ ತನ್ನ ಮಕ್ಕಳು ಓದಲಿ ಎಂಬುದೇ ಬಯಕೆಯಾಗಿತ್ತು. ಆದರೆ ತಾವು ಬಡವರು. ನಾಳೆ ದಿನ ಮಧ್ಯೆ ಹಣಕಾಸಿಗೆ ತೊಂದರೆಯಾದರೆ ಗತಿ ಯಾರು? ಎಂಬ ಭಯ ಕಾಡತೊಡಗಿ– 'ಸರಿ, ನಿಮಗೆ ಧೈರ್ಯವಿದ್ದರೆ ಮುಂದೆ ಓದಕ್ಕೆ ಕಳ್ಸಿ, ನಾನು ಬ್ಯಾಡ ಅನ್ನೋದಿಲ್ಲ. ಆದ್ರೆ

ನಮ್ಮ ಬೆಂಗಳೂರ್ನಲ್ಲೂ ಮೈಸೂರ್ನಲ್ಲೋ ನೆಂಟ್ರುನಿಷ್ಟ ಬಂಧುಬಳಗ ಅಂತ ಯಾರಿದ್ದಾರ? ಕಷ್ಟಸುಖಕ್ಕೆ ಆಗೋರು ಅಲ್ಲಿ ಯಾರಾದ್ರೂ ನಮ್ಗೆ ಇದ್ದಾರ? ಎಲ್ಲಿ ಬಿಡೋದು? ಯಾರ ಮನೇಲಿ ಇರಸೋದು? ಅನ್ನೋದ್ರ ಬಗ್ಗೆ ಏನಾದ್ರೂನು ಯೋಚಿ ಮಾಡಿದ್ದೀರಾ?' ಎಂದು ಕೇಳಿದಳು ಗಂಡನಿಗೆ ನಂಜವ್ವ.

ಚೆನ್ನಯ್ಯನಿಗೆ ತನ್ನ ಹೆಂಡತಿ ಹೇಳುತ್ತಿರುವುದು ಒಂದು ರೀತಿಯಲ್ಲಿ ನಿಜ ಅನ್ನಿಸಿತು. ಆತ ಈ ಬಗ್ಗೆ ಮೊದಲು ಏನನ್ನೂ ಯೋಚಿಸಿರಲಿಲ್ಲ. ಈಗ ಯೋಚಿಸಿದ; ತನ್ನ ಮಗನ ಮುಂದಕ್ಕೆ ಪಿಯುಸಿಗೆ ಓದಿಸುವುದಕ್ಕೆ ಎಲ್ಲಿಗೆ ಕಳಿಸುವುದು? ಎಲ್ಲೂ ತನ್ನ ಸಂಬಂಧಿಕರಿಲ್ಲವಲ್ಲ! ಅವ್ನು ರೂಮು ಮಾಡಿಕೊಂಡು ಇದ್ದು ಓದುವುದು ದಿಟವಾ? ಇದುವರೆಗೂ ಅವು ತಮ್ಮೂರು, ಹೊಸಳ್ಳಿ, ದುರ್ಗ ಬಿಟ್ರೆ ಒಂದೂರು–ಒಂದೇರಿಗೆ ಅಂತ ಹೊರಗೆ ಹೋಗಿ ನೋಡಿದವನಲ್ಲ ಎಂದು.

ತನ್ನ ನಾಲ್ವರು ಗಂಡು ಮಕ್ಕಳಲ್ಲಿ ಇಬ್ಬರನ್ನು ವಿದ್ಯಾವಂತರನ್ನಾಗಿ ಮಾಡಬೇಕು– ಎಂಬ ದೃಢ ನಿರ್ಧಾರಕ್ಕೆ ಚೆನ್ನಯ್ಯ ಬಂದಿದ್ದ. ಅದಕ್ಕೆ ಎಷ್ಟೇ ಖರ್ಚಾಗಲಿ; ತಾನು ಎಷ್ಟೇ ಕಷ್ಟ ಬೀಳಲಿ ತನ್ನಿಬ್ಬರು ಮಕ್ಕಳು ವಿದ್ಯಾವಂತರಾದರೆ ಸಾಕು. ತಾನು ಬಡತನದಲ್ಲೇ ಇರಬಹುದು; ತಮಗಿಂತಲೂ ಉತ್ತಮವಲ್ಲದ ಕುಟುಂಬಗಳು ತಮ್ಮೂರಿನಲ್ಲಿದ್ದು ಜೀವನ ನಡೆಸುತ್ತಿಲ್ವೆ? ಬಡತನ, ಸಿರಿತನ ಅವೆಲ್ಲಾ ಬಾಳಿನಲ್ಲಿದ್ದದ್ದೇ ಇದ್ದುದರಲ್ಲಿ ತನ್ನ ಕುಟುಂಬ ತನ್ನೂರಿನ ಕುಟುಂಬಗಳ ಮುಂದೆ ಹೋಲಿಸಿದಾಗ ಎಷ್ಟೋ ಪಾಲು ಮೇಲಲ್ಲವೆ? ಎಲ್ಲಾ ಅಲ್ಲಿಗಲ್ಲಿಗೆ ನೇರವಾಗಿ ನಡೆದುಕೊಂಡು ಹೋಗುತ್ತದೆ ಎಂದು ಆಲೋಚಿಸಿ, ನಿಶ್ಚಯಿಸಿಕೊಂಡಿದ್ದ. ಚೆನ್ನಯ್ಯ ತನ್ನ ಸಂಬಂಧಿಕರು ಯಾರಾದರು ಬೆಂಗಳೂರು, ಮೈಸೂರು ಮುಂತಾದ ಪಟ್ಟಣಗಳಲ್ಲಿ ಇದ್ದಾರೆಯೇ ಎಂದು ನೆನಪಿಸಿಕೊಳ್ಳತೊಡಗಿದ. ತನ್ನ ಹಿಂದಕ್ಕೆ ಎರಡು ಮೂರು ತಲೆಮಾರಿನವರೆಗೂ ಯೋಚಿಸುತ್ತಾ ಹೋದ. ಯಾರೂ ಇಲ್ಲ: ತನ್ನಿಂದ ಮುಂದಕ್ಕೆ ಯೋಚಿಸುತ್ತಾ ಬಂದ ಆಗಲೂ ಯಾರೂ ಸಿಗಲಿಲ್ಲ. ಎಬ್ಬೆಟ್ಟಿನ ರುಜುವಿನಲ್ಲಿ ತಮ್ಮ ಬಾಳನ್ನೆಲ್ಲಾ ತುಂಬಿಸಿ ಹೋದವರು. ಹುಟ್ಟಿದ ಊರನ್ನು ಬಿಟ್ಟು ಹೊರಗೆ ಹೋದವರೇ ಇಲ್ಲ. ಇಡೀ ಊರಿನಲ್ಲೇ ಎಲ್ಲೋ ಬೆರಳೆಣಿಕೆಗೆ ಸಿಗುವಷ್ಟು ಮಾತ್ರ ವಿದ್ಯಾವಂತರು. ಅವರೂ ಎಸ್ಸೆಸ್ಸೆಲ್ಸಿ ಮಟ್ಟದವರೆಗೆ ಓದಿ ಫೇಲಾಗಿಯೋ ಪಾಸಾಗಿಯೋ ಇರುವವರು, ತನ್ನ ವಂಶದಲ್ಲಿ ತನ್ನಿಬ್ಬರ ಮಕ್ಕಳು ವಿದ್ಯೆ ಕಲಿಯುತ್ತಿರುವವರು ಸ್ಕೂಲು ಮೆಟ್ಟಿಲು ಹತ್ತಿರುವವರು ಎಂದುಕೊಂಡು ಚೆನ್ನಯ್ಯ ನಿಟ್ಟುಸಿರು ಬಿಡುತ್ತಾ ಹೆಂಡತಿ ನಂಜವ್ವನಿಗೆ, "ಯಾರೂ ಇಲ್ಲವಲ್ಲ ನಮ್ಮ ಸಂಬಂಧಿಕ್ರಲ್ಲಿ ಓದೋರು" ಎಂದು ಹೇಳಿದ.

"ಓದ್ದೋರು ಇಲ್ಲ, ಊರು ಬಿಟ್ಟು ಹೊರಗೆ ಹೋದವರೂ ಇಲ್ಲ ಬಿಡು. ನಾನು ಆಗ್ಲೆ ಯೋಚಿಸಿದ್ದೀನಿ" ಎಂದು ಹೇಳಿದ ನಂಜವ್ವನಿಗೆ ಆಗಲೇ ನಿದ್ದೆ ಅದುಮುತ್ತಿತ್ತು, ಆಕಳಿಕೆ ಉಕ್ಕಿಕೊಂಡು ಬರುತ್ತಿದ್ದವು. ಅವಳು ಮಾತನಾಡುತ್ತಿದ್ದರೆ ಎಲ್ಲೋ ಮಾತನಾಡಿದಂತೆ. ಈ ಮಧ್ಯೆ ಹಾಲಿನಂತ ದಟ್ಟವಾಗಿ ಪ್ರಶಾಂತವಾಗಿ ಚೆಲ್ಲಿದ್ದ ಪೂರ್ಣ ಬೆಳದಿಂಗಳಲ್ಲಿ ಗಂಭೀರವಾಗಿ ಅಬ್ದುಲ್ ಅಜೀದು ಸಾಬರು ಚೆನ್ನಯ್ಯನ ನೆನಪಿಗೆ ಮೂಡಿ ಬಂದರು.

ಹೋದ ಸಾರಿ ಬತ್ತ ಮಿಲ್ಲು ಮಾಡಿಸಿ, ಅಕ್ಕಿ ತೆಗೆದುಕೊಂಡು ಹೋಗಲು ಅಬ್ದುಲ್ ಅಜೀದು

ಸಾಬರು ಬಂದಿದ್ದಾಗ, ರಾಜಣ್ಣ ಈ ಸಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕೂತವನೆ ಎಂಬ ಸುದ್ದಿ ಅವರಿಗೆ ಗೊತ್ತಾಗಿ "ನಿನ್ನ ಮಗನ ರಿಸಲ್ಟ್ ಬಂದ ತಕ್ಷಣ ಕಾಗದ ಬರಿ ಚೆನ್ನಯ್ಯ, ಅವ್ನು ಪಾಸಾದ್ನೊ ಫೇಲಾದ್ನೊ ಎಂಬುದಕ್ಕೆ. ಪಾಸಾದರೆ ಮುಂದಕ್ಕೆ ಓದಿಸು, ಬಿಡಿಸಬೇಡ, ಯಾವುದಕ್ಕೂ ನನಗೆ ಕಾಗದ ಬರಿ. ಬರೀದ ಹೋದಿ..." ಎಂದು ಹೇಳಿ ಹೋಗಿದ್ದರು. ಇದು ಚೆನ್ನಯ್ಯನಿಗೆ ನೆನಪಿಗೆ ಬಂದದ್ದೇ ತಡ ಅವನಿಗೆ ಯಾವುದೋ ನಿಧಿಯೇ ಸಿಕ್ಕಂತಾಗಿ ಬಿಟ್ಟು "ಏ! ಏನೇ ನಿದ್ದೆ ಬಂತೇನೆ?" ಎಂದು ಕೂಗಿದ. ಉತ್ತರ ಬರಲಿಲ್ಲ. ಮತ್ತೆ ಗಟ್ಟಿಯಾಗಿ ಕೂಗಿದ. ಆಗ ಹೆಂಡತಿ ಎಲ್ಲೋ ಯಾರೋ ಕೂಗಿದಂತಾಗಿ 'ಆ' ಎಂದಳು. 'ಇಲ್ಲಿ ಕೇಳೆ.'

"ಇನ್ನು ನೀನು ಮುಂದೆ ಯೋಚನೇ ಮಾಡೇಡ ಮಲಿಕೊ. ಮಲಿಕೊಂಡು ಇನ್ನು ನಿಶ್ಚಿಂತೆಯಾಗಿ ನಿದ್ದೆಮಾಡು. ನನಗೀಗ ಹೊಳಿತು! ನಮ್ಮ ಅಜೀದು ನಮ್ಮ ಇರುವಾಗ ನಾವು ಯಾಕೆ ಅಲ್ಲಿ ಇಲ್ಲಿ ಅಂತ ಯೋಚ್ನೆ ಮಾಡಿ ತಲೆ ಕೆಡಿಸ್ಕೊಳ್ಳೇಕು? ಹೋದ್ಸರಿ ಬಂದಾಗ ಇವ್ನ ರಿಸಲ್ಟ್ ಬಂದ್ ತಕ್ಷಣ ಕಾಗ್ದ ಹಾಕ್ಸು ಅಂದಿದ್ರು.

"ಅವರೆ! ಅವರ್ತಾನೆ ಏನ್ಮಾಡಾರು? ಜಾತಲ್ಲದ್ ಜಾತಿ! ನಮ್ ಸಂಬಂದಿಕ್ರೆ ಏನಾರ ಮಾಡಾಕೆ? ಈಗೊಳ್ಳೆ ನೀನ್ ಚೆನ್ನಾಗ್ ಹೇಳ್ದೆ!" ಎಂದಳು ನಂಜಪ್ಪ, "ಅದೆಲ್ಲಾ ಯಾಕೆ ಈಗ, ಓದಕ್ಕೆ ಅವರ ಮನೇಲಿ ಈಗ ಬಿಡಾನ ಇವ್ನ ಅಂದ್ನೆ ಅಂದ್ನೆ ನಾನು? ನನಗೂ ಗೊತ್ತು. ಅವ್ರು ಸಾಬ್ರು ಅಂತ. ಪತ್ರ ಬರಿ ಅಂದಿದ್ರಲ್ಲ. ಬರಿಯುವ ಬಿಡು. ನಾಳೆ ದಿನ ಬಂದಾಗ, 'ನಾನೇನ್ ಸತ್ತೋಗಿದ್ನ ಚೆನ್ನಯ್ಯ ನಿನ್ ಪಾಲ್ಕೆ?' ಅಂತ ಕೇಳಿದ್ರ ನಾನೇನೇಳ್ಳೀ ಅವರ್ಗೆ? ಎಷ್ಟೇ ಆಗ್ಲಿ ಇವ್ನೂ ಒಂದ್ಕಾಲ್ಕೆ ಅವರ ಕೈಕೆಳಗ್ಲ ಓದ್ ಹುಡುಗ ಅಲ್ವೆ?" ಎಂದು ಕೊಂಚ ರೇಗಿ ಹೇಳಿದನು ಚೆನ್ನಯ್ಯ ಹೆಂಡತಿಗೆ. "ಸರಿ ಅಂಗಾದ್ರೆ ಬರೀರಿ! ಹಂಗೇ ಗದ್ದೆಯೂ ಈ ಸಾರಿ ಚೆನ್ನಾಗಿದೆ ಬನ್ನಿ ಅಂತಾನೆ ಬರೀರಿ, ಬಂದೋಗ್ಲಿ, ಏನೇಳ್ತಾರೆ ನೋಡುವ, ನನ್ಗೆ ನಿದ್ದೆ ಬರ್ತಾ ಅದೆ. ಮತ್ತೆ ನನ್ನ ಏಳಿಸ್ಟೇಡಿ...' ಎಂದವಳೆ ನಂಜವ್ವ ನಿದ್ದೆ ಹೋಗಿಬಿಟ್ಟಳು.

ಸುಮಾರು ಸಮರಾತ್ರಿಯಾಗುತ್ತಾ ಬಂದಿತ್ತು. ಕಡೆಯಲ್ಲಿ ಚೆನ್ನಯ್ಯ ಮಗನಿಗೆ, "ಲೋ ಮೊಗಾ! ನೀನಿನ್ನೂ ಅದೇನೋ ಮಾರ್ಕ್ಸ್‌ಕಾರ್ಡು ಗೀರ್‌ಸ್ಕಾರ್ಡು ಸರ್ಟಿಫಿಕೇಟ್ ಗಿರ್ಟಿಫಿಕೇಟ್ ಇನ್ನು ಸ್ಕೂಲ್ಗೆ ಬಂದಿಲ್ಲ. ಬಂದ್ ತಕ್ಷಣ ಅವ ತಗೋಬೇಕು ಅಂತಿದ್ದಲ್ಲ. ಅವನ್ನೆಲ್ಲಾ ನಿಧಾನಕ್ಕೆ ತಗೊತ್ತಾ ಇರು. ನಾಳೆ ಹೊಸಳ್ಳಿಗೋಗಿ ಪತ್ರ ಬರೆಯುವ; ನಾನೂ ಬತ್ತೀನಿ, ನೀ ಇನ್ನು ಮಲಗು..." ಎನ್ನುತ್ತಾ ಚೆನ್ನಯ್ಯ ತಾನು ಮಲಗಲು ಸ್ವಲ್ಪ ದೂರದಲ್ಲಿ ಹಾಸಿದ್ದ ಈಚಲುಗರಿ ಚಾಪೆಯ ಕಡೆಗೆ ತೆರಳಿದ. ರಾಜಣ್ಣ ಕೂತಲ್ಲಿಂದ ಹಾಗೆಯೇ ತನ್ನವ್ವನ ಒಂದ ಪಕ್ಕದಲ್ಲಿ ಮಂದಲಿಗೆಯ ಮೇಲೆ ಜಾಗ ಇದ್ದರಿಂದ ಹಾಗೇ ಉರುಳಿಕೊಂಡ. ಆತ ನೆಲಕ್ಕೆ ತಲೆಕೊಟ್ಟಿದ್ದೇ ತಡ ಅವನಿಗೆ ಯಮನಿದ್ದೆ ಆವರಿಸಿತು. ಚೆನ್ನಯ್ಯನ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಒಸಕಾಡಿದ. ತಲೆ ಏನೇನೋ ಯೋಚಿಸುತ್ತಲೇ ಇತ್ತು. ಎದ್ದು ಕೂತ. ಬಹಳ ಹೊತ್ತಿನವರೆಗೂ ಕೂತು ಸುತ್ತಾಮುತ್ತಾ ನೋಡಿದ. ಅಂಗಳದ ತುಂಬಾ ಹೆಂಡತಿ, ಮಕ್ಕಳ ಗೊರಕೆ ತುಂಬಿಕೊಂಡಿದೆ. ಅವರ ಮೇಲೆಲ್ಲಾ ಬೆಳದಿಂಗಳು ಹರಿದಾಡುತ್ತಿದೆ. ಮನೆಯೊಳಗೆ ಸೆಖೆ, ತಿಗಣೆ ಕಾಟಕ್ಕೆ ಹೊರಗೆ ಅಂಗಳದಲ್ಲಿ ಎಲ್ಲರೂ ಮಲಗುವುದು ದಿನಚರಿಯಂತಾಗಿಬಿಟ್ಟಿದೆ. ಸ್ವಲ್ಪ ದೂರದಲ್ಲಿ ತನ್ನ ಹಿರಿಮಗ ತಿಮ್ಮೇಗೌಡ, ಅವನ ಪಕ್ಕ ಮೂರನೆಯವನು ಜವರ, ಅವನ ಪಕ್ಕ ಕೊನೆಯ ಓದುವ ಹುಡುಗ ಚಂದ್ರಪ್ಪ ಮಲಗಿದ್ದಾರೆ. ಕಡೆಯ ಹೆಣ್ಣು ಮಗಳು ಭಾಗ್ಯ ತನ್ನ ಅವ್ವನ ಇನ್ನೊಂದು ಪಕ್ಕ ಮಲಗಿದ್ದಾಳೆ. ಎಲ್ಲರಿಗೂ ಗಾಢ ನಿದ್ದೆ.

ಕೂತಲ್ಲಿಂದಲೇ ಚೆನ್ನಯ್ಯ ಮೆಲ್ಲಗೆ ಮೇಲೆದ್ದ. ಹೆಜ್ಜೆಗಳಿಗೆ ಮೌನ ತುಂಬಿ ಹೆಂಡತಿ ನಂಜವ್ವ, ಮಲಗಿದ್ದಲ್ಲಿಗೆ ಬಂದ. ಬಂದವನೇ ಮಗಳು ಭಾಗ್ಯಳನ್ನು ಸ್ವಲ್ಪ ಅಂಗೇ ಕೊಂಚ ದೂರಕ್ಕೆ ಹೊರಳಿಸಿ, ಉರುಳಿಸಿ, ನಂಜವ್ವನ ಎದೆ ಹತ್ತಿರ ಕೈಹಾಕಿ ಮೆಲ್ಲಗೆ ತಿವಿದ. ನಂಜವ್ವ ಎಷ್ಟೋ ಹೊತ್ತಿನ ಮೇಲೆ,

"ಯಾರದು?" ಎಂದು ಹಾಗೇ ನಿದ್ದೆ ಹೋದಳು. ಚೆನ್ನಯ್ಯ ಮತ್ತೆ ತಿವಿದು, "ಹೈ! ನಾನು ಕಣೆ!" ಎಂದ ಹಲ್ಲು ಮುರಿ ಕಚ್ಚಿ, ಆಗ ನಂಜಪ್ಪ ಅರ್ಧ ಎಚ್ಚರವಾಗಿ ತನ್ನ ಗಂಡ ಅಂತ ಗೊತ್ತಾದ ಮೇಲೆ, "ಯಾಕ್ ನಿನ್ನೆ ಇನ್ನೂ ನಿದ್ದೆ ಬರ್ಲಿಲ್ವೇನೊ?" ಎಂದಳು ಸಿಟ್ಟಾಗಿ, ಚೆನ್ನಯ್ಯನಿಂದ ಉತ್ತರವಿಲ್ಲ. ಆಗ ಗಂಡನ ಮೌನದ ಬೇಸರ ಆಕೆಗೆ ಅರ್ಥವಾಗಿ ಆಕೆ ಕೊಂಚ ಸಿಡುಕುಬಿಟ್ಟು, "ನಿನ್ಗೆ ಯಾವಾಗ್ಲು ಒಂದೇ! ಬೆಳ್ದ್ ಮಕ್ಕಳು ಪಕ್ದಲ್ಲಿ ಮಲಗವೆ!" ಎಂದಳು.

"ಅವು ಆಗ್ಲೆ ನಿದ್ದೆ ಹೋಗವೆ ಬಾರೆ" ಎಂದು ಆತೊರೆದ. "ನಾನು ಮೈನೋವ್ ಬಂದ್ ಸತ್ರು ನೀನು ಮಾತ್ರ ನಿನ್ ಮುದಿಬೆಡ್ಗ್ ಬಿಡ್ಬೇಡ" ಎಂದಳು ನಂಜವ್ವ. ಆಮೇಲೆ ಚೆನ್ನಯ್ಯನಿಗೆ ಬೆಳುದಿಂಗಳ ರಾತ್ರಿ ತುಂಬಾ ಹಿತವಾಗಿ ಕಂಡಿತು.

***

ಒಂದು ಪತ್ರ ತಲುಪಿಸುವುದಕ್ಕೆ ಈ ಉರಿಯೋ ಬಿಸಿಲಿನಲ್ಲಿ ಎರಡು ಮೈಲಿ ಸೈಕಲ್ಲು ತುಳಿದು ಮೈ ದಣಿಸಿಕೊಳ್ಳಬೇಕಲ್ಲ ದೇವರೆ; ಯಾರಾದ್ರೂ ಅಸ್ತಿಪಾಳ್ಯದ ಜನ ಸಿಕ್ಕಿದ್ದರೆ ಅತ್ತ ಚೆನ್ನಯ್ಯನ ಮನೆಗೆ ಕೊಟ್ಟುಬಿಡಿ ಅಂತ ಹೇಳಿ ಪತ್ರನ ಅವರ ಕೈಗೆ ಕೊಟ್ಟುಬಿಟ್ಟು ತನ್ನ ಕೈ ತೊಳೆದುಕೊಳ್ಳಬಹುದಲ್ಲ ಎಂದುಕೊಂಡು, ಕೈಯಲ್ಲಿ ಅಬ್ದುಲ್ ಅಜೀದರ ಪತ್ರ ಹಿಡಿದುಕೊಂಡು ಹೊಸಳ್ಳಿ ಪೋಸ್ಟ್ ಮ್ಯಾನ್ ಯೋಚಿಸತೊಡಗಿದ.

ಯಾರೋ ಈ ಸಾಬಿ ಆಗಾಗ ಚೆನ್ನಯ್ಯನಿಗೆ ಬೆಂಗಳೂರಿನಿಂದ ಪತ್ರ ಬರಿತಾನೆ ಇರ್ತಾನೆ. ಅದೂ ಪೋಸ್ಟ್ ಕಾರ್ಡ್‌ನಲ್ಲಿ ಪತ್ರ ಬರಿತಿರ್ತಾನೆ, ಎಲ್ಲೋ ಮಹಾಜಿಪುಣ ಅಂತ ಕಾಣಿಸ್ತದೆ. ಈ ಸಾಬಿ! ಸಂಸಾರದ ತಾಪತ್ರಗಳನ್ನೆಲ್ಲಾ ಪೋಸ್ಟ್ ಕಾರ್ಡಿನಲ್ಲಿ ಬರೀಬಾರ್ದು; ಬೇರೆ ಯಾರಾದ್ರು ಓದ್ತಾರೆ ಅನ್ನೋ ಪ್ರಜ್ಞೆನಾದ್ರು ಈ ಸಾಬಿಗೆ ಬೇಡವೆ? ಎಂದುಕೊಂಡ, ಅಜೀದರ ಪತ್ರವನ್ನು ಈ ಪೋಸ್ಟ್ ಮ್ಯಾನ್ ಶಿವಣ್ಣ ಪೂರ್ಣವಾಗಿ ಓದತೊಡಗಿದ. ಇನ್ ಲ್ಯಾಂಡ್ ಲೆಟರ್ನೆ ಕದ್ದು ಓದುವ ಚಾಳಿ ಈ ಶಿವಣ್ಣನಿಗಿದ್ದಾಗ, ಅಬ್ದುಲ್ ಅಜೀದರಂತಹ ಮುಕ್ತ ಮನಸ್ಸಿನ ವ್ಯಕ್ತಿಗಳು ಕಾರ್ಡಿನಲ್ಲಿ ಬರೆದ ವಿಷಯವನ್ನು ಶಿವಣ್ಣ ಓದದೇ ಬಿಡ್ತಾನ?

"ಅಣ್ಣನವರಾದ ಶ್ರೀ ಚೆನ್ನಯ್ಯನವರಿಗೆ ಅಬ್ದುಲ್ ಅಜೀದ್ ಮಾಡುವ ಅನಂತ ವಿಜ್ಞಾಪನೆಗಳು" ಅಂತ ಬರಿತಾನಲ್ಲ! ಇಮಾಂಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಅನ್ನಂಗೆ, ಆ ಸಾಬಿಗೂ ಈ ಚೆನ್ನಯ್ಯನಿಗೂ ಹೇಗೆ ನಂಟು? ಎಂದು ನಕ್ಕ ಶಿವಣ್ಣ. ಅಸ್ತಿಪಾಳ್ಯಕ್ಕೆ ಹೊರಗಿನಿಂದ ಪತ್ರಗಳೇ ಬರುವುದಿಲ್ಲ. ಬೇರೆಯವರಿಗೆ ಬಂದರೆ ಆರು ತಿಂಗಳಿಗೋ ವರ್ಷಕ್ಕೋ ಒಂದು ಪತ್ರ ಬರುತ್ತದೆ! ಆದರೆ ಈ ಸಾಬಿ ಮಾತ್ರ ತಿಂಗಳು ತಿಂಗಳಿಗೂ ಪತ್ರ ಬರೆದು ತನಗೆ ಹಿಂಸೆ ಕೊಡುತ್ತಾನಲ್ಲ ಎಂದುಕೊಂಡು ಅಜೀದರ ಪತ್ರ ಕೈಯಲ್ಲಿ ಹಿಡಿದುಕೊಂಡು ಅಸ್ತಿಪಾಳ್ಯದವರು ಯಾರಾದರೂ ಸಿಕ್ಕಾರ ನೋಡುವ– ಅಂದುಕೊಂಡು ಮಹದೇವಪ್ಪನ ಹೋಟೆಲ್ಲಿನ ಕಡೆ ಹೊರಟ.

ಅಸ್ಪಿತಾಳ್ಯಕ್ಕೆ ಬಂದ ಪತ್ರಗಳನ್ನು ಅವು ಮನೆಗೆ ತಲುಪಿಸುವಂತೆ ಹೇಳಿ ಈ ಪೋಸ್ಟ್ ಮ್ಯಾನ್ ಮಾರಾಯ ಶಿವಣ್ಣ ಕೊಟ್ಟ ಎಷ್ಟೋ ಪತ್ರಗಳು ತಲುಪಬೇಕಾದವರಿಗೆ ತಲುಪಿಯೇ ಇಲ್ಲ. ಅವು ತಲುಪಿದ್ದರೂ ವಾರದ ಮೇಲೋ ತಿಂಗಳ ಮೇಲೋ. ಆ ಪತ್ರಗಳು ತಲುಪುವ ಹೊತ್ತಿಗೆ ಕಾಗದ ಬರೆದವರೇ ಊರಿಗೆ ಬಂದುಬಿಟ್ಟಿದ್ದುಂಟು. ಪತ್ರ ಕೊಡ್ತೀನಿ ಅಂತ ಈಸಿಕೊಂಡವನು ತನ್ನ

ಜೇಬಿನಲ್ಲಿಯೇ ಜೀರ್ಣಿಸಿಕೊಂಡಿದ್ದಕ್ಕೆ ಪುರಾವೆ ಉಂಟು. ಮರೆತು ತಿಂಗಳಾದ ಮೇಲೆ ಅತ್ತ ಅರಿದು ಬಿಸಾಕಿದ್ದುಂಟು. ಆದರೆ ಅವತ್ತು ಚೆನ್ನಯ್ಯನ ಅದೃಷ್ಟಕ್ಕೆ ಪೋಸ್ಟ್ ಮ್ಯಾನ್ ಶಿವಣ್ಣ ಮಹದೇವಪ್ಪನ ಹೋಟೆಲ್ಲಿನ ಹತ್ತಿರಕ್ಕೆ ಬಂದಾಗ ಚೆನ್ನಯ್ಯನೇ ಸಿಕ್ಕಿದ್ದ. ಶಿವಣ್ಣನ ಕಣ್ಣಿಗೆ ಚೆನ್ನಯ್ಯ ಬಿದ್ದದ್ದೆ ತಡ, "ತಗೋ ಚೆನ್ನಯ್ಯ, ನಿನಗೊಂದ್ ಪತ್ರ ಬಂದದೆ" ಎಂದು ಅವನ ಕೈಗೆ ಕೊಟ್ಟಿದ್ದೇ ತಡ, ಒಂದು ಮೈಲಿ ಸೈಕಲ್ಲು ತುಳಿಯುವ ಶ್ರಮ ಸದ್ಯ ಉಳಿತು ಅಂದುಕೊಂಡವನೇ ಜರ್‍ರೆಂದು ಸೈಕಲ್ಲು ಹತ್ತಿದ್ದ. ಚೆನ್ನಯ್ಯ ಆ ಪತ್ರವನ್ನು ಅವನ ಕೈಯಿಂದಲೇ ಓದಿಸುವ ಎಂದುಕೊಂಡು, "ಸಾಮಿ ಸಾಮಿ!" ಅಂತ ಕೂಗಿಕೊಂಡು ಈಚೆಗೆ ಓಡಿಬಂದ, ಆದರೆ ಅವನ ಕೂಗು ಕೇಳಿಸಿದರೂ ಆತ ಕೇಳಿಸದವನಂತೆ ಆಗಲೇ ಬಹುದೂರ ಹಾರಿಬಿಟ್ಟಿದ್ದ.

ಚೆನ್ನಯ್ಯನಿಗೆ ಓದುವುದಕ್ಕೆ ಬರದಿದ್ದರೂ ಆ ಪತ್ರ ಅಬ್ದುಲ್ ಅಜೀದರ ಪತ್ರವೇ ಎಂದು ಊಹಿಸುವುದೇನೂ ಅವನಿಗೆ ಕಷ್ಟವಾಗಿರಲಿಲ್ಲ.

'ನಮ್ಮ ಅಜೀದ್ ಬರ್ದಿರೋ ಪತ್ರಾನೆ, ಇದು: ಏನ್ ಬರ್ದವ್ರೆ ನೋಡಬೇಕಲ್ಲ!' ಎಂದು ಕಾತರ ತಾಳಿದ. ಸುತ್ತಾಮುತ್ತಾ ಯಾರಾದರೂ ಓದಿದವರು, ತನಗೆ ಪರಿಚಯದವರು ಕಂಡಾರೇನೋ ಓದಿಸುವ ಎಂದು ನೋಡಿದ. ಯಾರೂ ಕಾಣಿಸಲಿಲ್ಲ. ಮಹದೇವಪ್ಪನಿಗೂ ಓದಲು ಬರುವುದಿಲ್ಲ–ಎಂದುಕೊಂಡು ಚೆನ್ನಯ್ಯ ತನ್ನ ಊರಕಡಗ ನಡೆದ. ಒಂದು ವಾರದಿಂದ ಬಕಪಕ್ಷಿಯಂತೆ ಅಜೀದರ ಎದುರು ಪತ್ರವನ್ನು ಕಾಯುತ್ತಾ ಕೂತಿದ್ದ ಚೆನ್ನಯ್ಯನಿಗೆ ದೊಡ್ಡ ನಿಧಿಯೇ ಸಿಕ್ಕಂತಾಗಿತ್ತು. ಪತ್ರವನ್ನು ತನ್ನ ತುಂಬುದೋಳಿನ ಅಂಗಿಯ ಒಳಜೇಬಿನಲ್ಲಿ ಬಿಗಿಯಾಗಿ ಮಡಿಕೊಂಡು ಊರಿಗೆ ಕೊರಕೊರನೆ ಬಂದಿದ್ದ. ಮನೆಯಲ್ಲಿ ತನ್ನ ಮಗ ಇದ್ದಾನೆ; ಅವನ ಕೈಯಲ್ಲೇ ಓದಿಸುವ ಏನು ಬರೆದವರೆ ಎಂಬುದು ಗೊತ್ತಾಗುತ್ತದೆ ಅಂದುಕೊಂಡು. ಮಗ ರಾಜಣ್ಣ ತನ್ನ ಅಪ್ಪ ತಂದ ಅಜೀದರ ಪತ್ರವನ್ನು ಓದತೊಡಗಿದ. ಅವನಿಗೂ ಕುತೂಹಲ ಏನು ಬರೆದವರೆ ಎಂದು. ತನ್ನ ಎದೆಗಳನ್ನು ತನ್ನ ಸೀರೆ ಸೆರಗಿನ ಮರೆಯಲ್ಲಿ ಮರೆಮಾಡಿಕೊಂಡು, ಅರಿದು ಹೋಗಿದ್ದ ತನ್ನ ರವಿಕೆಗೆ ಹೊಲಿಗೆ ಹಾಕಿಕೊಳ್ಳುತ್ತಿದ್ದ ತನ್ನವ್ವ ನಂಜವ್ವನಿಗೂ ಅಜೀದರ ಪತ್ರ ಕೌತುಕವನ್ನುಂಟು ಮಾಡಿತು. ನಂಜವ್ವ ತನ್ನ ಮಗ ಪತ್ರ ಓದುತ್ತಿದ್ದರೆ ಎಲ್ಲಾ ಗಮನವನ್ನು ಅತ್ತ ಕಡಗೇ ಇಟ್ಟು, ಕೇಳತೊಡಗಿದಳು, ಚಿನ್ನಯ್ಯನ ಸಂಸಾರವೇ ಆ ಪತ್ರದ ಸುತ್ತಾ ಮಧ್ಯಾಹ್ನದ ಇಳಿಬಿಸಿಲಿನ ಹೊತ್ತಿನ ನೆರಳಿನಲ್ಲಿ ತಂಗು ಬಿಟ್ಟಿತ್ತು.

ಅಜೀದು ಸಾಬರು, ಅವರ ಪತ್ನಿ ಪಾತಿಮಾ, ಅವರ ಮಗಳು ಜಮೀಲ ಮೂವರೂ ಭಾನುವಾರ ಊರಿಗೆ ಬರುತ್ತಿರುವುದಾಗಿ ಪತ್ರದಲ್ಲಿ ಬರೆದಿದ್ದರು. ತಮ್ಮ ಮಗ ಪಿಯುಸಿ ಪಾಸಾಗಿರುವುದಾಗಿಯೂ ತಮ್ಮ ಪುತ್ರಿ ಈಗ ಏಳರಿಂದ ಎಂಟನೇ ತರಗತಿಗೆ ಪಾಸಾಗಿರುವುದಾಗಿಯೂ ತಿಳಿಸಿದ್ದರು. ತಮ್ಮ ಹೆಂಡತಿ ಪಾತಿಮಾ ನಿಮ್ಮನ್ನೆಲ್ಲಾ ನೋಡಬೇಕೆಂದುಕೊಂಡು ಬರುತ್ತಿದ್ದಾಳೆಂದೂ

ಪತ್ರದಲ್ಲಿ ಬರೆದಿದ್ದನ್ನು ಕೇಳಿದಾಗ ಚೆನ್ನಯ್ಯನಿಗೂ ನಂಜವ್ವನಿಗೂ ಅತ್ಯಾನಂದವಾಯಿತು. ಅಜೀದರ ಹೆಂಡತಿ ಪಾತಿಮಾ ಬೂಬಮ್ಮ ತಮ್ಮ ಮನೆಗೆ ಬಂದು ಎಷ್ಟು ವರ್ಷವಾಯ್ತು? ಇಲ್ಲಿಗೆ ಎರಡು ವರ್ಷಗಳ ಹಿಂದೆ ಬಂದಿದ್ದು ಎಂದು ನೆನಪಿಸಿಕೊಳ್ಳತೊಡಗಿದ ನಂಜವ್ವನಿಗೆ–

"ಅವರು ನಮ್ಮ ಮನೆಗೆ ಬಂದಿದ್ದು ಅವರು ಗದ್ದೆಯ ಕ್ರಯಕ್ಕೆ ತೆಗೆದುಕೊಂಡಾಗ, ಅಷ್ಟೆ. ಆಮೇಲೆ ಅವರು ಎರಡು ಮೂರು ಸಾರಿ ಬಂದಿದ್ರು. ಆಮೇಲೆ ಬರ್ಲೆ ಇಲ್ಲ" ಎಂದನು ಚೆನ್ನಯ್ಯನ ಹಿರಿಮಗ ತಿಮ್ಮೇಗೌಡ. ಚೆನ್ನಯ್ಯ ತನ್ನ ವ್ಯವಸಾಯಕ್ಕಾಗಿ ಓದಿಸದೆ ಮನೆಯಲ್ಲೇ ಉಳಿಸಿಕೊಂಡಿದ್ದ ಮಹಾವ್ಯಕ್ತಿ ಈತ. ಅಜೀದರಿಗೆ ಪತ್ರ ಬರೆಸಿದ್ದಾಗ ಪಾತಿಮಾರನ್ನು ಕರೆದುಕೊಂಡು ಬನ್ನಿ ಅಂತ ಪತ್ರ ಬರೆಸಿ ಸಾಕಾಗಿದ್ದರು. ಅಜಿದರು ಆಗಾಗ ಅಕ್ಕಿ ತೆಗೆದುಕೊಂಡು ಹೋಗಲು ಬಂದಾಗಲೆಲ್ಲಾ ನಂಜವ್ವ, ಪಾತಿಮಾ ಬೂಬಮ್ಮನನ್ನು ಕರೆದುಕೊಂಡು ಬರುವಂತೆ ಹೇಳಿ ಹೇಳಿ ಸಾಕಾಗಿದ್ದಳು. ಅಜೀದರು, 'ಮುಂದಿನ ಸಾರಿ ಬಂದಾಗ ಖಂಡಿತ ಕರೆದುಕೊಂಡು ಬರ್ತಿನಿ" ಎಂದು ಹೇಳಿ ಹೇಳಿ ಹೋಗುತ್ತಲೇ ಇದ್ದರು. ಆದರೆ ಅವರಿಗೆ ಸ್ಕೂಲಿಗೆ ರಜೆಯ ತೊಂದರೆ, ಮನೆ ಕಡೆ ಮಕ್ಕಳ ನೋಡಿಕೊಳ್ಳುವುದು ಮುಂತಾದ ತಾಪತ್ರೆಗಳ ನಡುವೆ ಪಾತಿಮಾ ಬೂಬಮ್ಮನಿಗೆ ಬಿಡುವು ಸಿಗದೆ ಆಕೆ ಬರುವುದಕ್ಕೇ ಆಗಿರಲಿಲ್ಲ. ಅಜೀದರು ಸಹ ಶನಿವಾರ, ಭಾನುವಾರ ಸ್ಕೂಲಿಗೆ ರಜೆ ಸಿಕ್ಕಿಸಿಕೊಂಡು ಅಂಗ ಬಂದು, ಇಂಗೆ ಹೋಗಿ ಬಿಡುತ್ತಿದ್ದರು. ಅಪರೂಪಕ್ಕೆ ಗಂಡ, ಹೆಂಡತಿ, ಮಗಳು ಈ ಸಾರಿ ಬರುತ್ತಿರುವ ಸುದ್ದಿ ತಿಳಿದ ಮೇಲೆ ಚೆನ್ನಯ್ಯ– "ಪಾಪ! ಅವರ್ಗೆ ಬೆಂಗಳೂರ್ನಲ್ಲಿ ಏನ್ ಕಷ್ಟನೋ ಯಾರಿಗೆ ಗೊತ್ತು? ನಾವು ಬರೋದಿಲ್ಲ, ಬರೋದಿಲ್ಲ ಅಂತ ಅವ್ರ ನಿಷ್ಠುರ ಮಾಡ್ತಿವಿ. ಬರ್ಲಿ ಬಿಡಿ. ಅವ್ರೆಲ್ಲಾ ಬರ್ತಾ ಇರೋದ್ ತುಂಬಾ ಸಂತೋಷ, ಅಪರೂಪಕ್ಕೆ ಬರ್ತಾ ಇದ್ದಾರೆ. ಅವ್ರಗೆ ಏನಾರ ಒಳ್ಳೆದು ಹೆಚ್ಚುಕಟ್ಲೆ ಮಾಡೋದಿಲ್ಲೇನೆ?" ಎಂದು ಕೇಳಿದನು ಹೆಂಡತಿಗೆ.

ನಡುವೆ ರಾಜಣ್ಣ ಬಾಯಾಕಿ, "ಭಾನುವಾರ ಬೆಳಗ್ಗೆ ಅಂದ್ರೆ, ನಾಡ್ದೆ! ಇವತ್ತು ಶುಕ್ರವಾರ, ಇನ್ನ ಎರಡೇ ದಿನ ಇರೋದು'' ಎಂದು ಅವನಿಗೆ ಜ್ಞಾಪಕ ಮಾಡಿದ. "ಬರ್ಲಿ ಇರು, ಏನಾದ್ರು ಮಾಡಿದ್ರೆ ಆಗ್ತದೆ, ನನ್ ಮನೆಲೇನು ಕೋಳಿ ಇಲ್ವೊ? ಕುರಿ ಇಲ್ವೊ? ನಾವ್ ಕೋಳಿ ಕುಯ್ಯೋದೆ? ಅವರು ಬರೋದೆಚ್ಚೋ? ಬರ್ಲಿ ಎಂದಳು ನಂಜವ್ವ ಗಂಡ ಮಕ್ಕಳಿಗೆ.

"ಮಾಂಸ ಮಾಡಾನ ಅಂತಿಯೇನ ಅಂಗಾದ್ರೆ? ಮಾಂಸನೇನೋ ಅವ್ರು ತಿನ್ತಾರೆ! ಅಪರೂಪಕ್ಕೆ ಬರ್ತಾ ಇದ್ದಾರೆ. ಒಬ್ಬಿಟ್ ಗಿಬ್ಬಿಟ್ ಮಾಡೋದ್ ಬಿಟ್ಟು!'' ಎಂದು ಸಣ್ಣಗೆ ರಾಗ ತೆಗೆದ ಗಂಡನಿಗೆ – 'ಅದ್ನೂ ಮಾಡಿದ್ರಾಯ್ತು ಬಿಡು!' ಎಂದಂದ ನಂಜವ್ವ ತನ್ನ ಸೆರಗನ್ನು ಬಾಯಲ್ಲಿ ಕಚ್ಚಿಕೊಂಡು ತನ್ನ ಗಂಡ ಮಕ್ಕಳಿಗೆ ತನ್ನ ಎದೆಗಳ ಮರೆಮಾಡಿಕೊಂಡು ಹೊಲಿದು ಮುಗಿದ ರವಿಕೆ ಇಕ್ಕಿಕೊಳ್ಳುತ್ತಾ – "ಅಂಗಾದ್ರೆ ನಾಳೆ ಹೊಸಳ್ಳಿಗೋಗಿ ನಂಜಪ್ಪೋರಂಗಡೀಲಿ ಎರ್ಡ್ ಸೇರ್ ಬ್ಯಾಳಿಕಾಳ ತಗೊಂಡ್ಬಾ. ಅವರಂಗಡೀಲಿ ಬ್ಯಾಳೆ ಚೆನ್ನಾಗ್ ಇರ್ತದ. ಬೆಲ್ಲ ಯಂಗೂ ಮನೇಲೆ ಅವೆ. ಅಂಗೆ ಎಂಟಾಣೆಗೆ ಬಾಡ್ನೆಸ್ರಗೆ ಕಾರಮಸಾಲ್ ಕಟ್ಟಿಸ್ಕೊಂಡ್ಬಾ.. ಅವ್ರು ಬಂದ್ಮೇಲೆನೇ ಅವ್ರನ್ನೇ ಕೇಳಿ ಬಾಡೂಟ ಅಂದ್ರೆ ಬಾಡೂಟ, ಸೀವೂಟ ಅಂದ್ರೆ ಸೀವೂಟ ಮಾಡುವಂತೆ..." ಎಂದಳು. ಬಹಳ ಹೊತ್ತಿನಿಂದ ಮೌನವಾಗಿ ಕೂತು ಏನನ್ನೋ ಯೋಚಿಸುತ್ತಾ ಇದ್ದ ತಿಮ್ಮೇಗೌಡ – "ಆಗ್ಲೆ ಅಷ್ಟುದ್ದ ಬೆಳದ್ ಬಿಟ್ಟವ ಆ ಹುಡುಗಿ!

ಇಲ್ಲಿಗೆ ಗದ್ದೆ ಕೊಂಡುಕೊಳ್ಳೋ ಹೊಸದಲ್ಲಿ ಪಾತಮ್ನೋರು ಬಂದಿದ್ದಾಗ ಅವ್ರ ಜತೇಲಿ ಬಂದಿತ್ತು.

ಆಗಿನ್ನೂ ಅದು ಚಿಕ್ಕುಡ್ಗಿ. ಆಗ್ಲೆ,ಅವ್ಳೂ ಹೈಸ್ಕೂಲ್ಗೊಗಂಗೆ ಆಗ್ಬಟ್ಟಾವ್ಳ" ಎಂದು ಆಶ್ಚರ್ಯಪಟ್ಟ, "ಹೆಣ್ ಮಕ್ಸ್ ಏನ್ನ ದಂಟ್ ಬೆಳ್ದಂಗ್ ಬೆಳ್ದು ಬುಡ್ತವೆ. ಅದೂ ಪಟ್ಟದಲ್ಲಿ ಏನ್ ಗೇಯ್ಬೇಕಾ ಅವು? ನೆರಳಲ್ಲಿರ್ತಾವೆ! ಚೆನ್ನಾಗ್ ಉಣ್ಕೊಂಡ್ ತಿನ್ಕೊಂಡ್ ಹೊತ್ತುಗ್

ಸರಿಯಾಗಿ ತಿನ್ದೆ, ನಮ್ಮ ಹೈದ್ಗುಳಂಗೆ ಏನಾದ್ರು ಬಿಸ್ಲು ಬೇಗೆ ಅನ್ದೆ ಗೆಯ್ಬೇಕಾ ಅವು, ನಮ್ ಹೆಣ್ ಹೈದ್ಗುಳಂಗೆ ಸವುಕ್ಯ ಮಾಡಿದ್ರೆ ಅವೂ ಅಂಗ ಬೆಳಿತಾವ. ಆದ್ರೆ ಎಲ್ಲಿಂದ್ ತಂದ್ ಸವುಕ್ಯ ಮಾಡಾರು? ನಮ್ಮಂತ ಬಡವ್ರು " ಎಂದ ಅವ್ವನಿಗೆ – 'ಬರ್ಲಿ ನಮ್ ಜಮೀಲ! ಅವಳ್ಗೆ ಮಾಡ್ ಕಳಿಸ್ತೀನಿ' ಎಂದ ತಿಮ್ಮೇಗೌಡ. ಆಗ ನಂಜಪ್ಪನಿಗೆ ಯಾಕೊ ಏನೋ ಸಿಟ್ಟು ಬಂತು. "ಅವಳ್ಗೇನ್ಲ ನೀನ್ ಮಾಡೋದು?' ಎಂದು ಗದರಿಸಿದಳು, "ನಾನೇನಂದ್ನವ್ವ ಅವಳ್ಗೆ ಬುದ್ದಿ ಹೇಳಿ ಕಳಿಸ್ತೀನಿ ಅಂದ್ರೆ – ನೀನಿಂಗ್ ಆಡ್ತಿ! ನಿಮ್ಮವ್ರೋರಂಗೆ ನೀನೂ ವರ್ಷಕ್ಕೋ ಎರಡೂರ್ಷಕ್ಕೋ ಬರ್ಬೇಡ ಆಗಾಗ ಬರ್ತಾ ಇರವ್ವ ಅಂತ ಬುದ್ದಿ ಹೇಳಿ ಕಳಿಸಾನ ಅಂತ ನಾನಂಡ್ಕೊಂಡ್ರೆ! ನೀನೊಳ್ಳೆ ನನ್ಮೇಲೆ ಕುಣಿದಾಡ್ತಿಯಲ್ಲ..." ಎಂದು ತಮ್ಮೇಗೌಡ ವಿಷಯ ತೇಲಿಸತೊಡಗಿದೆ.

"ನೀನ್ ಬುದ್ದಿ ಕಲ್ತಕೊಳ್ಳ ಮೊದ್ಲು, ನಿನ್ಗೆ ಮದ್ವೆ ಮಾಡೋ ವಯಸ್ಸಾಯ್ತು ಬಂತು. ಇನ್ನೂ ನಿನ್ಗೆ ಬುದ್ಧಿ ಬರ್ಲಿಲ್ವಲ್ಲ ? ಊರೊಳ್ಗೆ ನಾಯ್ ಗಂಟಾಕ್ಕೊಂಡ್ರ ಊರ್ ಸುತ್ತ ಓಡುಸ್ಕೊಂಡೋಗ್ತಿರ್ತಿ, ಕುಡ್ಲಲ್ಲಿ ಕುಯ್ಯಾಕೆ! ಆ ಚಿಕ್ಕುಡ್ಗಿಗೇನೋ ಬಂದ್ಮೇಲೆ ಬುದ್ಧಿ ಏಳನಂತೆ, ಬುದ್ದಿಯಾ!" ಎಂದಾಗ ನಂಜವ್ವನ ಮಾತು ಕೇಳಿ ಮಕ್ಕಳೆಲ್ಲಾ ನಗಾಡತೊಡಗಿದರು. ಚೆನ್ನಯ್ಯನೂ ತನ್ನ ಹಿರಿಮಗನ ಸಾಹಸವನ್ನು ತನ್ನ ಹೆಂಡತಿಯ ಬಾಯಿಂದ ಕೇಳುತ್ತಾ ಗಂಟಲವರೆಗೂ ಬಂದ ನಗುವನ್ನು ತಡೆಹಿಡಿದು ಕೂತಿದ್ದ, ಭಾಗ್ಯಳಿಗೆ ನಾಚಿಕೆ, ನಗು ಎರಡೂ ಬಂದು ಆಕೆ ಕೂತಲ್ಲಿಂದ ಎದ್ದು ಒಳಗೆ ಹೊರಟು ಹೋಗಿದ್ದಳು.

ರಾಜಣ್ಣನ ತಮ್ಮಂದಿರಿಬ್ಬರಲ್ಲಿ ಮೊದಲನೆಯ ತಮ್ಮ ಜವರಪ್ಪ ತಾನು ಮಧ್ಯಾಹ್ನದ ಮೇಲೆ ರೇಷ್ಮೆ ಹುಳಿಗೆ ಹಿಪ್ಪ ನೇರಳೆ ಸೊಪ್ಪು, ತರಿಯುವುದಕ್ಕೆ ಹೋಗಬೇಕಲ್ಲ ಎಂದು ಚಿಂತಿಸುತ್ತಾ ಕೂತಿದ್ದ, ತಾನು ಚಿಕ್ಕಂದಿನಲ್ಲಿ ಸ್ಕೂಲಿಗೆ ಹೋಗು ಅಂದರೆ ರಚ್ಚೆ ಹಿಡಿದು ಹೋಗದೇ ಹೋದದ್ದಕ್ಕೆ ಈಗ ಹೊಲಗದ್ದೆ ಉಳಬೇಕು. ಓದಿದ್ದರೆ ತಾನೂ ತನ್ನ ಅಣ್ಣನ ಹಾಗೆ ಇವತ್ತು ಬೆಂಗಳೂರಿಗೋ, ಮೈಸೂರಿಗೋ, ಮಂಡ್ಯಕ್ಕೋ, ತುಮಕೂರಿಗೋ ಹೋಗಬಹುದಿತ್ತು ಎಂದುಕೊಳ್ಳತೊಡಗಿದ್ದ.

ಕೊನೆಯ ತಮ್ಮ ಚಂದ್ರಪ್ಪ ಈಸಾರಿ ಏಳರಿಂದ ಎಂಟಕ್ಕೆ ಪಾಸಾಗಿದ್ದಾನೆ; ಅವನೂ ಅವನ ಹಾಗೆ ಒಂದಲ್ಲ ಒಂದು ದಿನ ಈ ಊರು ಬಿಡುವ ವ್ಯಕ್ತಿಯೇ ಎಂದುಕೊಂಡು – ಜವರಪ್ಪ ಹೊಟ್ಟೆಯೊಳಗೆ ತನ್ನ ಪಾಲಿಗೆ ಬಂದ ನೋವನ್ನು ತಿನ್ನುತ್ತಾ ಇದ್ದ. ಚೆನ್ನಯ್ಯ ಮಾತ್ರ ಭಾನುವಾರದ ಊಟದ ಸಿದ್ಧತೆಗೆ ಯೋಚಿಸತೊಡಗಿದ್ದ. ಚೆನ್ನಯ್ಯ ಇದಾದ ಮಾರನೆಯ ದಿವಸ ಮಧ್ಯಾಹ್ನದ ಮೇಲೆ ಒಬ್ಬಿಟ್ಟು ಸಾಮಾನುಗಳನ್ನು ತರಲು ಹೊಸಳ್ಳಿಗೆ ಸುಡುಬಿಸಿಲಿನಲ್ಲಿ ಹೊರಟು ನಿಂತಿದ್ದನ್ನು ಕಂಡ ಹೆಂಡತಿ ನಂಜವ್ವ, ತಡೆದು, 'ತಂಪೊತ್ತು ಮಾಡ್ಕೊಂಡೋಗು!' ಎಂದಳು.

ಗಂಡನ ತಲೆಗೆ ಕೈಎಣ್ಣೆ ಚೆನ್ನಾಗಿ ಒತ್ತುತ್ತಾ, "ಬುಲ್ಡೆಯೆಲ್ಲಾ ಒಣಗೋಗದಲ್ಲ, ಬಿಸ್ಲಿನಲ್ಲಿ ತಿರ್ಗಿ ತಿರ್ಗಿ" ಎಂದು ನೊಂದು ಕೊಂಡು ಗಂಡನ ಸೌಖ್ಯ ವಿಚಾರಿಸಿದಳು. ಅನೇಕ ವರ್ಷಗಳು ಸುಖ-ದುಃಖಗಳ, ಸಿಟ್ಟು-ಸಿಡುಕುಗಳ ಸಮ್ಮಿಲನದಲ್ಲಿ ಮಾನವಂತರಾಗಿ ಅನ್ಯೋನ್ಯವಾಗಿ ಸಂಸಾರ ನಡೆಸಿದ ಜೀವಗಳು.

ಚೆನ್ನಯ್ಯ ತನ್ನ ವಯಸ್ಸಿನಲ್ಲಿ ಅನೇಕ ವರ್ಷಗಳು ಸವೆಸಿದ ಕಾಲುಹಾದಿಯಲ್ಲಿ ನಡೆಯುತ್ತಿದ್ದ. ದುರ್ಗ, ಹೊಸಳ್ಳಿ, ಇವುಗಳ ಹಾದಿಯಲ್ಲಿ ಆತ ಅದೆಷ್ಟು ಬಾರಿ ತಿರುಗಾಡಿದ್ದಾನೋ ಎಣಿಸಿದರೆ ಲೆಕ್ಕ ಸಿಗದು. ಹಾದಿ ಮಾತ್ರ ಹಾಗೇ ಇದೆ. ಮೇಲೆ ಸ್ವಚ್ಛಂದವಾದ ತಿಳಿಯಾದ ಆಕಾಶ, ಕೆಳಗೆ ರಣರಣ ಸುಡುವ ಕಾಲುಹಾದಿ, ನೆಲ ಮುಗಿಲುಗಳ ನಡುವೆ ಬಿಕೋ ಎನ್ನುತ್ತಿರುವ ನಿರ್ಜನವಾದ ಆ ಹೊತ್ತಿನ ಹಾದಿಯಲ್ಲಿ ಚೆನ್ನಯ್ಯ ನಡೆಯುತ್ತಾ ಏನೇನೋ ಯೋಚಿಸುತ್ತಾ ಹೆಜ್ಜೆ ಸವೆಸುತ್ತಿದ್ದಾನೆ. ಆತ ಹೆಜ್ಜೆ ಇಟ್ಟಂತೆಲ್ಲಾ ಬಿಟ್ಟ ಹೆಜ್ಜೆಗಳಿಗೆಲ್ಲಾ ನೆನಪುಗಳು ಬಂದು ತುಂಬಿಕೊಳ್ಳತೊಡಗಿವೆ; ಅದೇ ದಾರಿಯಲ್ಲಿ ಆರು ವರ್ಷಗಳ ಹಿಂದೆ ಅಜೀದರನ್ನು ನೋಡಲು ಹೊಸಳ್ಳಿಗೆ ಹೊರಟಾಗ ಇದೇ ಸಮಯ.

ಆಗ ತನ್ನ ಮಗ ರಾಜಣ್ಣ ಹೊಸಳ್ಳಿ, ಮಿಡ್ಲಿಸ್ಕೂಲಿನಲ್ಲಿ ಐದನೆಯ ತರಗತಿಯಲ್ಲಿ ಓದುತ್ತಿದ್ದ. ಅಲ್ಲಿ ಅಬ್ದುಲ್ ಅಜೀದು ಸಾಬರು ಅವನ ತರಗತಿಯ ಉಪಾಧ್ಯಾಯರಾಗಿದ್ದರು. ರಾಜಣ್ಣ ಇಡೀ ತರಗತಿಗೇ ಚೆನ್ನಾಗಿ ಓದುತ್ತಿದ್ದ. ಪಾಠದಲ್ಲಿ ಮುಂದಿದ್ದು, ಬುದ್ಧಿವಂತ ಹುಡುಗ ಎನಿಸಿಕೊಂಡು ಅಜೀದು ಮಾಸ್ತರಿಗೆ ಮೆಚ್ಚಿನ ಶಿಷ್ಯನಾಗಿದ್ದ. ಹುಡುಗನ ಬುದ್ಧಿವಂತಿಕೆ ಕಂಡು ಅಜೀದು ಮಾಸ್ತರು ಬೆರಗಾಗಿದ್ದರು. ಆಗ ಗುರುಶಿಷ್ಯರ ಸಂಬಂಧಕ್ಕೆ ಅರ್ಥ ಇತ್ತು. ಅವನ ಊರು ತಿಳಿದು ನಿನ್ನ ತಂದೆಯವರ ಕರೆದುಕೊಂಡು ಬಾರಯ್ಯ, ಸ್ವಲ್ಪ ಅವರ ಹತ್ತಿರ ಮಾತನಾಡಬೇಕು ಎಂದಿದ್ದರು; ಆಗ ಅವರ ಮನಸ್ಸಿನಲ್ಲಿ ಆಸ್ತಿಯನ್ನು ಕೊಂಡುಕೊಳ್ಳುವ ಯೋಚನೆ ಇತ್ತು. ರಾಜಣ್ಣ ಸ್ಕೂಲಿನಿಂದ ಮನೆಗೆ ಬಂದು ತನ್ನ ತಂದೆಯವರ ಬಳಿ ಅಂಗಂದ. ಚೆನ್ನಯ್ಯನಿಗೆ ಗಾಬರಿಯಾಯಿತು. ಅವರ ನೋಡಿಲ್ಲ, ಪರಿಚಯವಿಲ್ಲ. ಯಾಕೆ ತನಗೆ ಬರಲು ಹೇಳಿ ಕಳಿಸಿದ್ದಾರೆ ಎಂದು ಯೋಚಿಸಿದ. ಕಾರಣ ಹೊಳೆಯಲಿಲ್ಲ. ಏನಾದರೂ ತನ್ನ ಮಗ ಸ್ಕೂಲಿನಲ್ಲಿ ಗಲಾಟೆ-ಗಿಲಾಟೆ ಮಾಡಿದನೋ ಎಂದುಕೊಂಡು ಮಗನ ಕೇಳಿದ, ಕೇಳಿದ್ದಕ್ಕೆ ಮಗ "ಇಲ್ಲ" ಎಂದ. "ಸರಿ, ಮಧ್ಯಾಹ್ನದೇಲೆ ಬರ್ತಿನಿ ನೀನಡಿ, ಅಂಗಂತ ಅವ್ರು ಕೇಳಿದ್ರೆ ಹೇಳಿರು!' ಎಂದು ಮಗನಿಗೆ ಹೇಳಿ ಕಳಿಸಿದ.

ಚೆನ್ನಯ್ಯ ಮಧ್ಯಾಹ್ನದ ಬಿಸಿಲು ಇಳಿಸಿಕೊಂಡು ಹೊಸಳ್ಳಿಗೆ ಬಂದಿದ್ದ. ಕಾಲಿಗೆ ಚಪ್ಪಲಿ ಹಾಕಿ ಅಭ್ಯಾಸವಿಲ್ಲದ್ದರಿಂದ ಕಾದನೆಲ ಪಾದಗಳನ್ನು ಸುಡುತ್ತಿದ್ದರೆ ಅದರ ಅನುಭವ ಅವನಿಗೆ ಒಗ್ಗಿ ಹೋಗಿತ್ತು. ದಾರಿಯುದ್ದಕ್ಕೂ ಮೇಷ್ಟು ಯಾಕೆ ಹೇಳಿ ಕಳಿಸಿದ್ರು ಎಂಬ ಪ್ರಶ್ನೆಯೇ ಅವನ ತಲೆ ತುಂಬಾ ತುಂಬಿಕೊಂಡಿತ್ತು. ಹೆಗಲ ಮೇಲೆ ಒಂದು ಹಳೆ ದುಪ್ಪಟಿ, ಮಂಡಿ ಕೆಳಗನವರೆಗೂ ಹೊಲಿಸಿದ ದೊಗಳೆಯಾದ ಕಾಕಿ ಚಡ್ಡಿ: ತುಂಬುದೋಳಿನ ಅಂಗಿ, ಕೂಳೆಗಡ್ಡ, ತೆಳುತಲೆಗೂದಲು; ಸುಮಾರು ಐದೂಕಾಲಡಿ ಎತ್ತರದ ಸಣ್ಣದೇಹದ ಈ ವ್ಯಕ್ತಿ ಸ್ಕೂಲಿನ ಹೊರಗೆ ನಿಂತು ಕಿಟಕಿಯಲ್ಲಿ ಒಳಗೆ ಬಗ್ಗಿ ಬಗ್ಗಿ

ನೋಡುತ್ತಿದ್ದಾಗ ಒಳಗೆ ಕನ್ನಡ ಪಾಠ ಮಾಡುತ್ತಿದ್ದ ಅಬ್ದುಲ್ ಅಜೀದು ಮಾಸ್ತರು ಕಿಟಕಿಯಿಂದ ಬಂದ ನೆರಳನ್ನು ಗಮನಿಸಿ ಅತ್ತ ಗಮನ ಹರಿಸಿದರು. ಆಗ ಅವರ ಕಣ್ಣಿಗೆ ಬಿದ್ದ ವ್ಯಕ್ತಿಯನ್ನು 'ಯಾರದು, ಯಾರು ಹಾಗೆ ಬಗ್ಗಿ ಬಗ್ಗಿ ನೋಡ್ತಾ ಇರೋರು? ಯಾರು ಬೇಕು? ಅತ್ತ ಬಾಗಿಲಿನಿಂದ ಒಳಗಡೆ ಬನ್ನಿ!' ಎಂದು ಕಿಟಕಿಯತ್ತ ಕಣ್ಣು, ಬಾಯಿ, ಕೈ ನೆಟ್ಟರು. ಅಜೀದು ಮಾಸ್ತರು ಆಗಂದದ್ದೆ ತಡ ಕಿಟಕಿಯ ಬಳಿ ಒಳಗೆ ಕೂತಿದ್ದ ರಾಜಣ್ಣ ಎದ್ದು ನಿಂತು ನೋಡಿ ಗಂಭೀರವಾಗಿ ಅವರು ನಮ್ಮ ತಂದೆಯವರು ಸಾ, ಬಂದವ್ರೆ!' ಎಂದ.'ಮತ್ತೆ ಕೂಗಯ್ಯ ಒಳಗಡೆ ಬರ್ಲಿ' ಎಂದರು ಅಜೀದು ಮಾಸ್ತರು, ರಾಜಣ್ಣ  ಆಚೆಗೆ ಓಡಿ ಒಳಗಡೆಗೆ ತನ್ನ ತಂದೆಯ ಕರೆದುಕೊಂಡು ಬಂದ.

ಒಳಕ್ಕೆ ಬಂದ ಚೆನ್ನಯ್ಯನಿಗೆ ನೋಡುತ್ತಿದ್ದಂತೆಯೇ ಅಜೀದು ಮಾಸ್ತರಿಗೆ ತನ್ನ ಅಣ್ಣನ ನೆನಪಾಯಿತು. ತನ್ನ ಅಣ್ಣ ಒಬ್ಬ, ಹೀಗೆಯೇ ಇದ್ದ. ಆತ ಈಗ ಎಲ್ಲಿದ್ದಾನೆ? ಹೇಗಿದ್ದಾನೊ? ಹೆಂಡತಿ ಮಕ್ಕಳನ್ನೆಲ್ಲಾ ಬಿಟ್ಟು ದೇಶಾಂತರ ಹೊರಟು ಹೋದ. ಆತ ಚಿಕ್ಕಂದಿನಿಂದಲೇ ಆಧ್ಯಾತ್ಮದ ಕಡೆಗೆ ತೀವ್ರವಾದ, ಶ್ರದ್ಧೆ, ಒಲವು ಇದ್ದದ್ದರಿಂದ ಅದೇ ಅವನನ್ನು ರಾತ್ರೋರಾತ್ರಿ ಮನೆ ಬಿಡಿಸಿತ್ತು. "ಬನ್ನಿ ಇತ್ತ ಬನ್ನಿ ಪರವಾಗಿಲ್ಲ' ಎಂದು ಹತ್ತಿರ ಬಂದ ಚೆನ್ನಯ್ಯನಿಗೆ ಅಜೀದು ಮಾಸ್ತರು ಸ್ವಾಗತಿಸಿ ಮೂಲೆ ಕಡೆ ಜಾಗವಿದ್ದರಿಂದ ಅಲ್ಲಿ ಕೂರಲು ಹೇಳಿದರು. ಚೆನ್ನಯ್ಯನಿಗೆ ಕೂರಲು ಸಂಕೋಚ. ಅದು ಅದು ಮಾಸ್ತರಿಗೆ ಅರ್ಥವಾಗದೆ ಇರಲಿಲ್ಲ. ಹಳ್ಳಿ ಜನಗಳೇ ಹೀಗೆ: ಭಯ, ಸಂಕೋಚ, ವಿಧೇಯತೆ ತುಂಬಿಕೊಂಡಿರುತ್ತಾರೆ ಹೃದಯದಲ್ಲಿ, ಅವರಲ್ಲಿ ಕೃತ್ರಿಮತೆ ಬಹಳ ಕಡಿಮೆ, ಓದಿದವರು ಅವರಿಗೆ ದೇವರಂತೆ ಕಾಣುತ್ತಾರೆ ಎಂದುಕೊಂಡು ಅಜೀದು ಮಾಸ್ತರು, 'ಹಾಗಾದ್ರೆ ಆಚೆಕಡೆ ಇರಿ, ಸ್ವಲ್ಪ ಹೊತ್ನಲ್ಲಿ ಬಂದ್ಬಿಡ್ತಿನಿ. ನಿಮ್ಮ ಹತ್ತಿರ ಮಾತನಾಡುವುದಿದೆ ನೀವೇನೂ ಗಾಬರಿಯಾಗಬೇಡಿ!' ಎಂದರು ಚೆನ್ನಯ್ಯನಿಗೆ.

ಚೆನ್ನಯ್ಯ ಈಚೆಗೆ ಬಂದು ಸ್ಕೂಲಿನ ಆವರಣದಲ್ಲಿದ್ದ ಮರದ ನೆರಳಿನಲ್ಲಿ ಬೀಡಿ ಹಚ್ಚಿ ಸೇದುತ್ತಾ ಕೂತ. ಸ್ವಲ್ಪ ಹೊತ್ತು ಬಿಟ್ಟು ಆದು ಮಾಸ್ತರು ಕ್ಲಾಸು ಮುಗಿಸಿಕೊಂಡು ಈಚೆಗೆ ಬಂದರು. ಅವರು ಬರುತ್ತಿರುವುದನ್ನು ಕಂಡ ಚೆನ್ನಯ್ಯ ಕೂತಲ್ಲಿಯೇ ಬೀಡಿಯ ನೆಲಕ್ಕೆ ಒಸಕಿ ಎದ್ದು ನಿಂತ. ಪರವಾಗಿಲ್ಲ ಬೀಡಿ ಸೇದಿ. ಅದ್ಯಾಕ ಬಿಸಾಕ್ತಿರಿ' ಅಂದು, “ನಿಮ್ಮ ಬಹಳ ಕಾಯಿಸಿ ಬಿಟ್ಟೆ, ಬನ್ನಿ.' 'ಪರ್ವಾಗಿಲ್ಲ ಬಿಡಿ ಸಾಮಿ' ಎಂದು ಚೆನ್ನಯ್ಯ ಮರದ ನೆರಳಿನಲ್ಲಿ ಹಾಕಿದ್ದ ಕಲ್ಲು ಬೆಂಚಿನ ಕಡೆಗೆ ಹೋಗುತ್ತಿದ್ದ ಅಜೀದು ಮಾಸ್ತರ ಹಿಂಬಾಲಿಸಿದ. “ನಿನ್ನ ಮಗ ತುಂಬಾ ಚೆನ್ನಾಗಿ ಓದ್ತಾನೆ ಗೌಡ್ರೆ!” ಅಜೀದು ಮಾಸ್ತರು ಕಲ್ಲು ಬೆಂಚಿನ ಮೇಲೆ ಕೂರುತ್ತ ಹೇಳಿದರು. 'ಏನೋ ನಿಮ್ಮ ದಯ' ಎಂದು ನಿಂತ ಚೆನ್ನಯ್ಯನಿಗೆ ತಮ್ಮ ಪಕ್ಕದಲ್ಲಿಯೇ ಕೂರಲು ಹೇಳಿದರು. ಕೊನೆಗೆ ಚೆನ್ನಯ್ಯ ವಿಧಿಯೇ ಇಲ್ಲ ಎಂದುಕೊಂಡಂತೆ ಕೂತು,

"ನನ್ನ ಬರೋದಿಕ್ಕೆ ಏಳ ಕಳಿಸಿದ್ರಂತೆ, ನಾನ್ ನಿಮ್ ನೋಡೆ ಇರ್ಲಿಲ್ಲ! ಏನಾದ್ರು ಅವ್ನು ನಿಮ್ಗೆ....' ಏನನ್ನೋ ಕೇಳಲು ಹೊರಟ ಚೆನ್ನಯ್ಯನಿಗೆ ಅಜೀದು ಮಾಸ್ತರು ತಡೆದು, ಇಲ್ಲಿ ಅವನು ಏನೂ ಮಾಡಿಲ್ಲ. ಒಳ್ಳೆ ಹುಡುಗ, ನಮ್ಮ ಸ್ಕೂಲಿನ ಮೇಷ್ಟ್ರುಗಳಲ್ಲೆಲ್ಲಾ ಆ ಹುಡುಗನ ಬಗ್ಗೆ ಒಳ್ಳೆ ಅಭಿಪ್ರಾಯ ಇದೆ. ಚೆನ್ನಾಗಿ ಓದ್ತಾನೆ ಅಂತ. ಓದ್ಸಿ, ಬಿಡಿಸ್ಬೇಡಿ ಆದ್ರೆ ನಾನು ನಿಮ್ಮ ಕರೆಸಿದ್ದೇ ಬೇರೆ ವಿಷಯಕ್ಕೆ ಅದಿದೆ, ಹೇಳ್ತಿನಿ' ಎಂದರು. ಜಮೀನು ಎಷ್ಟಿದೆ?' ಎಂದು ಕೇಳಿದರು. 'ಎರ್ಡೆಕ್ರೆ ಹೊಲ, ಎರ್ಡಕ್ರೆ ಗದ್ದೆ ಸಾಮಿ' ಎಂದ ಚನ್ನಯ್ಯ, ನಿಮ್ಮ ಸ್ಥಳ ಯಾವ್ದು ಸಾಮಿ' ಎಂದು ಕೇಳಿದ.

"ನಮ್ಮ ಸ್ಥಳ ಮಾಗಡಿ ಹತ್ರ ಒಂದಳ್ಳಿ ಗೌಡ್ರೆ! ನಾನು ಮದುವೆ ಆಗಿರೋದು ಮಾಗಡಿ, ನನ್ನ ಹೆಂಡತಿ ಬೆಂಗಳೂರಲ್ಲಿ ಕೆಲಸದಲ್ಲಿದ್ದಾಳೆ. ಅವಳೂ ಮಿಡ್ಲ್ ಸ್ಕೂಲ್ ನಲ್ಲಿ ನನ್ನ ಹಾಗೆಯೇ ಟೀಚರ್ ಆಗವ್ಳೆ" ಎಂದರು ಅಜೀದರು.

"ಅವ್ರಲ್ಲಿ! ನೀವಿಲ್ಲಿ" ಎಂದು ಆಶ್ಚರ್ಯಗೊಂಡ ಚೆನ್ನಯ್ಯನಿಗೆ, "ಏನು ಮಾಡೋದು, ಹೊಟ್ಟೆ ಸಾಕಕ್ಕೆ ಏನಾರ ಮಾಡಬೇಕಲ್ಲ?' ಎಂದರು ಅಜೀದರು. ಚೆನ್ನಯ್ಯ, "ತುತ್ತಿನ ಚೀಲ ಸಾಮಿ ಅದು. ಸುಮ್ನೆ ಇದ್ರೆ ತುಂಬ್ತಾದೆ?" ಎಂದ. "ನಿಜ ಅನ್ನಿ" ಅಂದ ಅಜೀದರು – ಅಲ್ಲಿ ಏನೂ ಇಲ್ಲ, ಒಂದು ಹಳೆ ಮನೆ

ಇದೆ. ಅಷ್ಟೆ, ಮಾಳಿಗೆ ಮನೆ, ಅಲ್ಲಿ ನನ್ನ ತಾಯಿ, ನನ್ನ ಅತ್ತಿಗೆ, ನನ್ನ ಅತ್ತಿಗೆಯ ಎರಡು ಮಕ್ಕಳು ಇದ್ದಾರಷ್ಟೆ ಒಂದು ಎಕರೆ ಹೊಲ ಮಾತ್ರ ಇದೆ. ಮಳೆ ಹೊದರೆ ಕಡಲೆಕಾಯಿ ಬಿತ್ಕೊತ್ತಾರೆ. ಇದ್ದಂತೆ ನನ್ನ ಅತ್ತಿಗೆ ಕೂಲಿ ಮಾಡ್ತಿರ್ತಾರೆ. ನಾನೂ ಆಗಾಗ ಅಲ್ಪ ಸ್ವಲ್ಪ ಹಣ ಕೊಡ್ತಿನಿ, ನನ್ನ ತಂದೆಯವರು, ನನ್ನ ಚಿಕ್ಕವಯಸ್ಸಿನಲ್ಲೇ ತೀರ್ಕೊಡ್ರಂತೆ, ನನ್ನಣ್ಣ ಒಬ್ಬ ಇದ್ದ. ಅವನೂ ಸತ್ತೋದ!"

"ತಾವು ಮುಸಲ್ಮಾನ್ರಾ ಸಾಮಿ' ಚೆನ್ನಯ್ಯ ಮನಸ್ಸಿನಲ್ಲಿ ಕೇಳಬಾರದು ಅಂದುಕೊಂಡಿದ್ದರೂ ಕೇಳಿದ್ದ. "ಹೌದು, ಆದ್ರೆ ನಮ್ಮ ಕಸುಬೆಲ್ಲಾ ನಿಮ್ಮ ಹಾಗೆಯೇ ರೈತರ ಥರ, ನಾನು ಮುಸಲ್ಮಾನ ಜಾತೀಲಿ ಹುಟ್ಟಿದ್ರೂನೂ ನಾನು ಓದಿ ಬರೆದದ್ದೆಲ್ಲಾ ಕನ್ನಡದಲ್ಲೇ, ನಾನೀಗ ಈ ಸ್ಕೂಲ್‌ನಲ್ಲಿ ಕನ್ನಡದ ಮೇಷ್ಟೇ ಆಗಿರೋದು, ಆದರೆ ನನ್ನ ಹೆಂಡ್ತಿ ಬೆಂಗಳೂರ್ನಲ್ಲಿ ಉರ್ದು ಮೇಷ್ಟ್ರಾಗಿದ್ದಾಳೆ. ಅವಳಿಗೆ ಕನ್ನಡ ಮಾತನಾಡುವುದಕ್ಕೆ ಚೆನ್ನಾಗಿ ಬರುತ್ತದಷ್ಟೆ ಆದರೆ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ " ಎಂದು ಅಜೀದರು ತಮ್ಮ ಬಗ್ಗೆ ಹೇಳಿಕೊಂಡರು.

"ಬಿಡಿ ಸ್ವಾಮಿ ನಿಮ್ಮ ಜನಕ್ಕೆಲ್ಲಾ ಕನ್ನಡ ಚೆನ್ನಾಗಿ ಬರ್ತದ ಕಣ, ನಮ್ ದುರ್ಗದಲ್ಲಿ ನಿಮ್ ಜನ ಇದ್ದಾರಲ್ಲ, ಅವರನ್ನ ಯಾರೂ ಮುಸಲ್ಮಾನ್ರು ಅಂತ ಹೇಳೋದಿಕ್ಕಾಗಲ್ಲ. ಅಷ್ಟ್ ಚೆನ್ನಾಗ್ ಕನ್ನಡ ಮಾತಾಡ್ತಾರ. ಅವರ್ಗ ಅವರ ಭಾಷೆ ಮತ್ತೋರ್ಗಿದ್ದಾದೇನೊ ಅನ್ಬೇಕು ನೋಡೋರು. ನಮ್ ಹೊಲಗದ್ದ ಪಕ್ಕದಲ್ಲಿರೋರೆಲ್ಲಾ ನಿಮ್ಮ ಜನರೆ. ದಿನಬೆಳಗಾದ್ರೆ ನಾನು ಅವ್ರ ಜತೇಲೆ ವ್ಯವಹಾರ ಮಾಡ್ತಾ ಇರ್ತಿನಿ, ಅದಕಂಡು ನಮ್ಮೂರ್ ಜನ ನನ್ನ ಆಡ್ಕೊತ್ತಾರೆ! ಇನ್ನು ಮಾಗಡಿ ಏನು? ನಾನ್ ನೋಡಿದ್ದೀನಿ! ಅದೂ ನಮ್ಮಳ್ಳಿದ್ದಂಗೆಯೇ ಅದೆ!" ಎಂದ ಚನ್ನಯ್ಯನ ನಡವಳಿಕೆ, ವ್ಯವಹಾರವನ್ನೆಲ್ಲಾ ಕೇಳಿ ಅಜೀದರಿಗೆ ಖುಷಿಯಾಯಿತು.

'ಬನ್ನಿ ಮಹದೇವಪ್ಪನ ಹೋಟೆಲ್ಲಿನಲ್ಲಿ ಸ್ವಲ್ಪ ಕಾಫಿ ಕುಡಿಯುವಾ...ಹೇಳ್ತೀನಿ' ಎನ್ನುತ್ತಾ ಅಜೀದರು ಮೇಲೆದ್ದರು. ಚೆನ್ನಯ್ಯನೂ ಎದ್ದು ಅವರ ಹಿಂದೆ ಹೊರಟ. ದಾರಿಯಲ್ಲಿ ಅಜೀದರು ನಡೆಯುತ್ತಾ ಹೇಳಿದರು, 'ನಿಮ್ಮ ಕಡೆ ಒಂದು ಎಕರೆ ಗದ್ದೆ ಸಿಕ್ಕಿದರೆ ಕೊಂಡುಕೊಳ್ಳೋದಿಕ್ಕೆ ಅಂತ ನಿಮ್ಮ ಕೇಳುವ ಅಂತ ಕರೆಸ್ದೆ ಅಷ್ಟೆ' ಎಂದಾಗ ಚೆನ್ನಯ್ಯ, "ಗದ್ದೆ!' ಎಂದು ಉಸಿರಾಡಿದ. "ಹೌದು ಗೌಡರೆ, ಸಂಬಳದಲ್ಲಿ ಎಲ್ಲಾ ಕೊಂಡು ತಿನ್ನೋದಿಕ್ಕೆ ಆಗೋದಿಲ್ಲ ಜೊತೆಗೆ ನನ್ನ ತಾಯಿ, ನನ್ನ ಅತ್ತಿಗೆಯ ಸಂಸಾರನೂ ನಾನೇ ನೋಡಬೇಕು, ನನ್ನ ಎರಡು ಮಕ್ಕಳು, ಅವರ ವಿದ್ಯಾಭ್ಯಾಸ ಮಾಡಿಸ್ಬೇಕು ನನ್ನ ಅತ್ತಿಗೆ ಮಕ್ಕಳ ವಿದ್ಯಾಭ್ಯಾಸದ ಹೊರೆಯೂ ನನ್ನ ಮೇಲೆ ಬಿದ್ದಿದೆ. ನಿಮ್ಮೂರ ಹತ್ರ ಗದ್ದೆ ಸಿಕ್ಕಿದ್ರೆ ತಗೊಳ್ಳಿ

ಅಂತ ನನ್ನ ಸ್ನೇಹಿತರೊಬ್ಬರು ಹೇಳಿದರು. ನಿಮ್ಮೂರ ಬಯಲಲ್ಲಿ ವರ್ಷಕ್ಕೆ ಎರಡು ಬೆಳೆ ಆದಾದಂತೆ, ಅದ್ಯಾವುದೋ ದೊಡ್ಡ ಕೆರೆ ಅದಂತೆ ನಿಮ್ಮೂರ ಬಯಲ್ಗೆ ಎಂದು ಅಜೀದರು ಕೇಳಿದರು.

'ಕೆರೆ ಇದೆ. ಮಳೆಗಾಲ್ದಲ್ಲಿ ಮಳೆ ಹೋದು ಕೆರೆ ತುಂಬಿದ್ರೆ ಎರಡ್ ಬೆಳೆ ಆಗ್ತದೆ. ಇಲ್‌ದಿದ್ರೆ ಇಲ್ಲ ಅಷ್ಟೆ, ಆದ್ರೆ ಗದ್ದೆ ಸಿಗುವುದು ಕಷ್ಟ, ನೋಡ್ತಿನಿ, ಯಾರ್ನಾದ್ರು ವಿಚಾರ್ಸಿ ನಿಮ್ಗೆ ಹೇಳಿ ಕಳಿಸ್ತೀನಿ ಇಲ್‌ದಿದ್ರೆ ನಾನೆ ಬಿಡುವು ಮಾಡ್ಕೊಂಡ್ ಬರ್ತಿನಿ' ಎಂದ ಚೆನ್ನಯ್ಯ, 'ಏನಾದ್ರು ಮಾಡಿ ಎಲ್ಲಾದರು ಕೊಡಿಸಲೇಬೇಕು ತಾವು ಎಂದು ಅಜೀದರು ಮತ್ತೆ ಒತ್ತಾಯದಿಂದ ಹೇಳಿದರು.

ಅಷ್ಟೊಂದು ಗಂಭೀರವಾದ ವಿಷಯವನ್ನು ತುಂಬಾ ಸರಳವಾಗಿ ಚೆನ್ನಯ್ಯ ಮಾತನಾಡಿದಾಗ ಅಜೀದರಿಗೆ ಈತ ಕೊಡಿಸ್ತಾನೊ? ಇಲ್ಲವೋ? ಎಂಬ ಅನುಮಾನ ಬಂದಿತ್ತು. ಆದರೆ ಒಂದು ವಾರಕ್ಕೆ ಮುಂಚೆಯೇ ಅಜೀದರಿಗೆ ಚನ್ನಯ್ಯ ಒಂದು ಎಕರೆ ಗದ್ದೆಯನ್ನು ಕ್ರಯಕ್ಕೆ ಕೊಡಿಸಿದ್ದ. ಆದರೆ ಗದ್ದೆ ಕೊಂಡುಕೊಂಡ ಹೊಸದರಲ್ಲಿಯೇ ಅಜೀದರ ವರ್ಗಾವಣೆ ಬೇರೆ ಕಡೆಗೆ ನಡೆದಿತ್ತು. ಅವರು ಐದಾರು ಕಡೆ ತಟಾದು, ಕೊನೆಗೆ ಹೆಂಡತಿ ಇರುವ ಕಡೆಗೆ–ಬೆಂಗಳೂರಿಗೆ ವರ್ಗವಾಯಿತು. ಆಗಾಗ ತಮ್ಮ ಗದ್ದೆ ಬತ್ತ ತೆಗೆದುಕೊಂಡು ಹೋಗಲು ಮಾತ್ರ ಅಸ್ತಿಪಾಳ್ಯಕ್ಕೆ ಬರುತ್ತಿದ್ದರು. ತನ್ನ ಗದ್ದೆಯನ್ನು ಚೆನ್ನಯ್ಯನೇ ಪಾಲಿಗೆ ಮಾಡಿಸುತ್ತಾ ಬಂದದ್ದು ಅಜೀದರಿಗೆ ಸಂತೋಷ ತಂದಿತ್ತು. ಚೆನ್ನಯ್ಯನಿಗೆ ಆರು ವರ್ಷಗಳ ಹಿಂದಿನ ನೆನಪು ಬಂದು 'ಸ್ನೇಹ ಅಂದರೆ ಅದು' ಅನ್ನಿಸಿ ಹಿರಿಹಿರಿ ಹಿಗ್ಗಿದ.

***

ಮಧ್ಯಾಹ್ನದ ಹೊತ್ತಿಗೆ ಊರಿಗೆ ಬರುತ್ತೇವೆಂದು ಪತ್ರದಲ್ಲಿ ಅಜೀದರು ಬರೆದಿದ್ದರಿಂದ ದುರ್ಗದ ಬಸ್ ಸ್ಟಾಂಡಿಗೆ ರಾಜಣ್ಣ, ತಿಮ್ಮೇಗೌಡ, ಚನ್ನಯ್ಯ ಮೂವರೂ ಬಂದಿದ್ದರು. ಅಪ್ಪ ಮಕ್ಕಳ ಸಂಬಂಧ ಹಿತಮಿತವಾಗಿತ್ತು. ಬೇರೆಯವರಿಗೆ ಅವರ ಅನ್ಯೋನ್ಯತೆ ಅಸೂಯೆ ತರಿಸುವಂತಿತ್ತು. ಅಜೀದರು, ಪತ್ರದಲ್ಲಿ ಬರೆದಿದ್ದ ಹೊತ್ತಿಗೆ ಸರಿಯಾಗಿಯೇ ಅವರು ದುರ್ಗಕ್ಕೆ ಬಂದರು. ಹೆಂಡತಿ, ಮಗಳ ಜೊತೆಯಲ್ಲಿ ತುಂಬಾ ರಸ್ಸಾದ ಬಸ್ಸಿನಿಂದ ಕೆಳಕ್ಕೆ ಇಳಿದರು. ಕೈಯಲ್ಲಿ ಒಂದು ದೊಡ್ಡ ಕಿಟ್ ಬ್ಯಾಗು ಬ್ಯಾರೆ ಹೊತ್ತುಕೊಂಡು ಬಂದಿದ್ದರು. ಅದರಲ್ಲಿ ಏನೋ ತುಂಬಾ ಭಾರವಾದ ಲಗೇಜ್ ಇತ್ತು. ತಿಮ್ಮೇಗೌಡ ತನ್ನ ಕೈಗೆ ಅಜೀದರ ಕೈಯಿಂದ ಬ್ಯಾಗು ಈಸಿಕೊಂಡು ತನ್ನ ಹೆಗಲ ಮೇಲೆ ಹೊತ್ತುಕೊಂಡು ಅಜೀದರು ಬಸ್ಸು ಇಳಿಯುತ್ತಿದ್ದ ಹಾಗೆಯೇ ಚೆನ್ನಯ್ಯನ ಯೋಗಕ್ಷೇಮವನ್ನು ವಿಚಾರಿಸಿಕೊಂಡರು. ಚೆನ್ನಯ್ಯ ತನ್ನ ಎರಡು ಕೈಗಳನ್ನು ಜೋಡಿಸಿ ಎತ್ತಿ ಮುಗಿಯುತ್ತಾ, "ಚೆನ್ನಾಗಿದ್ದೀರಾ? ಇವತ್ತಾದ್ರು ನಮ್ ಮನೆಗೆ ದಯಮಾಡಿಸಿದ್ರಲ್ಲ, ಆರು ವರ್ಷದ ಮೇಲೆ!" ಎಂದು ಪಾತಿಮಾ ಬೂಬಮ್ಮನಿಗೆ ವಂದಿಸಿದ. ಆಕೆ ನಗುತ್ತಾ "ಚೆನ್ನಾಗಿದ್ದೀನಿ, ನಂದಕ್ಕ ಚೆನ್ನಾಗಿದ್ದಾಳ?" "ಚೆನ್ನಾಗಿದ್ದಾಳೆ! ಬನ್ನಿ, ಅವಳ ಚಂದ ನೋಡ್ತೀರಲ್ಲ " ಎನ್ನುತ್ತಾ ಚೆನ್ನಯ್ಯ ನಡೆದ.

ರಾಜಣ್ಣ ಗಂಭೀರವಾಗಿ ಬರುತ್ತಿದ್ದಾಗ, "ಏನಯ್ಯಾ ಪಾಸು ಮಾಡಿ ಬಿಟ್ಟಿದ್ದಿ!" ಎಂದು ಅಜೀದು ಮಾಸ್ತರು ತನ್ನ ಹಳೆಯ ಶಿಷ್ಯನನ್ನು ರೇಗಿಸಿದರು. ಅವನಿಗೆ ಅವರ ಬಳಿ ಮಾತನಾಡುವುದಕ್ಕೆ ವಿಪರೀತ ಸಂಕೋಚ. ಎಲ್ಲದಕ್ಕೂ ಅವರ ಮಾತಿಗೆ 'ಹೂ' ಅನ್ನುತ್ತಿದ್ದ. ಜಮೀಲ ತನ್ನ ತಂದೆಯನ್ನು ತಮ್ಮ ಭಾಷೆಯಲ್ಲಿ ಏನೋ ಕೇಳುತ್ತಿದ್ದಳು. ಅದಕ್ಕೆ ಅಜೀದರು ಆಕೆಗೆ ಕನ್ನಡದಲ್ಲಿ, 'ಒಂದು ಮೈಲಿ ಅಷ್ಟೆ'

ಎಂದಾಗ ತಿಮ್ಮೇಗೌಡ, 'ಬಾರವ್ವ ಎದುರ್ಕೊ ಬ್ಯಾಡ. ಒಂದ್ ಮೈಲಿ ನಡಿಬೇಕಷ್ಟೆ ಕಣ!' ಎಂದು ಆಕೆಗೆ ಹೇಳಿದ. ಅವ್ವ ಮಗಳು ಇಬ್ಬರೂ ಹಿಂದೆ ಹಿಂದೆ ಬಿದ್ದರು. ತಿಮ್ಮೇಗೌಡ ಬೂಬಮ್ಮನ ಬಳಿ ಏನೇನೋ ಹರಟುತ್ತಾ ಬರುತ್ತಿದ್ದ, ತಾನು ಈಸಾರಿ ಗದ್ದೆಯ ಹಾಗೆ ಬೆಳೆಸಿದ್ದೀನಿ, ಹೀಗೆ ಬೆಳೆಸಿದ್ದೀನಿ ಎಂದು. ರಾಜಣ್ಣ ಎಲ್ಲರಿಗಿಂತ ಹಿಂದೆ ಬರುತ್ತಿದ್ದ. ಅವನ ಕಣ್ಣು ತುಂಬಾ ಜಮೀಲಳ ಸೆಲ್ವರ್ ಕಮೀಜ್, ಅವಳ ನೀಳವಾದ ಜಡೆ, ಅವಳ ಕೆಂಪು ಬಣ್ಣದ ಕೈ ಮೈ, ಅಗಲವಾದ ಕಣ್ಣುಗಳು ಇವೇ ತುಂಬಿಕೊಂಡಿದ್ದವು. ಆತನಿಗೆ ತನ್ನ ಮೈಬಣ್ಣ ಬಟ್ಟೆಗಳ ಮುಂದೆ ಆಕೆ ಅದ್ಭುತವಾಗಿ ಕಾಣತೊಡಗಿದ್ದಳು.

ಅವರೆಲ್ಲಾ ಊರಿನ ಹತ್ತಿರ ಬಂದಾಗ ನೋಡಿದ ಜನಕ್ಕೆಲ್ಲಾ ಸೋಜಿಗ 'ಚೆನ್ನಯ್ಯ ಯಾರ್ನೊ ಕರ್ಕೊಂಡು ಬರ್ತಾ ಇದ್ದಾನಲ್ಲ' ಎಂದು. 'ಅವನು ಯಾವಾಗಲೂ ಸಾಬ್ರ ಸಹವಾಸನೇ ಮಾಡ್ತಿರ್ತಾನೆ, ಯಾರ್ನೊ ಹೆಂಗಸನ್ನೆಲ್ಲಾ ಕರ್ಕೊಂಡ್ ಬರ್ತಾ ಅವ್ನಲ್ಲ' ಎಂದುಕೊಂಡು ಕುತೂಹಲ ತುಂಬಿದ ಕಣ್ಣುಗಳಿಂದ ಅವರನ್ನು ನೋಡುತ್ತಾ ನಿಂತಿದ್ದರು. 'ಸಾಬರ ಹೆಂಗಸಾಗಿದ್ರೆ ಬುರ್ಕಾ ಹಾಕಿರ್ತಿದ್ದು ' ಅಂತ ಕೆಲವರ ತರ್ಕ, ಅವರು ಹತ್ತಿರ ಬಂದ ಮೇಲೆ "ಓ ಅಜೀದು ಸಾಬರು" ಎಂದುಕೊಂಡರು. ಕೊನೆಗೆ ಪಾತಿಮಾ ಬೂಬಮ್ಮ ಅವರ ಹೆಂಡತಿ ಅಂತ ಗೊತ್ತಾದ ಮೇಲೆ ಅವರೆಲ್ಲಾ ಸಮಾಧಾನ ಹೊಂದಿದರು. ಪರಿಚಯವಿದ್ದವರಲ್ಲಿ ಕೆಲವರು ಅಜೀದರ ಯೋಗಕ್ಷೇಮ ವಿಚಾರಿಸಿಕೊಂಡರು. ಪಾತಿಮಾ ಬೂಬಮ್ಮನ ಪರಿಚಯ ಯಾರಿಗೂ ಇಲ್ಲದಿದ್ದರಿಂದ ವಿಚಾರಿಸಲು ಹೋಗಲಿಲ್ಲ. ಅವರು ಚೆನ್ನಯ್ಯನ! ಮನೆಕಡೆ ಹೋದ ಮೇಲೆ ಬೂಬಮ್ಮ ಹಾಕದಿದ್ದ ಬುರ್ಕಾದ ಬಗ್ಗೆ ಚರ್ಚೆ ಸಾಗಿತ್ತು.

ಮನೆಗೆ ಬಂದಾಗ ಮಧ್ಯಾಹ್ನದ ಹೊತ್ತು ನೆತ್ತಿಮೇಲಿನಿಂದ ವಾಲಿತ್ತು. ಚೆನ್ನಯ್ಯ ಮರೆಯದೆ ಮಗಳಿಗೆ ಷರಬತ್ತು ಮಾಡಲು ಹೇಳಿದ, ಪಾತಿಮಾ ಬೂಬಮ್ಮ, ಜಮೀಲ ಇಬ್ಬರೂ ಸುಧಾರಿಸಿಕೊಳ್ಳತೊಡಗಿದರು. ಜಮೀಲಳಿಗೆ ಎಲ್ಲವೂ ಹೊಸದಾಗಿ, ವಿಚಿತ್ರವಾಗಿ ಕಾಣತೊಡಗಿತು. ಅಜೀದರು ಮತ್ತು ಪಾತಿಮಾ ಬೂಬಮ್ಮರು ಬರುವಾಗ ಯೋಚಿಸಿ ನಂಜವ್ವನಿಗೆ ಒಂದು ಕಡ್ಡಿ ಸೀರೆಯನ್ನು, ಮಗಳಿಗೆ ಒಂದು ಚೀಟಿಸೀರೆಯನ್ನು, ರಾಜಣ್ಣನಿಗೆ ಒಂದು ಜೊತೆ ರೆಡಿಮೇಡ್ ಪ್ಯಾಂಟ್ ಷರ್ಟನ್ನು ತಂದಿದ್ದರು.

"ಇದನ್ನೆಲ್ಲಾ ಯಾಕವ್ವ ತರೋಕ್ಕೋದೆ. ನಿಮ್ ಕಷ್ಟ ನಿಮ್ಗೆ! ನೀನು ಇವನ್ನೆಲ್ಲಾ ಒತ್ಕೊಂಡ್ ಬರ್ದೆ ಇದ್ರೆ ಆಗ್ತಿರ್ಲಿಲ್ವ?" ಎಂದಳು ನಂಜವ್ವ. ಕಡ್ಡಿ ಸೀರೆಯನ್ನು 'ಚೆನ್ನಾಗಿದೆ' ಎಂದು ಕಣ್ಣಿಗೆ ಒತ್ತುಕೊಳ್ಳುತ್ತಾ. ಪಾತಿಮಾ ಬೂಬಮ್ಮ, "ಬಿಡಿ ನಂಜವ್ವಾ! ನಾವು ನಿಮ್ಗೆ ಸದಾ ಉಡಿಸ್ತಿರ್ತಿವಾ? ಬೆಂಗಳೂರಿಗೆ ಬನ್ನಿ ಬನ್ನಿ ಅಂದ್ರೆ ತಾವು ಬರೋದಿಲ್ಲ! ಏನೋ ಪ್ರೀತಿಯಾಯ್ತು ತಂದೋ ಅಷ್ಟೆ!" ಎಂದಳು. ಮಧ್ಯೆ ತಿಮ್ಮೇಗೌಡ ಬಾಯಾಕಿ "ನನಗೇನ್ ತಂದಿದ್ದೀರಿ ಜಮೀಲ' ಎಂದು ಜಮೀಲಳ ಕೇಳುತ್ತಾ ನಕ್ಕ. ಬ್ಯಾಗಿನಲ್ಲಿ ತನಗೆ ಹಣ್ಣು ಹಂಪಲು ಬಿಟ್ಟು, ಏನೂ ಇಲ್ಲದ್ದು ಕಂಡು ಅವನಿಗೆ ಬೇಸರವಾಗಿತ್ತು. ಅವನ ಈ ಮಾತು ಕೇಳುತ್ತಿದ್ದ ಹಾಗೆಯೇ ಎಲ್ಲರೂ ನಗಲಾರಂಭಿಸಿದರು.

ರಾಜಣ್ಣನಿಗೆ ಅಜೀದರು ತಾನು ತಂದಿದ್ದ ರೆಡಿಮೇಡ್ ಬಟ್ಟೆಗಳು ಅವನ ಅಳತೆಗೆ ಸರಿಯಾಗಿ ಆಗುತ್ತವೆ? ಇಲ್ಲವೋ? ಎಂದು ನೋಡುವ ತವಕದಲ್ಲಿದ್ದರಿಂದ, ಅವುಗಳನ್ನು ಧರಿಸಿ ನೋಡುವಂತೆ ಅವನಿಗೆ ಹೇಳಿದರು. ನಂಜಮ್ಮ, "ಹೊಸಬಟ್ಟೆಯ ಸ್ನಾನಮಾಡಿ ಇಕ್ಕೊಳ್ಳನೆ ಬಿಡಿ" ಎಂದು

ಬಾಯಾಕಿದಳು. ತನ್ನ ತಾತ ಮುತ್ತಾತರ ಕಾಲದ ವಿಚಾರಗಳನ್ನೇ ಹೇಳುತ್ತಿರುತ್ತಾಳೆ ತನ್ನ ಅವ್ವ–ಎಂದು ರಾಜಣ್ಣನಿಗೆ ಸಿಟ್ಟು, ಆಗ ಆಕೆ ತನ್ನ ಮಗನನ್ನು ಬೈದುಕೊಳ್ಳುತ್ತಾ ಬಾಯಿಗೆ ಬೀಗ ಹಾಕಿಕೊಂಡಳು!

ಬಟ್ಟೆಗಳನ್ನು ಒಳಗೆ ಹೋಗಿ ಇಕ್ಕಿಕೊಂಡು ಈಚೆಗೆ ಬಂದ ರಾಜಣ್ಣನಿಗೆ, "ಸರಿಯಾಗಿದ ಅಳತೆ. ಅಳತೆ ಕೊಟ್ಟು ಹೊಲಿಸಿದ೦ದಿಗೆ" ಎಂದಳು ಬೂಬಮ್ಮ. "ನೀನು ಸೆಲೆಕ್ಟ್ ಮಾಡಿದ್ಮೇಲೆ ಅದು ಆಗದೆ ಇರ್ತಾದ?" ಎಂದು ಅವರ ಭಾಷೆಯಲ್ಲಿ ಅಜೀದರು ತಮ್ಮ ಹೆಂಡತಿಯನ್ನು ರೇಗಿಸಿದರು. ಆಗ ಬೂಬಮ್ಮ ಅವರ ಭಾಷೆಯಲ್ಲಿಯೇ ತನ್ನ ಗಂಡನಿಗೆ "ನನ್ನ ಸೆಲೆಕ್ಷನ್ನಲ್ಲ. ನಮ್ಮ ಜಮೀಲನ್ದೇ ಎಲ್ಲಾ. ಅದರ ಕಲ್ಲರ್ ಗಿಲ್ಲರ್ ಎಲ್ಲಾ' ಎಂದು ಉತ್ತರ ಕೊಟ್ಟಳು. ಆಗ ಜಮೀಲ ತನ್ನ ತಂದೆ ತಾಯಿಗಳ ಸಂಭಾಷಣೆ ಕೇಳಿ ನಾಚಿ ನೀರಾದಳು. ಚೆನ್ನಯ್ಯನ ಸಂಸಾರ ಅವರ ಮಾತುಗಳನ್ನು ಕೇಳುತ್ತಾ ಕಕ್ಕಾಬಿಕ್ಕಿಯಾಗಿ ಕೂತಿತ್ತು. ಆದರೆ ತಿಮ್ಮೇಗೌಡನಿಗೆ ತನ್ನ ಹೊಲಗದ್ದೆಯ ಅಕ್ಕ ಪಕ್ಕದ ಸಾಬರು ಮಾತನಾಡುವ ಭಾಷೆಯ ಹರಕಲು ಮುರಕಲು ಪರಿಚಯವಿದ್ದರಿಂದ, 'ನನಗೆ ಎಲ್ಲಾ ಅರ್ಥವಾಯ್ತು ಬಿಡಿ!' ಎಂದ ಅಜೀದರಿಗೆ ಆಗ ಬೂಬಮ್ಮ, 'ಹೌದಾ!' ಎಂದು ಉದ್ಗಾರ ತೆಗೆದಳು.

ಜಮೀಲಳಿಗೆ ಎಲ್ಲಾ ಹೊಸ ಅನುಭವ. ಹಳ್ಳಿಯ ಹೊಲ, ಮನೆ, ಜನ ಎಲ್ಲಾ ಅವಳಿಗೆ ವಿಚಿತ್ರವಾಗಿ ಕಾಣುತ್ತಿತ್ತು. ಅದರಲ್ಲೂ ನಂಜವ್ವನ ಉಡಿಗೆ ತೊಡಿಗೆ ಮಾತು ವ್ಯವಹಾರ ಎಲ್ಲಾ ಆಕೆಗೆ ಆಶ್ಚರ್ಯವನ್ನು ಹುಟ್ಟಿಸುತ್ತಿದ್ದವು. ಆದಿನ ನಂಜವ್ವನ ಮನೆಯಲ್ಲಿ ಸಂಭ್ರಮದ ವಾತಾವರಣ ನೆಲೆಸಿತ್ತು. ಗಂಡ ಹೆಂಡತಿಯರ ಸಮಪಾಲು, ಸ್ವಾತಂತ್ರ್ಯ, ಸಮಬಾಳಿನ ಕೇಂದ್ರವಾಗಿದ್ದ ಆ ಮನೆ ಇನ್ನೂ ಹೊಸ ಬೆಳವಣಿಗೆಯನ್ನು ಕಂಡುಕೊಳ್ಳುವ ಸೂಚನೆಯನ್ನು ಸೂಸುತ್ತಿತ್ತು. ಮಧ್ಯಾಹ್ನದ ಮಾಮೂಲು ಊಟವಾದ ಮೇಲೆ ತಂಪೊತ್ತು ಮಾಡಿಕೊಂಡು ಅಜೀದರು, ಪಾತಮ್ಮ, ಜಮೀಲ, ಚೆನ್ನಯ್ಯ, ರಾಜಾ, ತಿಮ್ಮೇಗೌಡ ಅಷ್ಟೂ ಜನರು ಗದ್ದೆ ಹತ್ತಿರ ಹೊರಟರು, ಜಮೀಲ ಒಂದಷ್ಟು ಬತ್ತದ ತೆನೆಗಳನ್ನು ಸಂಗ್ರಹಿಸಿಕೊಂಡಳು. ತಿಮ್ಮೇಗೌಡ ಕೇಳಿದ್ದಕ್ಕೆ, "ನಮ್ಮನೆಯಲ್ಲಿ ಇಡ್ತೀನಿ" ಅಂದಳು. ರಾಜಣ್ಣ ಒಂದಷ್ಟು ಕಿತ್ತುಕೊಟ್ಟ, ಎಲ್ಲವನ್ನೂ ಸಂಗ್ರಹಿಸಿಕೊಂಡಳು. ಗದ್ದೆಯ ಬದುವಿನ ಮೇಲೆ ಬರುವುದಕ್ಕೆ ಅವಳಿಗೆ ಅನುಭವ ಸಾಲದಾಗಿತ್ತು. ಎರಡು ಮೂರು ಬಾರಿ ತೂರಾಡಿ ಹಾಗೂ ಕೆಸರೊಳಕ್ಕೆ ಕಾಲಿಟ್ಟು ಕಾಲಿಗೆಲ್ಲಾ ಬದಿ ಮಾಡಿಕೊಂಡಳು. ಉದ್ದಕ್ಕೂ ತಿಮ್ಮೇಗೌಡ ಎಚ್ಚರಿಕೆ ನೀಡುತ್ತಲೇ ಬರುತ್ತಿದ್ದ.

ಗದ್ದೆ ಹತ್ತಿರವೆಲ್ಲಾ ತಿರುಗಾಡಿದರು. ಸಂಜೆಯಾಯಿತು. "ನಾಳೇನ ಹೋಗಿಬಿಡಬೇಕು ನಾವು" ಎನ್ನುತ್ತಾ ಅಜೀದರು ಊರಿನ ಕಡೆ ತಿರುಗಿದರು. ಚೆನ್ನಯ್ಯ, "ಎರಡ್ಮೂರು ದಿನ ಇದ್ದು ಹೋಗಿ ಅಪರೂಪಕ್ಕೆ ಅಮ್ಮಾವ್ರು ಬಂದವ್ರೆ" ಎಂದು ಕೇಳಿಕೊಂಡ. ಇರೋದಿಕ್ಕಾಗಲ್ಲ. ಮನೆ ಹತ್ರ ಮಗನ್ನೊಬ್ಬ ಬಿಟ್ಟು ಬಂದಿದ್ದೀವಿ" ಎಂದರು ಪಾತಿಮಾ ಬೂಬಮ್ಮ. "ಅಂಗಾದ್ರೆ ರಾತ್ರಿಗೇ ಕೋಳಿ ಕೂದು ಬಿಡಬಹುದಿತ್ತಲ್ಲ" ಎಂದನು ಚೆನ್ನಯ್ಯ ಮಗನಿಗೆ, ತಿಮ್ಮೇಗೌಡ, "ಇನ್ನೂ ಹೊತ್ತದ ಬಾ, ಕೂದ್ರಾಯ್ತು, ಎಷ್ಟೊತ್ತು ಅಚ್ ಕಟ್ ಮಾಡ್ಕೊಳೋದು!" ಎನ್ನುತ್ತಾ ಊರಿನ ಕಡೆಗೆ ಹೊರಟ. ಎಲ್ಲರೂ ಮನೆಗೆ ಬಂದರು. ನಂಜವ್ವ ಮಂದಲಿಗೆ ಹಾಸಿದಳು. ಅಜೀದರ ಕುಟುಂಬ ಮಂದಲಿಗೆಯ ಮೇಲೆ ಕೂತು ಸುಧಾರಿಸಿಕೊಳ್ಳತೊಡಗಿತು. ಚೆನ್ನಯ್ಯ ಹೆಂಡತಿ ಮಕ್ಕಳನ್ನು ಅವಸರಿಸಿದ, "ನಾಳೆ ಅವರು ಇರೋದಿಲ್ಲ ಅಂತಾರೆ ಇವತ್ತೇ ಕೋಳಿ ಕುಯ್ರಿ' ಎಂದು.

"ಒಬ್ಬಿಟ್ಟು, ಮಾಡುವಾ ನಾಳೆ, ನಾಡು ಬಾಡಟ್ಟುವ ಅಂತ ನಾನಿದ್ದೆ! ಆಗ್ಲೇ ಹೋಯ್ತಿನಿ ಅಂತಾವ್ರ! ಇನ್ನೂ ಬಂದ್ ನೆಲಕ್ಕೆ ಸರಿಯಾಗಿ ಮಾರಾಗಿತ್ತಿ ತಿಗನೇ ಊರಿಲ್ಲ. ಆಗ್ಲೆ ಹಾರ್ಬಿಡ್ತೀವಿ ಅಂತಾರೆ ಅಂತಾರಲ್ಲ" ಎಂದಳು ನಂಜವ್ವ. "ಇಲ್ಲ ನಮ್ಮ ತಡೀಬ್ಯಾಡಿ! ನಾಳೆ ನಾವು ಹೊರಟ್ ಬಿಡ್ತಿವಿ!" ಎಂದಳು ಪಾತಿಮಾ ಬೂಬಮ್ಮ, 'ಅಯ್ಯೋ ತಾಯಿಮಗಳೆ! ಹೋಗಿವಂತೆ ಕೂತ್ಕೊಳೆ, ಯಾಕಿಂಗ್ ಆಡ್ತಿ!' ಎಂದು ನಂಜವ್ವ ರೇಗಾಡಿದಳು. ಜಮೀಲಳಿಗೆ ನಂಜವ್ವನ ಮಾತು ನಗುತಂದಿತು. ಪಾತಿಮಾ ಬೂಬಮ್ಮ ಸುಮ್ಮನಾದಳು. ಇವತ್ತೇ ಕೋಳಿ ಕುಯ್ಯುವುದೆಂದು ಖಾತ್ರಿಯಾಯಿತು, ಅದನ್ನು ಪಾತಿಮಾ ಬೂಬಮ್ಮ ಮಿಸ್‌ಮಿಲ್ಲ ಮಾಡಬೇಕೆಂದು ಸೂಚಿಸಿದರು. ಅಜೀದರದು ಮಾಡದೆ ಇದ್ದರೂ ಪರವಾಗಿಲ್ಲ, ನಡೆಯುತ್ತದೆ ಎಂಬ ನಿಲುವು, ಆದರೆ ಹೆಂಡತಿಯ ಮಾತನ್ನು ನೆರವೇರಿಸಿದರು ಅಜೀದರು, ಮೊಟ್ಟೆಕೋಳಿಯನ್ನು ಮಿಸ್‌ಮಿಲ್ಲ ಮಾಡುತ್ತಿರುವಾಗ ತಿಮ್ಮೇಗೌಡರಿಗೆ ನಗು ಬರುತ್ತಿತ್ತು. ಮಾಂಸದೂಟ ಹಿತವಾಗಿತ್ತು. ಊಟ ಆಗಿ ಎಷ್ಟೊತ್ತಾದರೂ ರಾಜಣ್ಣನ ಓದಿನ ಬಗ್ಗೆ ಯಾರೂ ಪ್ರಸ್ತಾಪ ಮಾಡಲೇ ಇಲ್ಲ. ಊಟವಾದ ಮೇಲೂ ಇಲ್ಲ. ಅಜೀದರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಚೆನ್ನಯ್ಯನಿಗೆ, ರಾಜಣ್ಣನಿಗೆ ತಿಳಿಯುವ ಕುತೂಹಲ ಮಾತ್ರ ತೀವ್ರವಾಗಿತ್ತು. ಆದರೆ ಅಜೀದರು ಆಗಲೇ ಅದರ ಬಗ್ಗೆ ನಿಶ್ಚಯಿಸಿಕೊಂಡಿದ್ದರು.

ನಿದ್ದೆ ಹೊತ್ತಾಯ್ತು, ಬೆಳುದಿಂಗಳು ದಟ್ಟವಾಗಿ ಅಂಗಳದಲ್ಲಿ ಚೆಲ್ಲಿತ್ತು. ಅಜೀದರು, ಪಾತಿಮಾ ಜಮೀಲರಿಗೆ ನಂಜವ್ವ ನಡುಮನೆಯಲ್ಲಿ ಮಂದಲಿಗೆ ಹಾಸಿ ಮಲಗಲು ಸಿದ್ಧ ಮಾಡುವಂತೆ ಮಗಳಿಗೆ ಹೇಳಿದಳು. ಭಾಗ್ಯ ಮಂದಲಿಗೆ ಹಾಸಿ ಅದರ ಮೇಲೆ ಮನೆಯಲ್ಲಿ ಹಾಸಿಗೆಗಳಿಲ್ಲದಿದ್ದರಿಂದ ಒಂದು ರಗ್ಗು ಹಾಸಿ ತಲೆದಸಿಗೆ ಎಣ್ಣೆ ಹಿಡಿದ ಹೊಟ್ಟಿನ ತಲೆದಿಂಬುಗಳನ್ನ ಕೊಟ್ಟಳು. ಚೆನ್ನಯ್ಯ, ನಂಜವ್ವ ತಮ್ಮ ಮಕ್ಕಳೆಲ್ಲಾ ತಂತಮ್ಮ ಮಾಮೂಲು ಜಾಗದಲ್ಲಿ ಮಲಗಿ ನಿದ್ದೆ ಹೋದರು.

ಸರಿಹೊತ್ತು, ಅಜೀದರಿಗೆ ಮೊದಲ ನಿದ್ರೆ ಬಂದದ್ದೇ ಹೆಚ್ಚು! ಏನೋ ಕಡಿದಂತಾಗಿ ಎಚ್ಚರವಾಯಿತು. ನೋಡಿದರೆ, ಪಾತಿಮಾಳು ಏನೋ ಕಡಿತವೆ ಕಣ್ರೀ ನಿದ್ದೆ ಬರಲಿಲ್ಲ' ಎಂದು ಮೈ ಕೆರೆದುಕೊಳ್ಳುತ್ತಾ ಕೂತಿದ್ದಳು. ಜಮೀಲ ನಿದ್ದೆ ಬರದೆ ಪರಪರನೆ ತನ್ನ ಬಟ್ಟೆಯೊಳಕ್ಕೆ ಕೈ ಇಕ್ಕಿ ಕರೆಯುತ್ತಾ ಪರದಾಡುತ್ತಿದ್ದಳು ಅಜೀದರಿಗೆ ಕ್ಷಣ ಅನುಮಾನ ಬಂದು, ತಿಗಣೆಗಳೇನಾದರು...' ಎಂದು ಊಹಿಸಿದರು. ಇರಬೇಕು!' ಎಂದಳು ಪಾತಿಮಾ, ಜಮೀಲನೂ ಎದ್ದು ಕೂತು 'ಏನೋ ಕಡಿದ್ ಬಿಡ್ತು ಅಪ್ಪಾಜಿ ನಿದ್ದೇನೆ ಬರ್ಲಿಲ್ಲ. ಸಖೆ ಮೈ ಎಲ್ಲಾ ನವೆ, ಕಡೀತದೆ' ಎಂದು ಅಳುವವಳಂತೆ ತಂದೆಗೆ ನಿವೇದಿಸಿದಳು. ಆದರೆ ಅಜೀದರು ಆಗ ನಿರಾಯುಧರಾಗಿ ಏನೂ ತೋಚದ ಸ್ಥಿತಿಯಲ್ಲಿದ್ದರು.

ರಾತ್ರಿಯೆಲ್ಲಾ ಅಜೀದರಿಗೆ, ಪಾತಿಮಾರಿಗೆ, ಜಮೀಲಳಿಗೆ ನಿದ್ದೇನೆ ಬರಲಿಲ್ಲ. ಅವರ ಕಣ್ಣುಗಳೆಲ್ಲಾ ನಿದ್ದೆಗೆಟ್ಟು ಕೆಂಪಗೆ ಊದಿಕೊಂಡಿದ್ದವು. ರಾತ್ರಿ ನಂಜವ್ವ ದೀಪವನ್ನು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಲ್ಲಿ ತಿಗಣೆಗಳ ಒಸಕುತ್ತಿದ್ದ ಚಿತ್ರ ಜಮೀಲಳ ಕಣ್ಣಿನಿಂದ ಇನ್ನೂ ಮಾಸಿರಲಿಲ್ಲ. ಮಧ್ಯಾಹ್ನಕ್ಕೆ ಮುಂಚೆಯೇ ಹೊರಟು ಬಿಡುವುದೆಂದು ಅಜೀದರು ಪಾತಿಮಾಳ ಹತ್ತಿರ ನಿಶ್ಚಯಿಸಿದ್ದರು. ಯಾಕೆಂದರೆ ಬೆಳಿಗ್ಗೆ ಬಸ್ಸಿಗೇ ಹೊರಟರೆ ಬಸ್ಸಿನಲ್ಲಿ ಕೂತುಕೊಳ್ಳಲು ಸೀಟು ಸಿಗುತ್ತದೆಂಬ ಯೋಚನೆ ಅವರದಾಗಿತ್ತು.

ಭಾಗ್ಯಳಿಗೆ ಅವರು ಹೊರಡುವುದು ನಿಶ್ಚಯವಾಗಿದೆ ಅಂತ ಗೊತ್ತಾಗಿದ್ದರಿಂದ ಉಪ್ಪಿಟ್ಟು ರೆಡಿ

ಮಾಡಿದ್ದಳು. ಅಜೀದರು, ಪಾತಿಮಾ, ಜಮೀಲ, ಚೆನ್ನಯ್ಯ, ತಿಮ್ಮೇಗೌಡ, ರಾಜಣ್ಣ, ನಂಜವ್ವ, ಚಂದ್ರಪ್ಪ

ಹೀಗೆ ಎಲ್ಲರೂ ತಿಂಡಿ ತಿನ್ನುತ್ತಾ ಕೂತಾಗ ಮಧ್ಯೆ ಚೆನ್ನಯ್ಯ, "ಏನು ಮಾಡುವ ಅಂತೀರ ಇವ್ನ! ನಾನು ಮುಂದೆ ಓದ್ಲೇಬೇಕು ಅಂತಾನೆ" ಎಂದು ಸಣ್ಣಗೆ ಪ್ರಸ್ತಾಪ ಮಾಡಿ, "ಏನಾದ್ರು ಈ ಬಗ್ಗೆ ತಾವು ಯೋಚ್ನೆ ಮಾಡಿದ್ರ?" ಎಂದು ಅಜೀದರ ಕೇಳಿದ. "ಓದ್ಲಿ ಬಿಡಿ ಗೌಡ್ರೆ, ನಮ್ಮನೇಲೇ ಇದ್ಕೊಂಡು ಓದ್ತಾನೆ ಬಿಡಿ! ನಮ್ಮ ಮಕ್ಕಳ ಜೊತೆ. ನನ್ನ ಮಗ, ನನ್ನ ಮಗಳು ಇಬ್ರೆ ತಾನೆ ನನ್ನ ಮನೇಲಿ ಇರೋರು? ಅವ್ರ ಜೊತೇಲಿ ಇನ್ನೊಬ್ಬ ಇದ್ದು ಓದ್ಕೊಂಡ್ರೆ ನಮಗೇನೂ ಭಾರ ಆಗೋದಿಲ್ಲ ಬಿಡಿ. ಯಾಕೆ ಆ ಬಗ್ಗೆ ತಾವು ಯೋಚ್ನೆ ಮಾಡಿ ತಲೆ ಕೆಡಿಸ್ಕೊತ್ತೀರಿ..." ಎಂದರು ಅಜೀದರು. ಚಿನ್ನಯ್ಯ ಮುಂದಕ್ಕೆ ಏನು ಮಾತನಾಡುವದು ಎಂದು ತೋಚದ ಕ್ಷಣ ಸುಮ್ಮನಾದ, ನಂಜವ್ವ ಇನ್ನೂ ಏನನ್ನೋ ಗಾಢವಾಗಿ ಯೋಚಿಸುತ್ತಿರುವಂತೆ ಕಾಣುತ್ತಿತ್ತು.

ಮೌನ ಮುರಿದು ಫಾತಿಮಾ ಒಮ್ಮೆ ಹೇಳಿದರು – "ಯಾಕೆ ಚೆನ್ನಯ್ಯ ಏನೋ ಯೋಚನೆ ಮಾಡ್ತಾ ಇರಂಗೆ ಕಾಣ್ತಾ ಇದೆ – ಗಂಡ ಹೆಂಡತಿಯರಿಬ್ಬರೂ.... ಎಂದಳು.

ಏನೋ ಯೋಚಿಸುತ್ತಿದ್ದರೂ ಚೆನ್ನಯ್ಯ, "ಏನಿಲ್ಲ !" ಎಂದ. "ನೀವೇನೂ ಯೋಚ್ನೆ ಮಾಡಬೇಡಿ ಬಿಡಿ ನಮ್ಮನೇಲಿ ಇರಲಿ" ಎಂದಳು ಪಾತಿಮಾ ಬೂಬಮ್ಮ. ಈ ನಡುವೆ ನಂಜವ್ವನ್ನ, "ಯಾಕಮ್ಮ ನಂಜಮ್ಮ ನಾವೇನು ನಿಮ್ಮ ಪಾಲಿಗೆ ಸತ್ತೋಗಿದ್ದೀವಿ ಅಂದುಕೊಂಡಿದ್ದೀಯೇನಮ್ಮ ?" ಎಂದು ಕೇಳಿದರು ಅಜೀದರು.

ನಂಜವ್ವ ಮಾತನಾಡಲಿಲ್ಲ. ಆಗ ಚೆನ್ನಯ್ಯ, ಛೇ! ತಂಮ್ ಮನೇಲಿ ನನ್ ಮಗನ ಓದುವುದಕ್ಕೆ ಬಿಡಬಾರ್ದು ಅಂತ ನಾವೇನು ಉದ್ದೇಶ ಇಟ್ಟುಕೊಂಡಿಲ್ಲ. ಆದ್ರೆ ಜನ..." ಅವನ ಮಾತು ಇನ್ನು ಮುಗಿದೇ ಇರಲಿಲ್ಲ. ನಂಜವ್ವ ನಡುವೆ ಬಾಯಾಕಿ, "ಹೌದುಸಾಮಿ! ನಮ್ಮೂರ್ ಜನ ನಮ್ಮನ್ನು ಆಡ್ಕೊತ್ತಾರೆ. ಮಗನ್ನ ಓದ್ಸಕ್ಕೆ ದನ ತಿನ್ನೋ ಸಾಬ್ರ ಮನೇಲಿ ಬಿಟ್ಟವ್ನೆ ಅಂತಾರೆ, ಆಮ್ಯಾಲೆ, ಈಗ್ಲೆ ನಿಮ್ ಜತೇಲೆಲ್ಲಾ ನನ್ ಗಂಡ ಓಡಾಡೋದ್ ಕಂಡು ನಮ್ಮೂರ್ ಜನ, 'ಚೆನ್ನ ಎಲ್ಲೋ ತುರ್ಕರ್ಗೆ ಹುಟ್ಟಿರ್ಬೇಕು ಅಂತಾರಂತೆ! ನನ್ಗೆ ಎಲ್ಲಾ ಸುದ್ದಿ ಬರ್ತಾವೆ!" ಎಂದಳು. ಅಜೀದರಿಗೆ ಅವಳ ದೀರ್ಘವಾದ ಆಲೋಚನೆ ಏನೆಂಬುದು ಸ್ಪಷ್ಟವಾಯಿತು.

"ಹೌದು ಸಾಮಿ! ನಮ್ಮೂರ್ ಜನಗಳ ಮನಸ್ಸು ನಿಮ್ಗೆ ಅರ್ಥವಾಗೋಲ್ಲ!' ಎಂದು ಹೆಂಡತಿಯ ಮಾತಿಗೆ ದನಿಗೂಡಿಸಿದ ಚೆನ್ನಯ್ಯ, "ಅನ್ಲಿ ಬಿಡಯ್ಯ ಚೆನ್ನಯ್ಯ! ಜನ ಹೆಂಗಿದ್ರು ಅಂದೇ ಅಂತಾರ, ಕೆಟ್ರು ಅಡ್ಕೊಳ್ತಾರೆ; ಬದುಕುದ್ರು ಆಡ್ಕೊಳ್ತಾರೆ. ಜನಗಳಿಗೇನ್ ನಾವು ಬದುಕ್ ಬೇಕಾಗಿಲ್ಲವಲ್ಲ ! ನಾವ್ ಮುಂದುವರಿಯೋದ್ ನೋಡ್ಬೇಕಣಯ್ಯ! ಈ ಜಾತಿ ಈ ಕುಲ ಎಲ್ಲಾ ಏನಂಡ್ಕೊಂಡಿದ್ದೀರಿ. ನೀವಿನ್ನು!" ಎಂದು ಅಜೀದರು. ಜಾತಿ, ಕುಲ, ಅವುಗಳಲ್ಲೆಲ್ಲಾ ನನ್ಗೆ ನಂಬ್ಕೆ ಇಲ್ಲ, ಅವೆಲ್ಲಾ ನಾನಿಡ್ಕೊಂಡಿದ್ರೆ, ನಿಮ್ ಸ್ನೇಹನೇ ಮಾಡ್ತಿರ್ಲಿಲ್ಲ ಬಿಡಿ. ಆ ಮಾತೇ ಬೇರೆ! ಆದ್ರೆ ಇದೆಲ್ಲಾ ನನ್ ಮಕ್ಳ್ ಅಭ್ಯಂತರ ಏನೂ ಇಲ್ದೆ ಇದ್ರೆ, ಬೇಕಾದ್ರೆ ಅವ್ನ ನಿಮ್ ಮನೇಲಿರ್ಲಿಸಿ, ನಾನು ಬ್ಯಾಡ ಅನ್ನೋದಿಲ್ಲ' ಎಂದು ಚೆನ್ನಯ್ಯ ತನ್ನ ನಿಲುವನ್ನು ಸ್ಪಷ್ಟ ಪಡಿಸಿದ.

ಆದರೆ ನಂಜವ್ವ ಎಗರಾಡಿದಳು. "ಬ್ಯಾಡ ಬ್ಯಾಡ, ಜನ ಏನಂದಾರು? ಬೇರೆ ಎಲ್ಲಾದ್ರು ಅವನ್ಗೆ ಅನುಕೂಲ ಮಾಡಿಕೊಡಿ" ಎಂದಳು. ತನ್ನವ್ವನ ಈ ಮಾತು ತಿಮ್ಮೇಗೌಡನಿಗೆ ಎಲ್ಲಿಲ್ಲದ ಸಿಟ್ಟು ತರಿಸಿತು.

ಅವನಿಗೆ ತನ್ನವ್ವ ಅಜೀದರಿಗೆ ಅವಮಾನ ಮಾಡುತ್ತಿದ್ದಾಳೆ ಅನ್ನಿಸಿತು.

ಆಗ ತನ್ನವ್ವನ ಮೇಲೆ ರೇಗಿ "ನೀನ್ ಇನ್ ಸುಮ್ಕಿರವ್ವ ಸಾಕು. ಎಲ್ಲಾ ನಿಮ್ಮಪ್ಪನ್ ಕಾಲದ್ದನ್ನೇ ಹೇಳ್ಬೇಡ ನಮ್ಗು, ಆಡ್ಕೊಳ್ಳೋರೆಲ್ಲಾ ನಮ್ಮ ಹಿಟ್ಟು, ಬಟ್ಟೆ ಕೊಡೋದಿಲ್ಲ ಕಣ! ಈಗಿನ ಕಾಲ್ದಲ್ಲಿ ಈ

ಜಾತಿಗೀತಿ ಎಲ್ಲಾ ಯಾರ್ ಕೇಳಾರು?" ಎಂದ. ಅವನ ಈ ಮಾತಿಗೆ ಅವನ ತಮ್ಮಂದಿರೆಲ್ಲಾ ಬೆಂಬಲಿಸಿದರು. ಆಗ ನಂಜವ್ವ ದುಃಖ ತಂದುಕೊಂಡು ಅಜೀದರಿಗೆ ಒಪ್ಪಿಸತೊಡಗಿದಳು – "ನೋಡ್ದ್ರ ಸಾಮಿ! ಮಕ್ಕು ನನ್ ಮ್ಯಾಲೆ ನಿಮ್ ಇದಿರ್ಗ ಎಂಗ್ ಬರ್ತಾರೆ! ನಾನೆತ್ತಿ ಸಾಕ್ದೊವು" ಎಂದವಳೇ,

"ನಾನುಟ್ಟಿದ್ ಮನೇಲು ನಾನು ಸುಖಪಡ್ಲಿಲ್ಲ. ಕೊಟ್ಟಮನೇಲು ಸುಖ ಪಡ್ಲಿಲ್ಲ. ಹೆತ್ತೋಳೂ ನನ್ನ ಸುಖವಾಗಿ ಸಾಕ್ಲಿಲ್ಲ. ಕಾಡುಮೇಡುಗಳಲ್ಲೆಲ್ಲಾ ಕುರಿ ದನ ಕಾಯ್ದಿದ್ದು. ಆಮೇಲೆ ಏನೋ ನನ್ನ ಮದ್ವೆ ಮಾಡ್ಬೇಕಲ್ಲ ಅಂತ ಒಂದ್ ಮದ್ವೆ ಮಾಡಿದ್ಲು, ಅವ್ನೂ ಎಡಾಂತ್ರದಲ್ಲಿ ಹೊರ್ಟೋದ! ಮುತ್ತೈದೆ ವಯಸ್ಗೆ ಮುಂಡೆಯಾದೆ. ನನ್ಗೆ ಆಮೇಲೆ ಈ ಮನೆ ಕಾಯ್ಕೊಂಡಿತ್ತು! ಕೂಡ್ಕೆ ಮಾಡಿದ್ಲು ನಮ್ಮವ್ವ, ಅಯ್ಯೋ ಬಿಡಿ! ನನ್ ಜೀವ್ನ ನಿಮ್ಗ್ಯಾಕೆ?" ಎಂದು ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳತೊಡಗಿದಳು.

"ಹೋಗ್ಲಿ ಬಿಡಮ್ಮ! ಅಳಬ್ಯಾಡ" ಎಂದು ಅಜೀದರು ಆಕೆಗೆ ಸಮಾಧಾನ ಮಾಡತೊಡಗಿದರು. ಆದರೆ ಚೆನ್ನಯ್ಯ ಹಾಗೂ ಅವನ ಮಕ್ಕಳಿಗೆ ಅಜೀದರ ಅಭಿಪ್ರಾಯ ಒಪ್ಪಿಗೆಯಾಗಿತ್ತು. ಇವ್ಳು ನನ್ನ ಹೆಂಡ್ತಿ ಅಲ್ಲ ಬಿಡಿ ಸಾಮಿ! ಇವ್ಳು ನನ್ ಭಾಗಕ್ಕೆ ನನ್ನ ಮನೆ ದೇವ್ರು ಕಣ! ಬಡವ್ರು ಅಂತ ನನ್ಗೆ ಯಾರೂ ಹೆಣ್ ಕೊಡ್ದೆ ಇದ್ದ ಕಾಲದಲ್ಲಿ – ಇವ್ಳು ನನ್ ಮನೆಗೆ ಭಾಗ್ಯ ಬಂದಂಗ್ ಬಂದ್ಲು, ಜನ–ಮುಂಡೆ ಮದ್ವೆ ಆಗ್ತಾನೆ ಅಂತ ಆಡ್ಕೊಂಡ್ರೂನು ನಾನು ಲೆಕ್ಕಕ್ ಹಾಕ್ಕೊಳ್ದೆ ಮದ್ವಾದೆ! ಬಂದ್ ಕಷ್ಟಸುಖನೆಲ್ಲಾ ಹೊಟ್ಟೆಗಾಕ್ಕೊಂಡು ಇವತ್ತು ಈ ಊರ್ನಲ್ಲಿ ನನ್ನೊಬ್ನ್ ಮನುಷ್ಯನ್ ಮಾಡಿದ್ಲು..' ಎಂದು ಚೆನ್ನಯ್ಯ ಹೆಂಡತಿಯ ದುಃಖದ ಭಾಗಿಯಾದ.

ಪಾತಿಮಾ ಬೂಬಮ್ಮನಿಗೆ ಎಲ್ಲವೂ ಆಶ್ಚರ್ಯವಾಗಿ ಕಾಣತೊಡಗಿತು. ಅಜೀದರು ಒಳ್ಳೆ ಇಕ್ಕಟ್ಟಿಗೆ ಸಿಕ್ಕಿಕೊಂಡಂತಾಗಿತ್ತು. ಜಮೀಲ ನಂಜವ್ವನ ವೇದನೆಯನ್ನು ಮೂಕಳಾಗಿ ನಿಂತು ವೀಕ್ಷಿಸತೊಡಗಿದ್ದಳು. ಕೊನೆಗೆ ಬೂಬಮ್ಮನವರಿಗೆ ಏನನ್ನಿಸಿತೋ, "ಹೋಗಲಿ ಬಿಡು ನಂಜವ್ವ ನಿಮ್ಮ ಮಗ ಬೇರೆ ಕಡೇನೇ ಇರಿಸುವ" ಎಂದರು. ಆದರೆ ತಿಮ್ಮೇಗೌಡ ಅದನ್ನು ಪ್ರತಿಭಟಿಸಿದ. ಈ ನಡುವೆ ನಂಜವ್ವ ತನ್ನ ಬದುಕಿನ ಪಾಡಿನ ಹಾಡನ್ನೇ ಹಾಡುತ್ತಿದ್ದಳು, ಈ ಮನೆಗ್ ಬಂದಾಗ್ನಿಂದ ಗುದ್ಲಿ ಹಿಡಿದು ಅಗೆದಿದ್ದೀನಿ, ಒಳ್ಳೇದ್ ಉಣ್ಲಿಲ್ಲ ಒಳ್ಳೇದ್ ಉಟ್ಕೊಳಿಲ್ಲ. ಎಲ್ಲವನ್ನೂ 'ನನ್ ಮಕ್ಕಳ್ಗೆ, ನನ್ ಮಕ್ಕಳ್ಗೆ' ಅಂತನೆ ತ್ಯಾಗ ಮಾಡ್ದೆ! ತ್ಯಾಪೆ ಸೀರೆ, ಹರ್ಕುಲು ರವಿಕೆ ಇಕ್ಕೊಂಡು ಬಾಣ್ತಿ ಬಸ್ರಿ ಅನ್ದೆ, ಚಳಿಮಳೆ ಅನ್ದೆ, ನನ್ ಗಂಡ, ಮಕ್ಕಳ್ಗೆ ಅಂತ ಜೀವ ತೇದೆ. ಆದ್ರೆ ನನ್ ಮಕ್ಳು ನನ್ ಮ್ಯಾಲೆ ಇವತ್ತು ತಿರ್ಗ್ ಬೀಳಂಗಾದ್ರು, ನೋಡದ್ರ ಸಾಮಿ?" ಎಂದ ಅಜೀದರಿಗೆ ಒಪ್ಪಿಸತೊಡಗಿದಳು.

ಅಜೀದರು, "ಹೋಗಲಿ ಬಿಡಮ್ಮ. ನೀನು ಮಾಡಿದ್ದು ನಿನ್ನ ಮಕ್ಕಳಿಗೆ ತಾನೆ?" ಎಂದು ನಂಜವ್ವನ ಸಾಂತ್ವನಗೊಳಿಸಿದರು. ಆಗ ಆಕೆ, "ಸರಿ ಸಾಮಿ ನಿಮ್ಗೆ ಇಷ್ಟ ಬಂದಂಗ್ ಮಾಡಿ, ನಾನು ಇನ್ನು ಒಂದ್

ಮಾತೂ ಆಡೋದಿಲ್ಲ" ಎಂದು ಸುಮ್ಮನೆ ಕಲ್ಲಿನಂತೆ ಕೂತುಬಿಟ್ಟಳು.

"ನಮ್ಮವ್ವನ್ದು ಹಳೆ ಪುರಾಣ ತಪ್ಪಿದ್ದಲ್ಲ. ಯಾವಾಗ್ಲು ಇದ್ದದ್ದೆ ಬನ್ನಿ ಸಾರ್" ಎಂದು ರಾಜಣ್ಣ ಹೊರಡಲು ಅವಸರಿಸಿದಾಗ ಪಾತಿಮಾ ಬೂಬಮ್ಮನಿಗೆ ಆಶ್ಚರ್ಯವಾಯಿತು. ಮತ್ತೊಮ್ಮೆ ಅಜೀದರು,

ತಮ್ಮ ಮಗನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುವುದರ ಬಗ್ಗೆ ಚೆನ್ನಯ್ಯನಿಗೆ ಕೇಳಿ ಖಾತ್ರಿ ಮಾಡಿಕೊಂಡರು. ಪಾತಿಮಾ ಬೂಬಮ್ಮ ನಂಜವ್ವನಿಗೆ, "ನಗು ನಗುತ್ತಾ ಕಳಿಸಿಕೊಡಿ ನಂಜವ್ವ, ನಿಮ್ಮ ಮಗನೂ ಮೊಟ್ಟ ಮೊದಲು ಬೆಂಗಳೂರಿಗೆ ಬರ್ತಾ ಇದ್ದಾರೆ!" ಎಂದಳು. ನಂಜವ್ವ ಕೂತಲ್ಲಿಂದ ಎದ್ದು ಬಂದಳು. ಎಷ್ಟೇ ಆಗಲಿ, ಹೆತ್ತ ಕರುಳಲ್ಲವೆ ಅವಳದು?

ತಿಮ್ಮೇಗೌಡ ಅರ್ಧಕೊರೆಯ ಅಕ್ಕಿಮೂಟೆಯನ್ನು ಹೆಗಲ ಮೇಲೆ ಎತ್ತಿ ಮಡಗಿಕೊಂಡ. ರಾಜಣ್ಣ ತನ್ನ ತಮ್ಮಂದಿರಿಗೆ, ತಂಗಿಗೆ 'ಹೋಗಿ ಬರುತ್ತೇನೆ' ಎಂದು ಹೇಳಿ ಹೊರಟ. ಪಾತಿಮಾ ಬೂಬಮ್ಮ ಭಾಗ್ಯಳ ಕೈಗೆ 'ಬೇಡ ಬೇಡ ಅಂದರೂ ಹತ್ತು ರೂಪಾಯಿನ ಒಂದು ನೋಟನ್ನು ತುರುಕಿದರು. ಜಮೀಲ, ಭಾಗ್ಯಳಿಗೆ 'ಹೋಗಿ ಬರ್ತಿನಿ" ಎಂದು ಹೇಳಿ ಹೊರಟಳು. ಭಾಗ್ಯ, ಜಮೀಲಳಿಗೆ ಮತ್ತೊಮ್ಮೆ ಬರುವಂತೆ ಕೇಳಿಕೊಂಡಳು, ಆಕೆಗೆ ಜಮೀಲ ಎಷ್ಟು ಒಳ್ಳೆ ಹುಡುಗಿ, ಎಷ್ಟು ಚೆನ್ನಾಗಿದ್ದಾಳೆ ಅನ್ನಿಸಿತ್ತು. ನಂಜವ್ವನೂ ದುರ್ಗಕ್ಕೆ ಹೋಗಿ ಅವರನ್ನೆಲ್ಲಾ ಬಸ್ಸು ಹತ್ತಿಸಿ ಬರುವುದೆಂದು ತೀರ್ಮಾನಿಸಿಕೊಂಡು ಬಂದಳು. ಚೆನ್ನಯ್ಯನೂ ತನ್ನ ಮಗನ ಜೊತೆಯಲ್ಲಿ ಬೆಂಗಳೂರಿಗೆ ಹೋಗಿ ಎರಡ್ಮೂರು ದಿನಗಳು ಅಲ್ಲಿದ್ದು ಅಲ್ಲಿಯ ಯೋಗಕ್ಷೇಮವನ್ನೆಲ್ಲಾ ನೋಡಿಕೊಂಡು, ರಾಜಣ್ಣನಿಗೆ ಧೈರ್ಯ ಹೇಳಿ ಬರುವಂತೆ ತಿಮ್ಮೇಗೌಡ ಸೂಚಿಸಿದ್ದ. ತನ್ನ ಮಗನ ಸೂಚನೆ ಚೆನ್ನಯ್ಯ ಹಾಗೂ ನಂಜವ್ವ ಇಬ್ಬರಿಗೂ ಸರಿ ಅನ್ನಿಸಿತ್ತು. ಅವರು ಹೊರಟಾಗ ಅಸ್ತಿಪಾಳ್ಯದ ಕೆಲವು ಜನ ನಿಂತು ಚೆನ್ನಯ್ಯನ ಹಾಗೂ ಅಜೀದರ ಕುಟುಂಬದ ಪಯಣ ನೋಡುತ್ತಾ, ಅದಕ್ಕೆ ಏನೇನೋ ಅರ್ಥ ಕಟ್ಟುತ್ತಾ ನಿಂತಿದ್ದರು. ಆದರೆ ಚೆನ್ನಯ್ಯ ಹಾಗೂ ಅವನ ಮಕ್ಕಳು ಅದಾವುದನ್ನೂ ಲೆಕ್ಕಿಸದೆ ದಿಟ್ಟವಾಗಿ ಹೊರಟಿದ್ದರು.

ದುರ್ಗಕ್ಕೆ ಬಂದಾಗ ಬೆಂಗಳೂರಿನ ಕಡೆಯ ಬಸ್ಸು ಹೊರಟು ನಿಂತಿತ್ತು. ತಿಮ್ಮೇಗೌಡ ಅಕ್ಕಿ ಮೂಟೆಯನ್ನು ಬಸ್ಸಿನೊಳಕ್ಕೆ ಹಾಕಿ ಅದರ ಉಸ್ತುವಾರಿಯನ್ನು ಬಂದೋಬಸ್ತು ಮಾಡಿದ. ರಾಜಣ್ಣ, ಜಮೀಲ, ಪಾತಿಮ, ಚೆನ್ನಯ್ಯ, ಅಜೀದರೆಲ್ಲರಿಗೂ ಕೂರಲು ಸೀಟು ಸಿಕ್ಕಿತು. ಹೊರಗೆ ನಿಂತಿದ್ದ ತಿಮ್ಮೇಗೌಡ, ನಂಜವ್ವರಿಗೆ, 'ಬರ್ತೀವಿ, ಬರ್ತೀವಿ' ಎಂದು ಬಸ್ಸಿನ ಕಿಟಕಿಯಲ್ಲಿ ಅಜೀದು ಮಾಸ್ತರು ಮತ್ತು ಪಾತಿಮ ಮೇಡಂ ಇಬ್ಬರೂ ಏಕಕಾಲದಲ್ಲಿ ಕೈ ಬೀಸಿದರು. "ಹೋಗ್ ಬರ್ತಿರಾ?' ಎಂದಂದು ನಂಜವ್ವ, ನಂತರ ಮಗನಿಗೆ, ಜ್ವಾಪಾನ ಕಣೋ ಎಲ್ಲಾ ನಿಮ್ಮಮ್ಮ ಹೇಳ್ದಂಗ್ ಕೇಳು!' ಎಂದು ಎಚ್ಚರಿಸಿದ ಳು. ರಾಜಣ್ಣನಿಗೆ ತಾನೊಂದು ಹೊಸ ಪ್ರಪಂಚಕ್ಕೆ ಹೋಗುತ್ತಿದ್ದೇನೆ ಅನ್ನಿಸುತ್ತಿತ್ತು. "ಸೀಟ್ ಸಿಕ್ತೇನವ್ವ ಜಮೀಲ" ಎಂದು ತಿಮ್ಮೇಗೌಡ ಕಿಟಕಿಯಿಂದ ತಲೆ ತೂರಿಸಿ ಕೇಳಿದಾಗ 'ಸಿಕ್ತು' ಅಂದಳು ಆಕೆ. 'ಹೋಗ್ ಬರ್ತಿಯಾ?' ಎಂದ. 'ಹ್ಞೂ' ಅಂದು ಜಮೀಲ ನಕ್ಕಳು.

ಬಸ್ಸು ಹೊರಟಾಗ "ತುಂಬಾ ಕಷ್ಟಬಿದ್ದ ಜೀವ ಅಲ್ಲವಾ ನಂಜವ್ವನದು? ಎಂದು ಪಾತಿಮಾ

ಗಂಡನೊಡನೆ ತಮ್ಮ ಭಾಷೆಯಲ್ಲಿ ಮಾತಿಗಿಳಿದಳು. ನಂಜವ್ವ ತಿಮ್ಮೇಗೌಡ ಊರಿನತ್ತ ತಿರುಗಿದರು. ರಸ್ತೆಯ ಭಾರೆ ಹತ್ತುತ್ತಿದ್ದ ಬಸ್ಸನ್ನೇ ನೋಡುತ್ತಾ ತಿಮ್ಮೇಗೌಡ, "ನಮ್ಮ ಹುಡುಗನ್ಗೆ ಜಮೀಲ ಒಳ್ಳೆ ಜೋಡಿ ಅಲ್ಲೇನವ್ವಾ?" ಎಂದ. ನಂಜವ್ವನಿಗೆ ಸಿಟ್ಟು, ಬಂದು, "ಆ ಚಿಕ್ಕುಡ್ಗುರ್ಗೆ ಆಗ್ಲೇ ಇವ್ನು ಜೋಡಿ ಮಾಡಕ್ಕೊರಟವ್ನೆ! ಹಲ್ಕಾ! ನಡೀಲ ಸುಮ್ನೆ" ಎಂದು ಅವನ ಮುಸುಡಿಗೆ ಎಟುಕಿಸಿ ತಿವಿದಳು. ತಿಮ್ಮೇಗೌಡ ಅವ್ವನ ತಿವಿತವನ್ನು ಮುಟ್ಟಿನೋಡಿಕೊಳ್ಳುತ್ತಾ ಊರಿನ ಕಡೆಗೆ ಹೆಜ್ಜೆ ಹಾಕಿದ.

**ಲೇಖಕರ ಪರಿಚಯ: ಕರೀಗೌಡ ಬೀಚನಹಳ್ಳಿ**

ಕರೀಗೌಡ ಬೀಚನಹಳ್ಳಿ ಅವರು ೧೯೫೧ ಸೆಪ್ಟೆಂಬರ್ ೧೦ರಂದು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಬೀಚನಹಳ್ಳಿಯಲ್ಲಿ ಜನಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು, ವ್ಯಷ್ಟಿ–ಸಮಷ್ಟಿ ಪ್ರಬಂಧ ಮಂಡಿಸಿ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. .ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಂಗದಲ್ಲಿ ಕಾರ್ಯ ನಿರ್ವಹಿಸಿದ ನಿವರು, ಹಂಪಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಸಾರಂಗದ ನಿರ್ದೇಶಕರಾಗಿ ನಂತರ ಕುಲಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಇವರ ಪ್ರಮುಖ ಕೃತಿಗಳೆಂದರೆ ಕರಿಮಣ್ಣಿನ ಗೊಂಬೆಗಳು, ಸಂಧಾನ, ಸಂಜೀವಿನಿ ಮರ. ಜಾತ್ರೆಗಳು, ತೇಜಸ್ವಿ ಕಥೆಗಳ ಅಧ್ಯಯನ, ಸಂಕಥನ. ಮಳೆ ಕೋಗಿಲೆ, ಕಥನ ಕಲೆಯ ನೆಲೆಗಳು, ಚೆಲುವ ಕನ್ನಡ, ಸಿದ್ದರಾಮ ಅನುರೂಪ, ಕಥೆ ಮತ್ತು ಹಾಡು ಮುಂತಾದವು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಬಹುಮಾನ, ಆರ್ಯಭಟ ಪ್ರಶಸ್ತಿ, ಶ್ರೀ ಕೃಷ್ಣ ಆಲನಹಳ್ಳಿ ಕಥಾ ಸ್ಪರ್ಧೆ ಬಹುಮಾನ ಮುಂತಾದ ಹಲವಾರು ಬಹುಮಾನಗಳು ಲಭಿಸಿವೆ.

## ೩.ಅಕ್ಕಯ್

**–ಅಕ್ಕಯ್ ಪದ್ಮಶಾಲಿ, ನಿರೂಪಣೆ: ಡಾ.ಡೊಮಿನಿಕ್.ಡಿ**

ಅಕ್ಕಯ್ ಅಂದರೆ ಯಾರು? ಆಕೆ ಈ ಆಕ್ಟಿವಿಸಂಗೆ ಬಂದದ್ದಾದರೂ ಹೇಗೆ? ಹೀಗೆ ಕಥೆಯನ್ನು ಶುರು ಮಾಡಬಹುದು, ಅಂದರೆ ಈ ಪಯಣವನ್ನು ಬಾಲ್ಯದಿಂದಲೇ ಸುರು ಮಾಡಬಹುದಲ್ಲವೇ...?

ನನ್ನ ಹೆಸರು ಜಗದೀಶ್, ಕೆಳಮಧ್ಯಮ ವರ್ಗದ ಸಣ್ಣ ಕುಟುಂಬದಲ್ಲಿ ಗಂಡಾಗಿ ಹುಟ್ಟಿದ್ದು, ತಂದೆ ಭಾರತೀಯ ರಕ್ಷಣಾ ಸಚಿವಾಲಯದ ಏರೋನಾಟಿಕಲ್ ಡೆವಲಪ್ಮೆಂಟ್ ಸಂಸ್ಥೆಯಲ್ಲಿ ಕಾರ್ಮಿಕರಾಗಿದ್ದರು, ಅಮ್ಮ ಗೃಹಿಣಿ, ಅಂತಹ ಕುಟುಂಬದ ಸಾಮಾನ್ಯ ನಿರೀಕ್ಷೆಯೆಂದರೆ ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣಾಗಿದ್ದರೆ ಸಾಕು ಎನ್ನುವುದು. ಹಾಗೆಯೇ ಆಗಿತ್ತು, ಅಂದರೆ, ಮತ್ತಿಬ್ಬರು ಒಡಹುಟ್ಟಿದವರು ಇದ್ದರು, ಹಿರಿಯಳಾದ ಅಕ್ಕನಿಗೆ ದಲಿತ ವ್ಯಕ್ತಿಯೊಡನೆ ಮದುವೆಯಾಗಿದೆ. ಆಕೆಗೆ ಇಬ್ಬರು ಗಂಡುಮಕ್ಕಳು, ತಮ್ಮನಿಗೆ ರೋಮನ್ ಕ್ಯಾಥೋಲಿಕ್ ಕ್ರೈಸ್ತ ಮಹಿಳೆಯೊಂದಿಗೆ ಮದುವೆಯಾಗಿದ್ದು, ಒಂದು ಮಗು ಇದೆ. ನಾನು ಈ ಇಬ್ಬರ ನಡುವಿನ ಮಗುವಾಗಿದ್ದೆ!

ಅಪ್ಪ–ಅಮ್ಮ ಇಬ್ಬರ ಕಡೆಯಿಂದಲೂ ಸಂಬಂಧಿಕರು ಹೆಚ್ಚು. ಇಂತಹ ಕುಟುಂಬದೊಳಗೆ ನಾನು ಹೆಣ್ಣುತನದತ್ತ ವಾಲಿದೆ. ಹುಡುಗಿಯಾಗಬೇಕೆಂದೇ ಇಚ್ಚಿಸಿದೆ. ಈ ಕುರಿತಂತೆ ಮಾತನಾಡಿದ್ದೂ ಇದೆ! ಗೆಜ್ಜೆ ತೊಟ್ಟು, ಅಮ್ಮನ ಸೀರೆಯುಟ್ಟು ಸಿಂಗಾರ ಮಾಡಿಕೊಳ್ಳುತ್ತಿದ್ದೆ. ಹಾಗೆಯೇ ಟವಲ್ ತೊಟ್ಟು, ಉದ್ದ ಕೂದಲಿನವಳೆಂದು ನಟಿಸುತ್ತಿದ್ದೆ. ಅಕ್ಕನ ಚಪ್ಪಲಿಗಳನ್ನು ಕದ್ದು, ಅವುಗಳಲ್ಲಿ ಹೆಜ್ಜೆಯಿಟ್ಟು ನಡೆಯಲು ಪ್ರಯತ್ನಿಸುತ್ತಿದ್ದೆ. ಸ್ನೇಹಿತರ ನಡುವೆ ಹುಡುಗಿಯಂತೆಯೇ ವರ್ತಿಸುತ್ತಿದ್ದೆ. ತೊಟ್ಟಿದ್ದ ಪ್ಯಾಂಟ್ ಶರ್ಟ್ ನನಗೆ ಚೂಡಿದಾರವೇ ಆಗಿತ್ತು. ನಾನು ಹೆಣ್ಣಿನ ಲಕ್ಷಣಗಳನ್ನು ತೋರುತ್ತಿರುವುದನ್ನು ಪೋಷಕರು ಗಮನಿಸಿದ್ದರು, ಅದಕ್ಕವರು, "ನೀನು ಹುಡುಗನಾಗಿ ಹುಟ್ಟಿದ್ದೀಯ ಹುಡುಗನಂತೆಯೇ ಮಾತನಾಡಬೇಕು. ಗಂಡಸಿನಂತೆಯೇ ನಡೀಬೇಕು" ಎಂದು ಗದರಿಸುತ್ತಿದ್ದರು.

ಈ ಸಮಯದಲ್ಲಿ ಪೋಷಕರು ಏನು ಹೇಳಿದರೂ ಅದರಂತೆ ಮಾಡುತ್ತಿದ್ದೆ. ಹುಡುಗನಂತೆ ದಿಟ್ಟವಾಗಿ ನಡೆಯಲು ಪ್ರಯತ್ನಿಸಿದ್ದೂ ಹೌದು, ಹುಡುಗನಂತೆ ವರ್ತಿಸಲು, ಮಾತನಾಡಲು ಪ್ರಯತ್ನಿಸಿದಷ್ಟು ಕಷ್ಟವೇ ಆಗುತ್ತಿತ್ತು.ಹೀಗಿರುವಾಗ, ಎಂಟನೇ ವಯಸ್ಸಿನಲ್ಲಿಯೇ ಹುಡುಗನಲ್ಲ ಹುಡುಗಿಯೆಂದು ಸಂಪೂರ್ಣವಾಗಿ ಅರಿತುಕೊಂಡೆ. ಹುಡುಗಿಯೆಂದು ಗುರುತು ಖಚಿತವಾಗತೊಡಗಿದಂತೆ, ಕುಟುಂಬದಲ್ಲಿನ ಹೆಣ್ಣಿನ ಪಾತ್ರಕ್ಕೆ ಅನುಗುಣವಾಗಿ ವರ್ತಿಸಲು ಆರಂಭಿಸಿದೆ. ಇದನ್ನು ಪೋಷಕರು ಅನೇಕ ಸಲ ನೋಡಿದ್ದರು. 'ನಾನು ಸರಿಯಾಗಿ ವರ್ತಿಸುತ್ತಿಲ್ಲ' ಎನ್ನುತ್ತಿದ್ದರು. ಹೀಗಿರುವಾಗ ಅವರ ನಡೆ ಮತ್ತೊಂದು ಕಡೆಗೆ ಪಲ್ಲಟಗೊಂಡಿತು. ನನ್ನನ್ನು ಹೊಡೆದರು. ನಿಂದಿಸಿದರು. ಕಿರುಕುಳ ನೀಡಿದರು. ಅಲ್ಲಿ ಬಹು ಬಗೆಯ ಚಿತ್ರಹಿಂಸೆ ಇತ್ತು. ಆದರೂ ನನ್ನ ಉದ್ದೇಶ, ಏಕೈಕ ಆಸೆಯೆಂದರೆ, ಹುಡುಗಿಯರೊಂದಿಗೆ ಆಟವಾಡುವುದಾಗಿತ್ತು.

ತಂದೆ ಭಿನ್ನ ಹಿನ್ನೆಲೆಯಿಂದ ಬಂದವರಾಗಿದ್ದರು.ತಮ್ಮ ಘನತೆ, ಪ್ರತಿಷ್ಠೆಯ ಬಗ್ಗೆ ಆತಂಕಗೊಂಡಿದ್ದರು. ಹೀಗಿರುವಾಗ, ನನ್ನ ವರ್ತನೆಯು ಕುರಿತು ನೆಂಟರು ಸ್ನೇಹಿತರು, ನೆರೆಹೊರೆಯವರು ಯಾವಾಗಲೂ ಕೀಟಲೆ ಮಾಡುತ್ತಿದ್ದರು. 'ನಿಮ್ಮ ಮಗ ಏಕೆ ಹುಡುಗಿಯಂತೆ ವರ್ತಿಸುತ್ತಿದ್ದಾನೆ ಇದು ಸರಿಯಲ್ಲ' ಎನ್ನುತ್ತಿದ್ದರು. ಜನ ನನ್ನನ್ನು ಸಂಗ, ಚಕ್ಕ, ಒಂಬತ್ತು ಮುಂತಾದ ಪದಗಳಿಂದ ಕರೆಯುತ್ತಿದ್ದರು. ಇದು ಬಹಳ ಕಷ್ಟಕರವಾಗಿತ್ತು. ಹೀಗಿರುವಾಗ, ಆ ಚಿಕ್ಕ ವಯಸ್ಸಿನಲ್ಲಿ, ಜನರಿಗೆ ಹಿಂತಿರುಗಿ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಜನ ಏನು ಅಂದರೂ ಅದನ್ನು ಒಪ್ಪಿಕೊಳ್ಳುತ್ತಿದ್ದೆ. ನೆರೆಹೊರೆಯವರು. ಗಂಡಸಿನಂತೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು. ಇವೆಲ್ಲವೂ ನಾವು ಒತ್ತಾಯಪೂರ್ವಕವಾಗಿ ಒಪ್ಪಿಕೊಂಡ ಸಂಗತಿಗಳಾಗಿದ್ದವು.

ಮರೆಯಲಾಗದ ಘಟನೆಯೊಂದು ನೆನಪಿಗೆ ಬರುತ್ತಿದೆ– ಆದೊಂದು ದಿನ ಹುಡುಗಿಯರೊಂದಿಗೆ ಕುಂಟೆಬಿಲ್ಲೆ ಆಟವಾಡುತ್ತಿದ್ದೆ. ತಂದೆ ಉದ್ದ ವಿದ್ಯುತ್ ತಂತಿ ಹಿಡಿದು ಬಂದರು, ಎಲ್ಲರೆದುರೂ ಹೊಡೆಯಲು ಶುರು ಮಾಡಿದರು. ಹೊಡೆಯುತ್ತಲೇ ಬಾಬ್ ಕಟ್ ಕೂದಲನ್ನು ಹಿಡಿದೆಳೆಯುತ್ತಾ ಮನೆಯತ್ತ ಎಳೆದೊಯ್ದರು, ಮನೆಯೊಳಗೆ ಪಾತ್ರೆಯಲ್ಲಿ ಕುದಿಯುತ್ತಿದ್ದ ಬಿಸಿನೀರನ್ನು ಕಾಲುಗಳ ಮೇಲೆ ಸುರಿದರು. ಹಾಗೆ ಮಾಡುವ ಮೂಲಕ ನಾನು ಮತ್ತೆಂದೂ ಹುಡುಗಿಯಂತೆ ವರ್ತಿಸುವದಿಲ್ಲ ಎಂದು ಭಾವಿಸಿದ್ದರು.

ಆಗ ನನಗೆ ಎಂಟು ಅಥವಾ ಒಂಬತ್ತು ವರುಷವಾಗಿತ್ತೆಂದು ಕಾಣುತ್ತೆ. ಜೋರಾಗಿ ಚೀರಿಕೊಂಡೆ. ಕೂಗು ಕೇಳಿದ ಅಕ್ಕಪಕ್ಕದವರೆಲ್ಲ ಅಲ್ಲಿಗೆ ಬಂದು ಏನಾಯಿತೆಂದು ಕೇಳಿದರು. ಆಗ ತಂದೆ, "ಈತ ನನ್ನ ಮಗ. ಈ ರೀತಿ ವರ್ತಿಸುತ್ತಿದ್ದಾನೆ... ನಾನಿಲ್ಲಿ ಕೆಲಸ ಮಾಡುತ್ತಿದ್ದೇನೆ, ಜನ ಅವನನ್ನು ಚಕ್ಕಾ, ಸಂಗ, ಒಂಬತ್ತು ಎಂದು ಕರೆಯುತ್ತಿದ್ದಾರೆ. ನಾ ಇದನ್ನು ಒಪ್ಪಿ ಸುಮ್ಮನಿರಬೇಕಾ...?" ಎಂದರು.

ಕಾಲುಗಳು ಬೆಂದು ಹೋದವು. ಮಾತನಾಡಲು ಸಾಧ್ಯವಾಗುತ್ತಿಲ್ಲ. ತಾಯಿ ನಮ್ಮಿಬ್ಬರ ನಡುವೆ ಬಂದರು, ಒಡಹುಟ್ಟಿದವರು ಬಂದರು. ಆದರೂ ತಂದೆ ಕೋಪ ಕಡಿಮೆಯಾಗಲಿಲ್ಲ. ಈ ಎಲ್ಲದರ ನಂತರ, ಮೂರು ತಿಂಗಳ ಕಾಲ ನನ್ನನ್ನವರು ಮನೆಯಲ್ಲಿ ಕೂಡಿ ಹಾಕಿದ್ದರು, ಎಲ್ಲಿಯೂ ಹೋಗಲಾಗಲಿಲ್ಲ. ಸೂರ್ಯನನ್ನು ನೋಡಲಾಗಲಿಲ್ಲ. ಸ್ನೇಹಿತರನ್ನು ನೋಡಲು ಬಿಡಲಿಲ್ಲ. ಶಾಲೆಗೂ ಹೋಗಲು ಬಿಡಲಿಲ್ಲ.

ಮನೆಯಲ್ಲಿ ಬಂದಿಯಾದ ಆ ಸಮಯದಲ್ಲಿ ಪಾತ್ರೆ ತೊಳೆಯುತ್ತಿದ್ದೆ. ಅಮ್ಮನೊಡನೆ ಅಡಿಗೆ ಮಾಡುವುದು; ಬಟ್ಟೆ ತೊಳೆದು ಮನೆಯನ್ನು ಒರೆಸಿ ಸ್ವಚ್ಛ ಮಾಡುವುದು ಮುಂತಾದ ಕೆಲಸ ಮಾಡುತ್ತಿದ್ದೆ. ಹೀಗೆ, ಮಹಿಳೆಯರು ಮನೆಯಲ್ಲಿ ಏನು ಮಾಡುತ್ತಾರೋ, ಅದಕ್ಕೆ ಹೊಂದಿಕೊಂಡು ನಡೆದೆ. ರಂಗೋಲಿ ಹಾಕುವುದನ್ನು ಇಷ್ಟಪಟ್ಟು ಕಲಿತುಕೊಂಡೆ. ಹೀಗೆ ಏಕಾಂತವಾಗಿ, ಮನೆಯ ಕೆಲಸ ಮಾಡುತ್ತಾ ಹಾಯಾಗಿದ್ದೆ. ಅದು ನನಗೆ ಸಂತಸವನ್ನೂ ನೀಡಿತ್ತು. ಈ ಕೆಲಸಗಳಲ್ಲಿ ತೊಡಗಿದ್ದರಿಂದ ಸಮಯ ಕಳೆಯುತ್ತಿತ್ತು. ಅದನ್ನು ಆನಂದಿಸಿದೆ. ಇದೇ ನನ್ನ ಬದುಕು, ಗುರುತು ಎಂದು ಭಾವಿಸಿದೆ.

ಆ ನಾಲ್ಕು ಗೋಡೆಗಳ ಮಧ್ಯೆ ಖುಷಿಯಾಗಿಯೇ ಇದ್ದೆ. ಹೆತ್ತವರು ಹತ್ತಿರ ಬಂದಾಗ ಗಂಡಸಿನಂತೆ ವರ್ತಿಸಿ, ಗಂಡಸಿನಂತೆ ಹೆಜ್ಜೆ ಹಾಕುತ್ತಿದ್ದೆ. ಇದು ಸುಲಭವಿರಲಿಲ್ಲ. ದನಿ ಅಡಗಿ ಹೋಗಿತ್ತು. ನಾನು ಡಬಲ್ ರೋಲ್ ಮಾಡುತ್ತಿದ್ದೆ. ಹೊರಗೆ ಗಂಡಸು. ಆದರೆ ನನ್ನೊಳಗೆ ಹೆಣ್ಣಾಗಿದ್ದೆ. ಲಿಂಗ

ಸಂಬಂಧವಾದ ಈ ದ್ವಿಪಾತ್ರ ಮನೋರಂಗದಲ್ಲಿ ದೊಡ್ಡ ಗದ್ದಲವನ್ನೇ ಏರ್ಪಡಿಸಿತ್ತು. ತಂದೆಯ ಪ್ರತಿಷ್ಠೆಯ ಕಾರಣ, ನನ್ನನ್ನು ಒಂದು ಗಂಡಸರ ಆಸ್ಪತ್ರೆಗೆ ಕರೆದೊಯ್ಯರು. ವೈದ್ಯರು. ತಂದೆಗೆ 'ಮಗು

ಪಕ್ಕಾ' ಎಂದರು. ಸ್ವಲ್ಪ ಔಷಧಿ ನೀಡಿದರು. ನಂತರ ತಲೆ, ಎದೆ, ಬೆನ್ನು, ಶಿಶ್ನದ ಮೇಲೆ ಒಂದು ರೀತಿಯ ತಂತಿಯನ್ನು ಅಂಟಿಸಲಾರಂಭಿಸಿದರು. ಹೆದರಿಕೆಯಿಂದ ನಡುಗುತ್ತಿದ್ದೆ. ಅಲ್ಲಿ ಏನಾಗುತ್ತಿದೆ ಎಂದೂ ತಿಳಿಯಲಿಲ್ಲ. ಈ ಜನಕ್ಕೆ ಹೇಗೆ ಮುಖಾಮುಖಿಯಾಗೋದು? ವೈದ್ಯರ ಮುಂದೆ ನನ್ನ ಬಟ್ಟೆಗಳನ್ನು ಬಿಚ್ಚಿದರು. ಹೆತ್ತವರಿಗೂ ಅವಮಾನವಾಗಿತ್ತು.

ಎರಡು–ಮೂರು ತಿಂಗಳ ನಂತರ ಒಬ್ಬ ಸಾಂಪ್ರದಾಯಿಕ ವೈದ್ಯರ ಬಳಿ ಕರೆದೊಯ್ದರು. ನನ್ನ ಮೇಲೆ ಎಲ್ಲ ರೀತಿಯ ಪ್ರಯೋಗಗಳನ್ನು ಮಾಡಿದರು. ನನ್ನ ದೇಹದೊಳಗೆ ಯುವುದೋ ದೆವ್ವ ಇದೇಂತ ಬಡಿದರು. ಬೇವು,ನಿಂಬೆ,ಅರಿಶಿನ, ಕುಂಕುಮ ಬಳಸಿದರು. ಕೊನೆಗೆ ಮನೆಗೆ ಬಂದಾಗ, ಏನಾಯಿತು ಎಂದು ನಂಬಲಾಗಲಿಲ್ಲ, ಅದು ತೀರಾ ಚಿತ್ರಹಿಂಸೆಯಾಗಿತ್ತು. ಮತ್ತೆ ಗಂಡಸಿನಂತೆ ವರ್ತಿಸಲಾರಂಭಿಸಿದೆ.

ಹೆತ್ತವರ ನೋಟ, ಸಮಾಜದ ದೃಷ್ಟಿ ನೆರೆಹೊರೆಯವರ ಕಣ್ಣೋಟ, ಸ್ನೇಹಿತರ ನೆಲೆಗಟ್ಟು, ಇವುಗಳನ್ನೆಲ್ಲ ಕುರಿತು ಯೋಚಿಸಿದೆ. ಈ ಸಂದರ್ಭದಲ್ಲಿ ಮಾತನಾಡಲು ನನ್ನವರೆಂದು ಯಾರೂ ಇರಲಿಲ್ಲ.

ಹುಡುಗಿಯರೊಂದಿಗೆ ಆಟವಾಡಲು ಹೋದಾಗ ಹುಡುಗರೊಂದಿಗೆ ಆಟವಾಡುವಂತೆ ಕಳುಹಿಸಿದರೆ, ಹುಡುಗರತ್ತ ಹೋದಾಗ ಹೊರದೊಡುತ್ತಿದ್ದರು. ಪ್ಯಾಂಟ್–ಶರ್ಟನ್ನು ಕೆಳಕ್ಕೆಳೆದು ಕಿರುಕುಳ ನೀಡುತ್ತಿದ್ದರು ಬ್ಯಾಟ್, ಚೆಂಡನ್ನು ಮುಟ್ಟಲು ಬಿಡುತ್ತಿರಲಿಲ್ಲ. ಹುಡುಗಿಯರು ಕುಂಟೆಬಿಲ್ಲೆ ಆಟದಿಂದ ಹೊರ ಹಾಕಿದ್ದರು. ಎಷ್ಟರಮಟ್ಟಿಗೆ ಒಂಟಿತನವನ್ನು ಅನುಭವಿಸಿದೆನೆಂದು ವಿವರಿಸುವುದು ಕಷ್ಟ. ಹುಡುಗರು ಅಥವಾ ಹುಡುಗಿಯರೊಂದಿಗೆ ಆಟವಾಡಲು ಸಾಧ್ಯವಾಗದ ಕಾರಣ ನಾನೇ ಆಟ ಆಡಿಕೊಳ್ಳುತ್ತಿದ್ದೆ. ಇದೆಲ್ಲಾ ಆದ ಮೇಲೂ.. ನಾನೊಬ್ಬಳು ಹೆಣ್ಣು ಎಂದೆ ಮನೆಗೆ ವಾಪಸ್ ಆಗುತ್ತಿದ್ದೆ. ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ಮೇಕಪ್ ಮಾಡಿಕೊಳ್ಳುತ್ತಿದ್ದೆ "ನಾನೇಕೆ ಹೀಗೆ ಮಾಡಿಕೊಳ್ಳುತ್ತಿರುವೆ ಜನರೇಖೆ ಒಪ್ಪಿಕೊಳ್ಳುತ್ತಿಲ್ಲ?" ನನ್ನಷ್ಟಕ್ಕೆ ಕೇಳಿಕೊಳ್ಳುತ್ತಿದ್ದೆ.

ಲಕ್ಷ್ಮಿದೇವತೆಗೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆ. ಈ ದೇವತೆ ನನಗೆ ಅತ್ಯಂತ ಸೌಂದರ್ಯವತಿಯಾಗಿದ್ದಳು. ಅವಳು ಸುಂದರವಾದ ಕಿವಿಯೋಲೆ, ಮೂಗುತಿ, ಉದ್ದ ಕೂದಲು, ತನ್ನ ಸುತ್ತಲೂ ಹೂವನ್ನು ಹೊಂದಿರುವುದಲ್ಲದೆ, ಆಕೆ ಕಮಲದ ಮೇಲೆ ಕುಳಿತಿದ್ದಳು. ಈ ಲಕ್ಷ್ಮಿ ನನಗೆ ತುಂಬಾ ಆಪ್ತಳಾಗಿದ್ದಳು. ಆಕೆಯ ಬಳಿ ಹೋಗಿ ನನ್ನೆಲ್ಲಾ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೆ. ಈ ಎಲ್ಲ ಹಿಂಸೆ ಕಿರುಕುಳವೆಲ್ಲವನ್ನೂ ಹೇಳಿಕೊಳ್ಳುತ್ತಿದ್ದೆ. “ಇವುಗಳಿಂದೆಲ್ಲ ನನಗೆ ಮುಕ್ತಿ ಕೊಡಬಾರದೇ? ಎಂದು ಅಲವತ್ತು ಕೊಳ್ಳುತ್ತಿದ್ದೆ. ಆಕೆ ನಿಜವಾಗಿಯೂ ಅಲ್ಲಿದ್ದಾಳೆಂದು ಭಾವಿಸಿದ್ದೆ.

ನಮ್ಮ ಮನೆ ಬೆಂಗಳೂರಿನ ಮೈಸೂರು ರಸ್ತೆ ಬದಿಯಲ್ಲಿರುವ ಚಾಮರಾಜ ಪೇಟೆಯ ಟೋಲ್‌ಗೇಟಿನಲ್ಲಿತ್ತು. ಅಲ್ಲಿ ಬ್ರಾಹ್ಮಣರದ್ದೇ ಸಾಮ್ರಾಜ್ಯ, ತಂದೆ ರಕ್ಷಣಾ ಸಚಿವಾಲಯದಲ್ಲಿ ಕೆಲಸ ಮಾಡುತ್ತಿದ್ದರಾದ್ದರಿಂದ ಒಳ್ಳೆಯ ಸಂಬಳ ಸಿಗುತ್ತಿತ್ತು. ಅವರಂತೂ ಧಾರಾಳ ವ್ಯಕ್ತಿಯಾಗಿದ್ದರು. ಸಾಲ ತೆಗೆದುಕೊಳ್ಳುವ ಅನೇಕರಿಗೆ ಜಾಮೀನು ನೀಡುತ್ತಿದ್ದರು. ಅವರು ಬ್ಯಾಂಕಿಗೆ ಸಾಲವನ್ನು ಸರಿಯಾದ ಸಮಯಕ್ಕೆ ಪಾವತಿಸದಿದ್ದಾಗ, ತಂದೆಯ ಹಣ ಕಡಿತಗೊಳಿಸಲಾಗುತ್ತಿತ್ತು. ಮೂವತ್ತು ವರ್ಷಗಳಿಂದ ಗಳಿಸುತ್ತಿದ್ದ ಸಂಬಳ ಏನೇ ಇರಲಿ, ಅದರಲ್ಲಿ ಬಹುಪಾಲು ೬೫% ರಷ್ಟು ಹಣ ಅತ್ತಲೇ ಹೋಗಿತ್ತು.

ಇದೇ ನಮ್ಮ ಕಡುಬಡತನಕ್ಕೂ ಕಾರಣವಾಯಿತೆಂದರೆ ಯಾರು ನಂಬುವುದಿಲ್ಲ. ನಮ್ಮ ಇಡೀ ಕುಟುಂಬವೇ ಚೂರಾಯಿತು. ಪ್ರತಿದಿನ, ಅಪ್ಪ–ಅಮ್ಮ ಜಗಳವಾಡುತ್ತಿದ್ದರು. ನಾವು ಕಡು ಬಡವರಾದೆವು, ತಿನ್ನಲು ಸಾಕಷ್ಟು ಊಟ, ತೊಡಲು ಬಟ್ಟೆ ಇರುತ್ತಿರಲಿಲ್ಲ. ಕೆಲವೊಮ್ಮೆ ತಿಂಗಳುಗಳೇ ಕಳೆದು ಹೋದರೂ ಶಾಲಾ ಫೀಸು ಕಟ್ಟಲಾಗದೆ ಅನೇಕ ತೊಂದರೆಗಳನ್ನು ಎದುರಿಸಿದ್ದೇನೆ. ಆ ಸನ್ನಿವೇಶದಲ್ಲಿ ಬ್ರಾಹ್ಮಣ ಟೀಚರ್ ಎಂ ಚಂದ್ರಮತಿ ಎನ್ನುವವರು ಒಮ್ಮೆ ನನಗೆ ಬೆಂಬಲವಾಗಿ ನಿಂತು, ಫೀಸು ಕಟ್ಟಿದ್ದರು. (ನಂತರ ತಿಳಿದದ್ದೇನೆಂದರೆ, ಆ ಟೀಚರ್ ಮಗಳೂ ಸಹ ನನ್ನಂತೆಯೇ ಇದ್ದು, ಕೊನೆಗೆ ಎಂಟನೇ ತರಗತಿಯಲ್ಲಿ ಓದುತ್ತಿರುವಾಗ ತನ್ನ ಜೀವವನ್ನು ಕೊನೆಗೊಳಿಸಿಕೊಂಡಿದ್ದ) ಕೆಲವೊಮ್ಮೆ ಪರಿಸ್ಥಿತಿ ಎಷ್ಟು ಹದಗೆಟ್ಟಿರುತ್ತಿತ್ತೆಂದರೆ, ಸತ್ತ ಹೆಣಕ್ಕೆ ಜನ ಇಡುತ್ತಿದ್ದ ಎಡೆಯನ್ನೂ ತಿಂದಿದ್ದಿದೆ. ಅಂತ್ಯಕ್ರಿಯೆ ನಡೆಯುತ್ತಿದ್ದಲ್ಲಿಗೆ ಹೋಗಿ ಆ ಎಡೆಯನ್ನ ಮನೆಗೆ ತಂದು, ಒಡಹುಟ್ಟಿದವರೊಂದಿಗೆ ಹಂಚಿಕೊಳ್ಳುತ್ತಿದ್ದೆ. ಮೃತದೇಹಗಳ ಮೇಲೆ ಇಡುತ್ತಿದ್ದ ಹಣ ತಂದು, ಮನೆಯಲ್ಲಿ ಹಾಲು–ಸಕ್ಕರೆ ತರಲು ಕೊಡುತ್ತಿದ್ದೆ.

ಆ ಸಂದರ್ಭದಲ್ಲಿ ಅಮ್ಮ ಹೇಗಾದರೂ ಮಾಡಿ ಹಸಿವು ನೀಗಿಸಲು ಪ್ರಯತ್ನಿಸುತ್ತಿದ್ದರು. ಕೆಲವೊಮ್ಮೆ ಸಾಂಬಾರ್ ಪುಡಿ ಮಾರಿ, ಅಕ್ಕಿ ತರುತ್ತಿದ್ದರು. ಮತ್ತೆ ಕೆಲವೊಮ್ಮೆ ಸೀರೆಗಳನ್ನು, ಹಿತ್ತಾಳೆ ಪಾತ್ರೆಗಳನ್ನು ಅಡವಿಟ್ಟು ಅಡಿಗೆ ಸಾಮಾನು ತರುತ್ತಿದ್ದರು. ಒಮ್ಮೆ ದೊಡ್ಡಮ್ಮನ ಮನೆಯಲ್ಲಿ ಅಕ್ಕಿ ರಾಶಿ ಮಾಡಿದ್ದರು. ಸ್ವಲ್ಪ ಅಕ್ಕಿ ಕೇಳಿದೆ. ಕೂಡಲೇ ದೊಡ್ಡಮ್ಮ ರಗ್ಗನ್ನು ತಂದು ಅಕ್ಕಿಯ ಮೇಲೆ ಹಾಸಿ, ಮುಚ್ಚಿಬಿಟ್ಟು, ಅಕ್ಕಿಯಿಲ್ಲವೆಂದರು.

ಶಾಲೆಯಲ್ಲಿ, ಎಲ್ಲರೂ ತಮ್ಮ ತಮ್ಮ ಸ್ನೇಹಿತರೊಂದಿಗೆ ಕುಳಿತು ಮಾತನಾಡಲು ಹೋದರೆಂದರೆ, ಅಲ್ಲಿ ಹುಡುಗರ ಬೆಂಚ್, ಹುಡುಗಿಯರ ಬೆಂಚ್ ಇದ್ದವು. ನನಗೆ ಹುಡುಗರ ಬೆಂಚಿನಲ್ಲೇ ಕೂರಲು ಒತ್ತಾಯಿಸಲಾಗುತ್ತಿತ್ತು. ತರಗತಿಯಲ್ಲಿ ಟೀಚರ್ ಕೇಳಿದ ಪ್ರಶ್ನೆಗೆ; ನಾವು ನಿಂತು, ಕೈ ಕಟ್ಟಿಕೊಂಡು ಉತ್ತರಿಸಬೇಕಾಗಿತ್ತು. "ಭಾರತದ ಪ್ರಧಾನಿ ಯಾರು?" ಎಂದು ಶಿಕ್ಷಕರು ಕೇಳಿದರೆ, ನನ್ನ ದನಿಯಲ್ಲೇ ಉತ್ತರ ಹೇಳಿದರೂ ಸಹಪಾಠಿಗಳು ಗೇಲಿ ಮಾಡುತ್ತಿದ್ದರು. ನಿಧಾನವಾಗಿ ನಿರಾಸಕ್ತಿ ಆವರಿಸುತ್ತಿತ್ತು. ಅಂಗಿಯಲ್ಲಿ ಮುಖ ಹುದುಗಿಸಿ ಅಳುತ್ತಿದ್ದೆ, ಪ್ಯಾಂಟ್ ಹರಿದು ಕುಂಡೆ ಕಾಣುತ್ತಿದ್ದಾಗ, ಅದನ್ನು ಕಾಗದದ ಮೂಲಕ ಮುಚ್ಚಿಕೊಳ್ಳುತ್ತಿದ್ದೆ. ನನ್ನೊಂದಿಗೆ ಓದುತ್ತಿದ್ದ ಸಹಪಾಠಿಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದವರು. ಚಾಕೊಲೇಟ್: ಕುರಕಲು ತಿಂಡಿಯನ್ನು ಶಾಲೆಗೆ ತರುತ್ತಿದ್ದರು. ನನಗೆ ಅಂತಹ ತಿಂಡಿಯೇನೂ ಇರಲಿಲ್ಲ. ಅನೇಕ ಸಲ, ನಾವು ತಿನ್ನಬೇಕಾಗಿತ್ತು. ಮನೆಯಲ್ಲಿ ಸರಿಯಾದ ಅಕ್ಕಿ ಇರಲಿಲ್ಲ. ಅಮ್ಮ ಇದ್ದದ್ದರಲ್ಲಿ ಅಡಿಗೆ ಮಾಡುತ್ತಿದ್ದರು, ಅದನ್ನೇ ಶಾಲೆಗೆ ಒಯ್ಯುತ್ತಿದ್ದೆವು. ಹಳಸಿದ ತಿಂಡಿಯನ್ನು ಬಿಸಿ ನೀರಿನೊಂದಿಗೆ ಬೆರೆಸಿ, ಅದಕ್ಕೆ ಸ್ವಲ್ಪ ಉಪ್ಪು ಸೇರಿಸಿ, ಸಣ್ಣ ಬುತ್ತಿ ಮಾಡಿ ಶಾಲೆಗೆ ಒಯ್ಯುತ್ತಿದ್ದೆವು. ಸ್ನೇಹಿತರು ಮಧ್ಯಾಹ್ನದ ಊಟದ ಸಮಯಕ್ಕಾಗಿ ಸಂತಸದಿಂದ ಕಾಯುತ್ತಿದ್ದರು, ಯಾವಾಗ ಅವರು ನನ್ನ ತಿಂಡಿಯನ್ನು ಮೂಸುತ್ತಿದ್ದರೋ, 'ಹಳಸಿದೆ' ಎನ್ನುತ್ತಿದ್ದರು, "ಹುಂ.. ಕೆಟ್ಟಿದೆ," ಎಂದು ಕೂಡಲೇ ಡಬ್ಬಿಯನ್ನು ಮುಚ್ಚುತ್ತ, "ಬಹುಶಃ ಅಮ್ಮ ಇದನ್ನು ಗಮನಿಸಿಲ್ಲ ಎನಿಸುತ್ತದೆ. ಅತ್ತ ಚರಂಡಿಗೆ ಬಿಸಾಡುತ್ತೇನೆ" ಎಂದು ಹೇಳಿ, ಶಾಲೆಯ ಹಿಂಬದಿಗೆ ಹೋಗಿ, ಅದನ್ನೇ ತಿಂದು ಹಿಂತಿರುಗುತ್ತಿದ್ದೆ. ಈ ಸತ್ಯ ಸಂಗತಿಗಳನ್ನು ಸ್ನೇಹಿತರಿಂದ ಮುಚ್ಚಿಡುತ್ತಿದ್ದರಿಂದ ಶಾಲೆಯೇ ಬಹು ಕಷ್ಟಕರವೆನಿಸತೊಡಗಿತು. ನನ್ನ ದನಿ, ದೈಹಿಕ ಹಾವಭಾವ, ಉಡುತ್ತಿದ್ದ ಬಟ್ಟೆ, ಮಾಡಿಕೊಂಡಿದ್ದ ಮೇಕಪ್ – ಇವುಗಳಿಂದಾಗಿ ಜನ ನನಗೆ ಕಿರುಕುಳ ನೀಡುತ್ತಿದ್ದರು. ನಾನು ಯಾವ ಲಿಂಗ ಹೊಂದಿದ್ದೇನೆಂದು ನೋಡಲು ಸ್ನೇಹಿತರಿಗೆ ಯಾವಾಗಲೂ ಕುತೂಹಲ, ಮರೆಯಲಾಗದ ಒಂದು ಘಟನೆ ನಡೆಯಿತು.

ರೇಖಾಗಣಿತ ಕಲಿಯಲು ನಾವು ಕಂಪಾಸ್ ಬಳಸುತ್ತೇವೆ. ಅದರ ಒಂದು ಬದಿಯಲ್ಲಿ ಸೂಜಿಯಂತೆ ಚೂಪಾದ ತುದಿ ಇರುತ್ತದೆ. ಒಂದು ತರಗತಿಯಲ್ಲಿ ಶಿಕ್ಷಕರು ಕೇಳಿದ ಪ್ರಶ್ನೆಗೆ ಉತ್ತರಿಸಲು,

ಕೈ ಕಟ್ಟಿ ಎದ್ದು ನಿಂತೆ. ನನಗೆ ಗೊತ್ತಿಲ್ಲದೆ ಸ್ನೇಹಿತರು ಕಂಪಾಸನ್ನು ಕೂರುವಲ್ಲಿ ಇಟ್ಟಿದ್ದರು. ಅದರ ಮೇಲೆಯೇ ಕುಳಿತುಕೊಳ್ಳಲು ದೂಡಿದರು. ಕೂತ ರಭಸಕ್ಕೆ ಕಂಪಾಸ್ ಸೂಜಿ ಕುಂಡೆಗೆ ಆಳವಾಗಿ ಚುಚ್ಚಿತು, ರಕ್ತ ಸೋರಿತ್ತಲ್ಲದೆ ನೋವು ನನ್ನನ್ನು ಘಾಸಿಗೊಳಿಸಿತ್ತು, ಟೀಚರ್‌ಗೆ ಏನೂ ಹೇಳಲಾಗದೆ ಅಳುತ್ತಾ ಕುಳಿತೆ, ಕುಳಿತ ಜಾಗ, ಕುಂಡೆಯೆಲ್ಲಾ ರಕ್ತಮಯವಾಗಿತ್ತು. ಇದಾದ ನಂತರ, ಶಾಲೆಗೆ ಹೋಗಲಾಗಲೀ, ಯಾರೊಂದಿಗಾದರೂ ಮುಕ್ತಮಾತನಾಡಲಾಗಲೀ ಹೆದರುತ್ತಿದ್ದೆ, ಸ್ನೇಹಿತರೊಡನೆ ಆಹಾರ, ಆಟದ ಸಾಮಾನು, ನೋಟ್‌ಬುಕ್‌ಗಳನ್ನು ಹಂಚಿಕೊಳ್ಳಲು, ಮಾತನಾಡಲು ಭಯವಾಗುತ್ತಿತ್ತು. ಆದರೂ, ಶಾಲೆಯಲ್ಲಿ ಕನ್ನಡ ವಿಷಯದಲ್ಲಿ ಉಳಿದವರಿಗಿಂತ ಹೆಚ್ಚು ಅಂಕ ಪಡೆದು ಬೀಗುತ್ತಿದ್ದೆ. ಇದರಿಂದ, ಟೀಚರ್‌ಗಳು ಸಹ ಕೆಲವೊಮ್ಮ ನನಗೆ ಬೆಂಬಲವಾಗಿ ನಿಲ್ಲುತ್ತಿದ್ದರು. ಈ ಟೀಚರ್‌ಗಳಲ್ಲಿ ನನ್ನನ್ನು ವಿರೋಧಿಸುವವರೂ ಇದ್ದರು, ಮೆಚ್ಚುಗೆ ಸೂಚಿಸುವವರೂ ಇದ್ದರು. ಇದರಿಂದಾಗಿಯಷ್ಟೇ ತರಗತಿಗೆ ಹೋಗಬೇಕೆನಿಸುತ್ತಿತ್ತು. ಈ ಸಂದರ್ಭದಲ್ಲಿ ಮನೆಯಲ್ಲಿ ವಿದ್ಯುತ್ ದೀಪ ಇರಲಿಲ್ಲ. ಬೀದಿ ದೀಪದ ಕೆಳಗೆ ಕೂತು ಓದುತ್ತಿದ್ದೆ.

ಶಾಲೆಯಲ್ಲಿ, ಹುಡುಗ, ಹುಡುಗಿಯರಿಗೆ ಪ್ರತ್ಯೇಕ ಆಟಗಳಿದ್ದವು. ನಾನು ಆದ್ಯತೆ ನೀಡಿದ ಆಟಗಳನ್ನು ಹುಡುಗಿಯರ ಆಟಗಳು ಎಂದೇ ಪರಿಗಣಿಸಲಾಗಿತ್ತು. ಹುಡುಗಿಯರೊಡನೆ ಇರಲು ಬಯಸುತ್ತಿದ್ದೆ. ಆದರೆ ಹೊರ ದೂಡುತ್ತಿದ್ದರು. ಹೀಗೆ ಆಟಗಳಿಂದಲೂ ಹೊರಗುಳಿದೆ. ಇದು ಸಣ್ಣ ವಿಷಯವಾದರೂ ನನಗೆ ಮಾತ್ರ ಅದು ಬಲು ಸೂಕ್ಷ್ಮ ಸಂಗತಿಯಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಈ ಬಿಕ್ಕಟ್ಟಿನಿಂದ ಬಿಡಿಸಿಕೊಳ್ಳುವುದಾದರೂ ಹೇಗೆ? ಶಾಲೆಯಲ್ಲಿ ಸ್ನೇಹಿತರಿಂದಲೇ ತುಂಬಾ ಕಿರುಕುಳವಿತ್ತು. ಶಿಕ್ಷಕರೂ ಸಹ ನನ್ನನ್ನ ಸ್ವೀಕರಿಸಲಿಲ್ಲ. ಎಲ್ಲರಿಂದಲೂ ಪ್ರತ್ಯೇಕಿಸಿ, ಬೇರೆಯ ಟೇಬಲ್, ಕುರ್ಚಿಯಲ್ಲಿ ಕೂರಿಸಿದರು. ಒಮ್ಮೆ ಅವರನ್ನು ಪ್ರಶ್ನಿಸಿದೆ. "ನೀನು ಹೆಚ್ಚಾಗಿ ಹೆಣ್ಣಂತೆ ಇದ್ದೀಯ.." ಎಂದರು. ಹಾಗಿರುವುದೆಂದರೆ ಅದೊಂದು ರೀತಿಯ ಸಾಂಕ್ರಾಮಿಕ ಕಾಯಿಲೆಯಾಗಿ ಇತರ ಮಕ್ಕಳಿಗೂ ಹರಡಬಹುದೆಂಬುದು ಕಲ್ಪನೆಯಾಗಿತ್ತು. ಇದನ್ನು ನೀವು ಎದುರಿಸುವುದಾದರೂ ಹೇಗೆ? ಈ ಸಂಗತಿಗಳ ಕುರಿತು ನಿಮ್ಮ ಕುಟುಂಬದಲ್ಲಿ ನೀವು ಮಾತನಾಡುವುದಾದರೂ ಹೇಗೆ? ಮನೆಯಲ್ಲಿ ಈ ಕುರಿತಂತೆ ಮಾತನಾಡಿದರೆ, ಖಂಡಿತವಾಗಿಯೂ ಬೈಯ್ಯುತ್ತಾರೆಂದು ನನಗೆ ಗೊತ್ತಿತ್ತು. ಆದ್ದರಿಂದಲೇ ಗಂಡಸಿನಂತೆ ವರ್ತಿಸಬೇಕೆಂದು ಒತ್ತಾಯಿಸುತ್ತಿದ್ದರು.ನನ್ನೊಳಗೆ ಆಗುತ್ತಿದ್ದ ಬದಲಾವಣೆಗಳಾಗಲೀ, ಗುರುತಿನ ಚಹರೆಯಾಗಲೀ ಯಾರಿಗೂ ಬೇಡವಾಗಿತ್ತು.ಶಿಕ್ಷಕರಾಗಲೀ, ಸಹಪಾಠಿಗಳಾಗಲೀ, ಒಡಹುಟ್ಟಿದವರಾಗಲೀ, ಸಂಬಂಧಿಕರಾಗಲೀ ನನ್ನನ್ನು ಸ್ವೀಕರಿಸಲಿಲ್ಲ.

**ಲೇಖಕರ ಪರಿಚಯ: ಅಕ್ಕಯ್ ಪದ್ಮಶಾಲಿ**

ಮಂಗಳಮುಖಿ, ಸಾಮಾಜಿಕ ಹಕ್ಕುಗಳ ಹೋರಾಟಗಾರ್ತಿಯಾಗಿ ಅಕ್ಕಯ್ ಪದ್ಮಶಾಲಿ ಅವರು ಗುರುತಿಸಿಕೊಂಡಿದ್ದಾರೆ. ಮೂಲತಃ ಬೆಂಗಳೂರಿನವರು. ಜೀವನ ಪ್ರೀತಿಯ ಕುರಿತು ಪ್ರೇರಣಾತ್ಮಕವಾಗಿ ಮಾತನಾಡುವ ಉತ್ತಮ ವಾಗ್ಮಿ. ಲಿಂಗ ಸಮಾನತೆಯ ಇವರ ಹೋರಾಟಗಳಿಗಾಗಿ ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಶಾಂತಿ ಹಾಗೂ ಶಿಕ್ಷಣಕ್ಕಾಗಿ ಇಂಡಿಯನ್ ವರ್ಚುವಲ್ ಯೂನಿವರ್ಸಿಟಿಯು ಇವರಿಗೆ ಗೌರವ ಡಾಕ್ಟರೇಟ್ ನೀಡಿದೆ.

ತಾನೊಬ್ಬಳು ಹೆಣ್ಣು ಎಂದು ಘೋಷಿಸುವ ಮೂಲಕ ವಾಹನ ಚಾಲನಾ ಪರವಾನಗಿ ಪತ್ರವನ್ನು ಪಡೆದುಕೊಂಡ ದೇಶದ ಏಕೈಕ ವ್ಯಕ್ತಿ ಎಂಬ ಖ್ಯಾತಿ ಇವರಿಗಿದೆ. ವಾಸು ಎನ್ನುವ ತೃತೀಯಲಿಂಗಿಯೊಬ್ಬರಿಗೆ ಕರ್ನಾಟಕದಲ್ಲಿ ವಿವಾಹ ನೋಂದಣಿ ಮೂಲಕ ಮದುವೆಯಾದ ಮೊದಲ ಮಹಿಳೆಯೂ ಹೌದು. ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಕ್ಕಾಗಿ ಅವರು 'ಒಂದೆಡೆ' ಎಂಬ ಸಂಘಟನೆಯನ್ನೂ ಸ್ಥಾಪಿಸಿದ್ದಾರೆ.

## ೩. ಹುಲಿ ಬಂತು ಹುಲಿ! – ಎ.ಸಿ.ಲಕ್ಷ್ಮಣ್ (ಓದು ಪತ್ರ)

ವನ್ಯಜೀವಿ ಸಮೃದ್ಧಿಯ ಪ್ರದೇಶಗಳಾದ ನಾಗರಹೊಳೆ, ಹುಣಸೂರು, ಮಡಿಕೇರಿ ಭಾಗಗಳಲ್ಲಿ ನಾನು ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಅತಿ ದೊಡ್ಡ ಮರದ ದಾಸ್ತಾನುಗಳ ನಿರ್ವಹಣೆ, ನಾಗರಹೊಳೆಯ ಪುನರ್ವಸತಿ ಕಾರ್ಯದ ಸಂಘರ್ಷಗಳು ಮುಂತಾದ ಆಡಳಿತಾತ್ಮಕ ವ್ಯವಹಾರಗಳಲ್ಲಿ ಹೆಚ್ಚಿನ ಸಮಯ ಕಳೆದುಹೋಗುತ್ತಿತ್ತು. ಆದರೂ ವನ್ಯಜೀವಿಗಳ ಬಗೆಗಿನ ನನ್ನ ಆಸಕ್ತಿಯೇನೂ ಕಡಿಮೆಯಾಗಿರಲಿಲ್ಲ. ಸಾಂದರ್ಭಿಕವಾಗಿ ಸಿಗುವ ಬಿಡುವು ಮತ್ತು ಅವಕಾಶಗಳಲ್ಲೇ ವನ್ಯಜೀವಿಗಳನ್ನು ನೋಡಿ ಆನಂದಿಸಬೇಕೆಂಬ ನನಗಿದ್ದ ಆಸೆಯನ್ನು ತಣಿಸಿಕೊಳ್ಳಬೇಕಾಗಿತ್ತು.

ಅರಣ್ಯ ಇಲಾಖೆಗೆ ಸೇರಿದ ಕೆಲವೇ ವರ್ಷಗಳಲ್ಲಿ ಅಪರೂಪದ ವನ್ಯಪ್ರಾಣಿಗಳನ್ನು ನೋಡಿ ಆನಂದಿಸಿದ್ದ ಅದೃಷ್ಟವಂತನಾಗಿದ್ದೆ. ಅಳಿವಿನಂಚಿನಲ್ಲಿರುವ ಸಿಂಗಳೀಕ (Lion Tailed Macqque) ಗಳನ್ನು ಶೃಂಗೇರಿ ಅರಣ್ಯ ವಲಯಕ್ಕೆ ಸೇರಿದ ಕೆರೆಕೊಪ್ಪದಲ್ಲಿ ನೋಡಿದರೆ, ಅಪರೂಪದಲ್ಲಿ ಅಪರೂಪವೆನಿಸಿದ, ನಾಚಿಕೆ ಸ್ವಭಾವದ ಕಪ್ಪು ಚಿರತೆಗಳನ್ನು (Black Panther) ಸಾಗರದ ಅರಣ್ಯಗಳಲ್ಲಿ ದರ್ಶಿಸಿದ್ದೆ. ಎಲ್ಲ ಅರಣ್ಯಾಧಿಕಾರಿಗಳ ಅತಿದೊಡ್ಡ ಆಸೆ ಮತ್ತು ಕನಸೆಂದರೆ, ಪ್ರಾಣಿಗಳಲ್ಲೇ ಅತಿ ಸುಂದರ ಮತ್ತು ಭಯ ತರುವ ಪ್ರಾಣಿಯೆನಿಸಿದ ಹುಲಿಯನ್ನು ಅದರ ನೈಸರ್ಗಿಕ ಪರಿಸರದಲ್ಲಿ ನೋಡುವುದು. ನಮ್ಮ ಅರಣ್ಯ ಇಲಾಖೆಯ ಎಷ್ಟೋ ಅರಣ್ಯಾಧಿಕಾರಿಗಳು ಹುಲಿಯನ್ನು ನೋಡಲಾಗದೇ ನಿವೃತ್ತಿಯಾಗಿದ್ದಾರೆ. ನನಗೆ ಆ ಪಟ್ಟಿಯಲ್ಲಿ ಸೇರುವುದು ಬೇಕಿರಲಿಲ್ಲ. ಎಲ್ಲಾದರೂ ಹುಲಿ ಬೇಟೆಯಾಡಿ, ಬಲಿಯನ್ನು ಬಿಟ್ಟುಹೋಗಿರುವ ಸುದ್ದಿ ತಿಳಿದ ತಕ್ಷಣವೇ ಮಾಹಿತಿ ನೀಡುವಂತೆ ಸಿಬ್ಬಂದಿಗೆ ತಾಕೀತು ಮಾಡಿದ್ದೆ. ನಾನು ವೃತ್ತಿಯಲ್ಲಿ ಅನೇಕ ಬಾರಿ ಹುಲಿ ನೋಡಿರುವೆನಾದರೂ ಹುಲಿಯೊಂದಿಗೆ ಮುಖಾಮುಖಿಯಾದ ಎರಡು ಅಪರೂಪದ ಪ್ರಕರಣಗಳನ್ನು ಮಾತ್ರ ಹಂಚಿಕೊಳ್ಳುತ್ತೇನೆ.

ಮೂರ್ಕಲ್ಲಿನ ಹುಲಿ!

ಹುಣಸೂರು ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿ. ಅದು ಕಡುಬೇಸಗೆಯ ಕಾಲ. ತಾಪಮಾನವು ಮಲೇರಿಯಾ ಪೀಡಿತ ಮನುಷ್ಯನ ಜ್ವರದಂತೆ ದಿನೇ ದಿನೇ ಏರುತ್ತಿತ್ತು. ನಾಗರಹೊಳೆಯ ಅಭಯಾರಣ್ಯದಾದ್ಯಂತ ಚದುರಿಹೋಗಿದ್ದ ಕೆರೆ–ಕುಂಟೆಗಳಲ್ಲಿ, ಝರಿಗಳಲ್ಲಿ ನೀರು ಬತ್ತುತ್ತಾ ಹೋಗುತ್ತಿತ್ತು. ಅದೃಷ್ಟವಶಾತ್ ಕೆಲವು ಕೆರೆ–ಕುಂಟೆಗಳಲ್ಲಿ ಪ್ರಾಣಿಗಳ ದಾಹ ತಣಿಸಲು ನೀರು ಬತ್ತದೆ ಉಳಿದಿತ್ತು. ಮೂರ್ಕಲ್ ಕೆರೆ ಅಂಥದೊಂದು ವರ್ಷಪೂರ್ತಿ ನೀರಿರುವ ಜಲಾಗರ. ವನ್ಯಜೀವಿಗಳ ದಾಹ ಪರಿಹಾರದ ಶಾಶ್ವತ ಕೇಂದ್ರ. ಈ ಕೆರೆಗೆ ನೀರು ಕುಡಿಯಲು ಬರುವ ಬಗೆಬಗೆಯ ಪ್ರಾಣಿಗಳ ವರ್ತನೆಯನ್ನು ವೀಕ್ಷಿಸಲು ಒಂದು ದಿನ ಮೂರ್ಕಲ್ ಕೆರೆಯ ಹತ್ತಿರಕ್ಕೆ ಬಂದೆ. ಮೂರ್ಕಲ್‌ನ ಸಾ ಮಿಲ್ ಮತ್ತು ಕೆರೆಯ ನಡುವಿನ ಹಾದಿಯ ಮಧ್ಯೆ ಗುಂಪಾಗಿ ಬೆಳೆದಿದ್ದ ಪೊದೆಗಳ ನಡುವೆ ಅಡಗಿ ಕೂತೆ. ನನ್ನ ಕುಟುಂಬದ ಸದಸ್ಯರು ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಜೊತೆಗಿದ್ದರು. ಸ್ವಲ್ಪ

ದೂರದಲ್ಲಿ ಮೂರ್ಕಲ್ ಕೆರೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ನನಗೆ ವಿಶೇಷವಾಗಿ ಕಂಡದ್ದೆಂದರೆ, ಪರ್ವತಗಳ ನಡುವಿನಿಂದ ಉದಯಿಸುವ ಸೂರ್ಯನ ಕಿರಣಗಳ ಚಿತ್ರವನ್ನು ನೆನಪಿಸುವಂತೆ ಆ ಕೆರೆಯ ಅಂಚಿನಿಂದ ಕಾಡಿನತ್ತ ರೇಖೆ ಎಳೆದಂತೆ ಹೊರಟ ಸವೆದ ದಾರಿಗಳು. ಅವುಗಳೆಲ್ಲ ನೀರು ಕುಡಿಯಲು ಬರುವ ಪ್ರಾಣಿಗಳು ಸವೆಸಿದ ದಾರಿಗಳು.

ಸಂಜೆ ಸಮೀಪಿಸುತ್ತಿತ್ತು. ಮೊದಲು ಚುಕ್ಕಿ ಜಿಂಕೆಗಳು ಎಚ್ಚರಿಕೆಯಿಂದ ಹಾದಿಯಲ್ಲಿ ನಡೆದು ನೀರಿನ ಹತ್ತಿರ ಬಂದವು. ಅವು ಬಗ್ಗಿ ನೀರನ್ನು ಕುಡಿಯುವಾಗಲೂ ಕಿವಿಯನ್ನು ನಿಮಿರಿಸಿ ಅಪಾಯದ ಸದ್ದನ್ನು ಆಲಿಸುತ್ತಿದ್ದವು. ನೀರಿಗೆ ಮೂತಿ ಇಕ್ಕಿದ್ದರೂ ಕಣ್ಣುಗಳು ಸುತ್ತಲಿನ ಚಲನವಲನಗಳನ್ನು ವೀಕ್ಷಿಸುತ್ತಿದ್ದವು. ಬಲಿ ಪ್ರಾಣಿಗಳು ಅರಣ್ಯದಲ್ಲಿ ಬದುಕುವುದೆಂದರೆ, ದಿನದ ಇಪ್ಪತ್ತನಾಲ್ಕು ಗಂಟೆಯೂ ಎಚ್ಚರದಿಂದಿರಬೇಕು!

ನಂತರದ ಸರದಿ ಕಡವೆಗಳದು. ಅವುಗಳ ಹಿಂಡೊಂದು ಅದೇ ರೀತಿ ಎಚ್ಚರಿಕೆಯಿಂದ ಹೆಜ್ಜೆ ಹಾಕಿ ನೀರಿನ ಬಳಿ ಸಾರಿತು. ಆದರೂ ಕಡವೆ ಹಿಂಡಿನ ಸದಸ್ಯರು ಅಲ್ಲಲ್ಲಿ ನಿಂತು ಸುತ್ತಲೂ ನೋಡಿ ಅಪಾಯವಿಲ್ಲದಿರುವುದನ್ನು ಖಚಿತಪಡಿಸಿಕೊಂಡೇ ಹೆಜ್ಜೆ ಇಡುತ್ತಿದ್ದವು. ಅಪಾಯವಿಲ್ಲದಿರುವುದು ಖಾತ್ರಿಯಾದ ನಂತರ ಒಂದರ ಹಿಂದೆ ಒಂದರಂತೆ ನೀರಿಗೆ ಇಳಿದು ದಾಹ ತಣಿಸಿಕೊಂಡ ಮೇಲೆ ಕಡವೆಗಳು ಹಿಂದಿರುಗತೊಡಗಿದವು. ಕೆಲವು ಕಡವೆಗಳು ಅಪಾಯದ ಸೂಚನೆ ಸಿಕ್ಕರೆ, ಎಚ್ಚರಿಸಲು ಕೆರೆಯ ಅಂಚಿನಲ್ಲಿ ನಿಂತು ಕಾವಲು ಕಾಯುತ್ತಿದ್ದ ದೃಶ್ಯ ಕೂಡ ಕಂಡಿತು! ಕಡವೆಗಳನ್ನು ಲಂಗೂರ್‌ಗಳು ಹಿಂಬಾಲಿಸಿದವು. ಅವುಗಳ ಗುಂಪೊಂದು ಮೆಲ್ಲನೆ ಕಿಚ ಕಿಚ ಶಬ್ದ ಮಾಡುತ್ತಾ, ಹೆಚ್ಚು ಚೇಷ್ಟೆ ಮಾಡದೆ ನೀರನ್ನು ಕುಡಿದು ಹಿಂದಿರುಗಿದವು. ಈ ಎಲ್ಲಾ ಪ್ರಾಣಿಗಳೂ ತಮ್ಮದೇ ನಿರ್ದಿಷ್ಟ ಹಾದಿಯಲ್ಲಿ ನಡೆದು ಕೆರೆಗೆ ಬಂದು ನೀರು ಕುಡಿದು ಅದೇ ದಾರಿಯಲ್ಲಿ ಕಾಡಿಗೆ ಹಿಂದಿರುಗುತ್ತಿದ್ದ ದೃಶ್ಯ ವಿಶೇಷವಾಗಿ ಗಮನ ಸೆಳೆಯಿತು.

ತುಸು ಸಮಯದ ನಂತರ ಆನೆಯ ಹಿಂಡಿನ ಸದ್ದು ಕೇಳಿಸಿತು. ಗಜಪಡೆಯ ಸದಸ್ಯರು ಸಹ ಮಂದ ಹೆಜ್ಜೆ ಹಾಕುತ್ತಾ, ಎಚ್ಚರಿಕೆಯಿಂದ ನೀರಿನೆಡೆಗೆ ನಡೆದು ಬಂದರು. ಅಪಾಯದ ಸೂಚನೆಗಳಿಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡು ಆನೆಗಳು ನೀರಿಗಿಳಿದವು. ಒಮ್ಮೆ ನೀರಿಗೆ ಪ್ರವೇಶಿಸಿದ ನಂತರ ಎಚ್ಚರಿಕೆಯನ್ನು ಗಾಳಿಗೆ ತೂರಿದವು. ಸ್ವಚ್ಛಂದವು ಸಾಮ್ರಾಜ್ಯ ಸ್ಥಾಪಿಸಿತು. ನೀರಿನಲ್ಲಿ ಆನೆಗಳ ಚಿನ್ನಾಟವನ್ನು ನೋಡುವುದೊಂದೆ ಸೊಗಸು. ದೊಡ್ಡ ಆನೆಗಳಲ್ಲಿ ಕೆಲವು ಸೊಂಡಲಿನಿಂದ ನೀರು ಹೀರಿ ಬಾಯೊಳಕ್ಕೆ ಒಂದು ಬಾರಿಗೆ ಎಂಟರಿಂದ ಹತ್ತು ಲೀಟರ್ ಇಳಿಬಿಡುತ್ತಿದ್ದವು. (ಅಂಥದೊಂದು 'ಮಹಾಗುಟುಕ'ನ್ನು ಎಂಟರಿಂದ ಹತ್ತು ಸಾರಿ ಗುಟುಕರಿಸಿದ ನಂತರ ದಾಹ ಇಳಿಯುತ್ತದೆ.) ದಾಹ ತಣಿದ ನಂತರ ಸೊಂಡಿಲಿನಿಂದ ಹೀರಿದ ನೀರನ್ನು ಮೈಮೇಲೆ ಎರಚುವ ಆಟದಲ್ಲಿ ಕೆಲವು ನಿರತವಾದರೆ, ಹಲವು ನೀರಿನಲ್ಲಿ ಸುಖವಾಗಿ ಮಲಗಿ ವಿಶ್ರಮಿಸಿದವು. ನೀರಿನಾಟ ಸಾಕೆನಿಸಿದ ಕೂಡಲೇ ಶಿಸ್ತುಬದ್ಧ ಸೈನಿಕರಂತೆ ಅವು ಎದ್ದು ಕಾಡಿನತ್ತ ಸಾಗಿದವು. ಈ ಮಂದಚರ್ಮಿಗಳ ಸಮೂಹ ಕೆರೆಯಿಂದ ನಿರ್ಗಮಿಸಿದ ಬೆನ್ನಹಿಂದೆಯೇ ಕಾಡೆಮ್ಮೆಗಳ ಹಿಂಡಿನ ಆಗಮನವಾಯಿತು. ಅವುಗಳಿಗೆ ದಾಹ ಎಷ್ಟೇ ಇದ್ದರೂ ಅವಸರದಿಂದ ನೀರಿನತ್ತ ಓಡದೆ ಸಂಯಮದಿಂದ ವರ್ತಿಸುತ್ತಿದ್ದವು. ಯಾವ ಅಪಾಯವೂ ಇಲ್ಲವೆಂಬುದನ್ನು ಖಾತ್ರಿಪಡಿಸಿಕೊಂಡ ನಂತರ ಅವು ಒಂದೊಂದಾಗಿ ನೀರಿಗಿಳಿದು 'ಲೊಚ್' 'ಲೊಚ್'

ಎಂದು ಸದ್ದು ಮಾಡುತ್ತಾ ನೀರು ಹೀರಿದವು.

ಬಾಯಲ್ಲಿ ನೀರು ತುಂಬಿಕೊಂಡ ತಕ್ಷಣ ಪ್ರತಿ ಸಾರಿಯೂ ತಮ್ಮ ತಲೆಯನ್ನು ಮೇಲಕ್ಕೆತ್ತಿ ನೋಡುತ್ತಾ, ಅಪಾಯವಿಲ್ಲದ್ದನ್ನು ಗಮನಿಸಿ ನೀರು ಗುಟುಕರಿಸುತ್ತಿದ್ದವು. ಕತ್ತಲಾಗುತ್ತಿತ್ತು. ನಾವು ಹಲವು ಬಗೆಯ ಪ್ರಾಣಿ–ಪಕ್ಷಿಗಳು ನೀರು ಕುಡಿಯುವುದನ್ನು ನೋಡಿದ ಮೇಲೆ ಹಿಂದಿರುಗಲು ನಿರ್ಧರಿಸಿದೆವು. ನನಗೆ ಇನ್ನೂ ಸ್ವಲ್ಪ ಹೊತ್ತು ಅಲ್ಲೇ ಇದ್ದು ಆ ದೃಶ್ಯಗಳನ್ನು ನೋಡುವ ಪ್ರಬಲ ಇಚ್ಛೆಯಾಯಿತು. ಒಬ್ಬ ಅನುಭವಿ ಫಾರೆಸ್ಟರ್‌ನನ್ನು ಜೊತೆಯಲ್ಲಿರಿಸಿಕೊಂಡು ಉಳಿದ ಕುಟುಂಬದ ಸದಸ್ಯರು ಮತ್ತು ಸಿಬ್ಬಂದಿಯನ್ನು ಅತಿಥಿಗೃಹಕ್ಕೆ ಕಳುಹಿಸಿ ಕಾಲುದಾರಿಯೊಂದನ್ನು ಹಿಡಿದು ಪೊದೆಯೊಂದರ ಹಿಂದೆ ಅವಿತು ನೀರಿನತ್ತ ದೃಷ್ಟಿ ನೆಟ್ಟು ಕುಳಿತೆ.

ಫಾರೆಸ್ಟರ್‌ನ ಗಂಟಲು ಕೆಟ್ಟಿತ್ತು. ಕ್ಷಣ ಕ್ಷಣಕ್ಕೂ ಕೆಮ್ಮುತ್ತಿದ್ದ. ಜೊತೆಯಲ್ಲಿದ್ದರೆ ಕೆಲಸ ಕೆಡುತ್ತದೆಂದು ಭಾವಿಸಿ ನಾವು ಹಿಂದೆ ಅಡಗಿ ಕುಳಿತಿದ್ದ ಪೊದೆಯ ಹತ್ತಿರ ಹೋಗಿ ಕಾಯುವಂತೆ ಹೇಳಿ ಅಲ್ಲಿಗೆ ಕಳುಹಿಸಿದೆ. ಅವನು ಅಲ್ಲಿಂದ ತೆರಳಿದ ಮೇಲೆ ಇಡೀ ಕಾಡೇ ಮೌನವನ್ನು ಹೊದ್ದಂತೆ ನಿಶ್ಶಬ್ದಗೊಂಡಿತು. ನನಗೆ ಅಂಥ ಗಾಢ ಮೌನದಲ್ಲಿ ಕುಳಿತಿರಲು ಯಾಕೋ ಅಂದು ಚಡಪಡಿಕೆ ಕಾಣಿಸಿಕೊಂಡಿತು. ಕೆರೆಯಲ್ಲಿ ನೀರು ಕುಡಿಯಲು ಬಂದ ಹಕ್ಕಿಗಳ ಕೊನೆಯ ತಂಡ ಸಹ ನಿರ್ಗಮಿಸಿತು. ಅದುವರೆವಿಗೂ ಜೀವ ಪ್ರಭೇದಗಳಿಂದ ತುಂಬಿ ತುಳುಕುತ್ತಿದ್ದ ಕೆರೆ ಬರೀ ಜಲಮಯ ತಾಣದಂತೆ ಕಂಡಿತು. ಕಪ್ಪೆಗಳೋ, ಮೀನುಗಳೋ ಪುಳಕ್ ಪುಳಕ್ ಎಂದು ಮಾಡುತ್ತಿದ್ದ ಕ್ಷೀಣ ಸದ್ದನ್ನು ಬಿಟ್ಟರೆ ಕತ್ತಲಿನ ಜೊತೆ ನೀರವತೆಯೂ ತೆರೆಯನ್ನು ಹೊದಿಸಿತು. ಸದಾ ಕಾಲ ಮನುಷ್ಯರಿಂದ ಸುತ್ತುವರಿಯುತ್ತಿದ್ದ ನನ್ನಂಥವನಿಗೆ ಆ ಏಕಾಂಗಿತನವನ್ನು ಅನುಭವಿಸುವುದು ಅಸಹನೀಯವಾಯಿತು. ಆಗ ಹಠಾತ್ತನೆ ಎಷ್ಟೋ ದೂರದಲ್ಲಿ ಕಡವೆಯೊಂದು ಗೊಗ್ಗರು ದನಿಯಲ್ಲಿ ಅಪಾಯದ ಕರೆಯ ಕೂಗು ಹಾಕಿತು. ಆ ಮಬ್ಬುಗತ್ತಲೆಯ ಸಂಜೆಯಲ್ಲಿ ಕಡವೆಯ ಧ್ವನಿ ತರಂಗ ತರಂಗವಾಗಿ ಅನುರಣಿಸಿತು.

ಕಡವೆಯ ದನಿಯನ್ನು ಅನುಸರಿಸಿ ಹತ್ತಿರದ ಮರದ ಮೇಲೆ ನಿಶ್ಚಲವಾಗಿ ಕುಳಿತಿದ್ದ ಲಂಗೂರ್‌ಗಳು ಕಿಚ ಕಿಚನೆ ಸದ್ದು ಮಾಡಿ ಕಾಡಿಗೆ ಅಪಾಯದ ಕರೆಯನ್ನು ರವಾನಿಸಿದವು. ಕೆಲವಂತೂ ನಾನು ಕುಳಿತ ಸ್ಥಳದಿಂದ ಸ್ವಲ್ಪ ದೂರವೇ ಇದ್ದ ಮರದಿಂದ ಕೂಗು ಹಾಕುತ್ತಿದ್ದವು. ಅವುಗಳ ಚಡಪಡಿಕೆಯ ದನಿಯು ಹುಲಿಯೋ ಚಿರತೆಯೋ ಕೆರೆಗೆ ಆಗಮಿಸುತ್ತಿರುವ ಮುನ್ಸೂಚನೆಯ ಕರೆಯಾಗಿತ್ತು. ನಾನು ಕೆರೆಯ ಅಂಚಿನ ಒಂದು ತುದಿಯಿಂದ ಮತ್ತೊಂದು ತುದಿಗೆ ದೃಷ್ಟಿಯನ್ನು ಬೀರುತ್ತಾ ಹುಲಿ ಅಥವಾ ಚಿರತೆ ಯಾವ ಹಾದಿಯಿಂದ ಪ್ರವೇಶಿಸಬಹುದು ಎಂದು ನಿರೀಕ್ಷಿಸುತ್ತಿದ್ದೆ. ಇದ್ದಕ್ಕಿದ್ದಂತೆ ಕಾಡು ಸಂಪೂರ್ಣ ಸ್ತಬ್ಧವಾಯಿತು. ಮೃಗರಾಜನನ್ನು ಗೌರವದಿಂದ ಸ್ವಾಗತಿಸಲು ಇಡೀ ಕಾಡೇ ಮೌನ ಧರಿಸಿ ತಲೆಬಾಗಿದಂತೆ ಕಂಡಿತು. ಆ ಮೌನ ಮತ್ತು ನಿರೀಕ್ಷೆ ನನಗಂತೂ ಸಹಿಸಲಸಾಧ್ಯವಾಗಿತ್ತು. ಹುಲಿ ನೀರು ಕುಡಿಯುವ ದೃಶ್ಯವನ್ನು ಕಣ್ತುಂಬಿಸಿಕೊಳ್ಳಲು ಕಾತರನಾಗಿದ್ದೆ.
ಆಗ ಇದ್ದಕ್ಕಿದ್ದಂತೆ ನನ್ನ ಬೆನ್ನ ಹಿಂದೆ ಮೃದುವಾದ ಹೆಜ್ಜೆಯ ಸಪ್ಪಳ ಕೇಳಿಸಿದವು. ನನ್ನ ಇಡೀ ಶರೀರವೇ ಕಿವಿಯಾದಂತೆನಿಸಿ, ಆ ಶಬ್ದಗಳನ್ನು ಆಲಿಸಿದೆ. ಹೆಜ್ಜೆಯ ಸದ್ದುಗಳು ನಿಧಾನವಾಗಿ ಹತ್ತಿರವಾಗುತ್ತಿರುವುದನ್ನು ಮನಸ್ಸು ಗ್ರಹಿಸಿತು.

ತೀರಾ ಹತ್ತಿರಕ್ಕೆ ಬಂದು ನಂತರ ನಿಂತಂತೆ ಭಾಸವಾಯಿತು. ನನಗರಿವಿಲ್ಲದಂತೆ ಭೀತಿ ನನ್ನನಾವರಿಸಿತ್ತು. ತುಂಬಾ ಕಷ್ಟದಿಂದ ಕುಳಿತಲ್ಲಿಂದಲೇ ಕತ್ತನ್ನು ನಿಧಾನವಾಗಿ ಬಲಕ್ಕೆ ತಿರುಗಿಸಿ,

ಹಿಂಭಾಗದ ದೃಶ್ಯವನ್ನು ನೋಡಲು ಪ್ರಯತ್ನಿಸಿದೆ.

ನಾನು ನೋಡಿದ ಬಿಂಬ ರಕ್ತವನ್ನು ಹೆಪ್ಪುಗಟ್ಟಿಸಿತ್ತು. ಭಯ ಎಂಬುದು ದೇಹ–ಮನಸ್ಸನ್ನು ಆವರಿಸಿಕೊಂಡಂತಹ ಅನುಭವವಾಯಿತು. ಆ ಬಿಂಬ ನಿಜ ಎಂದು ಸ್ಪಷ್ಟವಾದ ಕೂಡಲೇ ಮರಗಟ್ಟಿಹೋದೆ. ನನ್ನ ಹಿಂದೆ ದೊಡ್ಡದೇಹದ ಹುಲಿಯೊಂದು ನಿಂತಿತ್ತು. ಆವರೆಗೂ ಯಾರೂ ಹುಲಿಯನ್ನು ಕಾಡಿನಲ್ಲಿ ಅಷ್ಟು ಹತ್ತಿರದಿಂದ ನೋಡಿರಲಾರರು. ನನಗೂ ಹುಲಿರಾಯನಿಗೂ ಇದ್ದ ಅಂತರ ಕೇವಲ ಇಪ್ಪತ್ತು ಅಡಿಗಳಷ್ಟೆ! ಒಂದು ನೆಗೆತ ಸಾಕಿತ್ತು! ಪ್ರತಿಮೆಯಂತೆ ನಿಶ್ಚಲನಾಗಿ ಉಸಿರಾಡದೇ ಕುಳಿತಿದ್ದೆ. ಆಗ ನನಗರಿಯದಂತೆ ದೊಡ್ಡ ಗಂಟಲಲ್ಲಿ ಕಿರುಚಿಕೊಂಡು ನನ್ನ ಸಿಬ್ಬಂದಿ ಇದ್ದ ಜಾಗದ ಕಡೆಗೆ ವೇಗವಾಗಿ ಓಡಿದೆ. ನನ್ನ ಭಯಂಕರ ಕಿರುಚಾಟವನ್ನು ಕೇಳಿಸಿಕೊಂಡ ಸಿಬ್ಬಂದಿ ಸಹ 'ಹೋ...' ಎಂದು ಕೂಗುತ್ತಾ ಗದ್ದಲವೆಬ್ಬಿಸಿ ನನ್ನ ಕಡೆ ಓಡಿ ಬರತೊಡಗಿದರು.

ಅನಿರೀಕ್ಷಿತವಾಗಿ ಸಂಭವಿಸಿದ ಗದ್ದಲದಿಂದ ಗೊಂದಲಗೊಂಡ ಹುಲಿ ಕಾಡಿನತ್ತ ನೆಗೆದು ಪೊದೆಗಳನ್ನು ಸವರುತ್ತಾ, ನೆಲದಲ್ಲಿ ಬಿದ್ದಿದ್ದ ಕಡ್ಡಿ ಕೊಂಬೆಗಳನ್ನು ತುಳಿದು ಶಬ್ದ ಮಾಡುತ್ತಾ ಕಣ್ಮರೆಯಾಯಿತು. ಅದಕ್ಕೂ ನನ್ನಷ್ಟೇ ಆಘಾತವಾಗಿರಬೇಕು! ಹಾಗೆ ನೋಡಿದರೆ ನಾನು ಹುಲಿಯಿದ್ದ ಜಾಗದಿಂದ ಓಡಿರಲಿಲ್ಲ. ರೆಕ್ಕೆ ಬಿಚ್ಚಿದ ಹಕ್ಕಿಯಂತೆ ಹಾರಿದ್ದೆ. ನನ್ನ ಸಿಬ್ಬಂದಿಯಿರುವ ಸುರಕ್ಷಾ ವಲಯ ತಲುಪುವವರೆಗೂ ನಾನು ಹಾರಿ ಬರುವುದನ್ನು ನಿಲ್ಲಿಸಿರಲಿಲ್ಲ. ಆಘಾತದಿಂದ ಚೇತರಿಸಿಕೊಂಡ ನಂತರ ನಾನು ನಡೆದ ಘಟನೆಯನ್ನು ಅವರಿಗೆ ವಿವರಿಸಿದೆ. ನನ್ನ ಬದುಕಿನ ಅತ್ಯಂತ ಭೀತಿಯ ಪ್ರಸಂಗ ಅದು.

ಕಡವೆ ಮತ್ತು ಲಂಗೂರ್‌ಗಳು ಸದ್ದು ಮಾಡಿದ್ದನ್ನು ಕೇಳಿಸಿಕೊಂಡ ಸಿಬ್ಬಂದಿ, ಹುಲಿಯು ಕೆರೆಗೆ ನೀರು ಕುಡಿಯಲು ಬರುವುದನ್ನು ನಿರೀಕ್ಷಿಸಿದ್ದರು. ಆದರೆ ಅದು ಅನಿರೀಕ್ಷಿತ ದಿಕ್ಕಿನಿಂದ ಬರುತ್ತದೆಂಬ ಕಲ್ಪನೆ ಅವರಿಗಿರಲಿಲ್ಲ. ಸದ್ಯ ಯಾವ ದುರಂತವೂ ಸಂಭವಿಸದೆ ನಾನು ಕ್ಷೇಮವಾಗಿ ಬಂದು ಸೇರಿದ್ದು ಅವರಿಗೆಲ್ಲ ಸಂತೋಷವುಂಟುಮಾಡಿತ್ತು. ನನ್ನ ಭಯಾನಕ ಅನುಭವ ಕ್ರಮೇಣ ಒಂದು ರೋಮಾಂಚನದ ಘಟನೆಯಾಗಿ ಎಲ್ಲ ಕಡೆ ನಿರೂಪಣೆಗೊಂಡಿತ್ತು. ಬದುಕುಳಿದರೆ, ನಾವು ಕಂಡ ಮೃತ್ಯುದರ್ಶನವೂ ಒಂದು ಸವಿಯಬಹುದಾದ ಘಟನೆಯಾಗಿ ಪರಿವರ್ತನೆಯಾಗುವ ಪ್ರಕ್ರಿಯೆ ನನ್ನ ಅನುಭವಕ್ಕೆ ಬಂತು!

ಭಾರತದ ಕಾಡು ಮತ್ತು ವನ್ಯಜೀವಿಗಳ ಬದುಕನ್ನು ಹತ್ತಿರದಿಂದ ಕಂಡು, ಅನುಭವ ಪಡೆದಿದ್ದ ಜಿಮ್ ಕಾರ್ಬೆಟ್ ತನ್ನ ಒಂದು ಪುಸ್ತಕದಲ್ಲಿ ಹುಲಿಯೊಂದರ ವಿಚಿತ್ರ ವರ್ತನೆಯನ್ನು ದಾಖಲಿಸಿರುವುದು ನೆನಪಾಯಿತು. ಒಮ್ಮೆ ಒಂದು ಹುಲಿಗೆ ಅಡ್ಡವಾಗಿ ಅಂಬೆಗಾಲಿಟ್ಟು ತೆವಳುವ ಮಗು ಎದುರಾಗುತ್ತದೆ. ಅಪಾಯದ ಅರಿವಿಲ್ಲದ ಮಗುವಿಗೆ ಹುಲಿಯೊಂದು ಆಟಿಕೆಯಂತೆ ಕಂಡು ಮತ್ತಷ್ಟು ಹತ್ತಿರಕ್ಕೆ ದೇಕುತ್ತದೆ. ಆ ಹುಲಿಯು ಹತ್ತಿರಕ್ಕೆ ಬಂದ ಮಗುವನ್ನು ಮೂಸಿ ನೋಡಿ, ಏನನ್ನೂ ಮಾಡದೆ ಕಾಡಿನೊಳಕ್ಕೆ ತೆರಳುತ್ತದೆ. ನನಗನ್ನಿಸುತ್ತದೆ – ಅದೇ ಘಟನೆಯಂತೆ ನನಗೆ ದರ್ಶನವೀಯಲು ಹುಲಿರಾಯ ನನ್ನ ಹಿಂದೆ ಬಂದು ನಿಂತಿದ್ದನೇನೋ! ಇಲ್ಲದಿದ್ದರೆ ಈ ಘಟನೆಯನ್ನು ಬರೆಯಲು

ನಾನಿರುತ್ತಿರಲಿಲ್ಲ!

ಹುಲಿಯ ಘಟನೆಯ ನಂತರ ಮೂರ್ಕಲ್ ಅತಿಥಿಗೃಹಕ್ಕೆ ವಾಪಸ್ಸಾಗಿ ರಾತ್ರಿಯ ಊಟದ ನಂತರ ಕೆರೆಯ ಬಳಿ ನಾನು ಕಂಡ ದೃಶ್ಯಗಳನ್ನೇ ಮೆಲುಕು ಹಾಕುತ್ತಿದ್ದೆ. ಕಾಡಿನ ಪ್ರಾಣಿಗಳೆಲ್ಲವೂ ದಾಹವನ್ನು ತೀರಿಸಿಕೊಳ್ಳಲು ಬೇಸಗೆಯ ಕಾಲದಲ್ಲಿ ನೀರು ಇರುವ ಕೆರೆಗೆ ಬರುವುದು ರೂಢಿ.

ತಮ್ಮ ದಾಹ ನೀಗಿಸಿಕೊಂಡು ಕತ್ತಲಾಗುವ ವೇಳೆಗೆ ಅವೆಲ್ಲವೂ ತಮ್ಮ ಸುರಕ್ಷಾ ವಲಯವನ್ನು ಸೇರಿಕೊಳ್ಳಬೇಕು. ಅಂದು ಕಂಡ ದೃಶ್ಯವು ಸರಣಿಯಾಗಿ ಬಿಚ್ಚಿಕೊಂಡ ನಂತರ ವನ್ಯಜೀವಿಗಳ ಶಿಸ್ತುಬದ್ಧ ಬದುಕಿನ ವ್ಯವಹಾರದ ದರ್ಶನವಾಯಿತು. ಎಲ್ಲ ಪ್ರಭೇದದ ಪ್ರಾಣಿಗಳಿಗೂ ನೀರು ಕುಡಿಯುವ ತುರ್ತಿದ್ದರೂ, ಗೊಂದಲವಿರಲಿಲ್ಲ. ಒಂದು ಬಗೆಯ ಸಹಬಾಳ್ವೆಯ ಶಿಸ್ತನ್ನು ಅವು ಅಳವಡಿಸಿಕೊಂಡಿದ್ದವು. ಪ್ರತಿಯೊಂದು ಪ್ರಭೇದದ ಪ್ರಾಣಿಗಳು ಕ್ರಮಬದ್ಧವಾಗಿ ಬಂದು ತಮ್ಮ ಕಾರ್ಯ ಮುಗಿದ ಕೂಡಲೇ ಹಿಂದಿರುಗುತ್ತಿದ್ದವು. ಒಂದೊಂದು ಬಗೆಯ ಪ್ರಾಣಿಗಳು ಒಂದೊಂದು ಹಾದಿಯಿಂದ ಕೆರೆಗೆ ಭೇಟಿ ನೀಡುತ್ತಿದ್ದವು. ಅಲ್ಲಿ ಅವಸರವಿರಲಿಲ್ಲ. ಸಾವಧಾನ ಮತ್ತು ಎಚ್ಚರಿಕೆ ಮನೆ ಮಾಡಿತ್ತು. ಮಹಾನಗರಗಳಲ್ಲಿ ಟ್ರಾಫಿಕ್ ಸಿಗ್ನಲ್ ಮತ್ತು ಟ್ರಾಫಿಕ್ ಕಾನ್ಸ್‌ಟೇಬಲ್‌ಗಳಿದ್ದರೂ ನಿಯಮವನ್ನು ಗಾಳಿಗೆ ತೂರಿ ಸಂಚಾರವನ್ನು ಅಸ್ತವ್ಯಸ್ತಗೊಳಿಸುವ ನಾಗರಿಕರ ವರ್ತನೆಯನ್ನು ಕಂಡಾಗಲೆಲ್ಲ ಮೂರ್ಕಲ್ ಬಳಿಯ ಕೆರೆಯಲ್ಲಿ ಕಂಡ ಆ ದೃಶ್ಯ ನೆನಪಾಗುತ್ತದೆ. ನಯ ನಾಜೂಕಿಲ್ಲದ, ಒರಟು, ಅಸಂಸ್ಕೃತ ಮನುಷ್ಯನನ್ನು 'ಕಾಡು ಮನುಷ್ಯ' ಎಂದೂ, ಕಾನೂನು ಕೈಗೆ ತೆಗೆದುಕೊಂಡು ಸ್ವೇಚ್ಛೆಯಿಂದ ವರ್ತಿಸುವುದನ್ನು 'ಅರಣ್ಯ ಕಾನೂನು' (Law of Jungle) ಎಂಬ ಪರಿಭಾಷೆಯಲ್ಲಿ ನಾಗರಿಕರು ಕರೆಯುತ್ತಾರೆ. ಆದರೆ ಇದೊಂದು ಶುದ್ಧ ಅಪನಾಮ.

ಅರಣ್ಯದಲ್ಲಿ ವನ್ಯಜೀವಿಗಳು ಪಾಲಿಸುವ ಕಾನೂನು ಜೀವ ವಿಕಾಸದೊಂದಿಗೆ ಹೆಣೆದುಕೊಂಡ ಸೂತ್ರ. ಅದು ತಾನೂ ಬದುಕಿ ಇತರರನ್ನೂ ಬದುಕಿಸುವ ಸಲುವಾಗಿ ಪಾಲನೆಯಾಗುವ ಬದುಕಿನ ರೀತಿ. ಹಾಗೆ ನೋಡಿದರೆ ನಾಗರಿಕ ಮನುಷ್ಯ ಅರಣ್ಯದ ಕಾನೂನಿನಿಂದ, ಪ್ರಾಣಿಗಳ ವರ್ತನೆಯಿಂದ ಕಲಿತು ಅಳವಡಿಸಿಕೊಳ್ಳಬೇಕಾದ ಅನೇಕ ಪಾಠಗಳಿವೆ. ನಿಸರ್ಗ ನಿರಂತರವಾಗಿ ಪಾಠ ಹೇಳುತ್ತಿರುತ್ತದೆ. ಕಲಿಯುವ ಇಚ್ಛೆ ಇರಬೇಕಷ್ಟೆ. ಕಾಡುಪ್ರಾಣಿ ಎಂದೋ, ಅರಣ್ಯದ ಕಾನೂನು ಎಂದೋ ಪದ ಬಳಸುವ ಮುನ್ನ ನಾಗರಿಕರು ಯೋಚಿಸುವುದೊಳಿತು.

*ಟ್ಯಾಕ್ಸಿಡರ್ಮಿಸ್ಟ್ (ಸತ್ತ ಪ್ರಾಣಿಗಳ ದೇಹದ ಒಳಭಾಗವನ್ನು ತೆಗೆದು ಮೆತ್ತನೆಯ ವಸ್ತುಗಳನ್ನು ತುಂಬಿ ಅದನ್ನು ಸಜೀವ ಪ್ರಾಣಿಯಂತೆ ಮಾಡುವ ಕುಶಲಕರ್ಮಿ. ಚರ್ಮಪ್ರಸಾಧನ ಕಲೆಗಾರ)

**ಲೇಖಕರ ಪರಿಚಯ: ಎ.ಸಿ.ಲಕ್ಷ್ಮಣ**

ಎ.ಸಿ.ಲಕ್ಷ್ಮಣ ರವರು ಕರ್ನಾಟಕದ ಹಿರಿಯ ಅರಣ್ಯಾಧಿಕಾರಿಯಾಗಿ ಅರಣ್ಯ ಸಂರಕ್ಷಣೆ, ಸಂಶೋಧನೆ, ವನತೋಟಗಾರಿಕೆ ಕ್ಷೇತ್ರಗಳಲ್ಲಿ ದುಡಿದವರು. ಮಂಡ್ಯ ಜಿಲ್ಲೆ ಅಗ್ರಹಾರ ಗ್ರಾಮದ ರೈತಾಪಿ ಕುಟುಂಬದಲ್ಲಿ ಜನಿಸಿದ (೨೦–೯–೧೯೩೮) ಇವರು, ತಮ್ಮ ಮೂರೂವರೆ ದಶಕಗಳ ಅರಣ್ಯ

ಸೇವೆಯಲ್ಲಿ ಅರಣ್ಯ ಇಲಾಖೆಯ ಕಾರ್ಯದರ್ಶಿ ಹುದ್ದೆಯೂ ಸೇರಿದಂತೆ ವಿವಿಧ ಹುದ್ದೆಗಳನ್ನು ನಿರ್ವಹಿಸಿ ೧೯೯೬, ಸೆಪ್ಟೆಂಬರ್‌ನಲ್ಲಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯಲ್ಲಿ ನಿವೃತ್ತರಾದರು. ಸೇವೆಯಲ್ಲಿದ್ದಷ್ಟು ದಿನವೂ ಅರಣ್ಯ, ಬೇಸಾಯ ಮತ್ತು ಸಮಾಜ – ಈ ಮೂರರ ಸಮಗ್ರ ಹಿತಚಿಂತನೆಯ ಮೂಲಕ ಸಮಷ್ಟಿಯ ಒಳಿತಿಗಾಗಿ ಮಿಡಿದವರು. ಬಿದಿರಿನ ತಜ್ಞರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ತಿಳಿವಳಿಕೆಯನ್ನು ಹಂಚಿಕೊಂಡಿರುವ ಅವರು, ದೇಶವಿದೇಶದಿಂದ ಬಿದಿರು ಮತ್ತು ಬೆತ್ತದತಳಿಗಳನ್ನು ತಂದು ನಾಡಿಗೆ ಪರಿಚಯಿಸಿದ್ದಾರೆ. 'ದಕ್ಷಿಣ ಭಾರತದ ಬೆತ್ತಗಳು', 'ಕರ್ನಾಟಕ ಅರಣ್ಯ ಸಂಪತ್ತು', 'ಹೊನ್ನಿನ ಮರ ತೇಗ', 'ವನವೆಲ್ಲ ಕಲ್ಪತರು' (ಆತ್ಮಚರಿತ್ರೆ) ಮತ್ತು 'ಕಾಡಿನ ಕಥನಗಳು' ಕೃತಿಗಳನ್ನು ರಚಿಸಿದ್ದಾರೆ. ಈ ಲೇಖನವನ್ನು ಅವರ 'ಕಾಡಿನ ಕಥನಗಳು' ಕೃತಿಯಿಂದ ಆರಿಸಿದೆ.

# ೩. ಸಾವು – ೧೩ ಗಂಟೆಗಳು

೧. ಕೆರೆಗೆ ಹಾರ –ಜನಪದ ಕಥನ ಗೀತೆ

೨. ಒಬ್ಬನಿಗೆ ಎಷ್ಟು ಭೂಮಿ ಬೇಕು? – ಲಿಯೋ ಟಾಲ್‌ಸ್ಟಾಯ್ (ರಂಗನಾಥರಾವ್)

೩. ಸಾವೇ ಮನೆಗೆ ಭೂಷಣ – ಕೆ.ಸತ್ಯ ನಾರಾಯಣ

೪. ಪರಿಸ್ಥಿತಿ– ಮನಸ್ಥಿತಿಗಳಿಗೆ ಆತ್ಮಹತ್ಯೆಯೇ ಪರಿಹಾರವಲ್ಲ! – (ಓದು ಪಠ್ಯ)
ಆರ್.ಎಮ್. ತಿಮ್ಮಾಪೂರ

## ಆಶಯ

**ಸಾವು**

ಸಾವೆಂದರೆ ನಮಗೆ ಭಯ
ನಿಜ ಏಂದರೆ, ನಾವು ಬದುಕಲು ಹೆದರುತ್ತೇವೆ. ನಮಗೆ
ಹೇಗೆ ಬದುಕಬೇಕೋ ತಿಳಿಯದು, ನಮಗೆ ದುಃಖ ಗೊತ್ತು.
ಸಾವು ನಮ್ಮ ಕಟ್ಟಕಡೆಯ ದುಃಖ.

ಬದುಕನ್ನು ಬದುಕು, ಸಾವು ಎಂದು ವಿಂಗಡಿಸುತ್ತೇವೆ.
ಹೀಗಾಗಿ ಸಾವಿನ ನೋವು ಕಾಡುತ್ತದೆ.
ಬೇರಾಗುವ, ಒಂಟಿಯಾಗುವ, ದೂರವಾಗಿಬಿಡುವ ನೋವು.

ಬದುಕು ಸಾವು ಒಂದೇ,
ಅವೆರಡೂ ಬೇರೆ ಬೇರೆ ಸ್ಥಿತಿಗಳಲ್ಲ, ಬದುಕುವುದೆಂದರೆ ಸಾಯುವುದು,
ಪ್ರತಿಯೊಂದಕ್ಕೂ ಸಾಯಬೇಕು, ಪ್ರತಿನಿತ್ಯ ಮರುಹುಟ್ಟು ಆಗಬೇಕು.
ಇದೊಂದು ಸೈದ್ಧಾಂತಿಕ ಹೇಳಿಕೆ ಅಲ್ಲ.
ಆದರೆ ಹಾಗೆ ಬದುಕಿ ಅನುಭವಿಸಿಯೇ ಅದರ ಸತ್ಯ ತಿಳಿಯಬೇಕು.

–ಜಿಡ್ಡು ಕೃಷ್ಣಮೂರ್ತಿ

## ೧. ಕೆರೆಗೆ ಹಾರ – ಜನಪದ ಕಥನ ಗೀತೆ

ಕಲ್ಲನಕೇರಿ ಮಲ್ಲನ ಗೌಡ ಕೆರೆಯೊಂದ ಕಟ್ಟಿಸ್ಯಾನು,
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ,
ಸೆರೆಮುಕ್ಕ ನೀರಿಲ್ಲ ಹೊತ್ತಿಗಿ ತೆಗೆಸ್ಯಾರು,
ಹೊತ್ತಿಗಿ ತೆಗೆಸ್ಯಾರು ಜೋಯಿಸನ ಕೇಳ್ಯಾರು,
'ದೇವ್ರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ',
ಹಿರಿಸೊಸಿ ಮಲ್ಲವ್ವನ ಹಾರವ ಕೊಡಬೇಕು,
ಹಾರವ ಕೊಟ್ಟರ ನೀರು ಬೀಳೋದಂದ್ರು,
"ಹಿರಿಸೊಸಿನ ಕೊಟ್ಟರೆ ಹಿರಿತನಕೆ ಯಾರಿಲ್ಲ",
ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು,
ಹಾರವ ಕೊಡಬೇಕಂತ ಮಾತಾತು ಮನೆಯಾಗ,

ಸಣ್ಣಸೊಸಿ ಭಾಗೀರತಿ ತವರುಮನಿಗೆ ಹೊಂಟಾಳು,
"ಅತ್ತೆವ್ವಾ ನಾ ನಮ್ಮ ತವರುಮನಿಗೆ ಹೋಗತೀನು'"
'ಸರ್ರನೆ ಹೋಗವ್ವಾ ಭರ್ರನೆ ಬಾರವ್ವಾ
ಸಣ್ಣಸೊಸಿ ಭಾಗೀರತಿ ತವರುಮನಿಗೆ ಹೋದಾಳು,
ಮನೆ ಮುಂದ ಹೋಗುದಕ ಅವರಪ್ಪ ಬಂದಾನು,
'ಎಂದಿಲ್ಲದ ಭಾಗೀರತಿ ಇಂದ್ಯಾಕ ಬಂದೆವ್ವಾ?,
ಬಾಡಿದ ಮಾರ್ಯಾಕ ಕಣ್ಣಾಗ ನೀರ್ಯಾಕ?',
"ನಮ್ಮಾವ ನಮ್ಮತ್ತೆ ಬ್ಯಾರೆ ಇಡ್ತಾರಂತೆ",
'ಇಟ್ಟರೆ ಇಡಲೇಳು ಹೊಲಮನಿ ಕೊಡತೆನು',
ಹೊಲಮನಿ ಒಯ್ದು ಹೊಳೆದಂಡ್ಯಾಗ್ಹಾಕಪ್ಪ,

ಅತ್ತತ್ತ ಹೋಗುತ್ತಲೇ ಅವರವ್ವ ಬಂದಳು
'ಎಂದಿಲ್ಲದ ಭಾಗೀರತಿ ಇಂದ್ಯಾಕಳುತಾ ಬಂದೆ?'
"ನಮ್ಮತ್ತೆ ನಮ್ಮಾವ ಬ್ಯಾರೆ ಇಡ್ತಾರಂತೆ"
ಇಟ್ಟರೆ ಇಡಲೇಳು ವಾಲಿಜೋಡು ಕೊಡತೇನೆ"
'ವಾಲಿಯ ಜೋಡೊಯ್ದು ಒಲಿಯಾಗ ಹಾಕವ್ವ'
ಮುಂದಕತ್ತ ಹೋಗುತಲೆ ಅವರಕ್ಕ ಬಂದಳು
ಅವರಕ್ಕ ಬಂದಾಳು ಭಾಗೀರತಿನ್ನ ಕೇಳ್ಯಾಳು
"ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ದುಕ್ಕ"

"ನಮ್ಮತ್ತೆ ನಮ್ಮಾವ ಬ್ಯಾರೆ ಇಡ್ತಾರಂತೆ"
'ಇಟ್ಟರೆ ಇಡಲೇಳ ಮಕ್ಕಳ ಜೋಡಿಗೆ ಕಳವತೇನೆ'
"ಮಕ್ಕಳಿದ್ದರೇನಕ್ಕ ದುಕ್ಕ ಕಳದಾವೇನ?"

ಸಣ್ಣಸೊಸಿ ಭಾಗೀರತಿ ತವರುಮನೆಯ ಬಿಟ್ಟು
ತವರುಮನೆಯ ಬಿಟ್ಟು ಗೆಣತಿ ಮನೆಗೆ ನಡೆದಳು
ತಲಬಾಗಿಲದಾಗ ಗೆಳತಿನ್ನ ಕಂಡಳು
"ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ಅಳುವು?"
ಅಂಜಿ "ಹೇಳಲೆ ಗೆಳತಿ" ಅಳುಕಿ "ಹೇಳಲೆ ಗೆಳತಿ"
'ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ'
"ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ"
'ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕ!'
ಸರ್ರನೆ ಹೋದಳು ಭರ್ರನೆ ಬಂದಳು.

ಬ್ಯಾಳಿಯ ಹಸಮಾಡ್ತ ಬಿಟ್ಟಳು ಕಣ್ಣೀರ
"ಎಂದಿಲ್ಲದ ಭಾಗೀರತಿ ಇಂದ್ಯಾಕ ಕಣ್ಣೀರು"
'ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ'
ಅಕ್ಕಿಯ ಹಸಮಾಡ್ತ ಉಕ್ಕಾವು ಕಣ್ಣೀರು
"ಎಂದಿಲ್ಲದ ಭಾಗೀರತಿ ಇಂದ್ಯಾಕ ಕಣ್ಣೀರು"
'ಅಕ್ಯಾಗಿನ ಹಳ್ಳೊಂದು ಕಣ್ಣಾಗ ಬಿತ್ತತ್ತಿ'
ಉಕ್ಕುವ ನೀರಾಗ ಅಕ್ಕಿಯ ಸುರಿವ್ಯಾರ
ಹತ್ತು ಕೊಪ್ಪರಿಗೆ ನೀರು ಉಕ್ಕಿ ಮಳ್ಳತಿತ್ತು
"ನಿಂಗವ್ವ ಜಳಕ ಮಾಡ ನೀಲವ್ವ ಜಳಕ ಮಾಡ "
ನಿಂಗವ್ವ 'ನಾವೂಲ್ಲೆ' ನೀಲವ್ವ 'ನಾವೂಲ್ಲೆ'
"ಗಂಗವ್ವ ಜಳಕ ಮಾಡ ಗವರವ್ವ ಜಳಕ ಮಾಡ "
ಗಂಗವ್ವ 'ನಾವೂಲ್ಲೆ' ಗವರವ್ವ 'ನಾವೂಲ್ಲೆ'
'ಸಣ್ಣಸೊಸಿ ಬಾಗವ್ವ ನೀನರೆ ಜಳಕ ಮಾಡ '
ಸಣ್ಣಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಬಂಗಾರಬುಟ್ಟಿ ತುಂಬ್ಯಾಳು
ಬಂಗಾರಬುಟ್ಟಿ ತುಂಬ್ಯಾಳು ಸಿಂಗಾರಸಿಂಬಿ ಮಾಡ್ಯಾಳು
ಸಿಂಗಾರಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು

ಮುಂದ ಮುಂದ ಭಾಗೀರತಿ ಹಿಂದಿಂದ ಎಲ್ಲಾರೂ
ಗಂಗಿ ಪೂಜೆ ಮಾಡ್ಯಾರ ಬೆಲಪತ್ರಿ ಏರಿಸ್ಯಾರ
ಬೆಲಪತ್ರಿ ಏರಿಸ್ಯಾರ ಈಬತ್ತೀ ಧರಿಸ್ಯಾರ
ಸೀರಿ ಕುಬುಸ ಏರಿಸ್ಯಾರ ಹೂವಿನ ದಂಡಿ ಮುಡಿಸ್ಯಾರ
ಹೂವಿನ ದಂಡಿ ಮುಡಿಸ್ಯಾರ ನೇವದಿ ಮಾಡ್ಯಾರ
ನೇವದಿ ಮಾಡ್ಯಾರ ಎಲ್ಲಾರು ಉಂಡಾರು
ಎಲ್ಲಾರು ಉಂಡಾರು ಉಳಿದದ್ದು ತುಂಬ್ಯಾರು
ಉಳಿದದ್ದು ತುಂಬ್ಯಾರು ಬಂಗಾರಬುಟ್ಟಿ ಹೊತ್ತಾರು
ಬುಟ್ಟಿ ಹೊತ್ತು ನಡೆದಾರು ಬಂಗಾರ ಬಟ್ಲ ಮರತರು

"ಗಂಗವ್ವ ನೀ ಹೋಗ! ಗವರವ್ವ ನೀ ಹೋಗ"
ಗಂಗವ್ವ 'ನಾವೊಲ್ಲೆ' ಗವರವ್ವ 'ನಾವೊಲ್ಲೆ'
ನಿಂಗವ್ವ ನೀ ಹೋಗ ನೀಲವ್ವ ನೀ ಹೋಗ
ನಿಂಗವ್ವ 'ನಾವೊಲ್ಲೆ' ನೀಲವ್ವ 'ನಾವೊಲ್ಲೆ'
'ಸಣ್ಣಸೊಸಿ ಭಾಗೀರತಿ ನೀ ತರ ಹೋಗವ್ವ'
ಸಣ್ಣ ಸೊಸಿ ಭಾಗೀರತಿ ಬಿರಿ ಬಿರಿ ನಡೆದಾಳು
ಬಿರಿ ಬಿರಿ ಹೋದಾಳು ಬಂಗಾರ ಬಟ್ಲ ತೊಗೊಂಡಳು
ಒಂದು ಮೆಟ್ಲೇರುದಕ ಪಾದಕೆ ಬಂದಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ವೊಣಕಾಲಿಗೆ ಬಂದಾಳು ಗಂಗಿ
ನಾಕು ಮೆಟ್ಲೇರುದಕ ನಡುಮಟ್ಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಳು

ಗಂಡ ಮಾದೇವರಾಯ ದಂಡಿನಾಗೈದಾನು
ದಂಡಿನಾಗೈದಾನು ಕಂಡನು ಕೆಟ್ಟ ಕನಸ
ಸೆಲ್ಯ ಸುಟ್ಹಾಂಗಾತು ಕೋಲು ಮುರಿದಂಗಾತು
ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ದಂಗಾತು
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ

ಹತ್ತಿದ ಬತ್ತಲೆಗುದುರಿ ಒತ್ತಾರ ಬಂದಾನ ಮನೆಗೆ
ಬಂದ ಮಾದೇವನ ತಂದೆತಾಯಿ ನೋಡಿದರು

"ಗಂಗವ್ವ ನೀರು ಕೊಡ ಗವರವ್ವ ನೀರು ಕೊಡ
"ಗಂಗವ್ವ ನೀರು ಕೊಡುದ್ಯಾಕ ಗವರವ್ವ ನೀರು ಕೊಡುದ್ಯಾಕ"
'ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ?'
"ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ"

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ
ಹತ್ತಿದ ಬತ್ತಲೆಗುದುರಿ ಹೊಂಟಾನತ್ತೆ ಮನೆಗೆ
ಬಂದಿರು ಅಳಿಯನ ನೋಡಿ ಅಂದಳು ಅತ್ತೇವ್ವ
"ನಿಂಬೆವ್ವ ನೀರ್ ಕೊಡ ನೀಲವ್ವ ನೀರ್ ಕೊಡ!"
"ನಿಂಬೆವ್ವ ನೀರ್ ಕೊಡುದ್ಯಾಕ ನೀಲವ್ವ ನೀರ್ ಕೊಡುದ್ಯಾಕ?"
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳತ್ತಿ?
"ನಿನ ಮಡದಿ ಭಾಗೀರತಿ ಗೆಣತಿ ಮನೆಗೆ ಹೋಗ್ಯಾಳಪ್ಪ!"
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ
ಹತ್ತಿದ ಬತ್ತಲೆಗುದುರಿ ಗೆಣತಿ ಮನೆಗೆ ಸ್ವಾರಿ
ಬಂದಿರು ಮಾದೇವನ ಕಂಡಾಳು ಗೆಣತೆವ್ವ
"ಬಾಳವ್ವ ನೀರ್ ಕೊಡ ಬಸವ್ವ ನೀರ್ ಕೊಡ"
"ಬಾಳವ್ವ ನೀರ್ ಕೊಡುದ್ಯಾಕ ಬಸವ್ವ ನೀರ್ ಕೊಡುದ್ಯಾಕ!
'ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳಕ್ಕ?"
"ನಿನ ಮಡದಿ ಭಾಗೀರತಿದು ಏನು ಹೇಳಲಿ ಸೋರಿ
ನಿಮ್ಮಪ್ಪ ನಿಮ್ಮವ್ವ ಕೆರೆಗ್ಹಾರ ಕೊಟ್ಟರಂತ"

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದುರಿ
ಹತ್ತಿದ ಬತ್ತಲೆಗುದುರಿ ಹೊಂಟಾನು ಹೌಹಾರಿ;
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು;
"ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ?
ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟ್ಟುಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ"
ಇಟ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರು ಹಾರಿದ ಕೆರೆ ನೀರಾಗ.

***

## ೨. ಒಬ್ಬನಿಗೆ ಎಷ್ಟು ಭೂಮಿ ಬೇಕು?

**– ಲಿಯೋ ಟಾಲ್‌ಸ್ಟಾಯ್ (ಅನು. ರಂಗನಾಥರಾವ್)**

ಅಕ್ಕ, ಹಳ್ಳಿಯಲ್ಲಿದ್ದ ತಂಗಿಯ ಮನೆಗೆ ಬಂದಿದ್ದಳು. ಪಟ್ಟಣದಲ್ಲಿದ್ದ ವರ್ತಕನೊಂದಿಗೆ ಅಕ್ಕನ ಮದುವೆಯಾಗಿತ್ತು. ಹಳ್ಳಿಯ ರೈತನೊಬ್ಬನೊಂದಿಗೆ ತಂಗಿಯ ಮದುವೆಯಾಗಿತ್ತು. ಅಕ್ಕತಂಗಿಯರು ಟೀ ಕುಡಿಯುತ್ತ ಲೋಕಾಭಿರಾಮವಾಗಿ ಮಾತುಕತೆ ನಡೆಸುತ್ತಿದ್ದರು. ಅಕ್ಕ ಪಟ್ಟಣದ ಜೀವನದ ಸೌಕರ್ಯಗಳನ್ನು ಪಟ್ಟಿಮಾಡುತ್ತಾ ಬಡಾಯಿ ಕೊಚ್ಚಿಕೊಳ್ಳಲಾರಂಭಿಸಿದಳು. ತಾವು, ತಮ್ಮ ಮಕ್ಕಳು ಎಷ್ಟು ಅಂದ ಚೆಂದದ ಬಟ್ಟೆಗಳನ್ನು ತೊಡುತ್ತೇವೆ, ಎಷ್ಟೆಲ್ಲ ರುಚಿಕರವಾದ ಊಟ, ತಿಂಡಿ ಪಾನಪೇಯಗಳನ್ನು ತಿಂದುಕುಡಿದು ಆಸ್ವಾದಿಸುತ್ತೇವೆ; ನಾಟಕ–ನೃತ್ಯ, ಸಂಗೀತ ಮೊದಲಾದ ಮನೋರಂಜನೆ, ವಿಹಾರಗಳೇನು; ಇಂಥ ಹಲವಾರು ಸೌಲಭ್ಯ ಸೌಕರ್ಯಗಳಿಂದ ತಾವು ಪಟ್ಟಣದಲ್ಲಿ ಸುಖದಿಂದಿರುವುದಾಗಿ ಅಕ್ಕ ಬಣ್ಣಬಣ್ಣದ ಮಾತುಗಳನ್ನಾಡಿದಳು.

ಅಕ್ಕನ ಬಡಾಯಿ ಕೇಳಿ ತಂಗಿಗೆ ರೇಗಿತು. ವರ್ತಕನ ಜೀವನದ ಭೋಗಲಾಲಸೆಗಳ ಬಗ್ಗೆ ಕೊಂಚ ಹೀನಾಯದಿಂದ ಮಾತಾಡಿದಳು ಹಾಗೂ ಕಷ್ಟಸಹಿಷ್ಣುತೆಗಳ ರೈತಾಪಿ ಜೀವನದ ಬಗ್ಗೆ ಹೆಮ್ಮೆ ಪಟ್ಟಳು. "ನಾನಂತೂ ನಿಮ್ಮ ಥರಾ ಜೀವನಕ್ಕೆ ಆಸೆ ಪಡುವುದಿಲ್ಲ ಅಂಥ ಮಾರ್ಪಾಟು ನಮಗೆ ಬೇಡವೇ ಬೇಡ" ಎಂದಳು ತಂಗಿ.

"ನಾವು ಕಷ್ಟಕಾರ್ಪಣ್ಯಗಳಿಂದ, ನಯನಾಜೂಕುಗಳಿಲ್ಲದೆ ಒರಟೊರಟಾಗಿ ಬದುಕುತಿರಬಹುದು. ಆದರೇನು, ತವಕ–ತಲ್ಲಣಗಳಿಲ್ಲ; ಆತಂಕವಿಲ್ಲ. ನೀವು ನಮಗಿಂತ ಹೆಚ್ಚು ಅನುಕೂಲಗಳಿಂದ, ಸುಖ ಸಂಭ್ರಮಗಳಿಂದಿರುತ್ತಿರಿ; ಎಷ್ಟೋ ವೇಳೆ ನಿಮ್ಮ ಅಗತ್ಯಕ್ಕಿಂತ ಹೆಚ್ಚು ಸಂಪಾದಿಸುವಿರಿ; ಸಂಪಾದಿಸಿದ್ದನ್ನೆಲ್ಲ ಕಳೆದುಕೊಳ್ಳುವುದೂ ಉಂಟು. 'ಲಾಭ–ನಷ್ಟಗಳು ಅವಳಿ ಸೋದರರಿದ್ದಂತೆ' ಅನ್ನುವ ಗಾದೆ ಮಾತು ನಿನಗೆ ಗೊತ್ತಿರಬೇಕಲ್ಲ. ಇಂದು ಶ್ರೀಮಂತರಾಗಿರುವವರು ಅನೇಕ ವೇಳೆ ನಾಳೆ ಹೊತ್ತಿನ ಹಿಡಿಕೂಳಿಗಾಗಿ ಭಿಕ್ಷೆಬೇಡುತ್ತಿರುತ್ತಾರೆ. ನಮ್ಮದು ಕ್ಷೇಮಕರ, ರೈತನ ಬದುಕು ದಷ್ಟಪುಷ್ಟವಲ್ಲ, ಆದರೂ ಸ್ವೈರಣೆಯ ಸುದೀರ್ಘ ಬದುಕು. ನಾವು ಎಂದಿಗೂ ಶ್ರೀಮಂತರಾಗುವುದಿಲ್ಲ, ಆದರೆ ತಿನ್ನಲು, ಉಣ್ಣಲು ಸಾಕಷ್ಟಿರುತ್ತದೆ; ಅದಕ್ಕೆ ಎಂದೂ ಕೊರತೆ ಬರುವುದಿಲ್ಲ."

ತಂಗಿಯ ಮಾತುಕೇಳಿ ಅಕ್ಕ ತಿರಸ್ಕಾರದಿಂದ ಹೇಳಿದಳು: "ಸಾಕು, ನಿನ್ನ ಮಾತು. ದನಕರು, ಹಂದಿಗಳೊಂದಿಗೆ ಬದುಕುವವರು ನೀವು, ನಯನಾಜೂಕು, ರಸಿಕತೆ, ನಡಾವಳಿ ನಿಮಗೇನು ಗೊತ್ತು? ನಿಮ್ಮ ಗಂಡಂದಿರು ಎಷ್ಟೇ ಮೈಮುರಿದು ದುಡಿದರೂ ನೀವು ಹೀಗೆ ಬದುಕುತ್ತ ಒಂದು ದಿನ ತಿಪ್ಪೆಯ ಮೇಲೆ ಸಾಯ್ತಿರಿ.... ನಿಮ್ಮ ಮಕ್ಕಳೂ ಅಷ್ಟೇ." "ಆಗಲಿ, ಆದರೇನಂತೀಗ ತಂಗಿ ಹೇಳಿದಳು:

"ಹೌದು ನಮ್ಮಲ್ಲಿ ನಯನಾಜೂಕುಗಳಿಲ್ಲ. ಒರಟೊರಟು ಜೀವನ, ಆದರೆ ಒಂದಂತೂ ಖಚಿತ ನಾವು ಯಾರ ಮುಂದೆಯೂ ತಲೆ ಬಾಗಿಸಬೇಕಿಲ್ಲ. ಆದರೆ ಪಟ್ಟಣಿಗರಾದ ನೀವು ನಿಮ್ಮ ಸುತ್ತ ನೂರಾರು

ಚಪಲಗಳು, ಆಸೆ ಆಕಾಂಕ್ಷೆಗಳು, ಇವತ್ತು ಎಲ್ಲವೂ ಸರಿಯಾಗಿರಬಹುದು, ನಾಳೆ ಯಾವುದೋ ಒಂದು ದುಷ್ಟ ಸಳತ, ಕೇಡು ಬರಬಹುದು, ಇಸ್ಪೀಟೊ, ಹೆಂಡವೋ ನಿನ್ನ ಗಂಡನಿಗೆ ಅಮರಿಕೊಳ್ಳಬಹುದು. ಆಗ ಸರ್ವನಾಶವಾಗುತ್ತದೆ. ಇಂಥಾದ್ದು ಆಗಿಂದಾಗ್ಗೆ ಆಗುವುದಿಲ್ಲವೆ?" ಮನೆಯ ಯಜಮಾನ ಪಾಹಂ ಮಂಚದ ಮೇಲೆ ಮಲಗಿ ಹೆಂಗಸರು ವಟಗುಟ್ಟುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದ. "ನಿಜ, ನೂರಕ್ಕೆ ನೂರು ನಿಜ. ನಾವು ಬಾಲ್ಯದಿಂದ ಭೂಮಿತಾಯಿಯ ಉಳುಮೆ ಮಾಡುತ್ತಿದ್ದೇವೆ. ರೈತರಾದ ನಮಗೆ ಅಂಥದ್ಯಾವುದಕ್ಕೂ ಪುರಸೊತ್ತೇ ಇಲ್ಲ. ಅಂಥ ಹುಚ್ಚು, ಅವಿವೇಕಗಳು ನಮ್ಮ ತಲೆಗೆ ಹೋಗಲಾರವು. ನಮ್ಮೆಲ್ಲ ಸಮಸ್ಯೆ ಎಂದರೆ ನಮಗೆ ಉಳಲು ಸಾಕಷ್ಟು ಹೊಲಗದ್ದೆಗಳಿಲ್ಲ. ನನಗೆ ಸಾಕಷ್ಟು ಜಮೀನು ಇದ್ದಲ್ಲಿ ನಾನು ಯಾವ ಸೈತಾನನಿಗೂ ಹೆದರುವುದಿಲ್ಲ."

ಹೆಂಗಸರು ಟೀ ಮುಗಿಸಿದರು. ಇನ್ನೂ ಕೊಂಚಹೊತ್ತು ಬಟ್ಟೆಬರೆಗಳ ಬಗ್ಗೆ ಮಾತನಾಡಿ ಮಲಗಿಕೊಂಡರು.ಆದರೆ ಮಂಚದ ಮರೆಯಲ್ಲಿ ಅಡಗಿ ಕುಳಿತಿದ್ದ ಸೈತಾನ ಇವರ ಮಾತೆಲ್ಲವನ್ನೂ ಕೇಳಿಸಿಕೊಂಡಿದ್ದ. ರೈತನ ಹೆಂಡತಿ ತನ್ನ ಗಂಡ ಗರ್ವಪಡುವಂತೆ ಮಾತನಾಡಿದ್ದಳು. ತನಗೆ ಯಥೇಚ್ಛವಾಗಿ ಜಮೀನು ಇದ್ದಿದ್ದಲ್ಲಿ ತಾನು ಸೈತಾನನಿಗೂ ಹೆದರುತ್ತಿರಲಿಲ್ಲ ಎಂದು ಗಂಡ ಹೇಳಿದ್ದ.
"ಆಗಲಿ, ಆಗಲಿ" ಎಂದುಕೊಂಡಿತು ಸೈತಾನ. "ನಮ್ಮ ಮಧ್ಯೆ ಒಂದು ಸೆಣಸಾಟ ನಡೆದೇಬಿಡಲಿ, ನಾನು ನಿನಗೆ ಸಾಕಷ್ಟು ಭೂಮಿಕೊಡುವೆ. ಆ ಭೂಮಿ ಮೂಲಕವೇ ನಿನ್ನನ್ನು ನನ್ನ ಮುಷ್ಟಿಯಲ್ಲಿಟ್ಟುಕೊಳ್ಳುತ್ತೇನೆ."

೨

ಹಳ್ಳಿಗೆ ಹತ್ತಿರದಲ್ಲೇ ಒಬ್ಬಳು ಹೆಂಗಸಿದ್ದಳು. ಅವಳು ಸುಮಾರು ಮುನ್ನೂರು ಎಕರೆಗಳಷ್ಟು ಜಮೀನಿನ ಒಡತಿ. ಮನೆವಾರ್ತೆ ನೋಡಿಕೊಳ್ಳಲು ಪಾರುಪತ್ತೆಗಾರನೊಬ್ಬನನ್ನು ನೇಮಕಮಾಡಿಕೊಳ್ಳುವವರೆಗೆ ರೈತಾಪಿ ಜನರೊಂದಿಗೆ ಅವಳ ಬಾಂಧವ್ಯ ಚೆನ್ನಾಗಿಯೇ ಇತ್ತು. ವೃದ್ಧ ಸಿಪಾಯಿಯಾದ ಪಾರುಪತ್ತೆಗಾರ ಒಕ್ಕಲು ಮಕ್ಕಳಿಗೆ ಜುಲ್ಮಾನೆ ವಿಧಿಸುವುದು ಇದೇ ಮೊದಲಾದ ಶಿಕ್ಷೆಗಳನ್ನು ಕೊಡುತ್ತಿದ್ದ ಪಾಹಾಂ, ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಅವನ ಕುದುರೆ ಜಮೀನ್ದಾರಿಣಿಯ ಓಟ್ ಹೊಲಕ್ಕೆ ನುಗ್ಗಿ ಮೇಯುವುದು, ಅವನ ದನಕರುಗಳು ಅವಳ ತೋಟಕ್ಕೆ ನುಗ್ಗುವದು ಅಥವಾ ಅವಳ ಹುಲ್ಲುಮಾಳಕ್ಕೆ ನುಗ್ಗುವುದು, ಹೀಗೆ ಏನಾದರೂ ಒಂದು ಆಗಿ ಅವನು ದಂಡ ತೆರಬೇಕಾಗುತ್ತಿತ್ತು.

ಪಾಹಾಂ ಗೊಣಗುತ್ತಲೇ ದ೦ಡ ಕೊಡುತ್ತಿದ್ದ. ಇದೇ ಕೋಪದಲ್ಲಿ ಮನೆಗೆ ಹೋಗಿ ಹೆಂಡತಿಯೊಂದಿಗೆ ಜಗಳವಾಡುತ್ತಿದ್ದ. ಈ ಪಾರುಪತ್ಯಗಾರನಿಂದಾಗಿ ಈ ಬೇಸಿಗೆಯುದ್ದಕ್ಕೂ ಪಾಹಾಂಗೆ ಕಷ್ಟನಷ್ಟಗಳೇ ಎದುರಾದವು, ಚಳಿಗಾಲ ಬಂದಷ್ಟೇ ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿಹಾಕಿ ನೆಮ್ಮದಿಯನಿಟ್ಟುಸಿರು ಬಿಟ್ಟ, ದನಕರುಗಳು ಮೇಯಲು ಹೊರಕ್ಕೆ ಹೋಗಲಾಗದ ಕಾರಣ ಅವುಗಳ ಮೇವಿಗಾಗಿ ಕಾರ್ಪಣ್ಯಪಡಬೇಕಾಯಿತಾದರೂ ಕನಿಷ್ಠಪಕ್ಷ ಅವನಿಗೆ ಅವುಗಳು ಅಲೆಮಾರಿಯಾಗಿ ಜಮೀನ್ದಾರಿಣಿಯ ಹೊಲ ತೋಟಗಳಿಗೆ ನುಗ್ಗುವ ಆತಂಕ ತಪ್ಪಿತ್ತು.

ಈ ಹೆಂಗಸು ತನ್ನ ಜಮೀನನ್ನು ಮಾರಾಟ ಮಾಡುವಳೆಂಬ ಸುದ್ದಿ ಈ ಚಳಿಗಾಲದಲ್ಲಿ ಹರಡಿತು. ಹೆದ್ದಾರಿಯಲ್ಲಿರುವ ಪ್ರವಾಸಿಗೃಹದ ಒಡೆಯ ಈ ಜಮೀನನ್ನು ಕೊಳ್ಳಲು ಚೌಕಾಯಿಷಿ ನಡೆಸಿದ್ದಾನೆಂದೂ ಪುಕಾರು ಎದ್ದಿತು. ಇದನ್ನು ತಿಳಿದ ರೈತರು ಎಚ್ಚೆತ್ತುಕೊಂಡರು.

"ಚೆನ್ನಾಯಿತು, ಪ್ರವಾಸಿಗೃಹದ ಒಡೆಯ ಜಮೀನನ್ನು ಕೊಂಡಲ್ಲಿ ಆ ಹೆಂಗಸಿನ ಪಾರುಪತ್ತೆಗಾರನಿಗಿಂತ ಹೆಚ್ಚು ದಂಡಹಾಕುತ್ತಾನೆ. ನಾವೋ ಆ ಜಮೀನನ್ನೇ ನೆಚ್ಚಿ ಬದುಕುವಂತಾಗಿದೆ." –ಎಂದು ಒಕ್ಕಲು ಮಕ್ಕಳಲ್ಲಿ ಚಿಂತೆ ಶುರುವಾಯಿತು.

ರೈತಾಪಿ ಜನರೆಲ್ಲ ತಮ್ಮ ಸಮುದಾಯದ ಪರವಾಗಿ ಜಮೀನ್ದಾರಿಣಿಯ ಮೊರೆಹೊಕ್ಕರು. ಜಮೀನನ್ನು ಪ್ರವಾಸಿಗೃಹದ ಮಾಲೀಕನಿಗೆ ಮಾರುವ ಬದಲು ತಮಗೇ ಕೊಡಬೇಕೆಂಬುದು ಅವರ ಮನವಿಯಾಗಿತ್ತು. ಇಡೀ ಹೊಲ,ತೋಟ,ಗದ್ದೆಗಳಿಗೆ ಉತ್ತಮ ಬೆಲೆಯನ್ನು ಕೊಟ್ಟು ಖರೀದಿಸಿ ಅದನ್ನು ಸಮುದಾಯದ ಆಸ್ತಿಯನ್ನಾಗಿ ಮಾಡಿಕೊಳ್ಳುವುದು ಅವರ ಇರಾದೆಯಾಗಿತ್ತು. ಅವರು ಎರಡೆರಡು ಬಾರಿ ಜಮೀನ್ದಾರಿಣಿಯನ್ನು ಭೇಟಿ ಮಾಡಿ ಮಾತುಕತೆ ನಡೆಸಿದರಾದರೂ ಒಂದು ಇತ್ಯರ್ಥಕ್ಕೆ ಬರಲಾಗಲಿಲ್ಲ. ಕೇಡಿಗನೊಬ್ಬ ಅವರಲ್ಲಿ ಭಿನ್ನಾಭಿಪ್ರಾಯ ಬಿತ್ತಿದ್ದ. ಆದ್ದರಿಂದ ಈ ವಿಚಾರದಲ್ಲಿ ಅವರು ಒಮ್ಮತಕ್ಕೆ ಬರಲಾಗಲಿಲ್ಲ. ಹೀಗಾಗಿ ಅವರು ಪ್ರತ್ಯೇಕ ಪ್ರತ್ಯೇಕವಾಗಿಯೇ ತಮ್ಮ ಸ್ಥಿತಿ ಸಂಪಾದನೆಗಳಿಗನುಸಾರವಾಗಿ ಜಮೀನು ಖರೀದಿಸಲು ನಿರ್ಧರಿಸಿದರು. ಜಮೀನ್ದಾರಿಣಿಯೂ ಇದಕ್ಕೆ ಒಪ್ಪಿದಳು. ತನ್ನ ಪಕ್ಕದ ಮನೆಯವನು ಅರ್ಧಹಣವನ್ನು ಈಗ ಕೊಟ್ಟು ಐವತ್ತು ಎಕರೆ ಜಮೀನು ಖರೀದಿಸಲಿರುವನೆಂದೂ ಬಾಕಿ ಹಣವನ್ನು ಒಂದು ವರ್ಷದ ನಂತರ ಪಡೆಯಲು ಜಮೀನ್ದಾರಿಣಿ ಒಪ್ಪಿದ್ದಾಳೆಂಬುದು ಪಾಹಾಂಗೆ ತಿಳಿಯಿತು, ಪಾಹಾಂಗೆ ಅಸೂಯೆ ಉಂಟಾಯಿತು.

"ನೋಡು, ಇದು ಹೇಗೆ? ಜಮೀನು ಮಾರಾಟಕ್ಕಿದೆ, ಆದರೆ ಅದರಲ್ಲಿ ಒಂದು ಪಾಲೂ ನನಗೆ ದಕ್ಕುತ್ತಿಲ್ಲ. ಅವನು ಹೆಂಡತಿಯ ಹತ್ತಿರ ಪ್ರಸ್ತಾಪಿಸಿದ.

'ಉಳಿದವರು ಆ ಜಮೀನನ್ನು ಖರೀದಿಸುತ್ತಿದ್ದಾರೆ. ನಾವು ಅದರಲ್ಲಿ ಇಪ್ಪತ್ತು ಎಕರೆಯನ್ನಾದರೂ ಕೊಳ್ಳಬೇಕು, ಬರ್ತಾ ಬರ್ತಾ ಬದುಕೋದೆ ಕಷ್ಟವಾಗಿದೆ, ಆ ದರಿದ್ರ ಪಾರುಪತ್ತೆಗಾರ ಜುಲ್ಮಾನೆಯಿಂದ ನಮ್ಮನ್ನು ನಜ್ಜುಗೊಜ್ಜು ಮಾಡ್ತಿದ್ದಾನೆ."

ಆ ಜಮೀನನ್ನು ಹೇಗೆ ಖರೀದಿಸಬಹುದೆಂದು ಮನೆಯವರೆಲ್ಲ ಯೋಚಿಸಲಾರಂಭಿಸಿದರು. ಅವರಲ್ಲಿ ನೂರು ರೂಬೆಲ್‌ಗಳಷ್ಟು ಹಣವಿತ್ತು. ಅವರು ಒಂದು ಕುದುರೆ ಮರಿಯನ್ನೂ ಅರ್ಧದಷ್ಟು ಜೇನು ಗೂಡುಗಳನ್ನೂ ಮಾರಿದರು. ಗಂಡುಮಕ್ಕಳಲ್ಲಿ ಒಬ್ಬನನ್ನು ಜೀತಕ್ಕಿಟ್ಟು ಅವನ ಸಂಬಳವನ್ನು ಮುಂಗಡವಾಗಿ ಪಡೆದುಕೊಂಡರು, ಉಳಿದ ಹಣವನ್ನು ತಮ್ಮ ಭಾವನೆಂಟನಿಂದ ಸಾಲ ತಂದರು. ಹೀಗೆ ಜಮೀನು ಖರೀದಿಗೆ ಬೇಕಾಗಿದ್ದ ಹಣದಲ್ಲಿ ಅರ್ಧದಷ್ಟು ಹಣವನ್ನು ಕೂಡಿಸಿದರು.

ನಂತರ ಪಾಹಾಂ ನಲವತ್ತು ಎಕರೆ ವಿಸ್ತಾರದ ತೋಟವೊಂದನ್ನು ಕೊಳ್ಳಲು ನಿರ್ಧರಿಸಿದ. ಇದರಲ್ಲಿ ಅರ್ಧದಷ್ಟು ಜಾಗದಲ್ಲಿ ಕಾಡು ಬೆಳೆದಿತ್ತು. ಮಾತುಕತೆಗಾಗಿ ಜಮೀನ್ದಾರಿಣಿಯ ಮನೆಗೆ ಹೋದ. ಅವರು ಒಂದು ಒಪ್ಪಂದಕ್ಕೆ ಬಂದರು. ಅವನು ಅವಳ ಕೈಕುಲುಕಿ ಒಂದಿಷ್ಟು ಹಣವನ್ನು ಮುಂಗಡವಾಗಿ ಕೊಟ್ಟ. ಆ ಮೇಲೆ ಅವರು ಪಟ್ಟಣಕ್ಕೆ ಹೋಗಿ ಕ್ರಯಪತ್ರ ನೋಂದಾಯಿಸಿದರು. ಅವನು ಖರೀದಿಯ

ಒಟ್ಟು ಮೊತ್ತದಲ್ಲಿ ಅರ್ಧದಷ್ಟು ಈಗ ಕೊಟ್ಟಿದ್ದ. ಉಳಿದ ಹಣವನ್ನು ಎರಡು ವರ್ಷಗಳೊಳಗೆ, ಪಾವತಿಮಾಡಬೇಕಾಗಿತ್ತು.

ಈಗ ಪಾಹಾಂ ಜಮೀನ್ದಾರ. ಅವನು ಬಿತ್ತನೆ ಬೀಜ ತಂದು ತಾನು ಖರೀದಿಸಿದ ಭೂಮಿಯಲ್ಲಿ ಬಿತ್ತನೆ ಮಾಡಿದ, ಆ ವರ್ಷ ಸುಗ್ಗಿ ಚೆನ್ನಾಗಿತ್ತು. ಹೀಗಾಗಿ ಒಂದು ವರ್ಷದೊಳಗೆ ಜಮೀನ್ದಾರಿಣಿ ಹಾಗೂ ಭಾವನೆಂಟನ ಸಾಲ ತೀರಿಸುವುದು ಸಾಧ್ಯವಾಯಿತು. ಅವನು ಭೂಮಾಲೀಕನಾದ. ಅವನಿಗೆ ಸ್ವಂತ ಜಮೀನಿನಲ್ಲಿ ಉತ್ತುವುದು–ಬಿತ್ತುವುದು, ಬೆಳೆ ಕೊಯಿಲು ಮಾಡುವುದು, ಮರಗಿಡ ಕಡಿಯುವುದು; ಸ್ವಂತ ಗೋಮಾಳದಲ್ಲಿ ದನಕರುಗಳನ್ನು ಮೇಯಿಸುವುದು ಇವೆಲ್ಲ ಸಾಧ್ಯವಾಯಿತು. ತನ್ನ ಹೊಲಗದ್ದೆಗಳನ್ನು ಉಳಲು ಹೋದಾಗ, ಅಥವಾ ಕಾಳು ಬಲಿಯುತ್ತಿದ್ದ ಪೈರನ್ನು ನೋಡಿದಾಗ, ಹುಲ್ಲು ಬೆಳೆದು ನಿಂತ ಗೋಮಾಳ ನೋಡಿದಾಗ ಅವನ ಹೃದಯದಲ್ಲಿ ಸಂತೋಷ ಉಕ್ಕುತ್ತಿತ್ತು. ಅವನ ಜಮೀನಿನಲ್ಲಿ ಬೆಳೆದ ಪೈರು, ಹುಲ್ಲು ಹೂವುಗಳು ವಿಶೇಷವಾಗಿ ಕಂಡವು. ಮೊದಲೆಲ್ಲ ಈ ಜಮೀನಿನ ಬೆಳೆ ಉಳಿದೆಲ್ಲ ಜಮೀನಿನ ಬೆಳೆಯಂತೆ ಕಾಣುತ್ತಿತ್ತು. ಆದರೆ ಈಗ ಉಳಿದ ಜಮೀನಿನ ಬೆಳೆಗಿಂತ ಭಿನ್ನವಾಗಿ ವಿಶೇಷ ಸೊಬಗಿನಿಂದ ಕಂಗೊಳಿಸುತ್ತಿತ್ತು.

೩

ಈಗ ಪಾಹಾಂಗೆ ಸಂತೃಪ್ತಿ. ಎಲ್ಲವೂ ಅವನ ಇಚ್ಛೆಯಂತೆ ಸರಿಯಾಗಿಯೇ ನಡೆದಂತಿತ್ತು. ಆದರೆ ನೆರೆಹೊರೆಯ ರೈತರ ದನಕರುಗಳು ಅವನ ಹೊಲಕ್ಕೆ, ಹುಲ್ಲುಮಾಳಕ್ಕೆ ನುಗ್ಗಿದಾಗ ಕಿರಿಕಿರಿ. ಅವನು ಸಭ್ಯತೆ, ಸೌಜನ್ಯಗಳಿಂದಲೇ ನಿಮ್ಮ ದನಕರುಗಳನ್ನು ನನ್ನ ಹೊಲಕ್ಕೆ ಬಿಡಬೇಡಿ ಎಂದು ನೆರೆಹೊರೆಯ ರೈತರಿಗೆ ಮನವಿ ಮಾಡಿದ, ಆದರೆ ಇದರಿಂದ ಪ್ರಯೋಜನವಾಗಲಿಲ್ಲ. ಸಮುದಾಯದ ಗೋವಳನ್ನು ಹಳ್ಳಿಯ ದನಕರುಗಳನ್ನು ತೊಂಡಲೆಯಲು ಬಿಟ್ಟು ಸುಮ್ಮನೆ ಕೂರುತ್ತಿದ್ದ, ತೊಂಡು ದನಕರುಗಳು ಪಾಹಾಂನ ಹುಲ್ಲುಮಾಳಕ್ಕೆ ನುಗ್ಗುತ್ತಿದ್ದವು. ಇನ್ನು ರಾತ್ರಿ ಹೊತ್ತು ಹುಲ್ಲುಮಾಳಕ್ಕೆ ಹೊಡೆದ ಕುದುರೆಗಳು ಅವನ ಹೊಲಗದ್ದೆಗಳಿಗೆ ನುಗ್ಗಿ ತೆನೆತುಂಬಿದ ಪೈರುಗಳನ್ನು ತಿಂದು ಹಾಕುತ್ತಿದ್ದವು, ಪಾಹಾಂ ಜಾನುವಾರುಗಳನ್ನು ಹೊರಕ್ಕಟ್ಟಿ ಅವುಗಳ ಮಾಲೀಕರನ್ನು ಕ್ಷಮಿಸುತ್ತಲಿದ್ದ. ಇದು ಬಹಳ ನಡೆಯಿತು. ಅವನು ಸಹಿಸಿಕೊಂಡ. ಯಾರ ವಿರುದ್ಧವೂ ಕ್ರಮ ಜರುಗಿಸಲಿಲ್ಲ. ಕೊನೆಗೊಮ್ಮೆ ಅವನ ಸಹನೆಯ ಕಟ್ಟೆಯೊಡೆಯಿತು. ಜಿಲ್ಲಾ ನ್ಯಾಯಾಲಯಕ್ಕೆ ದೂರುಕೊಟ್ಟ. ಈ ಎಲ್ಲ ಕಷ್ಟನಷ್ಟಗಳ ಮೂಲ ರೈತರಿಗೆ ಸಾಕಷ್ಟು ಜಮೀನು ಇಲ್ಲದಿರುವುದು ಎಂಬುದು ಅವನಿಗೆ ತಿಳಿದಿತ್ತು. ಅವರೇನು ದುರುದ್ದೇಶದಿಂದ ಮಾಡುತ್ತಿಲ್ಲ. ಆದರೆ ಇದರಿಂದ ತನಗೆ ಮಾತ್ರ ತೊಂದರೆಯಾಗುತ್ತಿದೆ ಎಂದು ಯೋಚಿಸಿದ.

“ಆದರೆ ಇದನ್ನು ಹೀಗೇ ಮುಂದುವರಿಯಲು ಬಿಡಬಾರದು. ಬಿಟ್ಟಲ್ಲಿ ಅವರು ನನ್ನ ಸರ್ವನಾಶಮಾಡುತ್ತಾರೆ ಅವರಿಗೆ ಪಾಠ ಕಲಿಸಲೇಬೇಕು.” ಅವನು ನೆರೆಹೊರೆಯ ರೈತರನ್ನು ಕರೆದು ಬುದ್ಧಿಮಾತು ಹೇಳಿದ, ಛೀಮಾರಿ ಹಾಕಿದ. ಕೋರ್ಟಿಗೆ ದೂರನ್ನೂ ಕೊಟ್ಟ. ಇಬ್ಬರು, ಮೂವರು ರೈತರಿಗೆ ಜುಲ್ಮಾನೆ ಹಾಕಲಾಯಿತು. ಸ್ವಲ್ಪಕಾಲ ಎಲ್ಲವೂ ಸರಿಹೋಯಿತೆನಿಸಿತು. ಆದರೆ ಪಾಹಾಂನ ನೆರೆಹೊರೆಯರ ರೈತರು ಅವನ ಬಗ್ಗೆ ಅಸಮಾಧಾನ ತಾಳಿದರು. ದ್ವೇಷ, ಅಸೂಯೆ ಬೆಳೆಯಿತು, ಈಗ ಉದ್ದೇಶ ಪೂರ್ವಕವಾಗಿಯೇ ಅವನ ಹೊಲಗದ್ದೆ, ಹುಲ್ಲು ಮಾಳಗಳಿಗೆ ತಮ್ಮ ದನಕರುಗಳನ್ನು

ತೊಂಡುಮೇಯಲು ಬಿಡಲಾರಂಭಿಸಿದರು.

ಒಬ್ಬ ರೈತನಂತೂ ಒಂದು ರಾತ್ರಿ ಪಾಹಾಂನ ತೋಟಕ್ಕೆ ನುಗ್ಗಿ ತೊಗಟೆಗಾಗಿ ಐದು ನಿಂಬೆಗಿಡಗಳನ್ನೇ ಕತ್ತರಿಸಿದ. ಪಾಹಾಂ ಮರುದಿನ ತೋಟದಲ್ಲಿ ಅಡ್ಡಾಡುತ್ತಿದ್ದಾಗ ಬಿಳಿಯಾದುದೇನೋ ಕಣ್ಣಿಗೆ ಬಿತ್ತು. ಹತ್ತಿರ ಹೋಗಿ ನೋಡಿದಾಗ ಕತ್ತರಿಸಿದ ನಿಂಬೆಗಿಡದ ಕೊಂಬೆರೆಂಬೆಗಳು ನೆಲದ ಮೇಲೆ ಬಿದ್ದಿರುವುದು ಗೋಚರಿಸಿತು. ಹತ್ತಿರದಲ್ಲೇ ಕೈಕಾಲು ಕಳೆದುಕೊಂಡ ರುಂಡದಂತೆ ನಿಂಬೆಗಿಡದ ಕಾಂಡ ನಿಂತಿತ್ತು. ಪಾಹಾಂಗೆ ಭಯಂಕರ ಕೋಪ ಬಂತು. ರೋಷಾವೇಶದಿಂದ ಅವನು ಕೆರಳಿ ಕೆಂಡವಾದ.

"ಏನೋ ಅಲ್ಲೊಂದು ಇಲ್ಲೊಂದು ಗಿಡಕಿತ್ತಿದ್ದರೆ ಹೋಗಲಿ ಎಂದು ಸುಮ್ಮನಾಗಬಹುದಿತ್ತು. ಯಾವನೋ ದಗಾರ ಇಡೀ ತೋಪನ್ನೆಲ್ಲ ಸವರಿ ಹಾಕಿದ್ದಾನೆ. ಯಾರದು ಈ ಕೆಲಸ' ಎಂದು ಗೊತ್ತಾದರೆ ಅವನನ್ನು ದಂಡಿಸದೆ ಬಿಡುವುದಿಲ್ಲ." –ಎಂದು ಪಾಹಾಂ ಸಿಟ್ಟಿನಿಂದ ಹಲ್ಲು ಕಡಿದ.

ಈ ಕೆಲಸ ಯಾರದಿರಬಹುದು ಎಂದು ತಲೆಕೆರೆದುಕೊಂಡ, ಅಖೈರಾಗಿ ಒಂದು ತೀರ್ಮಾನಕ್ಕೆ ಬಂದ: "ಇದು ಆ ಸೈಮನ್ನನ ಕೆಲಸವೇ ಬೇರೆ ಯಾರಿಂದಲೂ ಇದು ಸಾಧ್ಯವಿಲ್ಲ. ಅವನು ಸೈಮನ್ನನ ಹೊಲದ ಮನೆಗೆ ಹೋದ. ಅಲ್ಲೇನೂ ಸಾಕ್ಷಿ ಕುರುಹುಗಳು ಕಂಡುಬರಲಿಲ್ಲ. ಕೋಪದಿಂದ ಕೂಗಾಡಿ ರಂಪಮಾಡಿದ್ದಷ್ಟೇ ಆಯಿತು. ಆದರೂ ಇದು ಸೈಮನ್‌ದೇ ಕೆಲಸ ಎಂದು ಅವನಿಗೆ ಖಾತ್ರಿಯಾಯಿತು. ಸೈಮನ್ ವಿರುದ್ಧ ದೂರು ಕೊಟ್ಟ. ಸೈಮನ್‌ಗೆ ನ್ಯಾಯಾಲಯಕ್ಕೆ ಹಾಜರಾಗಲು ಅಪ್ಪಣೆ ಮಾಡಲಾಯಿತು. ಕಟಕಟೆಯಲ್ಲಿ ನಿಂತ ಸೈಮನ್‌ನ ವಿಚಾರಣೆ, ಮರುವಿಚಾರಣೆ ಎಲ್ಲ ಆಯಿತು. ಕೊನೆಯಲ್ಲಿ ಸೈಮನ್ ನಿರಪರಾಧಿ ಎಂದು ಅವನ ಖುಲಾಸೆಯಾಯಿತು. ಸೈಮನ್ ಅಪರಾಧಿ ಎಂದು ಪರಿಗಣಿಸಲು ಯಾವುದೇ ಸಾಕ್ಷಾಧಾರವೂ ಸಿಗಲಿಲ್ಲ. ಪಾಹಾಂ ಕೋಪ ಮತ್ತಷ್ಟು ಕೆರಳಿತು. ಅವನು ತನ್ನ ಕೋಪವನ್ನು ಪಂಚಾಯಿತಿಯ ಹಿರಿಯರು ಹಾಗೂ ನ್ಯಾಯಧೀಶರ ಮೇಲೆ ಹರಿಬಿಟ್ಟ.

"ನೀವು ಅವನ ಲಂಚ ರುಷುವತ್ತಿಗೆ ಬಾಯಿಬಿಟ್ಟಿರಿ. ನೀವು ಪ್ರಾಮಾಣಿಕರಾಗಿದ್ದಿದ್ದಲ್ಲಿ ಒಬ್ಬ ಕಳ್ಳನನ್ನು ಹೀಗೆ ಬಿಡುತ್ತಿರಲಿಲ್ಲ" ಎಂದು ರೇಗಾಡಿದ. ಪಾಹಾಂ ನ್ಯಾಯಾಧೀಶರೊಂದಿಗೆ, ನೆರೆಹೊರೆಯವರೊಂದಿಗೆ ಜಗಳವಾಡಿದೆ.ಅವನ ಮನೆಯನ್ನು ಸುಡುವ ಬೆದರಿಕೆ ಮಾತೂ ಕೇಳಿ ಬಂತು. ಈಗ ಪಾಹಾಂ ಹೆಚ್ಚು ಭೂಮಿಯ ಇಳುವರಿದಾರನಾಗಿದ್ದರೂ ಸಮುದಾಯದ ಕಣ್ಣಲ್ಲಿ ಅವನು ತುಚ್ಚನಾಗಿ ಕಂಡ ಜನ ಅವನನ್ನು ಹೀನಾಯದಿಂದ ನೋಡಲಾರಂಭಿಸಿದರು. ಇದೇ ಸಮಯಕ್ಕೆ, ಜನ ಹೊಸ ಜಮೀನುಗಳನ್ನು ಅರಸುತ್ತಾ ವಲಸೆ ಹೋಗುತ್ತಿರುವ ವದಂತಿಗಳು ಕೇಳಿ ಬಂದವು "ನಾನು ನನ್ನ ಭೂಮಿ ಕಾಣಿ ಬಿಟ್ಟು ಹೋಗುವ ಅಗತ್ಯವಿಲ್ಲ" ಎಂದುಕೊಂಡ.

"ಒಂದಷ್ಟು ಜನ ನಮ್ಮ ಹಳ್ಳಿಬಿಟ್ಟು ಹೋಗಬಹುದು. ಇದರಿಂದ ನಮಗೆ ಇನ್ನಷ್ಟು ತಾವು ಸಿಗುತ್ತವೆ. ಅವರ ಭೂಮಿಯನ್ನು ನಾನೇ ತೆಗೆದುಕೊಳ್ಳುತ್ತೇನೆ. ಇದರಿಂದ ನನ್ನ ಆಸ್ತಿ ಇನ್ನಷ್ಟು ಹೆಚ್ಚುತ್ತದೆ. ಆಗ ಇನ್ನಷ್ಟು ಹಾಯಾಗಿ, ಆರಾಮವಾಗಿ ಬದುಕಬಹುದು. ಈಗಿರುವಂತೆ ಇನ್ನೂ ಕಾರ್ಪಣ್ಯದ ಬದುಕೇ, ಸುಖಸಮಾಧಾನಗಳ ನಿಶ್ಚಿಂತ ಬದುಕಿಗೆ ಈಗಿರುವುದು ಏನೇನೂ ಸಾಲದು." –ಹೀಗೆ ಸಾಗಿತ್ತು ಪಾಹಾಂ ಯೋಚನಾ ಲಹರಿ. ಒಂದು ದಿನ ಪಾಹಾಂ ಮನೆಯಲ್ಲಿ ಕುಳಿತಿದ್ದಾಗ ಹಳ್ಳಿಮೂಲಕ ಹೋಗುತ್ತಿದ್ದ

ರೈತನೊಬ್ಬ ಒಳಕ್ಕೆ ಬಂದ, ಅವನಿಗೆ ಬಾಯಾರಿಕೆ. ರಾತ್ರಿ ನಮ್ಮಲ್ಲೇ ಕಳೆಯುವಂತೆ ಪಾಹಾಂ ಆಗಂತುಕ ರೈತನಿಗೆ ಹೇಳಿದೆ. ಊಟದ ನಂತರ ರೈತನ ಜೊತೆ ಅದು ಇದು ಮಾತನಾಡುತ್ತ ಅವನ ಊರು, ಕುಲಗೋತ್ರ ಇತ್ಯಾದಿ ವಿಚಾರಿಸಿದ, ಆಗಂತುಕ ತಾನು ವೋಲ್ಗಾ ನದಿಯ ಆಚೆ ದಡದವನೆಂದೂ ಅಲ್ಲಿ ತಾನು ಕೂಲಿ ಕೆಲಸ ಮಾಡುತ್ತಿರುವುದಾಗಿಯೂ ತಿಳಿಸಿದ. ಮಾತಿನಿಂದ ಮಾತಿಗೆ ಬಂದು ಕೊನೆಗೆ ಅಂತು ಇತ್ತೀಚೆಗೆ ಅನೇಕ ಮಂದಿ ವೋಲ್ಗಾ ಆಚೆದಡದಲ್ಲಿ ಭೂಮಿಕಾಣಿ ಮಾಡಿಕೊಂಡು ನೆಲಸುತ್ತಿರುವ ಸಂಗತಿಯನ್ನೂ ತಿಳಿಸಿದ. ತನ್ನ ಹಳ್ಳಿಯವರೇ ಎಷ್ಟೋ ಮಂದಿ ಆ ಭಾಗಕ್ಕೆ ಕೆಲಸೆ ಹೋಗಿ ನೆಲೆಸಿದ್ದಾರೆ ಎಂದ, ಅಲ್ಲಿ ಅವರೆಲ್ಲ ಕೂಡೊಕ್ಕಲು ಸಮುದಾಯ ಸೇರಿದ್ದು ಅವರಿಗೆಲ್ಲ ತಲಾ ಇಪ್ಪತ್ತೈದು ಎಕರೆ ಜಮೀನು ಮಂಜೂರಾಗಿದೆಯೆಂದು ತಿಳಿಸಿದ. ಅಲ್ಲಿ ಭೂಮಿ ತುಂಬ ಫಲವತ್ತಾಗಿದ್ದು ಬಿತ್ತಿದ ಚಿಕ್ಕ ಗೋಧಿ ಪೈರು ಹಾರು ಕುದುರೆಯಷ್ಟು ಎತ್ತರ ಬೆಳೆಯುತ್ತದೆ. ಐದು ಬಾರಿ ಕುಡುಗೋಲು, ಆಡಿಸಿದರೆ ಒಂದು ಹೊರೆ ಪೈರಾಗುತ್ತದೆ. ಬರಿಗೈಯ್ಯಲ್ಲಿ ಅಲ್ಲಿಗೆ ಹೋದ ಒಬ್ಬ ರೈತ ಈಗ ಸ್ವಂತ ಮನೆ, ಆರು ಕುದುರೆಗಳು ಮತ್ತು ಎರಡು ಹಸುಗಳ ಶ್ರೀಮಂತ ಕುಳ ಎಂದು ಆಗಂತುಕ ಬಣ್ಣಿಸಿ ಬಣ್ಣಿಸಿ ಹೇಳಿದ.

ಪಾಹಾಂ ಹೃದಯದಲ್ಲಿ ಆಸೆ ಆಕಾಂಕ್ಷೆ ಪಜ್ವಲಿಸಿತು. ಅವನು ಮನಸ್ಸಿನಲ್ಲೇ ಲೆಕ್ಕಾಚಾರ ಹಾಕಿದ: "ಇನ್ನೆಷ್ಟು ದಿನ ಈ ಜೋಪಡಿಯಲ್ಲಿ ಕಾರ್ಪಣ್ಯ ಪಡಬೇಕು? ಬೇರೆಯವರು ಬೇರೆ ಕಡೆ ಸುಖವಾಗಿ ಬದುಕುತ್ತಿರುವಾಗ ನಾನೇಕೆ ಇಲ್ಲೇ ಕೊಳೆಯಬೇಕು? ಇಲ್ಲಿರುವ ಭೂಮಿ ಕಾಣಿ ಹೊಲದ ಮನೆ ಎಲ್ಲ ಮಾರಾಟಮಾಡಿ ಬಂದ ಹಣದಿಂದ ಅಲ್ಲಿ ಹೊಸ ಬದುಕು ಶುರು ಮಾಡುತ್ತೇನೆ. ಆದರೆ ಎಲ್ಲದಕ್ಕೂ ಮೊದಲು ಸ್ವತಃ ನಾನೇ ಅಲ್ಲಿಗೆ ಹೋಗಿ ಕಣ್ಣಾರೆ ಎಲ್ಲವನ್ನೂ ಕಂಡು ಬರಬೇಕು."

ಬೇಸಿಗೆಯಲ್ಲಿ ಅವನು ಎಲ್ಲ ಸಿದ್ಧತೆ ಮಾಡಿಕೊಂಡು ಪಯಣ ಬೆಳೆಸಿದ. ದೋಣಿಯೊಂದರಲ್ಲಿ ವೋಲ್ಗಾನದಿ ದಾಟಿ ಸಮಾರ ತಲುಪಿದ. ಅಲ್ಲಿಂದ ಮುನ್ನೂರು ಮೈಲಿ ಕಾಲ್ನಡಿಗೆಯಲ್ಲಿ ಪ್ರಯಾಣಮಾಡಿದ. ಇಷ್ಟು ದೂರ ಕ್ರಮಿಸಿದ ನಂತರ ಕೊನೆಗೊಮ್ಮೆ ಆ ಸ್ಥಳ ತಲುಪಿದ. ಅದು ಆಗಂತುಕ ಬಣ್ಣಿಸಿದಂತೆಯೇ ಇತ್ತು. ರೈತರು ಯಥೇಚ್ಚವಾಗಿ ಜಮೀನು ಹೊಂದಿದ್ದರು.

ಪ್ರತಿಯೊಬ್ಬನಿಗೂ ಅವನ ಬಳಕೆಗಾಗಿ ತಲಾ ಇಪ್ಪತ್ತೈದು ಎಕರೆ ಸಮುದಾಯದ ಜಮೀನನ್ನು ಮಂಜೂರು ಮಾಡಲಾಗಿತ್ತು. ಇಷ್ಟು ಸಾಲದೆ ಇನ್ನೂ ಬೇಕಾದವರು ಎಕರೆಗೆ ಎರಡು ಶಿಲಿಂಗ್‌ನಂತೆ ಹೆಚ್ಚುವರಿ ಹಣಕೊಟ್ಟು ತಮಗೆ ಬೇಕಾದಷ್ಟು ಭೂಮಿಯನ್ನು ಖರೀದಿಸಬಹುದಿತ್ತು. ಎಲ್ಲವನ್ನೂ ತಾನೇ ಕಣ್ಣಾರೆ ಕಂಡು ತನಗೆ ಬೇಕಾದ ಎಲ್ಲ ಮಾಹಿತಿಯನ್ನೂ ಸಂಗ್ರಹಿಸಿದ ನಂತರ ಪಾಹಂ ಶರತ್ಕಾಲದ ವೇಳೆಗೆ ಮನೆಗೆ ವಾಪಸು ಬಂದು ಹೊಲಗದ್ದೆಗಳನ್ನು ಮಾರಾಟಮಾಡಲಾರಂಭಿಸಿದ. ಹೊಲಗದ್ದೆಗಳನ್ನು ಲಾಭಕ್ಕೆ ಮಾರಿದ. ಹೊಲದ ಮನೆ, ಜಾನುವಾರುಗಳನ್ನೂ ಲಾಭಕ್ಕೆ ಮಾರಿದ, ಕೂಡೊಕ್ಕಲು ಸಮುದಾಯದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟ, ಸದಸ್ಯತ್ವ ಮುಗಿಯಿತು. ವಸಂತ ಋತುವಿನವರೆಗೆ ಕಾದು ನಿಂತ, ವಸಂತಕಾಲ ಶುರುವಾದದ್ದೇ ಕುಟುಂಬದೊಂದಿಗೆ ಹೊಸ ನೆಲೆಯತ್ತ ಹೆಜ್ಜೆ ಹಾಕಿದ.

೪

ಪಾಹಾಂ ಮತ್ತು ಅವನ ಕುಟುಂಬ ಹೊಸ ವಾಸಸ್ಥಾನವನ್ನು ತಲುಪಿದ ಕೂಡಲೆ ದೊಡ್ಡಗ್ರಾಮವೊಂದರ ಸಮುದಾಯದ ಸದಸ್ಯತ್ವಕ್ಕೆ ಅರ್ಜಿ ಹಾಕಿತು. ಅವನು ಗ್ರಾಮದ ಹಿರಿಯರನ್ನು

ಸತ್ಕರಿಸಿ ಅಗತ್ಯವಾದ ದಸ್ತಾವೇಜುಗಳನ್ನೆಲ್ಲ ಪಡೆದುಕೊಂಡನು. ಸಮುದಾಯದ ಜಮೀನಿನಲ್ಲಿ ಐದು ಹೆಜ್ಜೆಯನ್ನು ಅವನಿಗೆ ಮಂಜೂರು ಮಾಡಲಾಯಿತು. ಅವನಿಗೆ ಮತ್ತು ಅವನ ಮಕ್ಕಳಿಗೆ ಒಟ್ಟು ೧೨೫ ಎಕರೆ ಜಮೀನು ಮಂಜೂರು ಮಾಡಲಾಯಿತು. (ಎಲ್ಲ ಒಂದೇ ಕಡೆ ಅಲ್ಲ), ಸಮುದಾಯದ ಹುಲ್ಲಿನ ಮಾಳದ ಬಳಕೆಯ ಹಕ್ಕನ್ನೂ ಅವನಿಗೆ ನೀಡಲಾಯಿತು.

ಪಾಹಾಂ ಮನೆಕಟ್ಟಿಸಿ ದನಕರುಗಳನ್ನು ಖರೀದಿಸಿದ. ಅವನಿಗೆ ಸಮುದಾಯದಿಂದ ಮಂಜೂರಾದ ಭೂಮಿಯೇ ಹಿಂದಿನ ಹೊಲಮನೆಗಿಂತ ಮೂರುಪಟ್ಟು ಹೆಚ್ಚಾಗಿತ್ತು. ಭೂಮಿಯೂ ಒಳ್ಳೆಯ ದವಸಧಾನ್ಯ ಬೆಳೆಯುವ ಫಲವತ್ತಾದ ನೆಲವಾಗಿತ್ತು. ಅವನು ಹಿಂದಿಗಿಂತ ಹತ್ತುಪಟ್ಟು ಹೆಚ್ಚು ಸುಸ್ಥಿತಿಯಲ್ಲಿದ್ದ. ಅವನು ಸಾಕಷ್ಟು ಸಾಗುವಳಿಗೆ ಯೋಗ್ಯವಾದ ಭೂಮಿಯನ್ನೂ ತನಗಿಷ್ಟಬಂದಷ್ಟು ದನಕರುಗಳನ್ನು ಮೇಯಿಸಲು ಅಗತ್ಯವಾದಷ್ಟು ಹುಲ್ಲುಮಾಳವನ್ನೂ ಹೊಂದಿದ್ದ.

ಶುರುವಿಗೆ ಮನೆಕಟ್ಟಿ ಸಾಗುವಳಿ ಮಾಡುವ ಸಂಭ್ರಮದಲ್ಲಿ, ಅಲ್ಲಿ ನೆಲೆಯೂರುವ ಗಡಿಬಿಡಿಯಲ್ಲಿ ಪಾಹಾಂ ತನಗೆ ಸಿಕ್ಕ ಜಮೀನಿನಿಂದ ಸಂತೃಪ್ತನಾದಂತಿದ್ದ. ಆದರೆ ಎಲ್ಲ ಒಂದು ತಹಬಂದಿಗೆ ಬಂದ ನಂತರ ತನ್ನಲ್ಲಿ ಸಾಕಷ್ಟು ಜಮೀನಿಲ್ಲವೆಂಬ ಚಿಂತೆ ಅವನನ್ನು ಬಾಧಿಸಲಾರಂಭಿಸಿತು. ಮೊದಲ ವರ್ಷ ತನ್ನ ಪಾಲಿಗೆ ಮಂಜೂರಾದ ಸಮುದಾಯದ ಜಮೀನಿನಲ್ಲಿ ಗೋಧಿ ಬಿತ್ತಿ ಒಳ್ಳೆಯ ಫಸಲನ್ನೇ ತೆಗೆದ. ಗೋಧಿ ಬೆಳೆಯುವುದೇ ಅವನ ಇಚ್ಛೆಯಾಗಿತ್ತು. ಆದರೆ ಗೋಧಿ ಬೆಳೆಯಲು ಅವನಲ್ಲಿ ಸಾಕಷ್ಟು ಸಮುದಾಯದ ಭೂಮಿ ಇರಲಿಲ್ಲ. ಆ ಪ್ರದೇಶದಲ್ಲಿ ಕನ್ನೆ ನೆಲದಲ್ಲಿ ಮಾತ್ರ ಗೋಧಿ ಬೆಳೆಯುವ ಪದ್ಧತಿ ಇತ್ತು. ಒಂದು ಅಥವಾ ಎರಡು ವರ್ಷ ಕನ್ನೆನೆಲದಲ್ಲಿ ಗೋಧಿ ಬೆಳೆಯಲಾಗುತ್ತಿತ್ತು.

ನಂತರ ಆ ಹೊಲವನ್ನು ಬೀಳುಬಿಡಲಾಗುತ್ತಿತ್ತು. ಮತ್ತೆ ಅಲ್ಲಿ ಆಳೆತ್ತರ ಹುಲ್ಲು ಬೆಳೆಯುವವರೆಗೆ ಗೋಧಿ ಬಿತ್ತನೆ ಮಾಡುತ್ತಿರಲಿಲ್ಲ. ಅನೇಕರಿಗೆ ಇಂಥ ಕನ್ನೆನೆಲದ ಅಥವಾ ಬೀಳು ಭೂಮಿಯ ಅಗತ್ಯ ಇತ್ತು. *ಆದರೆ ಲವರು ಕಡಿಮೆ,* ಹೀಗಾಗಿ, ಇಂಥ ನೆಲಕ್ಕಾಗಿ ಅಲ್ಲಿನ ನಿವಾಸಿಗಳಲ್ಲಿ ಆಗಿಂದಾಗ್ಗೆ ಜಗಳ ಕದನಗಳಾಗುತ್ತಿದ್ದವು. ಶ್ರೀಮಂತರಾದವರು. ಇಂತ ಜಮೀನನ್ನು ಗೋಧಿ ಸಾಗುವಳಿಗಾಗಿ ತಮ್ಮಲ್ಲೇ ಇಟ್ಟುಕೊಳ್ಳುತ್ತಿದ್ದರು. ಸ್ಥಿತಿವಂತರಲ್ಲದವರು ತೆರಿಗೆ ಪಾವತಿ ಇತ್ಯಾದಿ ವ್ಯಾಪಾರಿಗಳಿಗೆ ಗೇಣಿಗೆ ಕೊಡುತ್ತಿದ್ದರು, *ಸಾಹಾರಿ* ಹೆಚ್ಚು ಗೋಧಿ ಬೆಳೆಯುವ ಆಸೆಯಿಂದ ವ್ಯಾಪಾರಿಯೊಬ್ಬನಿಂದ ಒಂದು ವರ್ಷದ ಮಟ್ಟಿಗೆ ಕನ್ನೆಹೊಲವೊಂದನ್ನು ಗೇಣಿಗೆ ಪಡೆದು ಗೋಧಿ ಬಿತ್ತನೆ ಮಾಡಿದ, ಸಮೃದ್ಧವಾಗಿ ಫಸಲು ಬಂತು. ಆದರೆ ಈ ಹೊಲ ಹಳ್ಳಿಯಿಂದ ಬಲುದೂರದಲ್ಲಿತ್ತು. ಹತ್ತು ಮೈಲಿಯಾಚೆಗೂ ಹೆಚ್ಚು ದೂರದಿಂದ ಬೆಳೆದ ಫಸಲನ್ನು ಮನೆಗೆ ತರಬೇಕಾಗಿತ್ತು.

ಕೆಲವು ಗೇಣಿದಾರರು ಪ್ರತ್ಯೇಕ ಹೊಲದ ಮನೆಗಳಲ್ಲಿ ವಾಸಮಾಡುತ್ತ ಶ್ರೀಮಂತರಾಗುತ್ತಿರುವುದು ಕೆಲಕಾಲದ ನಂತರ ಅವನ ಗಮನಕ್ಕೆ ಬಂತು.
ಸಮುದಾಯದ ಹಂಗಿಲ್ಲದೆ ಯಾವ ಜೀವವೂ ತನ್ನದೇ ಸ್ವಾಮ್ಯದಲ್ಲಿ ಉಳಿಯುವಂಥ ಜಮೀನು ಖರೀದಿಸಿ ಅಲ್ಲಿ ಮನೆಕಟ್ಟಿದರೆ ಹೇಗೆ? ಅರಸನ ಹಂಗಿಲ್ಲ. ದೆವ್ವದ ಕಾಟವಿಲ್ಲ ಎಂಬಂತೆ

ಭದ್ರನೆಲೆಯಾಗುತ್ತದೆ ಎಂಬ ಆಲೋಚನೆ, ಅವನ ತಲೆಗೆ ಹೊಕ್ಕಿತು. ಮುಕ್ತ ಹಕ್ಕಿನ ಜಮೀನು ಖರೀದಿಸುವ ಆಲೋಚನೆ ಮತ್ತೆ ಮತ್ತೆ ಅವನನ್ನು ಕಾಡಲಾರಂಭಿಸಿತು. ಗೇಣಿಗೆ ಹೊಲಪಡೆದು ಗೋಧಿಬೆಳೆಯುವ ಪರಿಪಾಠ ಮೂರು ವರ್ಷ ನಡೆಯಿತು. ಸುಗ್ಗಿಯೂ ದಿವಿನಾಗಿ ಆಯಿತು. ಫಸಲು ಸಮೃದ್ಧಿಯಾಗಿ ಮನೆ ತುಂಬಿತು. ಕೈಯಲ್ಲಿ ಒಂದಷ್ಟು ದುಡ್ಡುಕಾಸು ಕೂಡಿತು. ಇದರಲ್ಲಿ ಅವನು ತೃಪ್ತಿಯಿಂದ ಬದುಕುವುದು ಸಾಧ್ಯವಿತ್ತು. ಆದರೆ ಗೇಣಿ ಜಮೀನಿಗಾಗಿ ದೇಹಿ ಎಂದು ಕೈಯೊಡ್ಡುವುದು ಅವನಿಗೆ ಸಾಕುಸಾಕೆನಿಸಿತು. ಎಲ್ಲಿ ಕನ್ನೆಭೂಮಿ ಲಭ್ಯವಿದೆಯೋ ಅಲ್ಲಿಗೆ ರೈತರು ಮುಗಿ ಬೀಳುತ್ತಿದ್ದರು. ಒಮ್ಮೆಗೇ ಹೋಗಿ ಅದರ ಗೇಣಿಹಕ್ಕು ಪಡೆದುಕೊಳ್ಳುತ್ತಿದ್ದರು. ಸದಾಕಾಲ ಕಣ್ಣಲ್ಲಿ ಕಣ್ಣಿಟ್ಟು ಇಂಥ ಭೂಮಿಯನ್ನು ಹುಡುಕಬೇಕಾಗುತ್ತಿತ್ತು. ಸ್ವಲ್ಪ ಬೇಹುಷಾರಾದರೂ ಕನ್ನೆನೆಲ ಕೈತಪ್ಪಿ ಹೋಗುತ್ತಿತ್ತು.

ಹೊಸ ನೆಲೆಗೆ ಹೋದ ಮೂರನೆಯ ವರುಷ ಪಾಹಾಂ ಒಬ್ಬ ವ್ಯಾಪಾರಿಯ ಜೊತೆಗೂಡಿ ಕೆಲವು ರೈತರಿಂದ ಒಂದು ತುಂಡು ಹುಲ್ಲುಮಾಳವನ್ನು ಗೇಣಿಗೆ ತೆಗೆದುಕೊಂಡ. ಆ ವೇಳೆಗಾಗಲೇ ಇಲ್ಲಿ ಉಳುಮೆಯಾಗಿತ್ತು. ಕೆಲವರು ತಕರಾರು ತೆಗೆದರು. ವ್ಯಾಜ್ಯ ಕೋರ್ಟಿಗೆ ಹೋಯಿತು. ತೀರ್ಪು ಅವನ ಪರ ಆಗಲಿಲ್ಲ. ಎಲ್ಲ ಶ್ರಮವೂ ವ್ಯರ್ಥವಾಯಿತು. "ಅದು ನನ್ನ ಸ್ವಂತ ಜಮೀನಾಗಿದ್ದಿದ್ದರೆ....." ಪಾಹಾಂ ಯೋಚಿಸಿದ.

"ನಾನು ಸ್ವತಂತ್ರನಾಗಿರಬೇಕು ಯಾರ ಹಂಗೂ ಇರಬಾರದು. ಆಗ ಇಂಥ ಕಿರಿಕಿರಿಗಳು ಯಾವುದೂ ಇರುವುದಿಲ್ಲ."

ಹೀಗೆ ಯೋಚಿಸಿದ ಪಾಹಾಂ ತಾನು ಖರೀದಿಸಿರಬಹುದಾದ ಭೂಮಿಯ ತಲಾಸಿನಲ್ಲಿ ತೊಡಗಿದ, ಸಾವಿರದ ಮುನ್ನೂರೆಕರೆ ಜಮೀನುಳ್ಳ ರೈತನೊಬ್ಬ ಅವನ ಕಣ್ಣಿಗೆ ಬಿದ್ದ. ಕಷ್ಟನಷ್ಟಕ್ಕೊಳಗಾಗಿದ್ದ ಈ ರೈತ ಅಗ್ಗದ ಬೆಲೆಗೆ ಜಮೀನನ್ನು ಮಾರುವ ಜರೂರಿನಲ್ಲಿದ್ದ, ಪಾಹಾಂ ಈ ರೈತನೊಂದಿಗೆ ಜುಗ್ಗಾಡಿ ೧೫೦೦ ರೂಬಲ್‌ಗಳಿಗೆ ಜಮೀನು ಕೊಳ್ಳುವ ವ್ಯವಹಾರ ಕುದುರಿಸಿದ. ಅರ್ಧಹಣ ಈಗ ನಗದು ಕೊಡುವುದು, ಉಳಿದದ್ದು ಆನಂತರ ಎಂದು ಒಪ್ಪಂದವಾಯಿತು. ವ್ಯವಹಾರ ಎಲ್ಲ ತೀರ್ಮಾನವಾಯಿತು. ಜಮೀನು ಕೊಂಡಂತೆಯೇ ಎನ್ನುವಂತಿರುವಾಗ ಹಾದಿಹೋಕ ವ್ಯಾಪಾರಿಯೊಬ್ಬ ಒಂದು ದಿನ ಪಾಹಾಂ ಮನೆ ಮುಂದೆ ಪ್ರತ್ಯಕ್ಷವಾದ, ಕುದುರೆಗಳಿಗೆ ಮೇವು ಖರೀದಿಸುವ ಸಲುವಾಗಿ ಬಂದ ಈ ವ್ಯಾಪಾರಿ ಜಗುಲಿಯಲ್ಲಿ ಕುಳಿತು ಟೀ ಕುಡಿಯುತ್ತ, ತಾನು ಬ್ಯಾಷ್ಕೀರರ ನಾಡಿನಿಂದ ಬರುತ್ತಿರುವುದಾಗಿಯೂ ಅಲ್ಲಿ ಜಮೀನು ಬಲು ಅಗ್ಗವೆಂದೂ ತಿಳಿಸಿದ, ತಾನು ಒಂದು ಸಾವಿರ ರೂಬಲ್‌ಗೆ ಹದಿಮೂರು ಸಾವಿರ ಎಕರೆ ಜಮೀನು ಖರೀದಿಸಿದ್ದಾಗಿ ಅವನು ಹೇಳಿದ್ದೇ ತಡ ಪಾಹಾಂ ಬಾಯಲ್ಲಿ ನೀರೂರಿತು. ಪಾಹಾಂ ಮತ್ತಷ್ಟು ಮಾಹಿತಿ ಕೇಳಿದ.

ವ್ಯಾಪಾರಿ ಉತ್ತರ:

"ಅಲ್ಲಿಯ ಮುಖಂಡರೊಂದಿಗೆ ಸ್ನೇಹ ಬೆಳೆಸಿದರೆ ಎಲ್ಲ ತಾನಾಗಿ ಆಗುತ್ತದೆ. ನಾನು ಒಂದು ನೂರು ರೂಬಲ್ ಬೆಲೆ ಬಾಳುವ ರೇಷ್ಮೆ ಬಟ್ಟೆ ಮತ್ತು ರತ್ನಗಂಬಳಿಗಳನ್ನು ಉಡುಗೊರೆಯಾಗಿಕೊಟ್ಟು ಅವರ ಸ್ನೇಹ ಗಳಿಸಿದೆ. ಜೊತೆಗೆ ಒಂದಿಷ್ಟು ಟೀಪುಡಿ ಹಾಗೂ ಮದ್ಯವನ್ನೂ ಕೊಟ್ಟ, ಅವರು ಸಂತೋಷದಿಂದ ಚಹಾಪಾನ, ಮದ್ಯಪಾನ ಮಾಡಿದರು. ನನಗೆ ಎಕರೆಗೆ ಒಂದು ಪೆನ್ನಿಗೂ ಕಡಿಮೆ ದರದಲ್ಲಿ ಜಮೀನು ಸಿಕ್ಕಿತು" ಎಂದ. ಅವನು ಕ್ರಯಪತ್ರಗಳನ್ನೂ ಹಕ್ಕುಪತ್ರಗಳನ್ನೂ ತೋರಿಸಿದ.

"ಜಮೀನು, ನದಿದಡದಲ್ಲಿ ಇದೆ. ಜೊತೆಗೆ ಕನ್ನೆನೆಲ",–ಎಂಬ ಮಾತನ್ನೂ ವರ್ತಕ ಸೇರಿಸಿದ.

ಪಾಹಾಂ ಅವನ ಮಾತಿಗೆ ಒಲಿದಂತೆ ನಮ್ರತೆಯಿಂದ ಮತ್ತಷ್ಟು ಪ್ರಶ್ನೆಗಳನ್ನು ಕೇಳಿದ. ವ್ಯಾಪಾರಿ ಹೇಳಿದ:

"ನೀನು ವರ್ಷಪೂರ್ತಿ ನಡೆದರೂ ಶ್ರಮಿಸಲಾಗದಷ್ಟು ಅಧಿಕ ಜಮೀನು ಅಲ್ಲಿದೆ. ಅದೆಲ್ಲ ಬ್ಯಾಷ್ಕೀರರ ಸ್ವತ್ತು, ಅವರು ಕುರಿಗಳಂತೆ, ಬಹುತೇಕ ಏನೂ ಕೊಡದೆಯೇ ಎಂಬಂತೆ ಜಮೀನು ಪಡೆಯಬಹುದು."

"ಹೌದೇ! ಹಾಗಿದ್ದಲ್ಲಿ ನಾನೇಕೆ ಒಂದು ಸಾವಿರ ರೂಬಲ್‌ಗಳಿಗೆ ಸಾವಿರದ ಮುನ್ನೂರು ಎಕರೆ ಜಮೀನು ಖರೀದಿಸಬೇಕು? ಜೊತೆಗೆ ಸಾಲದ ಹೊರೆ ಬೇರೆ. ಇದ್ದ ಹಣಕ್ಕೆ ಅಲ್ಲಿ ಹತ್ತುಪಟ್ಟು ಹೆಚ್ಚು ಜಮೀನು ಖರೀದಿಸಬಹುದಲ್ಲ." ಎಂಬ ಆಲೋಚನೆ ಅವನ ತಲೆಗೆ ಹೊಳೆಯಿತು.

ಆ ಜಾಗಕ್ಕೆ ಹೋಗುವುದು ಹೇಗೆ ಎಂದು ಪಾಹಾಂ ಕೇಳಿ ತಿಳಿದುಕೊಂಡ. ವರ್ತಕ ನಿರ್ಗಮಿಸಿದ ಕೂಡಲೇ ಸ್ವತಃ ತಾನೇ ಅಲ್ಲಿಗೆ ಹೋಗಲು ಸಿದ್ಧತೆ ನಡೆಸಿದ. ಮನೆವಾರ್ತೆ ನೋಡಿಕೊಳ್ಳಲು ಹೆಂಡತಿಗೆ ಹೇಳಿ ಒಂದಿಷ್ಟು ಟೀ ಸೊಪ್ಪು, ಮದ್ಯ ಮತ್ತು ಕೆಲವು ಉಡುಗೊರೆಗಳನ್ನು ಖರೀದಿಸಿ ಪಯಣ ಆರಂಭಿಸಿದ, ಸುಮಾರು ಮುನ್ನೂರು ಮೈಲಿ ನಡೆದ ಮೇಲೆ, ಏಳನೆಯದಿನ ಬ್ಯಾಷ್ಕೀರರ ಡೇರೆಗಳು ಕಾಣಿಸಿದವು. ಅಲ್ಲಿಯ ಪರಿಸ್ಥಿತಿ ವರ್ತಕ ಹೇಳಿದ ಹಾಗೇ ಇತ್ತು. ಅಲ್ಲಿ ಜನರು ಬಯಲು ಪ್ರದೇಶದಲ್ಲಿ ಫೆಲ್ಟ್ ಬಟ್ಟೆ ಹೊದಿಸಿ ನಿರ್ಮಿಸಿದ ಡೇರೆಗಳಲ್ಲಿ ವಾಸಿಸುತ್ತಿದ್ದರು. ಅವರು ಹೊಲ ಉತ್ತು, ಬಿತ್ತು ಬೆಳೆ ತೆಗೆಯುತ್ತಿರಲಿಲ್ಲ. ಅಥವಾ ರೊಟ್ಟಿಯನ್ನೂ ತಿನ್ನುತ್ತಿರಲಿಲ್ಲ. ಅವರು ದನಕರುಗಳು ಮತ್ತು ಕುದುರೆಯ ಮಂದೆಯನ್ನು ಬಯಲು ಪ್ರದೇಶದಲ್ಲಿ ಮೇಯಿಸುತ್ತಿದ್ದರು.

ದನಕರು ಮತ್ತು ಕುದುರೆ ಮರಿಗಳನ್ನು ಡೇರೆಯ ಹಿಂದೆ ಕಟ್ಟಿಹಾಕುತ್ತಿದ್ದರು. ಹೆಂಗಸರು ಹೆಣ್ಣು ಕುದುರೆಗಳ ಹಾಲಿನಿಂದ ಮೊಸರು ಮತ್ತು ಚೀಸ್ ತಯಾರಿಸುತ್ತಿದ್ದರು. ಗಂಡಸರು ಮಾಂಸ ತಿನ್ನುವುದು, ಮೊಸರು ಕುಡಿಯುವುದು, ಟೀ ಕುಡಿಯುವುದು, ಪಿಳ್ಳಂಗೋವಿ ಊದುವುದು ಇವುಗಳಲ್ಲೇ ನಿರತರಾಗಿರುತ್ತಿದ್ದರು. ಅವರು ಬಲಿಷ್ಠರೂ ಸಾಹಸಿಗಳೂ ವಿನೋದಪ್ರಿಯರೂ ಆಗಿದ್ದು ಬೇಸಿಗೆಯುದ್ದಕ್ಕೂ ಸೊಂಬೇರಿಗಳಾಗಿಯೇ ಕಾಲಕಳೆಯುತ್ತಿದ್ದರು. ಅವರಿಗೆ ರಷ್ಯನ್ ಭಾಷೆ ಬರುತ್ತಿರಲಿಲ್ಲ; ಅಜ್ಞಾನಿಗಳು, ಆದರೆ ಸಾಧುಸ್ವಭಾವದವರು.

ಪಾಹಾಂನನ್ನು ಕಂಡಕೂಡಲೇ ಡೇರೆಯೊಳಗಿಂದ ಹೊರ ಬಂದು ಅವನ ಸುತ್ತ ಜಮಾಯಿಸಿದರು. ದುಭಾಷಿಯೊಬ್ಬನನ್ನು ಹುಡುಕಿ ತರಲಾಯಿತು. ಪಾಹಾಂ ತಾನು ಜಮೀನು ಅರಸುತ್ತಾ ಬಂದಿರುವುದಾಗಿ ತಿಳಿಸಿದ, ಬ್ಯಾಷ್ಕೀರರು ಸಂತೋಷಗೊಂಡಂತೆ ಕಾಣಿಸಿತು.

ಅವರು ಅವನನ್ನು ಒಂದು ಸುಖಾಸೀನಗಳಿಂದ ಕೂಡಿದ್ದ ಸುಸಜ್ಜಿತ ಡೇರೆಯೊಳಕ್ಕೆ ಕರೆದೊಯ್ದು ಮೆತ್ತನೆಯ ಪೀಠವೊಂದರ ಮೇಲೆ ಕೂರಿಸಿ ತಾವು ಸುತ್ತ ಕುಳಿತರು. ಟೀ, ಮೊಸರು ಕೊಟ್ಟರು. ಕುರಿ ಕಡಿದು ಅವನಿಗೆ ವಿಶೇಷ ಮಾಂಸದ ಅಡಿಗೆ ಮಾಡಿಸಿದರು. ಪಾಹಾಂ ತಾನು ತಂದಿದ್ದ ಉಡುಗೊರೆಗಳನ್ನು ಅವರಿಗೆ ಕೊಟ್ಟ, ಟೀಸೊಪ್ಪನ್ನು ಹಂಚಿದ.

ಬ್ಯಾಷ್ಕೀರರಿಗೆ ಆನಂದವಾಗಿತ್ತು. ಅವರು ಬಹಳ ಹೊತ್ತು ತಮ್ಮ ತಮ್ಮೊಳಗೇ

ಮಾತನಾಡಿಕೊಂಡು ನಂತರ ದುಭಾಷಿಗೆ ತಮ್ಮ ಮಾತನ್ನು ಭಾಷಾಂತರಿಸಲು ಹೇಳಿದರು. ಅವರು ಏನು

ಹೇಳಲಿಚ್ಛಿಸುತ್ತಾರೆಂದರೆ–ದುಭಾಷಿ ಮಾತು ಪ್ರಾರಂಭಿಸಿದ "ನಿನ್ನನ್ನು ಕಂಡು ಅವರಿಗೆ ಸಂತೋಷವಾಗಿದೆ. ಅವರು ನಿನ್ನನ್ನು ಮೆಚ್ಚಿಕೊಂಡಿದ್ದಾರೆ.

"ಅತಿಥಿಯನ್ನು ಸಂತೋಷಪಡಿಸುವುದು ನಮ್ಮ ಪದ್ಧತಿ. ಅವನು ತಂದ ಉಡುಗೊರೆಗಳಿಗೆ ಪ್ರತಿಯಾಗಿ ಏನನ್ನಾದರೂ ಕೊಡುವುದು ನಮ್ಮ ಪದ್ಧತಿ, ನಮ್ಮಲ್ಲಿರುವ ವಸ್ತುಗಳಲ್ಲಿ ನಿನಗೆ ಪ್ರಿಯವಾದುದನ್ನು ತಿಳಿಸು ನಾವು ಅದನ್ನು ನಿನಗೆ ಉಡುಗೊರೆಯಾಗಿ ಕೊಡುತ್ತೇವೆ".

"ನನಗೆ ಅತ್ಯಂತ ಪ್ರಿಯವಾದದ್ದು ನಿಮ್ಮ ಜಮೀನು.." –ಎಂದು ಪಾಹಾಂ ಉತ್ತರಿಸಿದ.

"ನಮ್ಮ ಜಮೀನು ಜನಸಂದಣಿಯಿಂದ ತುಂಬಿ ಹೋಗಿದೆ. ಫಲವಂತಿಕೆಯೂ ಇಲ್ಲ. ಆದರೆ ನಿಮ್ಮಲ್ಲಿ ಒಳ್ಳೆ ಫಲವತ್ತಾದ ಜಮೀನು ಇದೆ. ಇಂಥ ಭೂಮಿಯನ್ನು ನಾನು ಎಂದೂ ನೋಡಿರಲಿಲ್ಲ."
ದುಭಾಷಿ ಭಾಷಾಂತರಿಸಿದ. ಬ್ಯಾಷ್ಕೀರರು ಸ್ವಲ್ಪಕಾಲ ತಮ್ಮಲ್ಲೇ ಮಾತನಾಡಿಕೊಂಡರು. ಪಾಹಾಂ ಗೆ ಅವರ ಮಾತು ಅರ್ಥವಾಗಲಿಲ್ಲ. ತನ್ನ ಮಾತಿನಿಂದ ಅವರು ಖುಷಿಗೊಂಡಿರುವಂತೆ ಅವನಿಗೆ ತೋರಿತು. ಅವರು ನಗುನಗುತ್ತಾ ಜೋರಾಗಿ ಮಾತಾಡಿಕೊಳ್ಳುತ್ತಿದ್ದರು. ನಂತರ ಅವರು ಕೊಂಚ ಕಾಲ ಮೌನಿಗಳಾದರು. ಅವರು ಪಾಹಾಂನತ್ತ ದಿಟ್ಟಿಸಿದಂತೆ ದುಭಾಷಿ ನುಡಿದ

"ನಿನ್ನ ಉಡುಗೊರೆಗೆ ಪ್ರತಿಯಾಗಿ ಅವರು ಜಮೀನು ಕೊಡಲು ಸಿದ್ದರಿದ್ದಾರೆ. ನೀನು ಕೈಯ್ಯಾರೆ ನಿನಗೆ ಬೇಕಾದ ಜಮೀನನ್ನು, ಗುರುತಿಸಿ ತೋರಿಸಬೇಕು. ಆ ಜಮೀನು ನಿನ್ನದಾಗುತ್ತದೆ." ಆನಂತರ ಬ್ಯಾಪ್ತಿರರಲ್ಲಿ ಮನಸ್ತಾಪ ಉಂಟಾಯಿತು. ಏನೋ ವಾದವಿವಾದ ನಡೆಯುತ್ತಿದೆಯಲ್ಲ ಎಂದು ಪಾಹಾಂ ಕೇಳಿದ, ಆ ದುಬಾಸಿ ನುಡಿದ.

"ಮುಖಂಡನ ಅಭಿಪ್ರಾಯ ತಿಳಿಯದೇ ಅವನ ಗೈರುಹಾಜರಿಯಲ್ಲಿ ತಾವು ನಿನಗೆ ಮಾತುಕೊಡಬಾರದಿತ್ತು. ನಿನಗೆ ಭೂಮಿ ಕೊಡುವ ಬಗ್ಗೆ ತಮ್ಮ ಮುಖಂಡನ ಅಭಿಪ್ರಾಯ ತಿಳಿಯಬೇಕಾಗಿತ್ತು ಎಂದು ಕೆಲವರು ಹೇಳುತ್ತಿದ್ದಾರೆ. ಇನ್ನು ಕೆಲವರು ಇದರ ಅಗತ್ಯವಿಲ್ಲ. ಮುಖಂಡ ಹಿಂದಿರುಗಿ ಬರುವವರೆಗೆ ಕಾಯಬೇಕಾದ್ದಿಲ್ಲ ಎಂದು ಅಭಿಪ್ರಾಯಪಡುತ್ತಿದ್ದಾರೆ.

– ೬–

ಬ್ಯಾಷ್ಕೀರರಲ್ಲಿ ವಾದವಿವಾದ ನಡೆದಿದ್ದಂತೆ ನರಿಯ ತುಪ್ಪಳದ ಉದ್ದನೆಯ ಟೋಪಿ ಧವಿಸಿದ್ದ ವ್ಯಕ್ತಿಯೊಬ್ಬ ಅಲ್ಲಿ ಪ್ರತ್ಯಕ್ಷನಾದ. ಅವರೆಲ್ಲ ಮಾತು ನಿಲ್ಲಿಸಿ ಎದ್ದು ನಿಂತರು. "ಈತ ನಮ್ಮ ನಾಯಕ' ಎಂದು ದುಭಾಷಿ ಹೇಳಿದ.

ಪಾಹಾಂ ಥಟ್ಟನೆ ಎದ್ದು ಸಾರೋಟಿನತ್ತ ಧಾವಿಸಿದ. ಅತ್ಯುತ್ತಮವಾದ ಮೇಲಂಗಿ ಮತ್ತು ಐದು ಪೌಂಡ್ ಟೀ ತಂದು ನಾಯಕನಿಗೆ ಅರ್ಪಿಸಿದ. ನಾಯಕ ಉಡುಗೊರೆ ಸ್ವೀಕರಿಸಿ ಪಾಹಾಂನನ್ನು ಗೌರವಯುತ ಸ್ಥಾನದಲ್ಲಿ ಕುಳ್ಳಿರಿಸಿದ. ಬ್ಯಾಷ್ಕೀರರು ನಾಯಕನಿಗೆ ಏನನ್ನೋ ಹೇಳಲಾರಂಭಿಸಿದರು. ಸ್ವಲ್ಪಕಾಲ ಅವರ ಮಾತುಗಳನ್ನು ಆಲಿಸಿದ ನಂತರ ಮಾತು ಸಾಕೆಂದು ಅವರ ಬಾಯಿ ಮುಚ್ಚಿಸಿದ. ಆಮೇಲೆ ಪಾಹಾಂನನ್ನುದ್ದೇಶಿಸಿ ರಷ್ಯನ್ ಭಾಷೆಯಲ್ಲಿ ಹೇಳಿದ: "ಆಯಿತು ಅದೆಲ್ಲ ಹಾಗಿರಲಿ, ನೀನು ನಿನಗೆ ಬೇಕಾದ ಭೂಮಿ ಆರಿಸಿಕೋ, ನಮ್ಮಲ್ಲಿ ಅದು ಹೇರಳವಾಗಿದೆ.'

“ನನಗೆ ಬೇಕಾದಷ್ಟು ಹೇಗೆ ಆರಿಸಿಕೊಳ್ಳುವುದು ಅದು ನನ್ನ ಕೈತಪ್ಪಿಹೋಗದಂತೆ ಒಂದು ಪತ್ರ ಬರೆಸಿಕೊಳ್ಳಬೇಕು. ಇವತ್ತು ನಿನ್ನದು ಎಂದು ಹೇಳಿ ಮುಂದೊಂದು ದಿನ ಕಿತ್ತುಕೊಳ್ಳಬಹುದು." – ಪಾಹಾಂ ಮನಸ್ಸಿನಲ್ಲೇ ಆಲೋಚಿಸಿದ.

"ನಿಮ್ಮ ಪ್ರೀತಿಕರುಣೆಗಳಿಗಾಗಿ ನಾನು ಕೃತಜ್ಞ ನಿಮ್ಮಲ್ಲಿ ಹೇರಳವಾಗಿ ಜಮೀನಿದೆ. ನನಗೆ ಬೇಕಾಗಿರುವುದು ಸ್ವಲ್ಪ ಮಾತ್ರ. ಯಾವ ತುಂಡು ಭೂಮಿ ನನ್ನ ಪಾಲಿಗೆ ಸೇರುತ್ತದೆ ಎಂಬುದು ಖಚಿತವಾಗಬೇಕಷ್ಟೆ, ಭೂಮಿಯನ್ನು ಅಳತೆಮಾಡಿ ನನ್ನ ಸುಪರ್ದಿಗೆ ಬಿಟ್ಟುಕೊಡಲಾಗದೆ? ಬದುಕು, ಸಾವು ಎಲ್ಲ ದೇವರ ಕೈಯ್ಯಲ್ಲಿದೆ. ನೀವು, ಮಹಾನುಭಾವರು ಇಂದು ಕೈಯ್ಯತ್ತಿಕೊಡುತ್ತಿದ್ದೀರಿ ನಾಳೆ ನಿಮ್ಮ ಮಕ್ಕಳು ಹಿಂದೆಗೆದುಕೊಳ್ಳಬಾರದಷ್ಟೇ.”

“ನೀನು ಹೇಳುವುದೂ ಸರಿ, ನಿನ್ನ ಹೆಸರಿಗೆ ಮಾಡಿ ಕೊಡುತ್ತೇವೆ.” – ಎಂದ ನಾಯಕ.

“ಇಲ್ಲೊಬ್ಬ ವ್ಯಾಪಾರಿಯಿದ್ದಾನೆ ಎಂದು ತಿಳಿದುಬಂತು..."ಪಾಹಾಂ ಮಾತು ಮುಂದುವರಿಸಿದ: “ನೀವು ಜಮೀನನ್ನು ಅವನ ಸುಪರ್ದಿಗೆ ಬಿಟ್ಟುಕೊಟ್ಟು ಆ ಪರಿ ಹಕ್ಕುಪತ್ರಕ್ಕೂ ಸಹಿಮಾಡಿ ಕೊಟ್ಟಿರುವಿರಿ ಎಂದು ಕೇಳಿದ್ದೇನೆ. ನನಗೂ ಅದೇ ರೀತಿ ಆಗಬೇಕು.” ನಾಯಕನಿಗೆ ಅರ್ಥವಾಯಿತು.

“ಹಾಗೇ ಆಗಲಿ.... ಅದರಲ್ಲೇನೂ ತೊಂದರೆ ಇಲ್ಲ, ಸುಲಭವಾಗಿ ಮಾಡಬಹುದು. ನಾವು ನಿನ್ನ ಜೊತೆ ಪಟ್ಟಣಕ್ಕೆ ಬರುತ್ತೇವೆ. ಅಲ್ಲಿ ಹಕ್ಕುಪತ್ರ ಬರೆಸಿ ಮುದ್ರಾಂಕಿತ ಹಾಕಿಕೊಡುತ್ತೇವೆ."

ಜಮೀನಿನ ಕ್ರಯ ಏನಾಗುತ್ತದೆ?”–ಪಾಹಾಂ ಕೇಳಿದ.

“ನಮ್ಮ ಕ್ರಯ ಯಾವತ್ತೂ ಒಂದೇ. ಒಂದು ದಿನಕ್ಕೆ ಒಂದು ಸಾವಿರ ರೂಬಲ್‌ಗಳು.” “ಒಂದು ದಿನಕ್ಕೆ ? ಅದೆಂಥ ಅಳತೆ? ದಿನ ಎಂದರೆ ಎಷ್ಟು ಎಕರೆಯಾಗುತ್ತದೆ.” “ಅದನ್ನು ನಿನಗೆ ಹೇಗೆ ಲೆಕ್ಕಮಾಡಿ ಹೇಳಬೇಕೋ ನಮಗೆ ತಿಳಿಯುತ್ತಿಲ್ಲ” ಎಂದು ನಾಯಕ ಮುಂದುವರಿಸಿದ.

“ನಾವು ದಿನಮಾನದಲ್ಲಿ ಮಾರಾಟಮಾಡುತ್ತೇವೆ. ನೀನು ಒಂದು ದಿನದಲ್ಲಿ ಕಾಲ್ನಡಿಗೆಯಲ್ಲಿ ಎಷ್ಟು ದೂರ ಹೋಗುವಿಯೋ ಅಷ್ಟು ಭೂಮಿ ನಿನ್ನದು, ಕ್ರಯ ಒಂದು ದಿನಕ್ಕೆ ಒಂದು ಸಾವಿರ ರೂಬಲ್‌ಗಳು.”

"ಆದರೆ ಒಂದು ದಿನದಲ್ಲಿ ಸಾಕಷ್ಟು ಭೂಪ್ರದೇಶವನ್ನು ಕ್ರಮಿಸಬಹುದು."

ಪಾಹಂ ವಿಸ್ಮಿತನಾಗಿ ನುಡಿದ. ನಾಯಕ ನಗುತ್ತ ಹೇಳಿದ.

“ಅಷ್ಟು ಭೂಮಿ, ನಿನ್ನದಾಗುತ್ತೆ. ಆದರೆ ಒಂದು ಷರತ್ತಿದೆ. ಅದೆಂದರೆ, ಒಂದು ದಿನದಲ್ಲಿ ನೀನು ಎಷ್ಟು ದೂರ ಕಾಲ್ನಡಿಗೆಯಲ್ಲಿ ನಡೆಯುವೆಯೋ ಅದೇ ದಿನ ನೀನು ಎಲ್ಲಿಂದ ನಡಿಗೆ ಪ್ರಾರಂಭಿಸಿದೆಯೋ ಆ ಸ್ಥಳಕ್ಕೆ ವಾಪಸಾಗಬೇಕು. ಇಲ್ಲವಾದಲ್ಲಿ ನೀನು ದುಡ್ಡು ಕಳೆದುಕೊಳ್ಳುತ್ತೀಯ”.

“ಆದರೆ ನಾನು ಕ್ರಯಿಸಿದ ಹಾದಿಯನ್ನು ಗುರುತಿಸಿಡುವುದು.”

“ಅದೇನು ಕಷ್ಟವಲ್ಲ, ನಿನಗೆ ಯಾವ ಭೂಮಿ ಬೇಕೋ ಅಲ್ಲಿಗೆ ಹೋಗೋಣ ಅಲ್ಲಂದ ನೀನು ನಡಿಗೆ, ಪ್ರಾರಂಭಿಸು. ನೀನು ಕೈಯ್ಯಲ್ಲಿ ಗುದ್ದಲಿ ತೆಗೆದುಕೊಂಡಿರಬೇಕು. ಎಲ್ಲಿ ನಿನಗೆ ಅಗತ್ಯ ಎಂದು ತೋರುತ್ತದೆಯೋ ಅಲ್ಲಿ ಗುದ್ದಲಿಯಿಂದ ಭೂಮಿ ಅಗೆದು ಗುರುತುಮಾಡು, ಒಂದೊಂದು ತಿರುವಿನಲ್ಲೂ ನೀನು ಗುಂಡಿ ತೆಗೆದು ಮಣ್ಣುಗುಡ್ಡೆ ಮಾಡಬಹುದು. ನಾವು ಬೇಕಾದರೆ ಒಂದು ಗುಂಡಿಯಿಂದ

ಇನ್ನೊಂದು ಗುಂಡಿವರೆಗೆ ನೇಗಿಲಲ್ಲಿ ಉತ್ತು ಗುರುತುಮಾಡೋಣ, ನೀನು ಸುತ್ತಿ ಬಳಸಿ ನಡೆದು ನಿನಗೆ ಬೇಕಾದಷ್ಟು ಭೂಮಿಯನ್ನು ಪಡೆಯಬಹುದು: ನಿನ್ನ ನಡಿಗೆಯ ಸುತ್ತಳತೆಯ ಭೂಮಿ ನಿನ್ನ ಪಾಲಾಗುತ್ತದೆ. ಆದರೆ ಸೂರ್ಯಾಸ್ತಕ್ಕೆ ಮೊದಲು ನೀನು ನಡಿಗೆ ಶುರುಮಾಡಿದ ಸ್ಥಳಕ್ಕೆ ವಾಪಸು ಬರಬೇಕು. ನೀನು ಕ್ರಮಿಸಿದಷ್ಟು ಹಾದಿಯ ಭೂಮಿ ನಿನ್ನದಾಗುತ್ತದೆ."

ಪಾಹಾಂಗೆ ಪರಮಾನಂದವಾಯಿತು. ಮರುದಿನ ಮುಂಜಾನೆ ಪರ್ಯಟನ ಶುರುಮಾಡುವುದೆಂದು ನಿರ್ಧರಿಸಲಾಯಿತು. ಮತ್ತೆ ಮಾಂಸದ ಊಟ, ಮೇಲೆ ಮೊಸರು. ಕೊನೆಯಲ್ಲಿ ಚಹಾಪಾನವೂ ಆಯಿತು. ಆ ವೇಳೆಗೆ ರಾತ್ರಿಯಾಯಿತು. ಅವರು ಪಾಹಾಂಗೆ ಮಲಗಲು ತುಪ್ಪಳದ ಹಾಸಿಗೆಯೊಂದನ್ನು ಕೊಟ್ಟರು. ಮರುದಿನ ಬೆಳಗಿನ ಜಾವಕ್ಕೇ ಎದ್ದು ಸೂರ್ಯೋದಯಕ್ಕೆ ಮೊದಲೆ ಪರ್ಯಟನ ಆರಂಭಿಸೋಣ ಎಂದು ಹೇಳಿ ಬ್ಯಾಷ್ಕೀರರು ಅಲ್ಲಿಂದ ಕಾಲ್ದೆಗೆದರು.

೭

ಪಾಹಾಂ ತುಪ್ಪಳದ ಮೆತ್ತೆಯ ಮೇಲೆ ಮಲಗಿಕೊಂಡ. ನಿದ್ದೆ ಬರಲಿಲ್ಲ. ತಲೆಯಲ್ಲಿ ಜಮೀನಿನದೇ ಯೋಚನೆ. *ಆದಷ್ಟು ಹೆಚ್ಚು* ಪ್ರದೇಶವನ್ನು ಗುರುತಿಸದೆ ಬಿಡಲಾರೆ ಎಂದುಕೊಂಡ. "ಸುಲಭವಾಗಿ ನಾನು ಒಂದು ದಿನದಲ್ಲಿ ಮುವತ್ತೈದು ಮೈಲಿ ನಡೆಯಬಲ್ಲೆ. ಈಗಂತೂ ಹಗಲು ಜಾಸ್ತಿ: ಸೂರ್ಯಾಸ್ತ ವಿಳಂಬವಾಗಿ ಆಗುತ್ತದೆ. ಮುವತ್ತೈದು ಮೈಲಿ ಸುತ್ತಳತೆಯ ಪ್ರದೇಶವೆಂದರೆ ಅಪಾರ ಭೂಮಿ ಸಿಕ್ಕಂತೆ, ಅತ್ಯಂತ ಫಲವತ್ತಾದ ಭೂಮಿಯನ್ನೇ ಆರಿಸಿ ಅಲ್ಲಿ ಸಾಗುವಳಿ ಮಾಡುತ್ತೇನೆ, ಎರಡು ಜೊತೆ ಎತ್ತುಗಳನ್ನು ಕೊಳ್ಳುವೆ, ಇನ್ನಿಬ್ಬರು ಕೃಷಿ ಕಾರ್ಮಿಕರನ್ನು ಕೂಲಿಗೆ ತೆಗೆದುಕೊಂಡರೆ ಸಾಕು, ಸಾಗುವಳಿಗೆ ನೂರೈವತ್ತು ಎಕರೆ ಸಾಕು, ಉಳಿದದ್ದು ಗೋಮಾಳ.

ಪಾಹಾಂಗೆ ರಾತ್ರಿ ಬಹಳಹೊತ್ತು ನಿದ್ದೆ ಬರಲಿಲ್ಲ, ಬೆಳಗಾಗುವುದಕ್ಕೆ ಮೊದಲು ಸ್ವಲ್ಪ ಜೊಂಪು ಹತ್ತಿದಂತಾಗಿತ್ತು. ಜೊಂಪು ಹಿಡಿದು ಕಣ್ಣು ರೆಪ್ಪೆ ಮುಚ್ಚಿದನೋ ಇಲ್ಲವೋ ಕನಸು, ತಾನು ಅದೇ ಡೇರೆಯೊಳಗೆ ಮಲಗಿದ್ದು ಹೊರಗಡೆ ಯಾರೋ ಮುಸಿಮುಸಿ ನಗುತ್ತಿರುವಂತೆ ಭಾಸವಾಯಿತು. ಯಾರಿರಬಹುದು? ಅವನು ಎದ್ದು ಹೊರಕ್ಕೆ ಹೋದ. ಬ್ಯಾಷ್ಕೀರರ ನಾಯಕ, ಡೇರೆ ಮುಂದೆ ಕುಳಿತು ಎರಡೂ ಪಕ್ಕೆಗಳನ್ನು ಹಿಡಿದುಕೊಂಡು ನಗುತ್ತಾ ಓಲಾಡುತ್ತಿದ್ದ.

ಪಾಹಾಂ ನಾಯಕನ ಹತ್ತಿರ ಹೋಗಿ ಕೇಳಿದ: 'ಯಾಕೆ ನಗ್ತಿದೀಯ? ಏನನ್ನ ನೋಡಿ ನಗ್ತಿದೀಯ?" ಆದರೆ ನಗುತ್ತಿದ್ದವನು ಬ್ಯಾಷ್ಕೀರರ ನಾಯಕ ಅಲ್ಲ, ಇತ್ತೀಚೆಗೆ ತನ್ನ ಮನೆಗೆ ಬಂದಿದ್ದ, ಭೂಮಿಯ ಬಗ್ಗೆ ಮಾಹಿತಿ ನೀಡಿದ್ದ ವರ್ತಕನಂತೆ ಕಂಡ,
"ನೀನು ಬಹಳ ದಿನಗಳಿಂದ ಇಲ್ಲಿದ್ದೀಯ?' ಎಂದು ವರ್ತಕನನ್ನು ಕೇಳಬೇಕೆನಿಸಿತು.
ಆದರೆ, ಅಷ್ಟರಲ್ಲಿ ನಗುತ್ತಿದ್ದ ವ್ಯಕ್ತಿ ಪಾಹಾಂಗೆ ವರ್ತಕನೂ ಅಲ್ಲ ಎಂಬಂತೆ ಕಂಡಿತು.
ಅವನು ವೋಲ್ಗಾ ದಂಡೆಯಿಂದ ಬಂದ ರೈತನಂತೆ ಕಂಡ, ಬಹಳ ಹಿಂದೆ ಪಾಹಾಂ ಮನೆಗೆ
ಬಂದಿದ್ದ ವೋಲ್ಗಾ ರೈತ,

ಕ್ಷಣ ಮಾತ್ರದಲ್ಲಿ ರೈತನೂ ಮಸುಕು–ಮಸುಕಾಗಿ ಅವನ ಜಾಗದಲ್ಲಿ ಸೈತಾನ ಕಾಣಿಸಿಕೊಂಡ, ಗೊರಸುವಾದ, ಕೊಂಬುಗಳನ್ನುಳ್ಳ ಸೈತಾನ ಅಲ್ಲಿ ಕುಳಿತು ಗಹಗಹಿಸಿ ನಗುತ್ತಿದ್ದಾನೆ. ಅವನ ಮುಂದೆ ಬರಿಗಾಲಿನ ಮನುಷ್ಯನೊಬ್ಬ ಶರಣಾಗತನಾಗಿ ನೆಲದ ಮೇಲೆ ಸಾಷ್ಟಾಂಗ ಅಡ್ಡ ಬಿದ್ದಿದ್ದಾನೆ. ಉದ್ದಂಡ ಅಡ್ಡಬಿದ್ದಿದ್ದ ವ್ಯಕ್ತಿ ಪ್ಯಾಂಟು, ಶರಟು ಮಾತ್ರ ಧರಿಸಿದ್ದ, ಅಡ್ಡಬಿದ್ದಿರುವ ವ್ಯಕ್ತಿಯಾರಿರಬಹುದು ಎಂಬುದನ್ನು ತಿಳಿಯಲು ತಾನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿದಂತೆ ಪಾಹಾಂ ಕನಸು ಕಂಡ, ಅಡ್ಡ ಬಿದ್ದಿದ್ದ ವ್ಯಕ್ತಿ ಸತ್ತಿರುವುದನ್ನು ಅವನು ಕಂಡ. ಆ ವ್ಯಕ್ತಿ ಬೇರೆ ಯಾರೂ ಅಲ್ಲ ತಾನೇ!

ಪಾಹಾಂ ಗರಬಡಿದವಂತೆ ಥರಥರ ನಡುಗುತ್ತ ಎಚ್ಚರಗೊಂಡ.

ಕಣ್ತೆರೆದು ಸುತ್ತ ನೋಡಿದ. ಬೆಳಕು ಹರಿಯುತ್ತಿತ್ತು.

"ಏಳುವ ಸಮಯವಾಯಿತು ಎಂದುಕೊಂಡ

"ಹೊರಡುವ ಸಮಯವಲ್ಲವೆ?"

ಅವನು ಎದ್ದ. ಗಾಡಿಯಲ್ಲಿ ಮಲಗಿದ್ದ ಆಳನ್ನು ಎಬ್ಬಿಸಿದ. ಪ್ರಯಾಣಕ್ಕೆ ಸಿದ್ದವಾಗುವಂತೆ ತಾಕೀತುಮಾಡಿ ಬ್ಯಾಷ್ಕೀರರ ಬಳಿ ಹೋದ.

"ಭೂಮಿ ಅಳತೆ ಮಾಡಲು ಹೋಗುವ ಸಮಯವಾಯಿತಲ್ಲವೆ? ಎಂದ.

ಬ್ಯಾಷ್ಕೀರರು ಎದ್ದು ಎಲ್ಲ ಒಂದೆಡೆ ಕಲೆತರು. ನಾಯಕನೂ ಬಂದ. ಅವರು ಹುಳಿಹಿಡಿದ ಮೊಸರನ್ನು ಕುಡಿದರು. ಪಾಹಾಂಗೆ ಟೀ ಕೊಟ್ಟರು, ಟೀ ಕುಡಿಯುತ್ತಾ ಕೂರಲು ಈಗ ಸಮಯವಿಲ್ಲ ಅವನಿಗೆ.

"ಹೊರಡುವ ಹೊತ್ತಾಯಿತು. ಹೊರಡೋಣ, ಈಗಲೇ ಹೊತ್ತಾಯಿತು. ಇನ್ನು ತಡಮಾಡುವುದು ಬೇಡ" ಎಂದ ಪಾಹಾಂ.

೮

ಬ್ಯಾಷ್ಕೀರರು ಸಿದ್ಧರಾದರು. ಅವರೆಲ್ಲ ಹೊರಟರು, ಕೆಲವರು ಕದುರೆಯ ಮೇಲೆ, ಇನ್ನು ಕೆಲವರು ಗಾಡಿಯಲ್ಲಿ, ಪಾಹಾಂ ತನ್ನ ಚಿಕ್ಕ ಗಾಡಿಯಲ್ಲಿ ಆಳಿನೊಂದಿಗೆ ಹೊರಟ, ಜೊತೆಗೆ ಗುದ್ದಲಿ ತೆಗೆದುಕೊಳ್ಳುವುದನ್ನು ಮರೆಯಲಿಲ್ಲ. ಅವರು ಬಯಲು ಪ್ರದೇಶ ತಲುಪುವ ವೇಳೆಗೆ ಮುಂಜಾನೆಯ ಕೆಂಬೆಳಗು ಪ್ರಕಾಶಗೊಳ್ಳುತ್ತಿತ್ತು. ಅವರು ಸಣ್ಣ ಗುಡ್ಡವೊಂದನ್ನು ಏರಿದರು. ಗಾಡಿಗಳನ್ನು ಬಿಚ್ಚಿದರು. ಕುದುರೆಗಳನ್ನು ಸಮೀಪದಲ್ಲಿ ಕಟ್ಟಿಹಾಕಿದರು. ನಂತರ ಒಂದು ತಾವಿನಲ್ಲಿ ಎಲ್ಲ ಸೇರಿದರು. ನಾಯಕ ಪಾಹಾಂನ ಮುಂದೆ ನಿಂತು ತನ್ನೆದುರಿಗಿನ ಭೂವಿಸ್ತಾರದ ಉದ್ದಗಲ ಕೈಮಾಡಿ ತೋರಿಸುತ್ತ ಹೇಳಿದ:

"ನೋಡು ನಿನ್ನ ಕಣ್ಣಳತೆವರೆಗೆ ಕಾಣುವ ಈ ಎಲ್ಲ ಭೂಮಿಯೂ ನಮ್ಮದು, ಇದರಲ್ಲಿ ನಿನಗಿಷ್ಟವಾದ ಭೂ ಭಾಗವನ್ನು ಆರಿಸಿಕೊಳ್ಳಬಹುದು."

ಪಾಹಾಂ ಕಣ್ಣಲ್ಲಿ ಫಳಫಳ ಮಿಂಚು: ಎಲ್ಲ ಕನ್ನೆನೆಲ. ನಿಮ್ಮ ಅಂಗೈನಷ್ಟೇ ಸಪಾಟಾದದ್ದು. ಅಫೀಮು ಬೀಜದಷ್ಟೇ ಕಪ್ಪಾದ ಮಣ್ಣು, ತಗ್ಗು ಪ್ರದೇಶದಲ್ಲಿ ಎದೆಮಟ್ಟ ಬೆಳೆದು ನಿಂತಿರುವ ವಿವಿಧ ಜಾತಿಯ ಹುಲ್ಲು.

ನಾಯಕ ತಲೆಮೇಲಿದ್ದ ತುಪ್ಪುಳದ ಟೋಪಿಯನ್ನು ತೆಗೆದು ನೆಲದಮೇಲಿಟ್ಟ, ನಂತರ ಹೇಳಿದ:

“ಇದೇ ಗುರುತು. ಇಲ್ಲಿಂದ ನೀನು ಪರ್ಯಟನ ಹೊರಡುತ್ತೀಯ. ಇಲ್ಲಿಂದ ಪ್ರಾರಂಭಿಸಿ ಇಲ್ಲಿಗೇ ಹಿಂದಿರುಗಬೇಕು. ನೀನು ಸುತ್ತಾಡಿದಷ್ಟು ಭೂಮಿಯೂ ನಿನ್ನದು”.

ಪಾಹಾಂ ಹಣವನ್ನು ತೆಗೆದು ಟೋಪಿಯ ಮೇಲೆ ಇಟ್ಟ, ಕೋಟು ಅಂಗಿಯನ್ನು ಬಿಚ್ಚಿಟ್ಟ. ಅರ್ಧತೋಳಿನ ಕರೆ ಅಂಗಿಮಾತ್ರ ಅವನ ಮೈಯ್ಯನ್ನು ಮುಚ್ಚಿತ್ತು. ನಡುಪಟ್ಟಿಯನ್ನು ಬಿಚ್ಚಿ ಸೊಂಟದ ಸುತ್ತ ಬಿಗಿಯಾಗಿ ಕಟ್ಟಿಕೊಂಡ, ರೊಟ್ಟಿಯ ಚೀಲವನ್ನು ಕಸೆ ಅಂಗಿಯ ಎದೆಯೊಳಕ್ಕೆ ಇಟ್ಟುಕೊಂಡ, ನೀರಿನ ಬಾಟಲಿಯನ್ನು ನಡುಪಟ್ಟಿಗೆ ಸಿಕ್ಕಿಸಿದ. ಬೂಟು ಕಟ್ಟಿಕೊಂಡ, ಆಳಿನ ಕೈಯಿಂದ ಗುದ್ದಲಿಯನ್ನು ತೆಗೆದುಕೊಂಡ, ಪಾಹಾಂ ಹೊರಡಲು ಸಿದ್ಧನಾಗಿ ನಿಂತ, ಯಾವ ದಿಕ್ಕಿನಲ್ಲಿ ಪ್ರಾರಂಭಿಸುವುದು ಎಂದು ಕ್ಷಣಕಾಲ ಯೋಚಿಸಿದ. ಎಲ್ಲ ದಿಕ್ಕುಗಳೂ ಮೋಹಕವಾಗಿ ಕಂಡು ಅವನನ್ನು ಸೆಳೆಯುತ್ತಿದ್ದವು. "ಯಾವ ದಿಕ್ಕಾದರೇನು... ಪರವಾಗಿಲ್ಲ, ನಾನು ಸೂರ್ಯಹುಟ್ಟುವ ಪೂರ್ವದಿಕ್ಕಿನತ್ತ ನಡಿಗೆ ಶುರುಮಾಡುತ್ತೇನೆ." ಅವನು ಪೂರ್ವದಿಕ್ಕಿನತ್ತ ಮುಖಮಾಡಿದ, ತಲೆ ಎತ್ತರಿಸಿ ಸೂರ್ಯ ಆಕಾಶದ ಅಂಚಿನಿಂದ ಮೇಲೇರಿ ಬರುವುದನ್ನೇ ಕಾಯುತ್ತ ನಿಂತ. “ಹೀಗೆಲ್ಲ ಕಾಲಹರಣಮಾಡಬಾರದು,

ತಂಪು ಹವೆ ಇರುವಾಗ ನಡೆಯುವುದು ಸುಲಭ" ಎಂದುಕೊಂಡ ದಿಗಂತದ ಅಂಚಿನಲ್ಲಿ ಸೂರ್ಯನ ಹೊಂಗಿರಣಗಳು ನಯನಮನೋಹರವಾಗಿ ಪ್ರಜ್ವಲಿಸಿದ್ದೇ ಪಾಹಾಂ ಕ್ಷಣ ತಡಮಾಡದೆ ಗುದ್ದಲಿಯನ್ನು ಹೆಗಲಿಗೇರಿಸಿ ಬಯಲು ಪ್ರದೇಶದಲ್ಲಿ ಹೆಜ್ಜೆ ಇಟ್ಟ.

ಪಾಹಾಂ ತುಂಬ ನಿಧಾನವಾಗಿಯೂ ಅಲ್ಲ ತುಂಬ ವೇಗವಾಗಿಯೂ ಅಲ್ಲ ಎಂಬ ಗತಿಯಲ್ಲಿ ನಡೆಯಲಾರಂಭಿಸಿದ. ಒಂದು ಸಾವಿರ ಗಜ ನಡೆದ ಮೇಲೆ ಒಂದೆಡೆ ನಿಂತು ಗುಂಡಿ ತೋಡಿದ. ತೋಡಿದ ಮಣ್ಣಿನ ಹೆಂಟೆಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ಸ್ಪಷ್ಟವಾಗಿ ಕಾಣುವಂತೆ ಗುಪ್ಪೆಮಾಡಿದ. ನಂತರ ಅಲ್ಲಿಂದ ಮುಂದಕ್ಕೆ ನಡೆದ. ಈ ವೇಳೆಗೆ ಮೈಸಡಿಲಗೊಂಡಿತ್ತು. ಅವನು ಹೆಚ್ಚು ವೇಗದಿಂದ ನಡೆದ, ಸ್ವಲ್ಪ ಸಮಯದ ನಂತರ ಮತ್ತೊಂದು ತಾವಿನಲ್ಲಿ ನಿಂತು ಗುಂಡಿ ತೋಡಿದ.

ಪಾಹಾಂ ಹಿಂದಕ್ಕೆ ತಿರುಗಿ ನೋಡಿದ. ದೂರದಲ್ಲಿ, ಸೂರ್ಯನ ಬೆಳಕಿಗೆ ಸಣ್ಣಗುಡ್ಡ ಕಾಣಿಸುತ್ತಿತ್ತು. ಗುಡ್ಡದ ಮೇಲಿನ ಜನರೂ ಕಾಣಿಸುತ್ತಿದ್ದರು. ಬಿಸಿಲಿಗೆ ಗಾಡಿಗಳ ಚಕ್ರಗಳೂ ಹೊಳೆಯುತ್ತಿದ್ದವು. ತಾನು ಮೂರು ಮೈಲಿ ನಡೆದಿರುವುದಾಗಿ ಪಾಹಾಂ ಸ್ಥೂಲವಾಗಿ ಅಂದಾಜುಮಾಡಿದ, ಸೆಖೆ ಹೆಚ್ಚುತ್ತಿತ್ತು. ಕಸೆಯಂಗಿ ಬಿಚ್ಚಿ ಹೆಗಲಿನ ಮೇಲೆ ಹಾಕಿಕೊಂಡ. ಮುಂದೆ ನಡೆದ.

ಈಗ ವಿಪರೀತ ಸೆಖೆಯಾಗುತ್ತಿತ್ತು, ತಲೆ ಎತ್ತಿ ಸೂರ್ಯನತ್ತ ನೋಡಿದ. ಅದು ಬೆಳಗಿನ ತಿಂಡಿಯ ಹೊತ್ತಾಗಿತ್ತು. "ಮೊದಲ ಪಾಳಿ ಮುಗಿದಿತ್ತು. ಒಂದು ದಿನದಲ್ಲಿ ನಾಲ್ಕು ಪಾಳಿ, ಆದರೆ ತಿರುಗಿನೋಡಲು ಇದು ಸಮಯವಲ್ಲ, ಬೂಟು ಬಿಚ್ಚುತ್ತೇನೆ’ ಎಂದು ತನ್ನೊಳಗೆ ಹೇಳಿಕೊಂಡ. ಕುಳಿತು ಬೂಟು ಬಿಚ್ಚಿ ಅದನ್ನು ನಡುಪಟ್ಟಿಗೆ ಕಟ್ಟಿಕೊಂಡ. ನಡೆಯುತ್ತಾ ಹೋದ, ಈಗ ನಡೆಯುವುದು ಸುಲಭವಾಗಿತ್ತು.

“ಇನ್ನೂ ಮೈಲಿ ನಡೆದು ನಂತರ ಎಡಕ್ಕೆ ತಿರುಗುತ್ತೇನೆ. ಈ ಜಾಗ ಎಷ್ಟು ದಿವಿನಾಗಿದೆ ಎಂದರೆ ಇದನ್ನು ಕಳೆದುಕೊಳ್ಳುವುದು ಶೋಚನೀಯವೇ ಸರಿ, ಮುಂದೆ ಹೋದಷ್ಟೂ ಭೂಮಿ ಮತ್ತಷ್ಟು ಚೆನ್ನಾಗಿರುವಂತೆ ತೋರುತ್ತದೆ’ ಎಂದು ಮನಸ್ಸಿನಲ್ಲೇ ಮಂಡಿಗೆ ಸವಿದೆ ಅವನು ಸ್ವಲ್ಪ ಸಮಯ ನೇರ

ನಡೆದ. ಒಂದು ತಾವಿನಲ್ಲಿ ನಿಂತು ಸುತ್ತ ಕಣ್ಣುಹಾಯಿಸಿದಾಗ ಸಣ್ಣ ಗುಡ್ಡ ಕಂಡೂ ಕಾಣದಂತೆ ತೋರುತ್ತಿತ್ತು. ಬಹುತೇಕ ಅದು ಕಣ್ಣಳತೆಯಿಂದ ದೂರ ಸರಿದಂತೆಯೇ ಗುಡ್ಡದ ಮೇಲಿನ ಜನರು ಕಪ್ಪುಗೊದ್ದಗಳಂತೆ ಕಾಣುತ್ತಿದ್ದರು. ಅಲ್ಲಿ ಸೂರ್ಯನ ಬೆಳಕಿಗೆ ಏನೋ ಹೊಳೆಯುತ್ತಿರುವುದನ್ನು ಅವನ್ನು ಕಂಡ, "ಓಹ್ ಈ ದಿಕ್ಕಿನಲ್ಲಿ ಬಹಳದೂರ ನಡೆದುಬಂದಿದ್ದೇನೆ. ದಿಕ್ಕು ಬದಲಾಯಿಸಲು ಇದು ಸಕಾಲ. ಮೈಬೆವರುತ್ತಿದೆ. ಬಾಯಾರಿಕೆ ಬೇರೆ" ಎಂದು ಕೊಂಡ.

ಅವನು ಅಲ್ಲಿ ನಿಂತು ಗುಂಡಿ ತೋಡಿದ. ಮಣ್ಣು ಹೆಂಟೆಗಳನ್ನು ಗುಪ್ಪೆಮಾಡಿದ. ಬಾಟಲಿಯ ಬಿರಟೆ ತೆಗೆದು ನೀರು ಕುಡಿದ. ನಂತರ ಎಡಕ್ಕೆ ತಿರುಗಿದ. ಅವನು ನಡದೇ ನಡೆದ, ಆಳೆತ್ತರ ಹುಲ್ಲು. ಸೂರ್ಯ ಉರಿಯುವ ಕೆಂಡದ ಉಂಡೆ. ಪಾಹಾಂಗೆ ಆಯಾಸ ಶುರುವಾಯಿತು. ಸೂರ್ಯನ ಮುಖನಾಡಿದ. ಹೊತ್ತು ನೆತ್ತಿಗೆ ಎಂದಿತ್ತು.

"ಈಗ ಸ್ವಲ್ಪ ವಿಶ್ರಾಂತಿ ಅಗತ್ಯ"

ಅವನು ಅಲ್ಲೆ ಒಂದು ತಾವಿನಲ್ಲಿ ಕುಳಿತು ರೊಟ್ಟಿ ತಿಂದು ನೀರು ಕುಡಿದ. ಆದರೆ ಸುಧಾರಿಸಿಕೊಳ್ಳಲೆಂದು ನೆಲಕ್ಕೆ ಮೈಚಾಚಲಿಲ್ಲ. ನಿದ್ದೆ ಬಂದು ಬಿಡಬಹುದು ಎಂಬ ಭಯ ಸ್ವಲ್ಪಕಾಲ ಕಾಲುಚಾಚಿ ಕುಳಿತಿದ್ದವನೇ ನಂತರ ಎದ್ದು ನಡೆಯಲು ಶುರುಮಾಡಿದ. ಶುರುವಿಗೆ ಏನೂ ಶ್ರಮವಿಲ್ಲದೆ ಲೀಲಾಜಾಲವಾಗಿ ನಡೆದ, ರೊಟ್ಟಿಯಿಂದ ಶಕ್ತಿಬಂದಿತ್ತು. ಆದರೆ ವಿಪರೀತ ಬಿಸಿಲು, ಅವನಿಗೆ ಕಣ್ಣು ಎಳೆಯುತ್ತಿರುವಂತೆ ಭಾಸವಾಯಿತು.

"ಒಂದು ಗಂಟೆ ಕಷ್ಟಪಟ್ಟರೆ ಜೀವಮಾನ ಪೂರ್ತಿ ಸುಖದ ಬದುಕು" ಎಂಬ ಆಲೋಚನೆಯಿಂದ ಬಿರುಸಾಗಿ ನಡೆದ. ಈ ದಿಕ್ಕಿನಲ್ಲಿ ಅವನು ಬಹಳ ದೂರ ನಡೆದು ಬಂದಿದ್ದ. ಮತ್ತೆ ಎಡಕ್ಕೆ ತಿರುಗಬೇಕಾಗಿತ್ತು. ತೇವದಿಂದ ಕೂಡಿದ ತಗ್ಗುಭೂಮಿ ಅವನಿಗೆ ಎದುರಾಯಿತು. ಈ ಜಾಗಬಿಡುವುದು ಮೂರ್ಖತನವಾದೀತು. ಅಗಸೆ ಬೆಳೆಗೆ ಇದು ಫಲವತ್ತಾದ ಭೂಮಿ ಎಂದು ಕೊಂಡವನೇ ತಗ್ಗು ಪ್ರದೇಶ ಕ್ರಮಿಸಿ, ಅಲ್ಲೊಂದು ಗುಂಡಿ ತೋಡಿ: ಗುರುತು ಮಾಡಿದ. ನಂತರ ತಿರುಗಿದ ಪಾಹಾಂ ಸಣ್ಣ ಗುಡ್ಡದತ್ತ ನೋಡಿದ, ಬಿಸಿಲಿನಿಂದಾಗಿ ಗಾಳಿಯೂ ಬಿಸಿಬಿಸಿಯಾಗಿತ್ತು. ಬಿಸಿಲಿನ ಝಳಕ್ಕೆ ಗಾಳಿಯೂ ಕಂಪಿಸಿದಂತಾಗಿ ಮಂಜು ಕವಿದಂತೆ ವಾತಾವರಣ ಮಸುಕು ಮಸುಕಾಗಿತ್ತು. ಎಲ್ಲ ಅಸ್ಪಷ್ಟ ಗುಡ್ಡದ ಮೇಲಿನ ಜನರು ಕಾಣಿಸುತ್ತಲೇ ಇರಲಿಲ್ಲ.

"ಓಹ್, ಪಾರ್ಶ್ವಗಳ, ಉದ್ದ ಹೆಚ್ಚಾಯಿತು, ಉದ್ದಳತೆ ಕಡಿಮೆ ಮಾಡಬೇಕು" ಎಂದು ಕೊಂಡು ಮೂರನೆಯ ಪಾರ್ಶ್ವಕ್ಕೆ ತಿರುಗಿದ. ನಡಿಗೆ ಜೋರು ಮಾಡಿದ, ಸೂರ್ಯನತ್ತ ನೋಡಿದ. ಸೂರ್ಯ ದಿಗಂತದಲ್ಲಿ ಅರ್ಧಕ್ಕೆ ಬಂದಿದ್ದ. ಆದರೆ ಅವನು ಚೌಕದ ಮೂರನೆಯ ಪಾರ್ಶ್ವದಿಂದ ಎರಡು ಮೈಲಿಯಷ್ಟೂ ನಡೆದಿರಲಿಲ್ಲ. ಇನ್ನೂ ಹತ್ತು ಮೈಲಿ ನಡೆಯುವುದು ಅವನ ಗುರಿಯಾಗಿತ್ತು.

"ಇಲ್ಲ, ಇದರಿಂದ ಜಮೀನು ಓರೆ ಕೋರೆಯಾಗುವುದು, ಸಮತಟ್ಟು ಇರುವುದಿಲ್ಲ. ನಾನು ನೇರದಾರಿಯಲ್ಲಿ ಇನ್ನಷ್ಟು ದೂರ ಬೇಗ ಬೇಗ ನಡೆಯಬೇಕು, ನಾನು ತುಂಬದೂರ

ಹೋಗಬಹುದೇನೋ, ಆದರೆ ಈಗಾಗಲೇ ಸಾಕಷ್ಟು ಭೂಮಿ ನನ್ನ ಪಾಲಿಗೆ ಬಂದಿದೆ' ಎಂದುಕೊಂಡ. ಪಾಹಾಂ ಅಲ್ಲಿ ನಿಂತು ಗುಂಡಿತೋಡಿದ. ನಂತರ ಸಣ್ಣಗುಡ್ಡಕ್ಕೆ ನೇರ ಮುಖ ಮಾಡಿ ನಡೆದ.

ಪಾಹಾಂ ಹಿಂದಿರುಗಿದವನೇ ಈಗ ನೇರವಾಗಿ ಸಣ್ಣಗುಡ್ಡಕ್ಕೆ ಮುಖಮಾಡಿ ಆ ದಿಕ್ಕಿನಲ್ಲೇ ನಡೆಯಲಾರಂಭಿಸಿದ. ಆದರೆ ಈಗ ಅವನು ಕಷ್ಟದಿಂದ ಹೆಜ್ಜೆಹಾಕುತ್ತಿದ್ದ. ಬಿಸಿಲಿನ ತಾಪ ಅವನನ್ನು ಹಿಂಡಿ ಹಿಪ್ಪೆಕಾಯಿ ಮಾಡಿತ್ತು. ಅವನ ಬರಿಗಾಲು ಒಡೆದಿತ್ತು, ಜಜ್ಜು ಗಾಯಗಳಾಗಿದ್ದವು. ಕಾಲುಗಳು ಸೋತು ಹೆಜ್ಜೆ ಎತ್ತಿಡುವುದೇ ಕಷ್ಟವಾಗುತ್ತಿತ್ತು. ಕೊಂಚಕಾಲ ವಿಶ್ರಮಿಸಿಕೊಂಡರಾಗದೇ ಎಂದು ಅವನು ವಿಶ್ರಾಂತಿಗಾಗಿ ಹಾತೊರೆಯುತ್ತಿದ್ದ. ಆದರೆ ಸೂರ್ಯಾಸ್ತಕ್ಕೆ ಮೊದಲು ಹೊರಟ ಜಾಗ ತಲುಪಬೇಕಾದರೆ ವಿಶ್ರಾಂತಿ ಅಸಾಧ್ಯ. ಕಾಲ ಮನುಷ್ಯನಿಗೆ ಕಾಯುವುದಿಲ್ಲ, ಸೂರ್ಯ ಪಶ್ಚಿಮ ದಿಗಂತದಲ್ಲಿ ಕೆಳಕ್ಕೆ ಇನ್ನೂ ಕೆಳಕ್ಕೆ ಇಳಿಯುತ್ತಿದ್ದ.

"ಓ ದೇವರೇ, ನಾನು ಅತಿಯಾಸೆಯಿಂದ ದೊಡ್ಡ ತಪ್ಪು ಮಾಡಿದೆನೆ?' ಎಂಥ ಅವಿವೇಕಿ ನಾನು? ತಡವಾಗಿ ಆ ಜಾಗ ತಲುಪಿದರೇನಂತೆ? ಏನಾಗುತ್ತದೆ?" ಅವನು ಸಣ್ಣಗುಡ್ಡದತ್ತ ಒಮ್ಮೆ, ಇನ್ನೊಮ್ಮೆ ಸೂರ್ಯನನ್ನು ನೋಡಿದ. ಅವನು ತಲುಪಬೇಕಾದ ಜಾಗ ಇನ್ನೂ ಬಲು ದೂರ, ಆದರೆ ಸೂರ್ಯ ಪಶ್ಚಿಮ ದಿಗಂತದ ಅಂಚಿನಲ್ಲಿ ಕೆಳಕ್ಕೆ ಇನ್ನೂ ಕೆಳಕ್ಕೆ....ಅಸ್ತಮದ ಬಿಂದುವಿನ ಹತ್ತಿರ ಬಂದು ನಿಂತಿದ್ದ. ಪಾಹಾಂ ನಡೆದೇ ನಡೆದ, ಹೆಜ್ಜೆ ಎತ್ತಿ ಇಡುವುದೇ ಕಷ್ಟವಾಗಿತ್ತು. ಆದರೂ ಬಿರಬಿರನೆ ನಡೆದ. ಎಷ್ಟೇ ಜೋರಾಗಿ ನಡೆದರೂ ಅವನು ತಲುಪಬೇಕಾದ ಜಾಗ ಬಲುದೂರ.

ಅವನು ಈಗ ಓಡಲಾರಂಭಿಸಿದ, ಕಸೆ ಅಂಗಿ, ಕೋಟು ಕಿತ್ತೆಸೆದ; ಬೂಟು, ಟೋಪಿ, ನೀರಿನ ಬಾಟಲಿ ಎಲ್ಲವನ್ನೂ ನೆಲಕ್ಕೆ ಚೆಲ್ಲಿ ಹಗುರಾದ, ತನಗೆ ಆಧಾರವಾದ ಗುದ್ದಲಿಯೊಂದನ್ನು ಮಾತ್ರ ಇಟ್ಟುಕೊಂಡ.

"ನಾನೀಗ ಏನು ಮಾಡಲಿ? ನಾನು ಅತಿಯಾಸೆಪಟ್ಟೆ, ಮಿತಿಮೀರಿ ಬಾಚಿಕೊಂಡೆ.

ಎಲ್ಲ ಹಾಳಾಯಿತು. ಸೂರ್ಯಾಸ್ತಕ್ಕೆ ಮುಂಚೆ ಆ ಜಾಗ ತಲುಪಲಾರೆ..."

ಈ ಹೆದರಿಕೆಯಿಂದಾಗಿ ಅವನಿಗೆ ಏದುಸಿರು ಬಂತು, ಪಾಹಾಂ ಓಡುತ್ತಿದ್ದ. ಪ್ಯಾಂಟು, ಶರಟು ಎಲ್ಲ ಬೆವರಿನಿಂದ ಒದ್ದೆ ಮುದ್ದೆಯಾದವು. ಅವನ ಬಾಯಿ ಒಣಗಿತು. ಅವನ ಎದೆ ಕಮ್ಮಾರನ ಕುಲುಮೆಯಾಗಿತ್ತು, ಸುತ್ತಿಗೆ ತೆಗೆದುಕೊಂಡು ಹೊಡೆಯುತ್ತಿರುವಂತೆ ಡವಗುಟ್ಟುತ್ತಿತ್ತು. ಕಾಲು ಕುಸಿಯುತ್ತಿತ್ತು. ಅವು ತನ್ನದಲ್ಲವೇನೋ ಎಂಬ ಮಾದರಿಯಲ್ಲಿ ಕಾಲುಗಳು ಮಡಿಚಿಕೊಳ್ಳುತ್ತಿದ್ದವು. ಪಾಹಾಂಗೆ ಹೆದರಿಕೆಯಾಯಿತು. ಎಲ್ಲಿ ಆಯಾಸದಿಂದ ಸತ್ತುಹೋಗುವೆನೋ ಎಂದು ಅವನು ತಲ್ಲಣಿಸಿದ.

ಸಾವಿನ ಭೀತಿ ಎದುರೂ ಅವನು ಎದೆಗುಂದಲಿಲ್ಲ. ನಿಲ್ಲಲಿಲ್ಲ ಓಡಿದ. "ಇಷ್ಟೆಲ್ಲ ದೂರ ಓಡಿ ಬಂದು ಈಗ ನಿಂತರೆ ಅವರೆಲ್ಲ ನನ್ನನ್ನು ಮೂರ್ಖ ಎಂದು ಹಿಯಾಳಿಸಿಯಾರು? ಎಂದು ಕೊಂಡ. ಪಾಹಾಂ ಓಡಿಯೇ ಓಡಿದ, ಗುರಿ ತಲುಪಲು ಓಡಿದ. ಅವನೀಗ ತಾನು ತಲುಪಬೇಕಾದ ತಾವಿಗೆ ಹತ್ತಿರ

ಹತ್ತಿರ ಬಂದಿದ್ದ. ಹತ್ತಿರ ಹತ್ತಿರ ಬಂದಂತೆ ಬ್ಯಾಷ್ಕೀರರು ಹರ್ಷೋದ್ಗಾರ ಮಾಡುತ್ತ ಅವನತ್ತ ಕೈಬೀಸಲಾರಂಭಿಸಿದರು. ಅವರ ಹರ್ಷೋದ್ಗಾರದಿಂದ ಅವನ ಎದೆಯಲ್ಲಿ ಆಸೆ–ಆಕಾಂಕ್ಷೆ–ಭರವಸೆಗಳು ಪ್ರಜ್ವಲಿಸಿದವು. ಅವನು ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಓಡಿದ.

ಸೂರ್ಯ ಪಶ್ಚಿಮ ದಿಗಂತದ ಅಂಚಿಗೆ ಸರಿಯುತ್ತಿದ್ದ. ಮಂಜು ಮುಸುಕಿದಂತೆ ಇದ್ದ ದೊಡ್ಡ ಆವೃತ್ತದೊಳಕ್ಕೆ ಅಂಗುಲಂಗುಲ ಕುಸಿಯುತ್ತಿದ್ದ ಸೂರ್ಯಾಸ್ತಮ ರಕ್ತದ ಓಕುಳಿಯಾಡಿದಂತೆ ಕೆಂಪು, ಕೆಂಪು ಅಂಚುಕಟ್ಟಿದ ದಿಗಂತ, ಹೌದು, ಇದೀಗ ಆ ಸಮಯ ಬಂತು, ಸೂರ್ಯಾಸ್ತಕ್ಕೆ ಎಲ್ಲ ಸಜ್ಜಾಗಿದೆ. ಸೂರ್ಯ ಅಸ್ತಮಾನದ ಪರಿಧಿಯ ಅಂಚಿಗೆ ಬಂದಿದ್ದ. ಅವನೂ ತನ್ನ ಗುರಿಯ ಹತ್ತಿರ ಹತ್ತಿರ ಬಂದಿದ್ದ.

"ಬಾ, ಬೇಗ ಬಾ' ಎಂದು ಹುರುಪು ನುಡಿಗಳನ್ನು ಆಡುತ್ತಾ ಗುಡ್ಡದ ಮೇಲಿಂದ ಕೈಬೀಸುತ್ತಿದ್ದ ಜನರನ್ನು ಅವನು ಕಂಡ, ನೆಲದ ಮೇಲಿದ್ದ ತುಪ್ಪಳದ ಟೋಪಿ, ಅದರ ಮೇಲೆ ತಾನಿಟ್ಟ ಹಣ, ಎಲ್ಲಾ

ಅವನಿಗೀಗ ಕಾಣಿಸುತ್ತಿತ್ತು. ಬ್ಯಾಷ್ಕೀರರ ಮುಖಂಡ ಸೊಂಟದ ಮೇಲೆ ಎರಡೂ ಕೈಗಳನ್ನಿರಿಸಿ ನಿಂತಿದ್ದ. ಪಾಹಾಂಗೆ ತಾನು ಕಂಡ ಕನಸು ನೆನಪಾಯಿತು.

"ಅಲ್ಲಿ ಅಪಾರವಾಗಿ ಭೂಮಿ ಇದೆ. ಆದರೆ ಆ ಭೂಮಿ ತನ್ನದಾಗುವುದೆ? ದೇವರ ಇಚ್ಛೆ ಹಾಗಿದೆಯೆ? ಮುಗಿಯಿತು, ನನ್ನ ಕಥೆ ಮುಗಿಯಿತು. ನಾನು ಸತ್ತೆ. ನಾನಿನ್ನು ಜೀವಂತ ಆ ಸ್ಥಳ ಮುಟ್ಟಲಾರೆ."

ಪಾಹಾಂ ಸೂರ್ಯನತ್ತ ನೋಡಿದ. ಸೂರ್ಯ ಭೂಮಿಯ ತಳ ತಲುಪಿದ್ದ. ಅವನು ರಭಸಗತಿಯಿಂದ ಮುನ್ನುಗ್ಗಿದ; ದೇಹವನ್ನು ನೆಲಕ್ಕೆ ಬಾಗಿಸಿ, ಕಾಲುಗಳು ನೆಲಮುಟ್ಟಿ ಮುಗ್ಗರಿಸಿ ಬೀಳದಂತೆ ಓಡಿದ. ಅವನು ಸಣ್ಣ ಗುಡ್ಡ ತಲುಪಿದ ಕ್ಷಣಮಾತ್ರದಲ್ಲಿ ಕತ್ತಲು ಆವರಿಸಿತು. ಅವನು ಸೂರ್ಯನತ್ತ ನೋಡಿದ. ಸೂರ್ಯ ಆಗಲೇ ಮುಳುಗಿದ್ದ. ಅವನು ಹೃದಯವಿದ್ರಾವಕವಾಗಿ ಚೀರಿದ: "ನನ್ನ ಶ್ರಮ ಎಲ್ಲ ವ್ಯರ್ಥವಾಯಿತು."

ಅವನು ಇನ್ನೇನು ಓಡುವುದನ್ನು ನಿಲ್ಲಿಸಲಿದ್ದ. ಆದರೆ ತಕ್ಷಣ ನೆನಪಾಯಿತು. ತನಗೆ ಸೂರ್ಯಾಸ್ತವಾದಂತೆ ಕಂಡರೂ ಗುಡ್ಡದ ಮೇಲಿರುವ ಮಂದಿಗೆ ಇನ್ನೂ ಸೂರ್ಯಾಸ್ತವಾಗಿಲ್ಲ. ಸೂರ್ಯ ಕಾಣಿಸುತ್ತಿದ್ದಾನೆ.

ಬ್ಯಾಷ್ಕೀರರು ಹುರುಪಿನ ಮಾತುಗಳಿಂದ ಅವನತ್ತ ಕೈಬೀಸುತ್ತಿದ್ದರು. ಉತ್ತೇಜನ ತುಂಬುತ್ತಿದ್ದರು. ಅವನು ಸುದೀರ್ಘವಾಗಿ ಉಸಿರು ತೆಗೆದುಕೊಂಡ, ಗುಡ್ಡದ ಮೇಲಕ್ಕೆ ಓಡಿದ. ಅವನು ಗುಡ್ಡ ತಲುಪಿದಾಗ ಅಲ್ಲಿ ಇನ್ನೂ ಬೆಳಕಿತ್ತು. ಅವನು ಪರ್ಯಟನ ಆರಂಭಿಸಿದ ಸಣ್ಣ ಗುಡ್ಡದ ಆ ತಾವನ್ನು ತಲುಪಿದ್ದ. ತುಪ್ಪಳದ ಟೋಪಿ ಅಲ್ಲೇ ಇತ್ತು. ಬ್ಯಾಷ್ಕೀರರ ಮುಖಂಡ ಪಕ್ಕೆ ಹಿಡಿದುಕೊಂಡು ನಗುತ್ತಲಿದ್ದ. ಪಾಹಾಂಗೆ ಮತ್ತೆ ತಾನು ಕಂಡ ಕನಸು ನೆನಪಾಯಿತು.ಅವನು ಚೀರಿದ.ಅವನು ನಿಂತ ಭೂಮಿ ಕುಸಿಯಿತು. ಕಾಲು ಕುಸಿಯಿತು.

ಅವನು ಮುಂದಕ್ಕೆ ಬಿದ್ದು ತನ್ನ ಕೈಗಳಿಂದ ತುಪ್ಪಳದ ಟೋಪಿಯನ್ನು ಬಾಚಿಕೊಂಡ. "ಓಹ್, ಎಂಥ ಅದ್ಭುತವ್ಯಕ್ತಿ ಅವನು ಬಹಳಷ್ಟು ಭೂಮಿ ಸಂಪಾದಿಸಿದ್ದಾನೆ" ಎಂದು ಮುಖಂಡ ಉದ್ಗಾರವೆತ್ತಿದ. ಪಾಹಾಂನ ಆಳು ಓಡೋಡಿ ಬಂದು ಅವನನ್ನು ಎಬ್ಬಿಸಿ ಕೂರಿಸುವ ಪ್ರಯತ್ನ ಮಾಡಿದ, ಆದರೆ

ಒಡೆಯನ ಬಾಯಲ್ಲಿ ರಕ್ತ ಒಸರುತ್ತಿರುವುದನ್ನು ಅವನು ಕಂಡ.

ಪಾಹಾಂ ಸತ್ತಿದ್ದ!

ಬ್ಯಾಷ್ಕೀರರು ಲೊಚಗುಟ್ಟಿ ಸಂತಾಪ ಸೂಚಿಸಿದರು: "ಅಯ್ಯೋಪಾಪ",

ಆಳು ಗುದ್ದಲಿ ತೆಗೆದುಕೊಂಡು ಗೋರಿ ತೋಡಿದ, ಪಾಹಾಂ ನಿಡಿದಾಗಿ ಚಾಚಿ ಮಲಗಿಕೊಳ್ಳಲು ಅನುವಾಗುವಷ್ಟು ವಿಸ್ತಾರದ ಗೋರಿ ತೋಡಿದ. ಅದರೊಳಗೆ ಅವನನ್ನು ಸಮಾಧಿ ಮಾಡಿದ, ತಲೆಯಿಂದ ಕಾಲಿನ ಹಿಮ್ಮಡಿಯವರೆಗೆ ಆರು ಅಡಿ ಭೂಮಿ! ಅಷ್ಟೇ

ಅವನಿಗೆ ಬೇಕಾದದ್ದು!!

ಆರು ಅಡಿ ಭೂಮಿ

ಅಷ್ಟೇ ಅವನಿಗೆ ಬೇಕಾದದ್ದು!!

***

**ಮೂಲ ಲೇಖಕರು: ಲಿಯೋ ಟಾಲ್‌ಸ್ಟಾಯ್ ( ೧೮೨೮-೧೯೧೦)**

ರಷ್ಯಾ ದೇಶದ ಯಸ್ನಾಯಾ ಪಾಲಿಯಾನಾದಲ್ಲಿ ಜನಿಸಿದರು. ಗಮನಾರ್ಹ ಕೃತಿಗಳು: "ಡಾಗ್ಮ್ಯಾಟಿಕ್ ಥಿಯಾಲಜಿಯ ಪರೀಕ್ಷೆ" "ಅನ್ನಾ ಕರೇನಿನಾ" "ಬಾಲ್ಯ" "ಫಾದರ್ ಸೆರ್ಗಿಯಸ್" "ಹಡ್ಜಿ-ಮುರಾದ್" "ಖೋಲ್‌ಸ್ಟೊಮರ್" "ನನ್ನ ತಪ್ಪೊಪ್ಪಿಗೆ" "ಪುನರುತ್ಥಾನ" " "ದಿ ಡೆತ್ ಆಫ್ ಇವಾನ್ ಇಲಿಚ್" "ದೇವರ ರಾಜ್ಯವು ನಿಮ್ಮೊಳಗಿದೆ" " ಕ್ರೂಟ್ಜರ್ ಸೋನಾಟಾ" "ಜೀವಂತ ಶವ" "ಕತ್ತಲೆಯ ಶಕ್ತಿ" "ದಾಳಿ" "ಮೂರು ಸಾವುಗಳು", "ಯುದ್ಧ ಮತ್ತು ಶಾಂತಿ" "ನಾನು ಏನು ನಂಬುತ್ತೇನೆ" "ಕಲೆ ಎಂದರೇನು?" ಮುಂತಾದವು.

**ಅನುವಾದಕರು: ಜಿ.ಎನ್. ರಂಗನಾಥರಾವ್**

ಹಿರಿಯ ಲೇಖಕ, ಪತ್ರಕರ್ತ ಜಿ.ಎನ್.ರಂಗನಾಥ ರಾವ್ ಹುಟ್ಟಿದ್ದು ೧೯೪೨ ರಲ್ಲಿ, ಬೆಂಗಳೂರು ಜಿಲ್ಲೆಯ ಹಾರೋಹಳ್ಳಿಯಲ್ಲಿ. ಕೃತಿಗಳು; ಹೊಸ ತಿರುವು, ಮಾಸ್ತಿಯವರ ನಾಟಕಗಳು, ಒಳನೋಟ, ಹಿಂದಣ್ಣ ಹೆಜ್ಜೆ ಅನ್ಯೋನ್ಯ, ಗುಣ- ದೋಷ ಮುಖ್ಯ (ವಿಮರ್ಶಾ ಕೃತಿಗಳು). ಶೇಕ್ಸ್ ಪಿಯರನ ರೋಮಿಯೋ ಜೂಲಿಯಟ್ ಮತ್ತು ಆಂಟನಿ ಕ್ಲಿಯಾಪಾತ್ರ, ಅನ್ವಿಯ ಅಂತಿಗೊನೆ, ಜೀನ್ ಜೆನೆಯ ದಿ ಬ್ಲ್ಯಾಕ್, ಟಾಲ್‌ಸ್ಟಾಯನ ಡೆತ್ ಆಫ್ ಇವಾನ್ ಇಲಿಚ್, ಸೋಲ್ಜೆನಿನ್ನ ಇವಾನ್ ದೆನಿಸೊವಿಚ್, ರಾಮಚಂದ್ರ ಗುಹ ಅವರ ಇಂಡಿಯಾ ಆಫ್ಟರ್ ಗಾಂಧಿ(ಬಾಪೂ ನಂತರದ ಭಾರತ), ಮೇಕರ್ಸ್ ಆಫ್ ಮಾಡರ್ನ್ ಇಂಡಿಯಾ (ನವಭಾರತದ ನಿರ್ಮಾಪಕರು), ಪೇಟ್ರಿಯೆಟ್ಸ್ ಅಂಡ್ ಪಾರ್ಟಿಸಾನ್ಸ್( ದೇಶಪ್ರೇಮಿಗಳು ಮತ್ತು ಪಕ್ಷಪಾತಕರು. ಗಾಂಧಿ ಬಿಫೋರ್ ಇಂಡಿಯಾ( ಗಾಂಧಿ ಮಹಾತ್ಮರಾದುದು) ಮತ್ತು ಖಲೀಲ್ ಗಿಬ್ರಾನನ ಕಾಲಾತೀತ ವಿಖ್ಯಾತ ಖಲೀಲ್ ಗಿಬ್ರಾನ್.

## ೩. ಸಾವೆ ಮನೆಗೆ ಭೂಷಣ!    – ಕೆ.ಸತ್ಯನಾರಾಯಣ

ಸೈಟುಕೊಂಡು, ಹೊಸಮನೆ ಕಟ್ಟಿಸುವಷ್ಟು ವ್ಯವಧಾನ, ತಾಳ್ಮೆ, ಜಾಣ್ಮೆ ಯಾವುದೂ ಇಲ್ಲದ ನಾನು ಈಗಾಗಲೇ ಕಟ್ಟಿರುವ ಮನೆಯನ್ನು ಕೊಳ್ಳುವುದೆಂದು ನಿರ್ಧರಿಸಿ, ನನ್ನ ಹೆಂಡತಿಯನ್ನು ಒಪ್ಪಿಸಿ ಬೆಂಗಳೂರು ಮಹಾನಗರದಲ್ಲಿ ಮನೆಯನ್ನು ತಲಾಶು ಮಾಡಲು ಪ್ರಾರಂಭಿಸಿದೆ. ಸ್ನೇಹಿತರು, ಹಿತೈಷಿಗಳು, ಹಿತಶತ್ರುಗಳು, ಬ್ರೋಕರ್‌ಗಳು, ಫೂಟ್ ಲಾಯರಿಗಳು– ಎಲ್ಲರೂ ಎಲ್ಲ ರೀತಿಯ ಮನೆಗಳನ್ನು ತೋರಿಸಲು ಪ್ರಾರಂಭಿಸಿದರು. ಫ್ಲಾಟ್, ಪೆಂಟ್ ಹೌಸ್, ತಾರಸಿ ಮನೆ, ಕಾಂಪೌಂಡ್ ಇರುವ ಮನೆ, ಸಣ್ಣ ಬಂಗಲೆ, ತೋಟದ ಮನೆ ಎಲ್ಲವೂ ಈಚೆಗೆ ಕಟ್ಟಿದವು. ಈಚಿನ ವಾಸ್ತು ಶೈಲಿಯನ್ನು ವಾಸ್ತುಶಾಸ್ತ್ರದ ಬಯಕೆಯನ್ನು ಅಳವಡಿಸಿಕೊಂಡವು. ಜ್ಯೋತಿಷ್ಯಶಾಸ್ತ್ರದ ಪ್ರಕಾರ ನಮ್ಮ ಕುಟುಂಬದ ಸದಸ್ಯರ ನಕ್ಷತ್ರಯೋಗಕ್ಕೆ ಪ್ರಶಸ್ತವಾದಂತವು. ಆದರೂ ಯಾವುದೇ ಮನೆಯನ್ನು ನೋಡಿದಾಗ ಏನೋ ಪಿಚ್ಚೆನಿಸುತ್ತಿತ್ತು. ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ. ಕೊನೆಗೆ ನಾನು ಒಪ್ಪಿಕೊಂಡದ್ದು ಜಗುಲಿ, ತೊಟ್ಟಿ ತುಳಸಿಕಟ್ಟೆಯೆಲ್ಲ ಇರುವ ಒಂದು ಹಳೆಕಾಲದ ಮನೆ. ಸಕಲರಿಗೂ ಆಶ್ಚರ್ಯ, ಕುತೂಹಲ, ನಾನಂತೂ ಆ ಮನೆಯನ್ನು ಒಪ್ಪಲು ಕಾರಣವೆಂದರೆ ಮನೆಯನ್ನು ಪರಿಚಯಿಸುವಾಗ ಮನೆಯ ಹಿಂದಿನ ಮಾಲೀಕ ಮನೆಯ ವೈಶಿಷ್ಟ್ಯವನ್ನು ನನಗೆ ವಿವರಿಸುತ್ತಾ, "ನೋಡಿ ಈ ಮನೆಯಲ್ಲಿ ನಾವು ಈಗಾಗಲೇ ಮೂರು ನಾಲ್ಕು ತಲೆ ಕಳೆದಿದ್ದೇವೆ. ನಮ್ಮಜ್ಜಿ ಗೊತ್ತಲ್ಲ. ಅವರು ಈ ತುಳಸಿಕಟ್ಟೆ ಪ್ರದಕ್ಷಿಣೆ ಹಾಕುವಾಗ ಕುಸಿದು ಸತ್ತರು. ನಮ್ಮ ಮುತ್ತಾತ ಸತ್ತದ್ದು ಈ ಮೂಲೆಯಲ್ಲಿರುವ ಕರಿಮರದ ಮಂಚದ ಮೇಲೆ, ನಮ್ಮ ಮನೆ ಹಸು ಬಾವಿಕಟ್ಟೆಗೆ ಮೈಯನ್ನು ಉಜ್ಜಿಕೊಳ್ಳುತ್ತಿದ್ದಾಗ ಸತ್ತು ಹೋಯಿತು. ಮನೆಯ ಎಡ ಜಗುಲಿ ಮೇಲೆ ಸತ್ತವರ ದೇಹ ಮಲಗಿಸಿ ಪೂಜೆ ಮಾಡಿಯೇ ನಾವು ಸ್ಮಶಾನಕ್ಕೆ ಒಯ್ಯುವುದು ಲಾಗಾಯ್ತಿನಿಂದ ನಡೆದು ಬಂದಿರುವಂತದ್ದು" ವಿವರಣೆಯಲ್ಲಿ ಶ್ರದ್ಧೆಯಿತ್ತು, ತನ್ಮಯತೆಯಿತ್ತು. ಮನೆ ನನಗೆ ಸುತರಾಮ ಇಷ್ಟವಾಗಿಬಿಟ್ಟಿತು. ಒಂದೇ ಕ್ಷಣದಲ್ಲಿ!

ಯಾರೂ ಸತ್ತಿಲ್ಲದ ಯಾರೊಬ್ಬರ ಸಾವನ್ನೂ ಅನುಭವಿಸದ ಮನೆಯನ್ನು ಕೊಳ್ಳುವುದು ಹೇಗೆ ಹೇಳಿ? ಅದು ಎಷ್ಟೇ ಕಡಿಮೆ ಮೊತ್ತದ್ದಾದರೂ, ಎಷ್ಟೇ ಆಧುನಿಕವಾದರೂ ಇಂತಹ ಮನೆಗಳು ನಮಗೆ ರಾತ್ರಿಯ ನೀರವದಲ್ಲಿ ಯಾವ ಅನುಭವವನ್ನೂ ಹೇಳಲಾರವು, ಈ ಮನೆಗಳಲ್ಲಿರುವವರಿಗೆ ಕನಸೇ ಬೀಳುವುದಿಲ್ಲ. ನಮಗೆ ತಲುಪಿಸಲು ನಿಟ್ಟುಸಿರೂ ಇರುವುದಿಲ್ಲ. ಇದನ್ನೆಲ್ಲ ಕೇಳದೆ, ತಿಳಿಯದೆ, ಕಿಂಚಿತ್ತೂ ಕನವರಿಸದೆ ಸಾಧಾರಣ ಮನುಷ್ಯರಾಗುವುದು ಸಾಧ್ಯವಿಲ್ಲ, ಸಂಪನ್ನರಾಗುವುದು ಕೂಡ.

ಮನೆಗೆ ಭೂಷಣ ಬರುವುದೇ ಸಾವುಗಳಿಂದ. ನನ್ನ ತಾಯಿಯ ಹಿಂದಿನ ಕಾಲದ ಮನೆಯನ್ನು ನಾನು ಯಾವಾಗಲೂ ನೆನೆಸಿಕೊಳ್ಳುತ್ತೇನೆ, ಮಕ್ಕಳ ಹೆರಿಗೆಯಾಗುವ ಹೊರಮನೆಗೆ ನಿರ್ದಿಷ್ಟವಾಗಿ ಒಂದೇ ಕೋಣೆ, ಒಂದೇ ಜಾಗ, ಕತ್ತಲೆ ಕೋಣೆಯದು. ಹೆಂಗಸರ ಬಸುರಿ ಬಾಣಂತನಕ್ಕೆ ಅನುಕೂಲವಾಗಲೆಂದು ಬಚ್ಚಲು ಮನೆಯ ಪಕ್ಕದಲ್ಲೇ ಹೊಲೆಯ ಮನೆ. ಸಾವಿಗಾದರೋ ಇಂತಹುದೇ ಅನ್ನುವ ಜಾಗವಿಲ್ಲ, ಕೋಣೆಯಿಲ್ಲ. ಅದು ಮನೆ ತುಂಬೆಲ್ಲ. ಮಜ್ಜಿಗೆ ಕಡೆಯುವಾಗ ಆಡುಗೆ ಮನೆಯಲ್ಲೇ ಸತ್ತವರು,

ದೇವರ ಮನೆಯಲ್ಲಿ ಸಾಲಿಗ್ರಾಮವನ್ನು ತೊಳೆಯುತ್ತಿದ್ದಾಗ ಸತ್ತವರು, ಭಾಗವತ ಕೇಳುತ್ತಾ ದಿವಾನ್ ಖಾನೆಯ ಕಂಭಕ್ಕೊರಗಿ ಸತ್ತವರು, ಹಿತ್ತಲ ಭಾವಿಯ ಚಪ್ಪಡಿಕಲ್ಲಿನ ಮೇಲೆ ಕುಸಿದವರು, ಸಾವು ಎಲ್ಲೆಲ್ಲೂ ಸಂಭವಿಸಿದಂತೆ, ಜರುಗಿದಂತೆ, ನೀನು ಮಲಗಿರುವೆಯಲ್ಲ ಆ ಹಾಸಿಗೆಯ ಮೇಲೆ, ಅದೇ ಜಾಗದಲ್ಲಿ ನಿಮ್ಮ ದೊಡ್ಡ ಸೋದರ ಮಾವ ಸತ್ತದ್ದು. ನೀನು ಕುಳಿತಿರುವೆಯಲ್ಲ, ನಿನ್ನ ತಲೆ ಮೇಲೆ ರಾಮದೇವರ ಫೋಟೊ, ಅದರ ಕೆಳಗೆ ನಿಮ್ಮ ತಾತ ಲೇವಾದೇವಿ ಪತ್ರಗಳನ್ನು ಪರಿಶೀಲಿಸುತ್ತಿದ್ದಾಗ ಸತ್ತದ್ದು – ಎಂದೋ ಸತ್ತವರನ್ನು ಅವರು ಸತ್ತ ಜಾಗವನ್ನೂ ತೋರಿಸುತ್ತಾ ನಮಗೆ ಆತ್ಮೀಯವಾಗಿಸುತ್ತಿದ್ದರು. ಹಾಗಾಗಿ ಸಾವಿನ ಬಗ್ಗೆ ನಮಗೆ ಅಷ್ಟೊಂದು ಹೆದರಿಕೆಯಾಗುತ್ತಿರಲಿಲ್ಲ.

ಇಷ್ಟೊಂದು ದೊಡ್ಡ ಮನೆಯ ಯಾವ ಯಾವುದೋ ಭಾಗದಲ್ಲಿ ನಮ್ಮ ಹಿರಿಯರು ಯಾರು ಯಾರೋ ಸತ್ತಿದ್ದಾರೆ: ನಾನೂ ಕೂಡಾ ಹೀಗೆ ಇಲ್ಲೇ ಓಡಾಡಿಕೊಂಡು ಯಾವುದಾದರೂ ಒಂದು ದಿವಸ, ಯಾವುದಾದರೂ ಒಂದು ಭಾಗದಲ್ಲಿ ಮಲಗಿದ್ದಾಗಲೋ, ತಿಂಡಿ ತಿನ್ನುವಾಗಲೋ, ಜಗಳ ಕಾಯುವಾಗಲೋ, ಓದುವಾಗಲೋ ಸುಮ್ಮನೆ ಸಾಯಬೇಕಾಗುತ್ತದೆ. ಅಷ್ಟೇ, ಅದೂ ಕೂಡಾ ಓಡಾಡುವ ಹಾಗೆ, ಮಲಗುವ ಹಾಗೆ, ಮಾತನಾಡುವ ಹಾಗೆ ಸುಮ್ಮನೆ ನಿರುದ್ದಿಶ್ಯವಾಗಿ ನಡೆದು ಹೋಗುವ ಒಂದು ಕ್ರಿಯೆ ಎಂಬ ಭಾವವೇ ಹಳೆಮನೆ ಹುಟ್ಟಿಸುತ್ತಿದ್ದುದ್ದು. ಇದರ ಜೊತೆಗೆ ಇಂತಹ ಮನೆಯಲ್ಲೇ ಸತ್ತರೆ ನಾವು ಕೂಡ ಅವರ ಪರಂಪರೆಗೆ ಸೇರುತ್ತೇವೆಂಬ ನಂಬಿಕೆ, ಧೈರ್ಯ. ಪರಂಪರೆಯ ಒಂದು ಭಾಗವಾಗಿ ಅನುಭವಿಸುವ ಯಾವುದೇ ಸಂಗತಿಯೂ ನಮಗೊಂದು ರೀತಿಯ ವ್ಯಕ್ತಿತ್ವವನ್ನೂ, ಘನತೆಯನ್ನು ತಂದುಕೊಡುತ್ತದೆ. ಇಂತಹ ನೆನಪು ಪರಂಪರೆಯನ್ನೆಲ್ಲ ಬಿಟ್ಟು ಪೊಗದಸ್ತಾದ ಗ್ರಾನೈಟ್, ಮಾರ್ಬಲ್ ಉಪಯೋಗಿಸಿ ಕಟ್ಟಿದ ಮನೆಯಲ್ಲಿ ನಾವು ಯಾವ ಪರಂಪರೆಯ ಭಾಗವಾಗಬಹುದು ಹೇಳಿ?.

ಇಂತಹ ಹಿನ್ನೆಲೆಗಳಿಲ್ಲದ ಮನೆಯಲ್ಲೇ ಹಳ್ಳಿಗಳಿಂದ ನಗರಗಳಿಗೆ ಗುಳೆ ಬಂದವರೆಲ್ಲ ವಾಸಿಸುತ್ತಾರೆ. ಹೀಗಾಗಿ ಅವರ ಬದುಕಿನಲ್ಲಿ ಒಂದು ನೆಲೆಯಿಲ್ಲ, ನೆಮ್ಮದಿಯಿಲ್ಲ, ನಿಶ್ಚಿಂತೆಯಿಲ್ಲ. ಅದಕ್ಕೆಂದೇ ಅವರು ಒಂದೇ ಒಂದು ಮನೆಯಲ್ಲೂ ನೆಲೆಯಾಗಿರುವುದಿಲ್ಲ. ಈ ಮನೆಯಿಂದ ಇನ್ನೊಂದು ಮನೆಗೆ, ಈ ಊರಿನಿಂದ ಇನ್ನೊಂದು ಊರಿಗೆ, ಈ ದೇಶದಿಂದ ಇನ್ನೊಂದು ದೇಶಕ್ಕೆ ಅಂತರ್ ಪಿಶಾಚಿಗಳಂತೆ ವಲಸೆಹೋಗುತ್ತಲೇ ಇರುತ್ತಾರೆ. ಈಗಾಗಲೇ ನಾನಾ ತಲೆಮಾರಿನಲ್ಲಿ ನಾನಾ ರೀತಿಯ ಸಾವುಗಳನ್ನು ಅನುಭವಿಸಿರುವ ಮನೆಗಳು ನಮಗೆ ಗೊತ್ತಿಲ್ಲದಂತೆ, ನಮ್ಮನ್ನು ಯಾವುದೋ ಒಂದು ಪಾಶದ ನೆರವಿನಿಂದ ಬಂಧಿಸಿ ಕಟ್ಟು ಹಾಕುವಂತೆ ಹೊಸ ಕಾಲದ, ಹೊಸ ಊರಿನ ಬಾಡಿಗೆ ಮನೆಗಳಾಗಲೀ ಸ್ವಂತ ಮನೆಗಳಾಗಲೀ ನಮ್ಮನ್ನು ಕಟ್ಟು ಹಾಕುವುದಿಲ್ಲ.

ಇದನ್ನೆಲ್ಲ ಸರಿಯಾದ ವಯಸ್ಸಿನಲ್ಲಿ ನಿಗದಿಯಾಗಿ ತಿಳಿದುಕೊಳ್ಳುವ ನಾನು ನಮ್ಮ ಎಷ್ಟೊಂದು ಹಿರಿಯರ ಸಾವುಗಳನ್ನು ಗೊತ್ತಿಲ್ಲದೆ, ಗುರಿಯಿಲ್ಲದೆ ಹಾಳುಗೆಡವಿದೆ, ಪೋಲುಮಾಡಿದೆ ಎಂದೆನಿಸುತ್ತದೆ. ಸಾವೆಂಬುದು ಸುಲಭವಾಗಿ ಸಿಗುವ ಯಃಕಶ್ಚಿತ್ ಪದಾರ್ಥವೆಂಬಂತೆ, ಕೆಲಸಕ್ಕೆ ಬಾರದ ಒಂದು ಅನುಭವವೆಂಬಂತೆ ನಾನು ಸುಮ್ಮನಿದ್ದುದರಿಂದಲೇ ಕೆಲ ಹಿರಿಯರು ನರ್ಸಿಂಗ್ ಹೋಂನಲ್ಲಿ ಸತ್ತರು.

ಇನ್ನು ಕೆಲವರು ಚಹರೆಯೇ ಇಲ್ಲದ ಬಾಡಿಗೆ ಮನೆಯಲ್ಲಿ, ಮತ್ತೊಬ್ಬರು ಸೋಲಾಪುರದ ಧರ್ಮಛತ್ರದಲ್ಲಿ ಸಾಯುತ್ತಲೇ ಹೋದರು. such a sublime and personal experience was scattered away in too many, too unconnected and too impersonal places. ಈ ವಿಚಾರಸರಣಿಯನ್ನೇ ಒಪ್ಪದ ನನ್ನ ಅನೇಕ ಬಂಧುಮಿತ್ರರು ತೀರಾ ಆಧುನಿಕವಾದ, ತೀರಾ ವೈಭವೋಪೇತವಾದ ಮನೆಗಳಲ್ಲಿ ವಾಸಿಸುತ್ತಾ, ಅವರುಗಳ ಮಕ್ಕಳು, ಮೊಮ್ಮಕ್ಕಳುಗಳೆಲ್ಲ ಪರಂಪರೆಯಿಂದ, ಧರ್ಮದಿಂದ, ಸಂಪ್ರದಾಯದಿಂದ ದೂರವಾಗಿಬಿಟ್ಟರು ಎಂದು ವೃಥಾ ಕೊರಗುತ್ತಾ ಕೂರುವುದು ಕಂಡು ನನಗೆ ಅಳಬೇಕೋ, ನಗಬೇಕೋ ತಿಳಿಯುವುದಿಲ್ಲ.

ಸಾವನ್ನೇ ಅನುಭವಿಸದ ನೂತನ ಮನೆಗಳಲ್ಲಿ ನೀವು ಮಾಡುವ ಯಾವ ಪಿತೃಕಾರ್ಯವೂ, ನೈವೇದ್ಯಕ್ಕೆ ಪಿತೃಪಕ್ಷದಲ್ಲಿ ಇಡುವ ಎಡೆಯೂ ಯಾವುದೇ ಫಲವನ್ನು ನೀಡುವುದಿಲ್ಲ. ನಿಮ್ಮ ತಾತ–ಮುತ್ತಾತಂದಿರಾಗಲೀ, ಅಜ್ಜ –ಅಜ್ಜಿಯರಾಗಲೀ ಅವರು ಸತ್ತ ಜಾಗ ಬಿಟ್ಟು ನೀವು ಹೋದ ಬಾಡಿಗೆ ಮನೆಗಳಿಗೆ ಮತ್ತು ಹೊಸ ಹೊಸ ಮನೆಗಳಿಗೆಲ್ಲಾ ಹೊಸ ಹೊಸ ವಿಳಾಸಗಳನ್ನು ಹುಡುಕಿಕೊಂಡು ಬರಲು ಅವರೇನು ಬಿಕನಾಸಿಗಳೂ ಅಲ್ಲ, ಬೇವಾರ್ಸಿಗಳೂ ಅಲ್ಲ. ಪಿತೃಕಾರ್ಯಗಳನ್ನು ನಾನು ಎರಡೂ ರೀತಿಯ ಮನೆಗಳಲ್ಲೂ ಲಾಗಾಯ್ತಿನಿಂದ ಬಂದ ಮನೆ ಮತ್ತು ಅನೇಕ ಹೊಸ ಮನೆ–ಮಾಡಿದ್ದೇನೆ, ನೋಡಿದ್ದೇನೆ. ಹಲವಾರು ತಲೆಮಾರುಗಳ ಹತ್ತಾರು ಸಾವುಗಳನ್ನು ಕಂಡ ಮನೆಗಳಲ್ಲಿ ಪಿತೃಕಾರ್ಯ ಪ್ರಾರಂಭವಾಗುತ್ತಿದ್ದಂತೆಯೇ ಹಿಂದಣ ಅನಂತದ ವಾಸನೆಯೊಂದು, ಪ್ರಭಾವಳಿಯೊಂದು ಮನೆಯನ್ನೆಲ್ಲ ಆವರಿಸಿಕೊಳ್ಳುತ್ತದೆ. ಈ ಹಿಂದಣ ಅನಂತದ ವಾಸನೆಯಲ್ಲಿ ಮೌನ, ನಿಗೂಢತೆ, ಬೆರಗು ಮಾತ್ರವಲ್ಲ ಪಿತೃಕಾರ್ಯ ಮಾಡಲು ಕೂತ ನೆಲದಿಂದ, ವಿಶೇಷ ಕಂಪನಗಳೆಲ್ಲ ಹೊರಡುತ್ತವೆ.

ಒಂದು ಸಲವಂತು ನಾನು ನಮ್ಮ ತಂದೆಯವರ ವಾರ್ಷಿಕ ಶ್ರಾದ್ಧ ಮಾಡುತ್ತಿದ್ದಾಗ ಮೂಡಿದ ಪ್ರಭಾವಳಿಯ ಬೆಳಕಿನಲ್ಲಿ ಕುಳಿತ ನೆಲದ ಎದುರು ಭಾಗವೇ ಬಿರುಕು ಬಿಟ್ಟು ಕೆಳಗೆ ಬಗ್ಗಿ ನೋಡಿದರೆ, ನಮ್ಮ ಮನೆತನದ ಪಿತಾಮಹ, ಪ್ರಪಿತಾಮಹರೆಲ್ಲ ಸಾಯುವುದಕ್ಕಿಂತ ಮುಂಚೆ ಹೇಗಿದ್ದರೋ ಹಾಗೇ ಮಟಮಟ ಮಧ್ಯಾಹ್ನದಲ್ಲಿ ಏನೇನು ಕೆಲಸಗಳನ್ನು ಮಾಡುತ್ತಿದ್ದರೋ ಅದನ್ನೆಲ್ಲ ಮಾಡುತ್ತಾ ಸಾವಿನ ಕಾಲದ, ಕೊನೆಗೆ ಪಿತೃಕಾರ್ಯದ ಪರಿವೆಯೇ ಇಲ್ಲದೆ ಓಡಾಡುತ್ತಿದ್ದಾರೆ. ಹೆಂಚು, ತೊಲೆಗಳೆಲ್ಲ ವಿಶೇಷ ಕಳೆಯಿಂದ ಹೊಳೆಯುತ್ತಿವೆ. ಪಿತೃಕಾರ್ಯಕ್ಕೆಂದು ಮಾಡಿಟ್ಟ ಅಡುಗೆ, ಪ್ರಸಾದದ ವಾಸನೆಯನ್ನೆಲ್ಲ ಯಾರೋ ಹೀರುತ್ತಿರುವುದು, ಯಾರೋ ತಿಂದು ಸರಸರ ಶಬ್ದ ಮಾಡುತ್ತಿರುವುದು ಕೇಳಿಸುತ್ತಿರುತ್ತದೆ. ಬಾಡಿಗೆ ಮನೆಗಳಲ್ಲಿ, ಹೊಸ ಮನೆಗಳಲ್ಲಿ ನನಗೆ ಇಂತಹ ಅನುಭವವೇ ಆಗಿಲ್ಲ. ಪಿತೃಕಾರ್ಯದ ಪ್ರಾರಂಭದ ಹಂತದಲ್ಲಿಯೇ ಆಕಳಿಕೆ ಬಂದುಬಿಡುತ್ತದೆ.

ಬಹುಕಾಲ ಬಾಳಿದ, ತಾಳಿದ ನಮ್ಮ ನಾಗರಿಕತೆ ಇನ್ನೂ ಜೀವಂತಿಕೆಯಿಂದ ಉಳಿದಿರುವುದಕ್ಕೆ ಕಾರಣವಾದರೂ ಏನೆಂದು ನಾನು ಹತ್ತಾರು ದಿಕ್ಕುಗಳಿಂದ ಅನ್ವಯಿಸುತ್ತಾ ಜ್ಞಾನದ ನೆರವಿನಿಂದ ಸಂಸ್ಕೃತಿ

ಚಿಂತನೆ ನಡೆಸಿ ದಣಿವಾಗಿ ಕೊನೆಗೆ ಒಂದು ದಿನ ಒಂದು ತೀರ್ಮಾನಕ್ಕೆ ಬಂದೆನು. ನಮ್ಮ ತಾತನ ಮನೆಯ ಒಂದು ಕಂಬ ಬಹುಶಿಥಿಲವಾಗಿತ್ತು. ಒಳಗಡೆಯಿಂದಲೂ ಸವೆದು ಟೊಳ್ಳಾಗಿತ್ತು. ಆ ಕಂಬದಿಂದ ಏನು ಪ್ರಯೋಜನ, ತೆಗಿಸಿಬಿಡೋಣ, ಒಡೆದು ಹಾಕಿಬಿಡೋಣ ಎಂದೆಲ್ಲ ವಾದವಿವಾದ ಶುರುವಾಯಿತು. ಆದರೆ ನಮ್ಮ ಹಿರಿಯರನೇಕರು ಒಬ್ಬರಾದ ಮೇಲೊಬ್ಬರು ತಮ್ಮ ಕೊನೆಯುಸಿರೆಳೆಯಲು ಆ ಕಂಬದ ಆಸರೆ ಪಡೆದಿದ್ದರು. ಕಾಶಿಯಾತ್ರೆಗೆ ಹೋಗಿದ್ದವರೊಬ್ಬರು ಅಲ್ಲೇ ಬಿದ್ದ ಕನಸಿನಲ್ಲಿ ತಾವು ಸಾಯುವ ದಿನವನ್ನು ಮುಂಚಿತವಾಗಿ ತಿಳಿದು, ಆಯ್ತು ನಾನು ಸಾಯುವುದಾದರೆ ಊರಿಗೆ ವಾಪಸ್ಸು ಹೋಗಿ, ನಮ್ಮ ಮನೆಯ ಪುರಾತನ ಕಂಬಕ್ಕೊರಗಿಯೇ ಸಾಯುತ್ತೇನೆ ಎಂದು ಹಠಹಿಡಿದು ಬಂದು ಹಾಗೇ ಸತ್ತರಂತೆ.

ಎಲ್ಲವೂ ಚೆನ್ನಾಗಿದ್ದ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ನಮ್ಮ ಸಂಸ್ಕೃತಿಯಲ್ಲಿ ಜನ ತಮ್ಮ ಸಾವಿನ ಸಮಯ, ಸಾವಿನ ರೀತಿ, ಸಾವಿನ ಜಾಗ ಎಲ್ಲವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಬೇಕಾದ ಜಾಣ್ಮೆ, ಛಲಗಾರಿಕೆ, ಮುನ್ನೋಟ ಇವೆಲ್ಲವೂ ನಮ್ಮವರಲ್ಲಿ ಇದ್ದುದರಿಂದಲೇ ನಮ್ಮ ಸಂಸ್ಕೃತಿ ಬಹುಕಾಲ ಜೀವಂತವಾಗಿ ಉಳಿಯಿತೆಂದು ನನಗನಿಸುತ್ತದೆ. ಮಹಾಭಾರತದ ವಿಷ್ಣು ಸಹಸ್ರನಾಮಕ್ಕೆ ಇನ್ನೂ ಶಕ್ತಿಯಿರುವುದು ಭೀಷ್ಮ ಇಚ್ಛಾಮರಣಿಯಾಗಿದ್ದರಿಂದ ಅನ್ನುವುದನ್ನು ನಾವು ಮರೆಯಬಾರದಷ್ಟೇ. ಸಮಕಾಲೀನರೊಡನೆ ಈ ಕುರಿತಂತೆ ನನ್ನ ಅನುಭವ ವಿರುದ್ಧದಿಕ್ಕಿನಲ್ಲಿದೆ. ಬೆಂಗಳೂರಿನ ಮಧ್ಯಭಾಗದಲ್ಲಿ ಹಳೆಯಕಾಲದ ಮಾಲೀಕನೊಬ್ಬನ ಮಕ್ಕಳು ತುಂಬಾ ಒಳ್ಳೆಯ ಬೆಲೆ ಬರುತ್ತದೆಂದು ಮನೆಯನ್ನು ಬಿಕರಿ ಮಾಡಿ ಬಂದ ಹಣದಲ್ಲಿ ಪ್ರತಿಯೊಬ್ಬ ಮಗನು ನಗರದ ಬೇರೆ ಬೇರೆ ದಿಕ್ಕಿನಲ್ಲಿ ಆಧುನಿಕ ಫ್ಲಾಟುಗಳನ್ನು ಕೊಂಡು ಸಂತೋಷವಾಗಿಯೇ ಇದ್ದರು. ಇವರುಗಳ ತಂದೆ ತಮ್ಮ ಹಳೆಯ ಮನೆಯಲ್ಲೇ ಸಾಯುವುದಾಗಿ ಹಠ ಹಿಡಿದರು. ಈ ಹಠವನ್ನು ಹೇಗೆ ತೃಪ್ತಿಪಡಿಸುವುದು, ಮಕ್ಕಳು ನಾನಾ ರೀತಿಯಲ್ಲಿ ಬುದ್ಧಿ ಹೇಳಿದರು. ತಂದೆ ದಿನೇ ದಿನೇ ಶಕ್ತರಾಗುತ್ತಿದ್ದಾರೆ, ನಾನಾ ರೀತಿಯ ಕಾಯಿಲೆ, ಕಸಾಲೆ, ಆದರೆ ಸಾಯಲೊಲ್ಲರು, ಮಕ್ಕಳು ತಂದೆಯ ಬಗ್ಗೆ ಕಕ್ಕುಲಾತಿ ತಡೆಯಲಾರದೆ ಹಳೆ ಮನೆಯ ಹೊಸ ಮಾಲೀಕರ ಹತ್ತಿರ ಹೋಗಿ ಕಾಡಿಬೇಡಿದರೂ ಆತ ಒಪ್ಪಲಿಲ್ಲ. ಈಗಿನ ಕಾಲದಲ್ಲಿ ಯಾರು ಇಂತಹ ಮನೋಧರ್ಮಕ್ಕೆ ಸ್ಪಂದಿಸುತ್ತಾರೆ? ವಾಸ್ತವದಲ್ಲಿ ಹಳೆಕಾಲದ ಮುದುಕನ ಹಠವನ್ನು ಗೇಲಿಮಾಡಿದರು,ಆಡಿಕೊಂಡರು.

ಮಕ್ಕಳಿಗೆ ನಿಜಕ್ಕೂ ಪೇಚಾಟಕ್ಕಿಟ್ಟುಕೊಂಡಿತು. ತಂದೆಯೇ ಪಾಪ, ಆಯ್ತು ಕೊನೆಪಕ್ಷ ಆ ಮನೆಗೆ ಒಂದು ಸಲ ಭೇಟಿಕೊಟ್ಟು ಕಣ್ತುಂಬ ನೋಡಿ ಸಾಯುತ್ತೇನೆ ಎಂದು ವರಸೆ ಬದಲಾಯಿಸಿದರು. ಮನೆಯ ಹೊಸ ಮಾಲೀಕರು ಒಪ್ಪಿದರು. ಹಳೆಯ ಮಾಲೀಕ ಹಿಂದಿನ ಮನೆಗೆ ಬಂದವರೇ ಇನ್ನಿಲ್ಲದ ಚುರುಕುತನದಿಂದ ಪುಟ್ಟಪುಟ್ಟ ಹೆಜ್ಜೆಗಳನ್ನಿಟ್ಟು ಮನೆಯೊಳಗೆಲ್ಲ ಓಡಾಡಿ ಮನಸ್ಸನ್ನೆಲ್ಲ ತುಂಬಿಸಿಕೊಂಡು ಹೊಸ ಮಾಲೀಕರು, ಅವರ ಕುಟುಂಬವರ್ಗದವರನ್ನೆಲ್ಲ ಕರೆಸಿ ತಮ್ಮೆದುರಿಗೆ ಕೂರಿಸಿಕೊಂಡು ಆಶೀರ್ವದಿಸಿ ಮನೆಯ ಹಿಂದಿನ ವೈಭವದ ಕತೆಯನ್ನೆಲ್ಲ ಒಂದೇ ಒಂದು ಎಳೆಯೂ ತಪ್ಪದಂತೆ ಹೇಳುತ್ತಾ ಕುಳಿತ ಸೋಪಾದ ಮೇಲೆ ಕುಸಿದರು. ಮುಂದಿನ ಇತಿಹಾಸದ ಪ್ರಕಾರ ಮನೆಯ ಹೊಸ ಮಾಲೀಕರ ಕುಟುಂಬವೇ ಸರ್ವರೀತಿಯಲ್ಲೂ ಏಳಿಗೆ ಪಡೆಯಿತು. ಏಕೆಂದರೆ ಅವರು ಪಡೆದದ್ದು

ಸಾವನ್ನು ಅನುಭವಿಸಿದ್ದ ಮನೆ ಆಧುನಿಕ ಫ್ಲಾಟುಗಳಿಗೆ ಅಂದರೆ ಸಾವನ್ನು ಕಾಣದ ಫ್ಲಾಟುಗಳಿಗೆ ಹೋದವರ ಪ್ರಗತಿ ಸರ್ವೇ ಸಾಧಾರಣವಾಗಿತ್ತು ಎಂದು ಕೇಳಲ್ಪಟ್ಟಿದ್ದೇನೆ.

ಇನ್ನೊಬ್ಬ ಹಿರಿಯರಿಗೆ ಇಂತಹ ಸುಪುತ್ರರಿರಲಿಲ್ಲ. ಅವರು ಶೇಕಡಾ ನೂರಕ್ಕೆ ನೂರೊಂದರಷ್ಟು ತಮಿಳರು, ತಮಿಳುನಾಡು, ಚೆನ್ನೈನಿಂದ ಒಂದೇ ಒಂದು ದಿನ ಕೂಡ ತಮ್ಮ ಇಡೀ ಜೀವನದಲ್ಲಿ ಹೊರ ಹೋದವರಲ್ಲ, ತಮಿಳು ಭಾಷೆ, ಸಂಸ್ಕೃತಿಯೇ ಜಗತ್ತಿನಲ್ಲಿ ಸರ್ವಶ್ರೇಷ್ಠ ಎಂದು ನಂಬಿದವರು, ಇವರ ಮಗನಿಗೆ ಕೇಂದ್ರ ಸರ್ಕಾರದಲ್ಲಿ ತುಂಬಾ ದೊಡ್ಡ ನೌಕರಿ. ಹಿರಿಯರಿಗೆ ಎಂಬತ್ತು ದಾಟಿದಾಗ, ಮಗನಿಗೆ ಸರ್ಕಾರಿ ಸೇವೆಯಿಂದ ನಿವೃತ್ತಿಯಾಗೋಕೆ ಇನ್ನೆರಡು ವರ್ಷಗಳಿದ್ದಾಗ ಬಾಂಬೆಗೆ ವರ್ಗವಾಗಿ ಹೋಯಿತು. *ಬಡ್ತಿಯ ಮೇಲೆ,* ಒಳ್ಳೆಯ ಬಂಗಲೆ, ಸಮುದ್ರದೆದುರಿಗೆ, ಆಳು ಕಾಳು, ಕಾರು, ಡ್ರೈವರ್. ಮಗ ಬಾಂಬೆಗೆ ಹೊರಟು ನಿಂತ, ಮುದುಕಪ್ಪ ಒಲ್ಲೆ ಅಂದರು. ಏ ಹೋಗಯ್ಯ ಸಾಯೋ ವಯಸ್ಸಿನಲ್ಲಿ ನಾನೇಕೆ ಅಲ್ಲಿಗೆ ಒಂದು ಗೊತ್ತಿಲ್ಲದ ಗುರಿಯಿಲ್ಲದ, ಬೇರಿಲ್ಲದ, ಕುಂಡವಿಲ್ಲದ ದೇಶಕ್ಕೆ ಬಂದು, ತನ್ನ ಹಿರೀಕರು ಕಂಡಿಲ್ಲದ, ಮನೆತನದ ಒಬ್ಬನೇ ಒಬ್ಬ ಹಿರಿಯ ಕೂಡ ಸತ್ತಿಲ್ಲದ ಜಾಗಕ್ಕೆ ಬಂದು ಸಾಯಲಿ, ಅದರಿಂದ ನಿನಗೂ ಒಳ್ಳೇದಾಗೋಲ್ಲ. ನಾನೂ ಸತ್ತವರ ಸಾಲಿಗೆ ಸೇರೋಲ್ಲ. ಹೀಗೆಲ್ಲ ಹಠ ಹಿಡಿದು ಹೋದವರು ಮಗನ ದೊಡ್ಡ ಸರ್ಕಾರಿ ಬಂಗಲೆಯಲ್ಲಿ ಸಾಯದೆ, ಮುಂಬೈನ ಬೃಹತ್ ಬೀದಿಗಳಲ್ಲಿ ತಪ್ಪಿಸಿಕೊಂಡು ಕೊನೆಗೂ ಪತ್ತೆಯಾಗಲಿಲ್ಲವಂತೆ.

ಕುರುಕ್ಷೇತ್ರದ ಯುದ್ಧ ಮುಗಿದ ಮೇಲೆ ಪಟ್ಟವೇರಿದ ಪಾಂಡವರು, ಅವರ ಮಂತ್ರಿಗಳು, ಅಧಿಕಾರಿಗಳೂ ಕೌರವರ, ಅವರ ಅಧಿಕಾರಿಗಳ ಪಾಪದ ಮನೆಗಳು ಬೇಡ, ಹೊಸ ಹೊಸ ಬಂಗಲೆ, ಅರಮನೆ ಕಟ್ಟೋಣ ಎಂದು ಅಭಿಪ್ರಾಯಪಟ್ಟರಂತೆ, ಇದನ್ನು ಒಪ್ಪದ ವ್ಯಾಸರು, ಇಲ್ಲ ಇಲ್ಲ ಹೊಸ ಮನೆಗಳು ಬೇಡ, ಬಂಗಲೆಗಳೂ ಬೇಡ, ಅಂತಹ ಮನೆಗಳಿಗೆ ಯಾವ ಅನುಭವವೂ ಇತಿಹಾಸವೂ ಇರೋಲ್ಲ, ಕೌರವರ ಮನೆ, ಬಂಗಲೆಗಳಾದರೆ, ಸಾವು, ದುಃಖದ ಅನುಭವ ಹೊತ್ತು ಪಕ್ವವಾಗಿವೆ ಎಂದು ವಾದಿಸಿ ಪಾಂಡವರು ಸುಯೋಧನಾದಿಗಳ ಮನೆ ಬಂಗಲೆಗಳಿಗೇ ಹೋಗಲು ಒಪ್ಪಿಸಿದರಂತೆ.

ಅಷ್ಟು ಮಾತ್ರವೇ ಅಲ್ಲ, ಧೃತರಾಷ್ಟ್ರ, ಕುಂತಿ, ವಿಧುರರೆಲ್ಲ ವಾನಪ್ರಸ್ಥಕ್ಕೆ ಹೊರಟು ನಿಂತಾಗ ಗಾಂಧಾರಿಗೆ ಅಷ್ಟೊಂದು ಉತ್ಸುಕತೆಯಿರಲಿಲ್ಲವಂತೆ. ಕಾಡಿರಬಹುದು, ಹಿಮಾಲಯವಿರಬಹುದು, ಸ್ವರ್ಗದ ಮೆಟ್ಟಿಲಿನ ಹತ್ತಿರವೇ ಇರಬಹುದು. ಇದು ಯಾವುದೂ ನನಗೆ ಬೇಡ. ನನ್ನ ನೂರಾರು ಮಕ್ಕಳು ಸತ್ತ ಜಾಗವನ್ನು ನೋಡುತ್ತಲೇ ನಾನು ಸಾಯುತ್ತೇನೆ ಎಂದೆಲ್ಲ ಹಲುಬಿದಾಗ ಗಾಂಧಾರಿಯನ್ನು ಜೊತೆಯಲ್ಲೇ ಕರೆದೊಯ್ಯಲು ಬಹಳ ಕಷ್ಟಪಡಬೇಕಾಯಿತಂತೆ. ಅಲ್ಲೂ ಕೂಡ ಗಾಂಧಾರಿಗೆ ಮಕ್ಕಳು ಸತ್ತ ಯುದ್ಧಭೂಮಿಯ ವಿವರಗಳೇ ಕಾಣುತ್ತಿದ್ದವಂತೆ.

ಬುದ್ಧನ ಮಹಾಧರ್ಮ ಈ ದೇಶದಿಂದ ಏಕೆ ಹೊರಟುಹೋಯಿತು. ಇಲ್ಲಿಯ ಜನಕ್ಕೆ ಅದು ಏಕೆ ಒಗ್ಗಲಿಲ್ಲ ಅನ್ನುವುದಕ್ಕೆ ನೂರಾರು ಕಾರಣಗಳನ್ನು ಕೊಡುತ್ತಾರೆ. ನನಗೆ ಹೊಳೆದಿರುವ ಒಂದು ಮುಖ್ಯ ಕಾರಣವೆಂದರೆ ಆತ ತನ್ನ ಸ್ವಂತ ಅರಮನೆಯಲ್ಲೇ ಸಾವನ್ನು ನೋಡದೇ ಹೋದದ್ದು. ರಾಜ

ಶುದ್ಧೋದನ ಒಂದು ನಿಯಮ ಮಾಡಿದ್ದನಂತೆ. ನಿಯಮದ ಪ್ರಕಾರ ಅರಮನೆಯಲ್ಲಿ ಯಾರೂ ಸಾಯುವ ಹಾಗಿಲ್ಲ. ಸಾಯುವ ಕ್ಷಣ ಬಂದಾಗ ಅರಮನೆಯ ಎದುರಿಗೆ ಇರುವ ಧರ್ಮಛತ್ರಕ್ಕೆ ಹೋಗಿ ಸಾಯಬೇಕು ಅಂತಾ. ಹೀಗಾಗಿ ಬುದ್ಧನಿಗೆ ಸಾವೆಂಬುದು ತಾನು ಹುಟ್ಟಿ ಆಡಿ, ಬೆಳೆದು ಓಡಾಡಿದ ಅರಮನೆಯಲ್ಲೇ ನಿರಾಯಾಸವಾಗಿ ದೊರಕುವಂತಹ ಒಂದು ಅನುಭವವಾಗಲಿಲ್ಲ.

ಆಕಸ್ಮಿಕವಾಗಿ ಮೊದಲ ಸಾವನ್ನು ಕಂಡ ತಕ್ಷಣವೇ ಅದನ್ನೇ ಏನೋ ವಿಶೇಷವೆಂಬಂತೆ ಭಾವಿಸಿ, ದುಃಖಕ್ಕೆ, ಕೇಶಕ್ಕೆ ಕಾರಣವೇನು, ಎಂದೆಲ್ಲ ಚಿಂತಿಸಿದ. ಇದರ ಬದಲಿಗೆ ಅರಮನೆಯಲ್ಲೇ ಸಾವನ್ನು ಕಂಡಿದ್ದರೆ, ಅನುಭವಿಸಿದ್ದರೆ, ಬುದ್ಧ ಕೂಡ ನನ್ನಂತೆ ನಿಮ್ಮಂತೆ ಸಾವನ್ನು ನಿರ್ಗಮನವನ್ನೂ ಅಂತ್ಯವನ್ನು ಸಹಜವಾಗಿ ಒಪ್ಪಿ ಜಗತ್ತಿನ ದುಃಖ, ಕ್ಲೇಶವೆಲ್ಲ ಅವನು ಹೇಳಿಕೊಟ್ಟಷ್ಟು ಮಹತ್ವದ್ದೆಂದು ಹೇಳಿಕೊಡುತ್ತಿರಲಿಲ್ಲ.

ತೀರಾ ಬುದ್ಧನಿಗೆ ತಿಳಿಯದೆ ಹೋದದ್ದು ನಮ್ಮ ಮಂಡ್ಯ ಸೀಮೆಯ ಒಕ್ಕಲುವಂತರಿಗೆ ತಿಳಿದಿತ್ತು. ನಮ್ಮ ತಾಯಿಯ ಊರಾದ ಗುತ್ತಲಿನಿಂದ ಮಂಡ್ಯದ ಹೈಸ್ಕೂಲಿಗೆ ಹೋಗಬೇಕಾದರೆ ಹೊಲಗಳನ್ನು ಹಾಯ್ದು ಹೋಗಬೇಕಾಗಿತ್ತು. ಅದೊಂದು ದಿವಸ ಒಬ್ಬನೇ ಸ್ಕೂಲಿಗೆ ಹೋಗುತ್ತಿದ್ದಾಗ ಹೊಲವೊಂದರಲ್ಲಿ ನಾನಾ ರೀತಿಯ ಬೃಂದಾವನದ ಕಟ್ಟೆಗಳನ್ನು ಕಟ್ಟಿದ್ದರು. ಕಾರಣವೇನೆಂದು ಅಲ್ಲೇ ಓಡಾಡುತ್ತಿದ್ದ ರೈತರನ್ನು ವಿಚಾರಿಸಿದೆ. ಬೆಳೆ ಬೆಳೆಯುವ ಹೊಲದ ಮಧ್ಯೆಯೇ ಇಷ್ಟೊಂದು, ಬೃಂದಾವನ, ಸಮಾಧಿಗಳಿರುವುದರಿಂದ ಜಾಗವೆಲ್ಲ ಪೋಲಾಗುವುದಿಲ್ಲವೆ ಎಂದು ನೇರವಾಗಿಯೇ ಕೇಳಿದೆ. ರೈತನಿಗೆ ನನ್ನ ಪ್ರಶ್ನೆಯಿಂದ ಕೋಪ, ಬೇಸರ ಬಂದರೂ, ಏನಪ್ಪಾ, ಮಗು ನೀನು ಹೇಳತಿ, ಓದೋಕೆ ನಗರಕ್ಕೆ ಬೇರೆ ಹೋಗ್ತಾ ಇದೀಯ, ಸತ್ತವರನ್ನು ಕೂಡ ನಮ್ಮ ಜೊತೆಯಲ್ಲಿ ಯಾವಾಗಲೂ ಇಟ್ಟಕೊಬೇಕಪ್ಪ, ಮನೆಯಲ್ಲೂ ಅಷ್ಟೇ, ಹೊಲದಲ್ಲೂ ಅಷ್ಟೇ ಹಾಗೆ ನಾವು ಇಟ್ಟುಕೊಂಡಿರುವುದರಿಂದಲೇ ನಮ್ಮ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ ಯಾವುದರಲ್ಲಿ ಏರುಪೇರಾದರೂ ಫಸಲು ಚೆನ್ನಾಗಿ ಬರುತ್ತಿರುವುದು. ನಾನೇನಾದರೂ ಜನಕಮಹಾರಾಜನೋ, ದಶರಥ ಚಕ್ರವರ್ತಿಯೋ ಆಗಿದ್ದರೆ, ಮನೆಯೊಳಗಡೆ, ಹಿತ್ತಲಲ್ಲೇ ಇವರನ್ನೆಲ್ಲ ಇಟ್ಟುಕೊಂಡು ಇನ್ನೂ ಚೆನ್ನಾಗಿ ಮುಂದೆ ಬರುತ್ತಿದ್ದೆ.

ವಾಸ್ತು, ಜ್ಯೋತಿಷ್ಯದಲ್ಲಿ ನನಗೆ ಹದಿನಾರಾಣೆ ನಂಬುಗೆಯಿಲ್ಲದಿದ್ದರೂ, ಕುತೂಹಲವಿದೆ, ದೌರ್ಬಲ್ಯವಿದೆ. ಹಾಗಾಗಿ ಈ ಕ್ಷೇತ್ರಗಳ ಹಿರಿಯರನ್ನೆಲ್ಲ ಭೇಟಿ ಮಾಡುತ್ತಲೇ ಇರುತ್ತೇನೆ. ಇಂತವರನ್ನೆಲ್ಲ ನಾನು ಅಪಾದಮಸ್ತಕ ದ್ವೇಷಿಸಲು ಕಾರಣವೇನೆಂದರೆ ನಾನು ಭೇಟಿ ಮಾಡಿದ, ಒಬ್ಬನೇ ಒಬ್ಬ ಜ್ಯೋತಿಷಿ ವಾಸ್ತುತಜ್ಞ ಕೂಡ ಮನೆಯ ಒಂದು ಭಾಗ ಮಾಡಿಕೊಳ್ಳಬೇಕೆಂದು, ಸಾವು ಕೂಡ ಮನೆಗೆ ಭೂಷಣಪ್ರಾಯವೆಂದು ಹೇಳದೇ ಇರುವುದು. ಅಷ್ಟರಮಟ್ಟಿಗೆ ಅವರು ಅವೈಜ್ಞಾನಿಕರು ಮಾತ್ರವಲ್ಲ, ಅಸಂಪ್ರದಾಯಸ್ಥರು ಮತ್ತು ಅಸನಾತನಿಗಳು ಕೂಡ.

ವಿಸ್ತರಣೆ :

* ಸಾವಿನ ಜೊತೆಗಿನ ಅನುಸಂಧಾನ, ಆಪ್ತಸಂವಾದ ಇಲ್ಲಿನ ಪ್ರಧಾನ ನೆಲೆ. ಸಾವು ಮನುಷ್ಯನಿಗೆ ಎಂದಿಗೂ ಅಪ್ರಿಯವೇ. ಆದರೆ ಬದುಕಿನ ಘನತೆಯನ್ನು ಸೌಂದರ್ಯವನ್ನು ಹೆಚ್ಚಿಸುವ ಸಾವಿಗೆ ಇರುವ ಘನತೆಯನ್ನು ನಾವು ಒಪ್ಪಲೇ ಬೇಕಲ್ಲವೆ ಎನ್ನುವ ಧೋರಣೆಯೊಂದನ್ನು ಬೆಳೆಸಲು ಈ ಲೇಖನ ಬಯಸುತ್ತದೆ ಎನ್ನುವುದನ್ನು ಗಮನಿಸಬಹುದು.

* ತಮ್ಮ ಭಾಷಣವೊಂದರಲ್ಲಿ ಪ್ರೊ.ಯು.ಆರ್.ಅನಂತಮೂರ್ತಿಯವರು ಚರ್ಚಿಲ್, ಗಾಂಧಿ, ಸ್ಟಾಲಿನ್ ಈ ಮೂವರ ಫೋಟೊಗಳನ್ನು ಒಟ್ಟಿಗೆ ಇಟ್ಟು ನೋಡಿದಾಗ ತುಂಬ ಸುಂದರವಾಗಿ ಕಾಣಿಸುವುದು ಗಾಂಧಿಯೇ, ಯಾಕೆಂದರೆ ಸಾವಿನ ಭಯವನ್ನು ಗಾಂಧಿ ಗೆದ್ದಿದ್ದರು ಎನ್ನುತ್ತಾರೆ.

* 'ಸಾವಿಲ್ಲದ ಮನೆಯ ಸಾಸುವೆಯನ್ನು ತಾ' ಎನ್ನುವ ಬುದ್ಧನ ಮಾತಿನ ಅರ್ಥ ಸಾವಿನ ದುಃಖದ ಸಾರ್ವತ್ರಿಕತೆಯನ್ನು ಗುರುತಿಸುವುದು ಮಾತ್ರವಲ್ಲ, ಸಾವಿನ ದುಃಖ ಮನುಷ್ಯನನ್ನು ಮಾನವೀಯಗೊಳಿಸುವುದಕ್ಕೆ ಅಗತ್ಯ ಎನ್ನುವುದೂ ಹೌದು, ಬದುಕಿನೆದುರು ಮನುಷ್ಯ ವಿನಯಶೀಲನಾಗಲು, ಬದುಕನ್ನು ಪ್ರೀತಿಸಲು ಸಾವು ಸ್ಪಷ್ಟ ಆಧಾರವೂ ಹೌದು ಎನ್ನುವುದರ ಹಿನ್ನೆಲೆಯಲ್ಲಿ ಈ ಲೇಖನವನ್ನು ಪರಿಶೀಲಿಸಬಹುದು.

**ಲೇಖಕರ ಪರಿಚಯ: ಕೆ.ಸತ್ಯನಾರಾಯಣ**

ಕೆ.ಸತ್ಯನಾರಾಯಣ ಅವರು ಹುಟ್ಟಿದ್ದು ೧೯೫೪ ಏಪ್ರಿಲ್ ೨೧ ರಂದು. ಮಂಡ್ಯ ಜಿಲ್ಲಾ ಮದ್ದೂರು ತಾಲೋಕು ಕೊಪ್ಪ ಗ್ರಾಮದಲ್ಲಿ. ೧೯೭೨ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ.ಪದವಿ(ಸುವರ್ಣ ಪದಕದೊಂದಿಗೆ). ೧೯೭೪ರಲ್ಲಿ ಇದೇ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ.

೧೯೭೮ರಲ್ಲಿ ಭಾರತ ಸರ್ಕಾರದ ಇಂಡಿಯನ್ ರೆವಿನ್ಯೂ ಸರ್ವೀಸ್‌ಗೆ ಸೇರಿ ಆದಾಯ ತೆರಿಗೆ ಇಲಾಖೆಯಲ್ಲಿ ದೇಶದ ನಾನಾ ಭಾಗಗಳಲ್ಲಿ ಕೆಲಸ ಮಾಡಿ (ಏಪ್ರಿಲ್ ೨೦೧೪ರಲ್ಲಿ ಕರ್ನಾಟಕ ಮತ್ತು ಗೋವಾ ವಲಯದ ಪ್ರಧಾನ ಮುಖ್ಯ ಆಯುಕ್ತರಾಗಿ, ಬೆಂಗಳೂರು) ನಿವೃತ್ತಿ ಹೊಂದಿದ್ದಾರೆ.

## ೪. ಪರಿಸ್ಥಿತಿ– ಮನಸ್ಥಿತಿಗಳಿಗೆ ಆತ್ಮಹತ್ಯೆಯೇ ಪರಿಹಾರವಲ್ಲ! (ಓದು ಪಠ್ಯ)

–ಆರ್. ಎಮ್. ತಿಮ್ಮಾಪುರ

ಆತ್ಮ ಹತ್ಯೆಗಳು ಹೆಚ್ಚುತ್ತಿರುವ ಕಾಲಘಟ್ಟದಲ್ಲಿ ನಾವು ಜೀವಿಸುತ್ತಿದ್ದೇವೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ ಪ್ರತಿ ವರ್ಷ ಜಗತ್ತಿನಲ್ಲಿ ಏಳು ಲಕ್ಷಕ್ಕಿಂತಲೂ ಅಧಿಕ ಜನರು ಆತ್ಮಹತ್ಯೆ ಮಾಡುತ್ತಾರೆ. ಭಾರತದಲ್ಲಿ ಕೂಡಾ ವರ್ಷಕ್ಕೆ ಸುಮಾರು ಎರಡು ಲಕ್ಷ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಪ್ರತಿವರ್ಷ ಆತ್ಮಹತ್ಯೆ ಮಾಡುವವರ ಸಂಖ್ಯೆ ಹೆಚ್ಚುತ್ತಿರುವುದನ್ನು ಕಾಣುತ್ತಿದ್ದೇವೆ. ಆತ್ಮಹತ್ಯೆ ಮಾಡಲು ಪ್ರಯತ್ನಿಸುವವರ ಹಾಗೂ ಆಲೋಚಿಸುವವರ ಸಂಖ್ಯೆಯು ಇದಕ್ಕಿಂತಲೂ ಅಧಿಕವೆಂದು ವರದಿಗಳು ತಿಳಿಸುತ್ತವೆ. ಆತ್ಮಹತ್ಯೆ ಎಂಬುದು ವೇದನಾಯುಕ್ತ ಹಾಗೂ ಧಾರುಣವಾದ ಒಂದು ಕೃತ್ಯವಾಗಿದೆ. ಇಂದು ಜೀವನದಲ್ಲಿ ಹೆಚ್ಚುತ್ತಿರುವ ಮಾನಸಿಕ ಅಸ್ವಸ್ಥತೆ, ಜಿಗುಪ್ಸೆ, ಭಯ, ನಿರಾಶೆ, ಸಾಲ, ಆರ್ಥಿಕ ಸಮಸ್ಯೆ, ವ್ಯಾಪಾರದಲ್ಲಿ ನಷ್ಟ, ಕೃಷಿನಾಶ, ನಿರುದ್ಯೋಗ, ಭಯಾನಕ ರೋಗ, ಒಂಟಿತನ, ಒತ್ತಡ, ಗೊಂದಲ, ರ್‍ಯಾಗಿಂಗ್‌ಗಳು ಆತ್ಮಹತ್ಯೆಗೆ ಕಾರಣ.

ಇತ್ತೀಚಿಗೆ ನನ್ನ ಮನಸ್ಸು ಬಹಳ ಬೇಜಾರವಾಗಿದೆ, ಏನೋ ಗೊತ್ತಿಲ್ಲ ಕೆಲಸ ಮಾಡಲು ಮನಸ್ಸು ಬರುತ್ತಿಲ್ಲ, ನಿದ್ದೆ ಮತ್ತು ಹಸಿವು ಆಗುತ್ತಿಲ್ಲ, ಜೀವನದಲ್ಲಿ ಒಂದಲ್ಲ ಒಂದು ಸಮಸ್ಯೆಗಳು ಬರುತ್ತಲೆ ಇವೆ, ನೆಮ್ಮದಿ ಎನ್ನುವುದು ಆ ದೇವರು ನನ್ನ ಹಣೆಬರದಲ್ಲಿ ಬರೆದಿದ್ದಾನೋ ಇಲ್ಲೋ ಗೊತ್ತಿಲ್ಲ, ಜೀವನ ಸಾಕಾಗಿ ಬಿಟ್ಟಿದೆ. ನನ್ನ ಸಮಸ್ಯೆಗಳನ್ನು ಕೇಳುವವರು ಯಾರೂ ಇಲ್ಲಾ, ಬೆಳಿಗ್ಗೆಯಿಂದ ಮಲಗುವರಿಗೂ ಕೆಲಸ ತಪ್ಪಿದ್ದಲ್ಲ, ನಮ್ಮದು ಜೀವನ ಅಲ್ಲವೇ ಈ ನರಕದ ಜೀವನ ಬೇಡ, ನಾನು ಬದುಕುವುದು ಯಾರ ಸಲುವಾಗಿ, ನನ್ನವರು ನನಗೆ ಆಸರವಾಗದೆ ಇರುವಾಗ ನಾನು ಬದುಕಿ ಪ್ರಯೋಜನ ಏನು? ಸುಮ್ಮನೆ ಸತ್ತು ಹೋಗುವುದು ಒಳ್ಳೆಯದು, ಇದಕ್ಕೆ ಯಾವುದೇ ಪರಿಹಾರನು ಇಲ್ಲಾ, ಚಿಕಿತ್ಸೇನು ಇಲ್ಲ. ಹೀಗಾದರೆ ನನ್ನ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು?

'ಬೇಡ ನನ್ನ ಜೀವನಕ್ಕೆ ಅಂತ್ಯ ಆತ್ಮಹತ್ಯೆನೇ ಪರಿಹಾರ' – ಹೀಗೆ ಹಲವಾರು ವಿಚಾರಗಳು ಸುಮಾರು ದಿವಸದವರಿಗೆ ಮನಸ್ಸಿನಲ್ಲಿ ಹುದಗಿಕೊಂಡಿದ್ದು, ಈ ರೀತಿಯಾಗಿ ಯೋಚಿಸುತ್ತಾ ಇರುವ ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಆತ್ಮಹತ್ಯೆ ಎನ್ನುವುದು ಪರಿಹಾರ ಅಲ್ಲ. ಇದಕ್ಕೂ ಕೂಡ ವಿಶೇಷ ತಜ್ಞರ, ಮನೋವೈದ್ಯರ, ಚಿಕತ್ಸೆ ಇದೆ. ಸಾರ್ವಜನಿಕರಿಗೆ, ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಮತ್ತು ಅವರ ಸಂಬಂಧಿಕರಿಗೆ ಮಾನಸಿಕ ಕಾಯಿಲೆಯ ಬಗ್ಗೆ ಜಾಗೃತಿ, ಅರಿವು ಮತ್ತು ತಿಳುವಳಿಕೆಯನ್ನು ಮೂಡಿಸುವ ಸಲುವಾಗಿ ಆತ್ಮಹತ್ಯೆ ತಡೆಗಟ್ಟಲು ವಿಶ್ವ ಆರೋಗ್ಯ ಸಂಸ್ಥೆಯು, ಪ್ರತಿ ವರ್ಷ ಸೆಪ್ಟಂಬರ್ ೧೦ ರಂದು ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವನ್ನು ೨೦೦೩ ರಲ್ಲಿ ಪ್ರಾರಂಬಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಆತ್ಮಹತ್ಯೆ ನಿಯಂತ್ರಿಸುವುದರ ಬಗ್ಗೆ ಜನರಲ್ಲಿ ಅರಿವನ್ನು ಉಂಟು ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳುತ್ತಲಿದೆ.

ಆತ್ಮಹತ್ಯೆ ಮಾಡಿಕೊಳ್ಳುವುದು ಮಹಾ ಪಾಪ ಎಂದು ಹಲವು ಧರ್ಮಗಳ ಬೋಧನೆ ಇದೆ. ಹಿರಿಯರು ಜಾಣ್ಣುಡಿಗಳು ಮತ್ತು ಗಾದೆ ಮಾತಿನ ಮೂಲಕ ಇದನ್ನು ತಿಳಿಸಿರುತ್ತಾರೆ. ಆದರೆ ಈಗಿನ ಡಿಜಿಟಲ್ ತಂತ್ರಜ್ಞಾನದ ಯುಗದಲ್ಲಿ ಒತ್ತಡಪೂರಿತ ಜೀವನ ಶೈಲಿಯಿಂದ ಬಹುಬೇಗನೆ ಜನರು ಖಿನ್ನತೆಗೆ

ಒಳಗಾಗುತ್ತಾರೆ. ಇದರಿಂದ ಹೊರಬರಲು ಅಸಾಧ್ಯವೆಂದು ತಿಳಿದು ತಮ್ಮ ಜೀವನವನ್ನು ಅಂತ್ಯಗೊಳಿಸಿಕೊಳ್ಳುತ್ತಾರೆ.

ಆತ್ಮಹತ್ಯೆಯ ವಿಚಾರಗಳು ಅನಿಯಂತ್ರಿತ ಕೋಪ, ಸಿಡುಕುತನ, ಹತಾಶೆ, ದ್ವೇಷ ಕಾರುವುದು, ಧೂಮಪಾನ ಮತ್ತು ಮದ್ಯಪಾನ, ಒಂಟಿಯಾಗಿ ಕುಳಿತುಕೊಳ್ಳುವುದು, ನಿದ್ರಾಹೀನತೆ, ಮತ್ತು ಚಂಚಲ ಮನಸ್ಸುಳ್ಳವರಲ್ಲಿ ಕಾಣಿಸಿಕೊಳ್ಳುತ್ತವೆ. ಇತರೆ ದೇಶದಲ್ಲಿ ಆತ್ಮಹತ್ಯೆಗೆ ಸರಾಸರಿ ೧೫–೩೦ ವಯಸ್ಸು ಹಾಗೂ ೪೫–೬೪ ವಯಸ್ಸಿನವರೇ ಹೆಚ್ಚು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಆತ್ಮಹತ್ಯೆ ಪ್ರಕರಣಗಳ ವರದಿ ಪ್ರಕಾರ ಒಟ್ಟು ೫ ರಾಜ್ಯಗಳಲ್ಲಿ ಶೇ ೪೯.೫ ಆತ್ಯಹತ್ಯೆ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ಕರ್ನಾಟಕ ರಾಜ್ಯವೂ ಒಂದು. ಮಹಾರಾಷ್ಟ್ರ (ಶೇ.೧೩.೬) ತಮಿಳುನಾಡು (ಶೇ.೯.೭), ಪಶ್ಚಿಮ ಬಂಗಾಳ (ಶೇ.೯.೧) ಮಧ್ಯಪ್ರದೇಶ(ಶೇ.೯) ಕರ್ನಾಟಕ (ಶೇ. ೮.೧) (ಇದು ೨೦೧೭ ರಿಂದ ೨೦೧೯ ರವರೆಗಿನ ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳ ಅಂಕಿ ಅಂಶ) ಹೆಚ್ಚಾಗಿ ರೈತರು ತಮ್ಮ ಸಾಲದ ಭಾರದಿಂದ ಆತ್ಮಹತ್ಯೆಗೆ ಶರಣಾಗುತ್ತಾರೆ, ಕೌಟುಂಬಿಕ ಕಲಹದಿಂದ ಮತ್ತು ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶದಿಂದ.... ಹೀಗೆ ಹಲವಾರು ಸಣ್ಣ ಪುಟ್ಟ ಕಾರಣಗಳಿಂದ ತಮ್ಮ ಜೀವನವನ್ನು ಕಳೆದುಕೊಳ್ಳುತ್ತಾರೆ. ಉದಾ: ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ ನಂತರ ಅವರ ಅವಲಂಬಿತ ಕುಟುಂಬ ಇನ್ನೂ ದುಸ್ಥಿತಿಯಲ್ಲಿ ಮುಳುಗುತ್ತದೆ. ಅವನ ಸಾಲದ ಹೊರೆ ಒಂದುಕಡೆಯಾದರೆ ಅವನ ಕುಟುಂಬದ ಸಮಸ್ಯೆಗಳು ಇನ್ನೊಂದೆಡೆ.

ವಿದ್ಯಾರ್ಥಿಗಳಿಗೆ ಪರೀಕ್ಷೆಯ ಫಲಿತಾಂಶವೇ ಜೀವನಲ್ಲ, ಫಲಿತಾಂಶ ನಿಮ್ಮ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು ಅಷ್ಟೇ, ಕೌಶಲ್ಯಾಧಾರಿತ ಬದುಕು ಬಹಳ ಮುಖ್ಯ. ವಿಶೇಷ ಮಾನಸಿಕ ತಜ್ಞರಿಂದ ಮಾನಸಿಕ ಕಾಯಿಲೆ ಬಗ್ಗೆ ಜನರಿಗೆ ಆತ್ಯಹತ್ಯೆ ತಡೆಗಟ್ಟುವ ಕುರಿತು ಮುಂಜಾಗೃತೆ ಅರಿವು ಮತ್ತು ಇದರ ಬಗ್ಗೆ ಇರುವತಂಹ ಕಳಂಕವನ್ನು ಕಡಿಮೆ ಮಾಡುವ ಉತ್ತಮ ತಿಳುವಳಿಕೆ ನೀಡುವುದರ ಮೂಲಕ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನವನ್ನಾಚರಿಸಲಾಗುತ್ತದೆ.

ಆತ್ಮಹತ್ಯೆಯನ್ನು ನಿಯಂತ್ರಿಸುವ ಉದ್ದೇಶದ ಮೂಲಕ ಜನರ ಮಾನಸಿಕ ಆರೋಗ್ಯವನ್ನು ಸುಧಾರಿಸುವುದು ಮತ್ತು ಆತ್ಮವಿಶ್ವಾಸದೊಂದಿಗೆ ಕೌಶಲ್ಯದ ಮೂಲಕ ಜನರನ್ನು ಸಬಲೀಕರಣಗೊಳಿಸುವುದು. ಇಂತಹ ಸಂದರ್ಭದಲ್ಲಿ ಸೂಕ್ತವಾದ ಮನೋತಜ್ಞರನ್ನು ಮತ್ತು ಮನೋಸಾಮಾಜಿಕ ಆಪ್ತ ಸಮಾಲೋಚಕರನ್ನು ಭೇಟಿ ಮಾಡಿ ತಮ್ಮ ಮನಸ್ಸಿನಲ್ಲಿ ಇರತಕ್ಕಂತಹ ಭಾವನೆಗಳನ್ನು ವ್ಯಕ್ತ ಪಡಿಸಿಕೊಂಡು ತಮ್ಮ ಸಮಸ್ಯಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ದೇವರು ಎಂಬ ಶಕ್ತಿ ಎಲ್ಲರನ್ನು ರಕ್ಷಣೆ ಮಾಡುತ್ತಿರುತ್ತದೆ, ಆದರೆ ನಮ್ಮ ಬಗ್ಗೆ ನಾವೇ ನಂಬಿಕೆ ಕಳೆದುಕೊಂಡಾಗ ದೇವರು ಕೂಡ ಏನೂ ಮಾಡಲಾರ. ಆದ್ದರಿಂದ ನಿಮ್ಮ ಆತ್ಮವಿಶ್ವಾಸ ಕಳೆದುಕೋಳ್ಳಬೇಡಿ. ಅದು ನಿಮ್ಮನ್ನೇ ಕಳೆದುಕೊಳ್ಳುವಂತೆ ಮಾಡುತ್ತದೆ. ಪ್ರತಿ ದಿನವನ್ನು ಹೊಸ ಭರವಸೆಯೊಂದಿಗೆ ಆಚರಿಸಿ ಬದುಕು ಸಾರ್ಥಕವಾಗುತ್ತದೆ. ಬೇರೆಯವರ ಜೀವನ ಚೆನ್ನಾಗಿದೆ ನನ್ನದು ಚೆನ್ನಾಗಿಲ್ಲ ಎಂದು ಹೋಲಿಕೆ ಮಾಡಿಕೊಳ್ಳಬಾರದು ಅದರಿಂದ ಮನಸ್ಸಿನಲ್ಲಿ ಜಿಗುಪ್ಸೆ, ನಿರಾಶೆ, ಹತಾಶೆ ಉಂಟಾಗುತ್ತದೆ. ಇದರಿಂದ ಜೀವನವೇ ಬೇಡ ಎಂದು ನಿರ್ಧರಿಸಿ ಆತ್ಮಹತ್ಯೆ ಮಾಡಿಕೊಳ್ಳುವವರಿದ್ದಾರೆ. ಇದರಿಂದ ನಮ್ಮ ಜೀವನ ವ್ಯರ್ಥ್ಯವಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ವಿಶ್ವದಾದ್ಯಂತ ಪ್ರತಿ ವರ್ಷ ಸುಮಾರು ೮ ಲಕ್ಷಕ್ಕೂ ಹೆಚ್ಚು ಜನರು ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಆತ್ಮಹತ್ಯೆಯಿಂದ ಮರಣ ಹೊಂದುತ್ತಿದ್ದಾರೆ. ಅಂದರೆ ಪ್ರತಿ ೪೦ ಸೆಕೆಂಡಿಗೆ ೧ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಆತ್ಮಹತ್ಯೆಯು ಸುಮಾರು ೧೯ ರಿಂದ ೨೯ ವಯಸ್ಸಿನ ಯುವಕರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮೂರನೇ ಎರಡರಷ್ಟು ಆತ್ಮಹತ್ಯೆ ಪ್ರಕರಣಗಳು ಬಡ ಮತ್ತು ಮಧ್ಯಮವರ್ಗದ ಕುಟುಂಬಗಳಲ್ಲಿ ಸಂಭವಿಸುತ್ತವೆ.

ಆತ್ಮಹತ್ಯೆಯ ಪ್ರಕರಣಗಳು ನ್ಯಾಷನಲ್‌ಕ್ರೈಮ್ ರಿಪೋರ್ಟ್ ಬ್ಯೂರೋ (ಎ.ಸಿ.ಆರ್.ಬಿ) ವರದಿ ಪ್ರಕಾರ, ಭಾರತದಲ್ಲಿ ಪ್ರತಿ ವರ್ಷ ಸುಮಾರು ೧ ಲಕ್ಷಜನ ಆತ್ಮಹತ್ಯೆಯಿಂದ ಮರಣಹೊಂದುತ್ತಿದ್ದಾರೆ. ನಮ್ಮ ದೇಶದಲ್ಲಿ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಅತಿ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳಲ್ಲಿ ೧೮ ರಿಂದ ೪೫ ವಯಸ್ಸಿನವರಲ್ಲಿ ಹೆಚ್ಚಾಗಿ ಕಂಡುಬಂದಿದ್ದು, ದೇಶದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ.

ನಮ್ಮ ಸಮಾಜದಲ್ಲಿ ಮಾನಸಿಕ ರೋಗವನ್ನು ಒಂದು ಕೆಟ್ಟ ರೋಗವಾಗಿ ಪರಿಗಣಿಸಿ ಕೆಟ್ಟ ದೃಷ್ಟಿಯಿಂದ ಜನರು ನೋಡುವುದನ್ನು ನಾವು ಕಾಣುತ್ತೇವೆ. ಆದ್ದರಿಂದ ಮಾನಸಿಕ ಅಸ್ವಸ್ಥರಾದಾಗ ಅದಕ್ಕೆ ಸರಿಯಾದ ಚಿಕಿತ್ಸೆ ಪಡೆಯಲು ಹೆಚ್ಚಿನವರು ಮುಂದೆ ಬರುವುದಿಲ್ಲ. ಹೆಚ್ಚಿನವರು ಈ ರೋಗವನ್ನು ಅರ್ಥಮಾಡುವುದಿಲ್ಲ. ಅದಲ್ಲದೇ ಇಂದು ನಮ್ಮಲ್ಲಿರುವ ಸಮಸ್ಯೆಗಳನ್ನು ಅಡಗಿಸುವ ಮತ್ತು ಜನರ ಮುಂದೆ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ತಾನು ಸಂತೋಷವಾಗಿದ್ದೇನೆಂದು ತೋರಿಸುವಂತಹ ಒಂದು ಮನೋಭಾವ ಹೆಚ್ಚುತ್ತಿದೆ. ಆದ್ದರಿಂದ ನಮ್ಮ ನಿಕಟ ಬಂಧುಗಳಿಗೆ ಕೂಡಾ ನಾವು ಮಾನಸಿಕವಾಗಿ ಕಷ್ಟವನ್ನನುಭವಿಸುತ್ತಿದ್ದೇವೆಂದು ತಿಳಿಯುವುದಿಲ್ಲ, ಸೂಕ್ತ ಸಮಯದಲ್ಲಿ ಪರಿಣತ ವೈದ್ಯರ ಸರಿಯಾದ ಸಲಹೆಯನ್ನು ಪಡೆದು ಔಷಧಿಯನ್ನು ತೆಗೆದುಕೊಳ್ಳದಿದ್ದರೆ ಕಾಲಕ್ರಮೇಣ ರೋಗ ಉಲ್ಬಣಗೊಳ್ಳುವಂತಹ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

**ಆತ್ಮಹತ್ಯೆಗೆ ಹಲವು ಕಾರಣಗಳು:**

ಮಿದುಳಿನ ನರವಾಹಕಗಳ ಕೊರತೆ: ಮಿದುಳಿನಲ್ಲಿರುವ ಅಸಂಖ್ಯಾತ ನರಕೋಶಗಳ ಚಟುವಟಿಕೆಗಳ ಹಾಗೂ ರಾಸಾಯನಿಕಗಳ (ಡೋಪಮಿನ್, ಸೆರೋಟೋನಿನ್) ಹೆಚ್ಚು ಕಡಿಮೆಯಾಗುತ್ತಿರುವದರಿಂದ ಖಿನ್ನತೆಗೆ ತುತ್ತಾಗಬಹುದು. ಇಂಥವರಲ್ಲಿ ಪ್ರೀತಿ–ಪ್ರೇಮ, ಆಸಕ್ತಿ, ಆಹಾರದ ರುಚಿ ಮತ್ತು ಸಂತೋಷ ಕಡಿಮೆಯಾಗುತ್ತದೆ.

**ಆನುವಂಶೀಯಕ**: ಖಿನ್ನತೆ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಲ್ಲಿ, ಅನುವಂಶಿಕವಾಗಿ ಸ್ವಲ್ಪ ಪ್ರಮಾಣ ಹೆಚ್ಚಾಗಿ ಖಿನ್ನತೆ ಬರಬಹುದು.

**ಹಾರ್ಮೋನುಗಳ ವ್ಯತ್ಯಾಸ:** ದೇಹದಲ್ಲಿ ಥೈರಾಯಿಡ್ ಎಂಬ ಹಾರ್ಮೋನ್ ಕೊರತೆಯಿಂದ ಖಿನ್ನತೆಗೊಳಗಾಗಿ, ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳೆಲ್ಲಾ ನಿಧಾನವಾಗುವುದು ಕಂಡು ಬರುತ್ತದೆ.

**ನಿರುದ್ಯೋಗ:** ಆತ್ಮಹತ್ಯೆಗೆ ನಿರುದ್ಯೋಗ ಕೂಡ ಬಲವಾದ ಕಾರಣವಾಗಿರುತ್ತದೆ. ಬಡತನ, ಮನೆಯ ತೊಂದರೆಗಳು ಮತ್ತು ಹತಾಶತೆಯಂತಹ ಅಂಶಗಳ ಮೂಲಕ ಆತ್ಮಹತ್ಯೆಯ ಹೆಚ್ಚಾಗಬಹುದು.

**ದೈಹಿಕ ಕಾಯಿಲೆ:** ದೀರ್ಘಕಾಲಕ ದೈಹಿಕ ಅನಾರೋಗ್ಯ, ಕಿಬ್ಬೊಟ್ಟೆಯ ನೋವು, ಜಠರ ಹುಣ್ಣು ರೋಗ, ಅಧಿಕ ರಕ್ತದೊತ್ತಡ, ಶ್ವಾಸನಾಳದ ಅಸ್ತಮಾ ಇತ್ಯಾದಿ.

**ಕೆಟ್ಟ ಚಟಗಳು:** ಮದ್ಯಪಾನ, ಧೂಮಪಾನ ಮತ್ತು ಗುಟಕಾ ಹಲವಾರು ಚಟಗಳಿಗೆ/ವ್ಯಸನಕ್ಕೆ ತುತ್ತಾದಾಗ ಮಿದುಳಿನಲ್ಲಿರುವ ನರಕೋಶಗಳ ಕುಗ್ಗುತ್ತದೆ. ಇದರಿಂದ ದೈಹಿಕ ಮತ್ತು ಮಾನಸಿಕ ಸ್ಥಿರತೆ ಕ್ಷೀಣಿಸುತ್ತಾ ಖಿನ್ನತೆಗೆ ತುತ್ತಾಗುತ್ತಾರೆ.

**ಇತರ ಕಾರಣಗಳು:** ಆರ್ಥಿಕ ಸಮಸ್ಯೆ, ನಿರುದ್ಯೋಗ, ಬಡತನ, ವ್ಯಾಪರದಲ್ಲಿ ಹಾನಿ, ಕೌಟುಂಬಿಕ ಸಮಸ್ಯೆ, ಅಸಾಮರಸ್ಯ, ವರದಕ್ಷಣೆ ಕಿರುಕುಳ, ಸಾಮಾಜಿಕ ಸಮಸ್ಯೆ, ವಿವಾಹ ವಿಚ್ಛೇದನ, ಪ್ರೀತಿ ಪ್ರೇಮ ಭಗ್ನಗೊಂಡಾಗ, ಅತಿಯಾಗಿ ಮದ್ಯಪಾಪಾನ ಮತ್ತು ಧೂಮಪಾನ ಸೇವನೆ, ದುರ್ಬಲ ಮನಸ್ಸನ್ನು ಹೊಂದಿದವರು, ಸಮಸ್ಯೆಗಳನ್ನು ಸರಿಯಾಗಿ ಅರಿಯದೇ ಇರುವುದು. ಸರಿಯಾದ ಸಲಹೆಗಳು ಸಿಗದೇ ಇದ್ದಾಗ, ಈ ರೀತಿ ಸಮಸ್ಯೆಗಳನ್ನು ಹೊಂದಿರುವರು ಬಹುಶಃ ಆತ್ಮಹತ್ಯೆಗೆ ತುತ್ತಾಗುತ್ತಿದ್ದಾರೆ,

ಆತ್ಮಹತ್ಯೆ ಕಾಯಿಲೆಯ ಲಕ್ಷಣಗಳೆಂದರೆ ನಕಾರಾತ್ಮಕ ಆಲೋಚನೆಗಳು, ಕೇಲಸದಲ್ಲಿ ಆಸಕ್ತಿ ಇಲ್ಲದಿರುವುದು. ಊಟಮಾಡದೇ ಇರುವುದು, ನಿದ್ರೆಯಾಗದಿರುವುದು, ದೈಹಿಕವಾಗಿ ಅಶಕ್ತತೆ ಮತ್ತು ಮನಸ್ಸಿನಲ್ಲಿ ಉತ್ಸಾಹ ಇಲ್ಲದಿರುವುದು, ಒಂಟಿಯಾಗಿ ಕುಳಿತುಕೊಳ್ಳುವುದು, ಮತ್ತು ಅಳುವುದು. ನಕಾರಾತ್ಮಕ ನೆಗೆಟೀವ್ ಮನೋಭಾವಗಳು ಕೋಪ, ಭಯ, ದುಃಖ, ಅಸೂಯೆ, ಬೇಸರಿಕೆ, ಅಪರಾಧ ಮನೋಭಾವನೆ ಈ ಲಕ್ಷಣಗಳು ಕಂಡುಬರುತ್ತವೆ.
ಭಾವನಾತ್ಮಕ ಆರೋಗ್ಯಕ್ಕಾಗಿ ಚಿಕಿತ್ಸೆಗಳು: ಸಕಾರಾತ್ಮಕ ಮನೋಭಾವಗಳು ಅಂದರೆ ಪ್ರೀತಿ, ಭರವಸೆ, ಬೆಂಬಲ, ಆಶಾವಾದ ಮತ್ತು ಆತ್ಮವಿಶ್ವಾಸ ಇವುಗಳನ್ನು ಜೀವನದಲ್ಲಿ ಬೆಳೆಸಿಕೊಳ್ಳಬೇಕು.
ಒತ್ತಡ ನಿವಾರಣೆಗಾಗಿ ಸರಳ ಸೂತ್ರಗಳು: ದಿನನಿತ್ಯ ಧ್ಯಾನ, ಯೋಗಾಸನಗಳು, ಪ್ರಾರ್ಥನೆ, ವ್ಯಾಯಾಮ ಘಟನೆಗಳನ್ನು ಆತ್ಮೀಯರ ಜೊತೆಗೆ ಹಂಚಿಕೊಳ್ಳುವುದು ಮುಂತಾದವು.

**ಆತ್ಮಹತ್ಯೆ ತಡೆಗಟ್ಟಲು ಕ್ರಮಗಳು:**

ಆತ್ಮಹತ್ಯೆ ವಿಚಾರಗಳನ್ನು ಮಾತನಾಡುವ ವ್ಯಕ್ತಿಯನ್ನು ಒಬ್ಬಂಟಿಯಾಗಿ ಬಿಡಬಾರದು, ಆತನ/ಆಕೆಯ ಬಗ್ಗೆ ನಿಗಾ ವಹಿಸುವುದು, ಇಂತಹವರಿಗೆ ಭರವಸೆ, ಧೈರ್ಯ, ಬೆಂಬಲದ ಮಾತುಗಳನ್ನು ಮಾತನಾಡುವುದು, ಬದುಕಿನ ಮಹತ್ವ ಮತ್ತು ಜೀವನದ ಸಂತೋಷದ ವಿಷಯಗಳನ್ನು ಅರ್ಥೈಸುವುದು, ಜೀವನದಲ್ಲಿ ಸೋಲು ಗೆಲುವಿನ ಸೋಪಾನ, ಮುನ್ನುಗ್ಗಿ ನಡೆದರೆ ಗೆಲುವು ಖಚಿತ ಎಂಬ ಮಾತಿನೊಂದಿಗೆ ಜೀವನದ ಮಹತ್ವದ ತಿಳುವಳಿಕೆ ನೀಡುವುದು. ಆತ್ಮಹತ್ಯೆ ತಡೆಗಟ್ಟುವ ಕುರಿತು ಸಮುದಾಯದ ಮಟ್ಟದಲ್ಲಿ ಅರಿವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಹೀಗೆ ಮಾಡುವುದರಿಂದ ಅವರು ತಮ್ಮ ಜೀವನದ ಶೈಲಿಯನ್ನು ಬದಲಿಸಿಕೊಂಡು ಹೊಸ ಜೀವನವನ್ನು ನಡೆಸುತ್ತಾರೆ.

**ಚಿಕಿತ್ಸೆಗಳು:** ಆತ್ಮಹತ್ಯೆಯನ್ನು ನಿಯಂತ್ರಿಸುವಲ್ಲಿ ಮನೋವೈದ್ಯರ ಚಿಕಿತ್ಸೆ ಮತ್ತು ಮಾತುಗಳು, ರೋಗಿಯ ಕಾಯಿಲೆಯನ್ನು ಉಪಶಮನಗೊಳಿಸುತ್ತದೆ. ಇದರಿಂದ ರೋಗಿಯ ಮನಸ್ಸಿನ ಸಕಾರಾತ್ಮಕ ಬದಲಾವಣೆಗೆ ಅವಕಾಶ ಮಾಡಿಕೊಡುತ್ತದೆ. ಆ ವ್ಯಕ್ತಿಗಳಲ್ಲಿ ಚೈತನ್ಯವು ತುಂಬಿಕೊಳ್ಳುತ್ತದೆ. ಬದುಕಿನ ಮೇಲೆ ಭರವಸೆ ಬರುತ್ತದೆ. ಆಪ್ತ ಸಮಾಲೋಚನೆಯೇ ಆತ್ಮಹತ್ಯೆಗೆ ಪ್ರಮುಖ ಚಿಕಿತ್ಸೆಯಾಗಿದೆ. ಮನೋವಿಜ್ಞಾನಿಗಳ ಮತ್ತು ಮನೋವೈದ್ಯಕೀಯ ಸಮಾಜ ಕಾರ್ಯಕರ್ತರು ಹಾಗೂ ಇತರ ನಾಗರಿಕರು ಇದರಲ್ಲಿ ಭಾಗವಹಿಸಿ

ಆತ್ಮಹತ್ಯೆಯಿಂದ ವಿಮುಖರನ್ನಾಗಿ ಮಾಡಬಹುದು. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲೂಕ ಆಸ್ಪತ್ರೆ ಮತ್ತು ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಗಳಲ್ಲಿ ಅನೇಕ ತರಹದ ಮನೋಚಿಕಿತ್ಸೆಗಳು ಲಭ್ಯವಿದ್ದು, ಆತ್ಮಹತ್ಯೆಯ ವಿಚಾರದಿಂದ ಬಳಲುವವರು ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬಹುದು. ಜನರು ತಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಂಡು ಸ್ವಸ್ಥ ಸುಂದರ ಜೀವನ ನಡೆಸಬಹುದು.

***

**ಲೇಖಕರ ಪರಿಚಯ: ಆರ್.ಎಮ್.ತಿಮ್ಮಾಪೂರ** ಇವರು ಮನೋವೈದ್ಯಕೀಯ ಸಮಾಜ ಕಾರ್ಯಕರ್ತರು ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಧಾರವಾಡ.

## IV. ಸಂಕೀರ್ಣ – ೧೩ ಗಂಟೆಗಳು

೧. ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ – ಕುವೆಂಪು
೨. ಕೊಳಗೇರಿಗಳ ಸುಧಾರಣೆಯ ಸಾಧ್ಯತೆಗಳು–ಲಾರಿ ಬೇಕರ್, ಅನು : ಜಸವಂತ ಜಾದವ್
೩. ಭಾಷೆಯ ಮಾಂತ್ರಿಕತೆ – ಡಾ.ಕೆ.ವಿ.ನಾರಾಯಣ
೪. ತೆರೆದ ಮನ –ಎ.ಎನ್.ಮೂರ್ತಿರಾವ್ (ಓದು ಪಠ್ಯ)

### ಆಶಯ

ಸಂಕೀರ್ಣ ಲೇಖನ ಭಾಗದಲ್ಲಿ ಒಟ್ಟು ನಾಲ್ಕು ಲೇಖನಗಳಿದ್ದು ಈ ಲೇಖನಗಳು ನಾಗರೀಕರು ಅದರಲ್ಲೂ ಮುಖ್ಯವಾಗಿ ಯುವ ಜನಾಂಗವು ತೆರದ ಮನಸ್ಸಿನೊಂದಿಗೆ ಮತಿಗೌರವವನ್ನು ಬೆಳೆಸಿಕೊಳ್ಳಬೇಕೆಂಬ ಆಶಯವನ್ನು ಎತ್ತಿಹಿಡಿಯುತ್ತವೆ.

ಬಡವರು, ಬಡತನ ಹಾಗೂ ಕೊಳೆಗೇರಿಗಳ ಬಗ್ಗೆ ನಮ್ಮ ಸಮಾಜಕ್ಕೆ ಈಗಾಗಲೇ ಇರುವ ಧೋರಣೆಗಳು, ಅದೆಷ್ಟು ಅಮಾನವೀಯವು, ಕ್ರೂರವೂ ಆಗಿದೆ ಎಂಬುದರ ಬಗ್ಗೆ ನಮ್ಮ ಕಣ್ಣನ್ನು ತೆರೆಸುತ್ತದೆ. ಕೊಳೆಗೇರಿಗಳ ಬಗ್ಗೆ ನಾವು ರೂಢಿಸಿಕೊಳ್ಳಬೇಕಾದ ದೃಷ್ಟಿ ಧೋರಣೆಗಳು ಹಾಗೂ ಮಾನವೀಯ ಪ್ರತಿಸ್ಪಂದನಗಳ ಸ್ವರೂಪವು ವಿವರಿಸುತ್ತದೆ. ಕೊಳೆಗೇರಿ ವಾಸಿಗಳ ಬಗ್ಗೆ ನಾವು ಮಗದೊಮ್ಮೆ ಮರುಚಿಂತನೆಗೆ ತೊಡಗಿ, ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಮಾಡುತ್ತದೆ.

ಪ್ರತಿ ಭಾಷೆಗೂ ಅವುಗಳದ್ದೇ ಆದ ನುಡಿಗಟ್ಟುಗಳು ನಾಣ್ಣುಡಿ, ಗಾದೆಗಳಿದ್ದು ಅದರದ್ದೇ ಅರ್ಥ ವೈಶಾಲ್ಯವೂ ಇದೆ, ಮಂತ್ರ ಸ್ತೋತ್ರ, ನಾಮಾವಳಿ, ಬೀಜಾಕ್ಷರಗಳಿಗೆ ವಿಶಿಷ್ಟ ಶಕ್ತಿ ಇದ್ದು, ಅವು ಅದ್ಭುತ ಪ್ರಭಾವವನ್ನು ಬೀರುತ್ತವೆ ಎಂದು ಅನಾದಿಕಾಲದಿಂದಲೂ ಜನರು ಭಾವಿಸುತ್ತಾರೆ. ಆದ್ದರಿಂದಲೇ ಶ್ರೇಣೀಕೃತ ಸಮಾಜದಲ್ಲಿ ಕೆಲವರು ಮಾತ್ರ ಜ್ಞಾನದ ಮೇಲೆ ಏಕಸೌಮ್ಯವನ್ನು ಸ್ಥಾಪಿಸಲು ಸರ್ವ ಪ್ರಯತ್ನ ಮಾಡಿದರು. ಓದು ವಿದ್ಯೆಯಿರಲಿ, ಕೆಲವು ಆಡುನುಡಿಗಳ ಬಳಕೆಗೂ ನಿಷೇಧಗಳು ಹುಟ್ಟಿಕೊಂಡವು. ನಿಷೇಧಿತ ಪದಗಳ ಬಳಕೆ ಅಶುಭವೆಂದೂ, ಅಪರಾಧವೆಂದೂ ಜಗತ್ತಿನಾದ್ಯಂತ ಎಲ್ಲಾ ದೇಶಗಳಲ್ಲೂ ನಂಬಲಾಗುತ್ತಿದೆ. ಒಟ್ಟಾರೆ ವ್ಯಕ್ತಿಯು ಹುಟ್ಟಿನಿಂದ ಸಾವಿನವರೆಗೆ ಭಾಷೆಯ ಮಂತ್ರ ಬಂಧನಕ್ಕೆ ಅವೇತನಾಗಲು ಸಾಧ್ಯವಿಲ್ಲವೆಂಬ ಸಂದೇಶವನ್ನು ಎತ್ತಿಹಿಡಿಯುತ್ತದೆ.

# ೧. ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ – ಕುವೆಂಪು

ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ; ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯೂ ಒಬ್ಬ ಗೌರವತಪಸ್ವಿ, ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿ ಸಂಗ್ರಹದ ಕಾಲ, ಬುದ್ಧಿಯನ್ನು ಮಸೆದು, ಭಾವವನ್ನು ಕಡೆದು, ಕವಿಗಳ ಕಾವ್ಯಗಳಲ್ಲಿಯೂ ತತ್ತ್ವಜ್ಞರ ದರ್ಶನಗಳಲ್ಲಿಯೂ ವೈಜ್ಞಾನಿಕರ ಸಂಶೋಧನೆಗಳಲ್ಲಿಯೂ, ರಾಷ್ಟ್ರರಚನಾ ಸಮರ್ಥರ ರಾಜಕೀಯ ಶಾಸ್ತ್ರಗಳಲ್ಲಿಯೂ ಮನಸ್ಸನ್ನು ಹದಗೊಳಿಸಿ, ಚಿರಕಾಲವೂ ಶ್ರೇಯಸ್ಕರವಾದ ಸಂಸ್ಕೃತಿಯ ದೇವತೆಯನ್ನು ರಚಿಸಿ, ಆಕೆಯನ್ನು ಮನೋಮಂದಿರದಲ್ಲಿ ಸ್ಥಾಪಿಸಲು ಬದ್ಧಕಂಕಣರಾಗಿ ಬಂದಿರುವ ನೀವು, ಅಂತಹ ಇಚ್ಛೆಯಾಗಲಿ ಶಕ್ತಿಯಾಗಲಿ ಇಲ್ಲದ ಇತರರಂತೆ, ಬಣ್ಣಗುಳ್ಳೆಯ ಹವ್ಯಾಸಗಳಲ್ಲಿ ಕಾಲಹರಣ ಮಾಡಬೇಡಿ. ನಾಡಿನ ಮುಂದಣ ಏಳ್ಗೆಗೂ ಕಲ್ಲುಹಾಕಿ, ನಿಮ್ಮ ಅಭ್ಯುದಯದ ಬೇರಿಗೂ ಬಿಸಿನೀರು ಹೊಯ್ದುಕೊಳ್ಳಬೇಡಿ. ವೆಂಕನ ಹೆಸರು ಮುಂದಕ್ಕೆ ಬಂದಿದೆ; ಸೀನನ ಹೆಸರು ಪತ್ರಿಕೆಗಳಲ್ಲಿ ಅಚ್ಚಾಗಿದೆ; ಎಲ್ಲರ ಬಾಯಲ್ಲಿಯೂ ನಾಣಿಯ ನಾಮಸಂಕೀರ್ತನೆಯಾಗುತ್ತಿದೆ: ನಾನು ಮಾತ್ರ ಹಿಂದುಳಿದುಬಿಟ್ಟೆ. ಅಪ್ರಸಿದ್ಧನಾದೆ, ಆದ್ದರಿಂದ ಕೆಲಸಕ್ಕೆ ಬಾರದವನಾದೆ ಎಂದು ಕೈ ಹಿಸುಕಿಕೊಳ್ಳುವುದು ಬೇಡ. ಹೆಸರು, ಹೊರತಿಲ್ಲದೆ, ಎಲ್ಲಾ ಕಾಲದಲ್ಲಿಯೂ ಯೋಗ್ಯತೆಗೆ ಅಳತೆಯಾಗುವುದಿಲ್ಲ. ಅಲ್ಲದೆ ಒಮ್ಮೊಮ್ಮೆ ಅಯೋಗ್ಯತೆಗೆ ಅಳತೆಯಾಗುವುದೂ ಉಂಟು. ನಿಮಗೆ ನಿಜವಾದ ಸಿಂಹಾಸನ ಬೇಕಾದರೆ ಈ ನಾಟಕದ ಸಿಂಹಾಸನಗಳಿಗಾಗಿ ಪರದಾಡಬೇಡಿ. ಅನಾಮಧೇಯದ ಅಣು ಅಖ್ಯಾತಿಯ ನೀರವ ಪರ್ಣಶಾಲೆಯಲ್ಲಿ ನಿರಾಲಸ್ಯದಿಂದ ತಪೋಜೀವನದಲ್ಲಿ ನಿರತರಾ ದರೆ ಮುಂದೆ ನಿಮಗೆ ರಸಸಿದ್ಧಿ ಕಟ್ಟಿಟ್ಟ ಬುತ್ತಿಯಂತೆ ಕೈಗೂಡುತ್ತದೆ. ಹೀಗೆಂದು ಮಹಾಪುರುಷರೆಲ್ಲರ ಜೀವನ ಚರಿತ್ರೆಗಳೂ ಸಾರುತ್ತಿವೆ.

ಅಲಂಕಾರದ ಮಾತಿನಲ್ಲಿ ಹೇಳಿದರೆ ನಿಮ್ಮೆಲ್ಲನೇಕರಿಗೆ ಭಾವವಾಗದಿರಬಹುದು ಅಥವಾ ತಪ್ಪುಭಾವನೆಯುಂಟಾದರೂ ಆಗಬಹುದು. ಏನೋ ಪರ್ಣ ಶಾಲೆಯಂತೆ! ನೀರವ ತಪಸ್ಸಂತೆ! ಸಿಂಹಾಸನವಂತೆ! ನಾನಿರುವುದು ಸಂತೆ ಪೇಟೆಯಲ್ಲಿ; ಪರ್ಣಶಾಲೆಗೆ ಎಲ್ಲಿ ಹೋಗಲಿ? ಆ ದವಸ ಧಾನ್ಯದ ಮಾರಾಟದ ಹೋರಾಟದ ಗಲಿಬಿಲಿಯಲ್ಲಿ, ತಪಸ್ಸಿನ ಮಾತಂತಿರಲಿ, ನೀರವತೆಯನ್ನು ಎಲ್ಲಿಂದ ತರಲಿ? ನಾನು ತಿಂಗಳಿಗೆ ಒಂದು ರೂಪಾಯಿ ಬಾಡಿಗೆಗಿರುವ ಆ ಚಟ್ಟದಷ್ಟಗಲದ ಕತ್ತಲೆಯ ಕೊಠಡಿಯಲ್ಲಿ ಹಾಸಿಕೊಳ್ಳುವುದಕ್ಕೆ ಮುರುಕಲು ಚಾಪೆಗೂ ಗತಿಯಿಲ್ಲದಿರುವಾಗ ಸಿಂಹಾಸನದ ಮಾತು ನನಗೇಕೆ? ಎಂದು ಮೊದಲಾಗಿ ಆಲೋಚಿಸಿ ಯಾರೂ ನಿರಾಶೆಯಿಂದ ನಗದಿರಲಿ, ಏಕೆಂದರೆ, ಸಂತೆ ಪೇಟೆಯಲ್ಲಿಯ ಪರ್ಣಶಾಲೆಯನ್ನೂ, ವ್ಯಾಪಾರದ ಗಲಾಟೆಯಲ್ಲಿಯ ತಪೋನೀರವತೆಯನ್ನೂ, ಹರಿದ ಮಂಡಲಿಗೆಯಲ್ಲಿಯ ಸಿಂಹಾಸನವನ್ನು ಮೀರುವ ದಿವ್ಯ ವೇದಿಕೆಯನ್ನೂ ಪಡೆಯಲು ಸಾಧ್ಯ.

ಕಾದಂಬರೀ ಕಾವ್ಯದಲ್ಲಿ ಮಹಾಶ್ವೇತೆಯ ಸಂದರ್ಶನದ ಭಾಗವನ್ನಾಗಲಿ, ವರ್ಡ್ಸ್‌ವರ್ತ್ ಕವಿಯ 'ಟೆಂಟರ್ನ್ ಆಬೆ' ಯಂತಹ ಕವನಗಳನ್ನಾಗಲಿ ತಲ್ಲೀನತೆಯಿಂದ ಓದುವಾತನು ಎಲ್ಲಿದ್ದರೇನು? ಕಾನನ ಸರೋವರ ಮುದ್ರಿತವಾದ ಪರ್ಣಶಾಲೆಯಲ್ಲಿ ಋಷಿಯಾಗಿರುತ್ತಾನೆ. ಒಡಲು ಸಂತೆಪೇಟೆಯಲ್ಲಿದ್ದರೂ ಅವನ ಕಲ್ಪನೆ ಅಚ್ಛೋದ ಸರಸ್ತೀರಗಾಮಿ, ಅಲ್ಲಿ "ಕುಮುದ ರಜಂಗಳೊಳ್ ಪೊರೆದು ವಾಃಕಣಜಾಲಮನಾಂತು, ಕೂಡ ವಿಶ್ರಮಿಸಿ ತರಂಗಮಾಲಿಕೆಗಳೊಳ್, ಕಲಹಂಸನಿನಾದ ಬಂಭ್ರಮದ್, ಭ್ರಮರ ರವಂಗಳೊಳ್ ಬೆರಸಿ" ಮನುಜೇಂದ್ರ ಚಂದ್ರಾಪೀಡನನ್ನು

"ಅಮರ್ದೋಸೆದಪ್ಪಿಕೊಂಡು ಕರವಂತೆವೋಲ್ ತೀಡಿದ' ಆ ಪುಣ್ಯ ಸಮೀರಣನು ಒಯ್ಯೊಯ್ಯನೆ ಬಂದು ಈತನನ್ನೂ ಅಪ್ಪಿ ಕೊಂಡು ಹೈಮಾಚಲೋನ್ನತಿಗೆ ಕರೆದೊಯ್ಯುತ್ತಾನೆ. ಪಟ್ಟಣದ ಗಡಿಬಿಡಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹೇಗೆ ತನ್ನ ಕಲ್ಪನೆ ಸಂತೆಯ ನಡವೆಯ ಪರ್ಣಶಾಲೆಯನ್ನು ರಚಿಸಿತೆಂಬುದನ್ನು ವರ್ಡ್ಸ್‌ವರ್ತ್ ಕವಿ ಹೀಗೆ ವರ್ಣಿಸಿದ್ದಾನೆ:

These beauteous forms,
Through a long absence, have not been to me
As is a landscape to a blind man's eye:
But oft, in lonely rooms, and' mid the din
Of towns and cities, I have owed to them.
In hours of weariness, sensations sweet,
Felt in the blood, and felt along the heart:
And passing even into my purer mind,
With tranquil restoration-

ಆ ಅಮರಲೋಕಕ್ಕೆ ದಿನಸಿಯ ಮಾರಾಟದ ಗಡಿಬಿಡಿ ತಟ್ಟುವುದಿಲ್ಲ, ಕಾವ್ಯಧ್ಯಾನ ನಿರತನಾದವನು ಕೂತಿರುವ ಹರಕಲು ಚಾಪೆ ಚಕ್ರವರ್ತಿಯ ಸಿಂಹಾಸನಕ್ಕಿಂತಲೂ ದಿವ್ಯ. ರಾಮಾಯಣ ಮಹಾಕಾವ್ಯ ರಚನೆಯ ಕಾಲದಲ್ಲಿ ಋಷಿಕವಿ ವಾಲ್ಮೀಕಿ ಉಪಯೋಗಿಸುತ್ತಿದ್ದ ಕುಶಾಸನದ ಬೆಲೆ ಯಾವ ಸಿಂಹಾಸನಕ್ಕಿದೆ? – ಗೌರವಮತಿಯ ವಿದ್ಯಾರ್ಥಿಗೆ ಅಸಾಧ್ಯವಾಗುವುದಿಲ್ಲ, ನಾನು ಸೂಚಿಸಿದ ರಸತಪಸ್ಸು,

ಹಾಗಾದರೆ ವಿದ್ಯಾರ್ಥಿಯಾದವನು ಸದಾ ಅಂತರ್ಮುಖಿಯಾಗಿ ಕೊಠಡಿಯಲ್ಲಿ ಕುಳಿತು ಕನಸುಣಿಯಾಗಬೇಕೆ ? ಅವನಿಗೆ ಆಟ ಬೇಡವೆ ? ವ್ಯಾಯಾಮ ಬೇಡವೆ? ವಿನೋದ ಬೇಡವೆ? ಎಂದು ಯಾರೂ ಪ್ರಶ್ನಿಸದಿರಲಿ, ಏಕೆಂದರೆ ಅವು ಬೇಡವೆಂದು ನಾನು ಹೇಳಿಯೂ ಇಲ್ಲ; ನನ್ನ ಮಾತಿನಲ್ಲಿ ಸೂಚನೆಯೂ ಆಗಿಲ್ಲ.

ಬಹಿರ್ಮುಖತೆಯಿಲ್ಲದ ಅಂತರ್ಮುಖತೆ ಭ್ರಾಂತಿವಿಲಾಸವಾಗುತ್ತದೆ, ವ್ಯಾಯಾಮ ಜನ್ಯವಾದ ದೃಢಾರೋಗ್ಯವಿಲ್ಲದವನ ಓದು ಮನೋವಿಕೃತಿಯಾಗಿ ಪರಿಣಮಿಸುತ್ತದೆ. ಪ್ರಕೃತಿಸಂಪರ್ಕವಿಲ್ಲದವನ ಕಾವ್ಯ ರಸಾಸ್ವಾದನ ಅಸ್ವಾಭಾವಿಕವಾದ ಅಸಹ್ಯಕರ್ಮವಾಗುತ್ತದೆ. ಅದರಿಂದ ತಾತ್ಕಾಲಿಕವಾಗಿ ಉಂಟಾಗುವ ಸುಖ ತನ್ನನ್ನು ಕೊಲ್ಲುವ ಕ್ಷಯಕ್ರಿಮಿಗಳಿಗೆ ತಾನೆ ಜನಕನಾಗುತ್ತದೆ, ಗಾಳಿ, ಬೆಳಕು, ಅರಣ್ಯ, ಆಕಾಶ, ಸೂರ್ಯ, ಚಂದ್ರ, ಹಕ್ಕಿ, ಚುಕ್ಕಿ ಮೊದಲಾದವುಗಳ ಸಂಗ ಸಹವಾಸವಿಲ್ಲದವನ ಓದಿನ ಮೊಟ್ಟೆಯಿಂದ ಗೂಬೆ ಮೂಡಬಹುದು; ಕೋಗಿಲೆ ಎಂದಿಗೂ ಹಾಡಲಾರದು. ಉತ್ತಮ ಸಾಹಿತ್ಯ ನಮ್ಮನ್ನು ಎಷ್ಟು ಅಂತರ್ಮುಖಿಗಳನ್ನಾಗಿ ಮಾಡುತ್ತದೆಯೊ ಅಷ್ಟೆ ಬಹಿರ್ಮುಖಿಗಳನ್ನಾಗಿಯೂ ಮಾಡುತ್ತದೆ. ಅವುಗಳೆರಡರ ಸಮತೂಕ ಮತ್ತು ಸುಮನ್ವಯದಿಂದಲೆ 'ಮತಿಗೌರವ' ಸಾಧ್ಯ. ಪುಸ್ತಕ ಕೀಟವನ್ನು ಆದರ್ಶದೇವತೆಯೆಂದು ನಿಮಗೆಂದಿಗೂ ನಾನೊಡ್ಡುವುದಿಲ್ಲ.

ಅನುಭವವಲಯವನ್ನು ಅಗಲಗೊಳಿಸಿ, ಆಳಗೊಳಿಸಿ, ಅದಕ್ಕೆ ಅರ್ಥ ಗಾಂಭೀರ್ಯವನ್ನು ದಯಪಾಲಿಸುವ ಬಹಿರ್ಮುಖಕರ್ಮಗಳೂ ವಿದ್ಯಾರ್ಥಿಯ ಮತಿಗೌರವವನ್ನು ಹೆಚ್ಚಿಸುತ್ತದೆ. ವಾಸ್ತವದ ದವಡೆಯಲ್ಲಿ ಚೆನ್ನಾಗಿ ಕಡಿದು ಮೆಲಕು ಹಾಕುವುದರಿಂದ ಕಲ್ಪನೆಯಲ್ಲಿ ಮೇದ ಮೇವು ಮೈಗೆ ಹಿಡಿಯುತ್ತದೆ, ಗ್ರಾಮ ಸೇವೆ, ಭಾಷಾಸೇವೆ, ಜ್ಞಾನಪ್ರಸಾರ, ಸಾಹಿತ್ಯ ಪ್ರಚಾರ, ವೈದ್ಯ ಸಹಾಯ, ರೋಗಶುಶ್ರುಷೆ ಇತ್ಯಾದಿ ಅಲಘು ಕಾರ್ಯಗಳಲ್ಲಿ ಪಾಲುಗೊಳ್ಳುವ ವಿದ್ಯಾರ್ಥಿಯ ಮತಿ

ಸಜೀವವೂ ಸುಪುಷ್ಟವೂ ಆಗುತ್ತದೆ; ಮುಂದಿನ ಜೀವನ ಸಂಗ್ರಾಮದಲ್ಲಿ ಕೆಚ್ಚಿನಿಂದ ಭಾಗವಹಿಸಲು ಅವನು ಹೆಚ್ಚು ಹೆಚ್ಚು ಸಜ್ಜುಗೊಳ್ಳುವಂತಾಗುತ್ತದೆ.

ಅಂತಹ ಸತ್ಕಾರ್ಯಗಳ ವಿಚಾರದಲ್ಲಿಯೂ, ಅವುಗಳಲ್ಲಿ ಆಸಕ್ತಿ ವಹಿಸುವ ವಿದ್ಯಾರ್ಥಿಗಳ ವಿಷಯದಲ್ಲಿಯೂ ಶ್ಲಾಘನೆಯಲ್ಲದೆ ಅನ್ಯಭಾವಕ್ಕೆ ನನ್ನಲ್ಲಿ ಒಂದಿನಿತೂ ಎಡೆಯಿಲ್ಲ. ವಿದ್ಯಾರ್ಜನೆಗಾಗಿ ಬಂದವನು ಲೋಕಸೇವೆ: ಪರೋಪಕಾರಗಳನ್ನು ಕಲಿಯಬಾರದೆಂದಲ್ಲ; ವಿದ್ಯೆಯನ್ನೂ ಚೆನ್ನಾಗಿ ಸಂಪೂರ್ಣವಾಗಿ ಅರ್ಜಿಸಬೇಕು, ಎಂಬುದು ನನ್ನ ಆಕಾಂಕ್ಷೆ. ಅದೂ ಅಲ್ಲದೆ ಲೋಕಸೇವೆ ಪರೋಪಕಾರಗಳೂ ಕೂಡ ಒಂದು ವಿಧವಾದ 'ಅಡ್ಡಕಸುಬಿನ ಷೋಕಿಗಳಾಗುವ ಸಂಭವವೂ ಇರುತ್ತದೆ. ನಾಲ್ಕು ಮಂದಿಯ ಕಣ್ಣಿಗೆ ಬೀಳಬೇಕೆಂಬ ಚಪಲತೆಗಾಗಿಯೊ, ತಾನು ಕೈಕೊಂಡ ವಿದ್ಯಾರ್ಜನೆಯಲ್ಲಿ ಆಸಕ್ತಿ ಇಲ್ಲದುದರಿಂದ ಉಂಟಾಗುವ ಬೇಜಾರಿನ ಪರಿಹಾರಕ್ಕಾಗಿಯೋ ಅಥವಾ ಯಾವುದೋ ಸಂಘಕ್ಕೆ ಕಾರ್ಯದರ್ಶಿಯಾಗಬೇಕು, ಅಧ್ಯಕ್ಷನಾಗಬೇಕು, ಚುನಾವಣೆಯಲ್ಲಿ ಗೆಲ್ಲಬೇಕು ಎಂಬಿವೆ ಮೊದಲಾದ ಚಪಲ ಪ್ರಕೃತಿಯ ಅಭಿಸಂಧಿಗಾಗಿಯೊ, ಸೇವಾಕಾರ್ಯಗಳಲ್ಲಿ ತನ್ನನ್ನು ತಾನೆ ಮೆರೆಯುವ ಹವ್ಯಾಸಕ್ಕೆ ಗೌರವಮತಿಗಳಾದ ವಿದ್ಯಾರ್ಥಿಗಳು ಹೋಗದಿರುವುದು ಲೇಸೆಂದು ನನಗೆ ತೋರುತ್ತದೆ. ಏಕೆಂದರೆ ವಿದ್ಯೆ ಭೂಮವಾಗಿದೆ; ಸಮಯ ಸ್ವಲ್ಪವಾಗಿದೆ.

ನಾನು ಹೇಳುತ್ತಿರುವುದು ಎಲ್ಲ ವಿದ್ಯಾರ್ಥಿಗಳಿಗೂ ಅನ್ವಯಿಸುವುದಿಲ್ಲ ಎಂಬುದನ್ನು ಈ ಮೊದಲೆ ಸೂಚಿಸಿದ್ದೇನೆ. ಅದನ್ನೆ ಈಗ ಸ್ಪಷ್ಟಪಡಿಸುತ್ತೇನೆ. ವಿದ್ಯಾರ್ಜನೆಗಾಗಿ ಬಂದ ವಿದ್ಯಾರ್ಥಿಗೆ ಅದರಲ್ಲಿ ಪೂರ್ಣಾಸಕ್ತಿ ತೋರದಿದ್ದರೆ ಬೀದಿ ಬೀದಿ ಅಲೆಯುವುದಕ್ಕಿಂತಲೂ ಯಾವುದಾದರೂ ಸಂಘಸೇವಾಕಾರ್ಯದಲ್ಲಿ ತೊಡಗುವುದು ಪರಮಲೇಸು, ಕಡೆಗೆ ಅಧ್ಯಕ್ಷತೆ, ಕಾರ್ಯದರ್ಶಿತ್ವ, ಕ್ರೀಡಾಸ್ಪರ್ಧೆ, ಚರ್ಚಾಕೋಲಾಹಲ ಗಳಲ್ಲಿಯಾದರೂ – ಚಿಂತೆಯಿಲ್ಲ, ಮನಸ್ಸೋಡಿಸುವುದು ಶ್ರೇಯಸ್ಕರ. ಆದರೆ ನನ್ನ ಗಮನದಲ್ಲಿರುವ ಗಂಭೀರಪ್ರಕೃತಿಯ ಗೌರವಮತಿಯ ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಸ್ವಲ್ಪ ಬಿಗಿಹಿಡಿಯಬೇಕಾಗುತ್ತದೆ. ಗಾಜನ್ನೆ ಮಾಣಿಕ್ಯವೆಂದು ಕೊಂಡಾಡುವ ಅಭಿರುಚಿಯ ಸಂತೆಗೆ ನಿಜವಾದ ಮಾಣಿಕ್ಯವೆ ಹೋಗುವ ಪಕ್ಷದಲ್ಲಿ ಅದು ಜನಸ್ತುತಿಯನ್ನು ಸೂರೆಗೊಳ್ಳಬಹುದಾದರೂ ಮುಂದೆ ರತ್ನ ಪರೀಕ್ಷಕರ ಗೋಷ್ಠಿಯಲ್ಲಿ ತನಗೊದಗುವ ಅನರ್ಘ್ಯ ಬೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅದು ಅಗ್ಗದ ಸಂತೆಯಿಂದ ದೂರವಾಗಬೇಕು. ಗೋಪ್ಯವಾಗಿ ತನ್ನ ಉಜ್ವಲತೆಯನ್ನು ಹೆಚ್ಚಿಸಿ ಕೊಳ್ಳುತ್ತಿರಬೇಕು; ಮಂದಿ ಕಿಕ್ಕಿರಿದು ಚಪ್ಪಾಳೆ ಹೊಡೆಯುತ್ತಾ ನೋಡುತ್ತಿರುವ ಗಣೆಡೊಂಬನ ಕೊರಳ ಕವಡೆಯಾಗಲಿಕ್ಕಲ್ಲ ; ರಾಜರಾಜೇಶ್ವರಿಯ ಕಿರೀಟದಲ್ಲಿ ದೇವ ಮಣಿಯಾಗುವುದಕ್ಕೆ.

ನಾನು ನಿರ್ದೇಶಿಸಿ ಮಾತನಾಡುತ್ತಿರುವ ಗೌರವಮತಿಯ ವಿದ್ಯಾರ್ಥಿಗೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದು ಕಷ್ಟವಲ್ಲ. ಆತನು ಸಹಜವಾಗಿ ಇತರರಿಗಿಂತಲೂ ಪ್ರತಿಭಾಶಾಲಿಯೂ ಮೇಧಾವಿಯೂ ಆಗಿರುವುದರಿಂದ ಸಾಮಾನ್ಯ ವಿದ್ಯಾರ್ಥಿಗಳಿಗಾಗಿ ವಿದ್ಯಾಸಂಸ್ಥೆಗಳು ಒಡ್ಡುವ ಒರೆಗಲ್ಲಿನಲ್ಲಿ ಆತನ ಸತ್ವದಗೆರೆ ಉಜ್ವಲತರವಾಗಿ ಮಿಂಚುತ್ತದೆ. ಅದರ ಪರಿಣಾಮವಾಗಿ ಅವನಿಗೆ ಶಹಭಾಸುಗಳೂ ಕರಗತವಾಗಬಹುದು. ತಾನು ಲೋಕವಂದ್ಯವಾದ ಉತ್ತಮಾದರ್ಶದ ಗಿರಿ ಶಿಖರಕ್ಕೇರಿದನೆಂದು ಭಾವಿಸಿ ಹಿಗ್ಗಬಹುದು. ಹಾಗೇನಾದರೂ ಆದರೆ ಅದು ಶೋಚನೀಯವೇ ಸರಿ. ರತ್ನದ ಗಣಿಗೆ ಇಳಿಯುವವನು ದಾರಿಯಲ್ಲಿ ಕಂಡುಬಂದ ಕಾಗೆ ಬಂಗಾರದ ಹಳುಕುಗಳಿಗೆ ಮೋಹಿತನಾಗಿ, ಅವುಗಳನ್ನು ಮೂಟೆ ಕಟ್ಟಿ ಹೊತ್ತು ಹಿಂತಿರುಗಿದಂತಾಗುತ್ತದೆ. ಆದ್ದರಿಂದ ಪ್ರತಿಭಾಶಾಲಿಯಾದ ವಿದ್ಯಾರ್ಥಿಯ ಲಕ್ಷ್ಯ ಅಂತರಿಕ್ಷೋನ್ನತವಾಗಿರಬೇಕು; ವಿಶ್ವವ್ಯಾಪಿಯಾಗುವ

ಅನಂತ ಸಾಹಸದಲ್ಲಿ ನಿರಂತರ ನಿರತವಾಗಿರಬೇಕು. ಅವನ ಮತಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವ ಮತ್ತು ಪಾರಿತೋಷಕಗಳನ್ನು ಪಡೆಯುವ ಅಲ್ಪತೃಪ್ತಿಯ ಉಸುಬಿನಲ್ಲಿ ಹೂತು ನಡೆಗೆಡಬಾರದು, ಪಠ್ಯ ಪುಸ್ತಕಗಳ ಮಿತವಲಯದಲ್ಲಿ ಸೆರೆಯಾಗಿರದೆ

ವಾಙ್ಮಯ ಜಗತ್ತಿನ ವಿಶ್ವವಿಶಾಲತೆಯಲ್ಲಿ ರಸಯಾತ್ರಿಯಾಗಬೇಕು. ಅಲ್ಲಿಯ ಮಹದ್ ವ್ಯಕ್ತಿಗಳೊಡನೆ ಸ್ನೇಹ ಬೆಳಸಬೇಕು; ಅವರೊಡನೆ ಹೋರಾಡಬೇಕು; ಅವರಿಗೆ ಶರಣು ಹೋಗಬೇಕು; ಪೂಜೆ ನಮಸ್ಕಾರಗಳಿಂದಲೆ ಅವರನ್ನು ಗೆದ್ದು, ಅವರ ಐಶ್ವರ್ಯವನ್ನು ದೋಚಬೇಕು; ಅವರ ಗರಡಿಯಲ್ಲಿ ಅವರೊಡನೆಯ ಸಾಧನೆಮಾಡಿ ಜಗಜಟ್ಟಿಗಳಾಗಬೇಕು: ಅಲ್ಲಿಯ ಗರಡಿಯಾಚಾರ್ಯರಲ್ಲಿ ಕೃಪಣತೆಯಿಲ್ಲ, ಕರುಬಿಲ್ಲ. ತೆರೆದ ಮನೆಯಂತೆ, ಬಿಚ್ಚಿದ ಕೈಯಂತೆ, ಅಕ್ಷಯ ಪಾತ್ರೆಯಂತೆ ಅವರು ಉದಾರಿಗಳು. ಅಂತಹ ಮಹಾಮಹಿಮರೊಡನೆ ವಿಹರಿಸಲು ಶಕ್ತಿಯನ್ನೂ ಆಸಕ್ತಿಯನ್ನೂ ಪಡೆದ ವಿದ್ಯಾರ್ಥಿ ಅಗಸ್ತ್ಯಭ್ರಾತನ ಉಪನ್ಯಾಸಕ್ಕೆಂದು, ದೇವದತ್ತನ ಕ್ರೀಡಾ ಕಸರತ್ತಿಗೆಂದು, ಸಿನಿಮಾತಾರೆಗಳ ಕೋಲಾಹಲಪೂಜೆಗೆಂದು ಹೊತ್ತು ಕಳೆದರೆ ಮುಖ ಮುಚ್ಚಿಕೊಳ್ಳುವಂತಾಗುತ್ತದೆ, ಕಣ್ಣೀರಿಡುವಂತಾಗುತ್ತದೆ.

ಉಳದೆ, ಬಿತ್ತದೆ, ಬೆಳೆಯದೆ ಪೈರು ಕೊಯ್ಲಿಗೆ ಬರುವುದಿಲ್ಲ. ಬೆವರು ಸುರಿಸದೆ ಸಿರಿ ಕೈ ಸೇರುವುದಿಲ್ಲ. ವಿದ್ಯೆಯ ಲೋಕದಲ್ಲಿ ಧನಿಕರಾಗಲು ಸುಲಭೋಪಾಯಗಳಿಲ್ಲ. ಅಲ್ಲಿ ಯಾರೂ ವಂಚನೆಯಿಂದ ಸಂಪತ್ತು ಗಳಿಸಲಾರರು. ಅಲ್ಲಿ ದುಡಿಮೆಯಂತೆ ಪಡಿ. ಅಲ್ಲಿ ಕಳ್ಳರುಜುಗಳಿಗೂ ಸುಳ್ಳುಪತ್ರಗಳಿಗೂ ಚಿರಂಜೀವವಿಲ್ಲ. ಅಲ್ಲಿ ಯಾವನೂ ಬರಿಯ ದಳ್ಳಾಳಿತನ ಮಾಡಿ ಶ್ರೀಮಂತನಾಗಲಾರನು. ಅದು, ವಿರೋಧಾಭಾಸವಾಗಿ ಕಂಡು ಬಂದರೂ, ಸಮತಾವಾದದ ಚಕ್ರಾಧಿಪತ್ಯ! ದುಡಿಯುವವರಿಗೆ ಮಾತ್ರ ಅಲ್ಲಿಗೆ ಪ್ರವೇಶ. ಆದರೆ ಯಾರೂ ಬೇಕಾದರೂ ಅಲ್ಲಿಗೆ ಹೋಗಿ ದುಡಿಯಬಹುದು. ಕೂಲಿಯಾಳಾಗದೆ ಅಲ್ಲಿಗೆ ಹೋಗಲಿಲ್ಲ. ಹೊಕ್ಕ ಮೇಲೆ ಅಲ್ಲಿ ಎಲ್ಲರೂ ಚಕ್ರವರ್ತಿಗಳೆ! ಅಷ್ಟೆ ಅಲ್ಲ; ಚಕ್ರವರ್ತಿಯಲ್ಲದವನಿಗೆ ಅಲ್ಲಿ ಕೂತುಕೊಳ್ಳಲೂ ಸ್ಥಳವಿಲ್ಲ; ಏಕೆಂದರೆ ಅಲ್ಲಿ ಸಿಂಹಾಸನಗಳಲ್ಲದೆ ಬೇರೆ ಪೀಠಗಳಿಲ್ಲ.

ಸಿಂಹಾಸನದ ವರ್ಣನೆಯನ್ನು ಕೇಳಿದರೆ ಯಾರು ತಾನೆ ಅದನ್ನೇರಲು ಕಾತರರಾಗುವುದಿಲ್ಲ? ಆ ಆನಂದಸಾಮ್ರಾಜ್ಯದ ಸಾಮ್ರಾಟನಾಗಲು ಯಾರು ತಾನೆ ಬಯಸುವುದಿಲ್ಲ? ಆದರೆ ಆ ಸಿಂಹಾಸನ ದುರ್ಗಮಪಕ್ವತಾಗ್ರದಲ್ಲಿರುವ ದುರ್ಗದ ಒಳಗಡೆ ಭದ್ರವಾಗಿದೆ. ಇಷ್ಟ, ಧೈರ್ಯ, ಶ್ರಮ, ಸಾಹಸ ಮತ್ತು ತ್ಯಾಗಗಳಿಲ್ಲದೆ ಕೋಟೆಯ ಬಾಗಿಲು ತೆರೆಯುವುದಿಲ್ಲ ; ಗೋಡೆ ಬಿರಿಯುವುದಿಲ್ಲ; ಸಿಂಹಾಸನ ಕೈವಶವಾಗುವುದಿಲ್ಲ. ಉದ್ದಾಮ ಕಾವ್ಯಗಳ ರಸರಾಷ್ಟಗಳನ್ನು ಸ್ವಾಧೀನ ಮಾಡಿಕೊಳ್ಳುವುದು ದುರ್ಗಜಯಕ್ಕಿಂತಲೂ ಹೆಚ್ಚೇನೂ ಸುಲಭತರವಲ್ಲ.

ಪ್ರೀತಿಯ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಸಿದಿರಬೇಕಾಗುತ್ತದೆ; ಅವುಗಳನ್ನೋದಿ ಜಯಿಸುವುದಕ್ಕಾಗಿ ನಿದ್ದೆಗೆಡಬೇಕಾಗುತ್ತದೆ; ಬೆವರು ಸುರಿಸಬೇಕಾಗುತ್ತದೆ ಎಣ್ಣೆ ಉರಿಸಬೇಕಾಗುತ್ತದೆ; ಎಷ್ಟೋ ಮನೋರಂಜನೆಗಳನ್ನೂ ತ್ಯಾಗಮಾಡಿ ಅಧ್ಯಯನ ತಪಸ್ಸಿನಲ್ಲಿ ಮಗ್ನವಾಗಬೇಕಾಗುತ್ತದೆ. ವ್ಯಾಕರಣದ ನೀರಸತೆಯನ್ನು ಸಹಿಸಿ, ನಿಘಂಟುವಿನ ಹೇರಡವಿಯಲ್ಲಿ ಬೇಸರಗೊಳ್ಳದೆ ತೊಳಲಿ, ಟೀಕೆ ಟಿಪ್ಪಣಿ ವಿಮರ್ಶೆ ವ್ಯಾಖ್ಯಾನಗಳನ್ನು ತಡಕಿ ಹುಡುಕಿ ಸಂಗ್ರಹಿಸಬೇಕಾಗುತ್ತದೆ. ಇಷ್ಟನ್ನೂ ಹಲ್ಲು ಕಚ್ಚಿಕೊಂಡು ದೃಢಮನಸ್ಸಿನಿಂದ ಸಾಧಿಸುವ

ಮತಿಗೌರವವಿಲ್ಲದಿದ್ದರೆ, ಸಾಮಾನ್ಯ ಬುದ್ಧಿಯ ಮಾತಂತಿರಲಿ, ಪ್ರತಿಭೆಯೂ ಕೂಡ, ಮರಳುಗಾಡಿನಲ್ಲಿ ಅರತು ಹೋಗುವ ಮಹಾನದಿಯಂತೆ, ಕೃಷಿಯಿಲ್ಲದೆ ಕೃಶವಾಗಿ ವ್ಯರ್ಥವಾಗುತ್ತದೆ.

**ಲೇಖಕರ ಪರಿಚಯ: ಕುವೆಂಪು**

ಕುವೆಂಪು ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆ ಮಾಡಿದ ಕವಿ, ಪ್ರಖರ ವಿಚಾರವಾದಿ–ಚಿಂತಕ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಕನ್ನಡ ಸಾಹಿತ್ಯದ ಮೇರೆಗಳನ್ನು ವಿಸ್ತರಿಸಿದವರು. ಪುಟ್ಟಪ್ಪ ಜನಿಸಿದ್ದು ಚಿಕ್ಕಮಗಳೂರು ಜಿಲ್ಲೆಯ ಹಿರೇಕೂಡಿಗೆಯಲ್ಲಿ ೧೯೦೪ರ ಡಿಸೆಂಬರ್ ೨೯ರಂದು.

ಕುವೆಂಪು ಬಾಲ್ಯದಿಂದಲೂ ಸಾಹಿತ್ಯ ರಚನೆಯಲ್ಲಿ ನಿರತರಾಗಿದ್ದರು. ಮೈಸೂರಿನಲ್ಲಿ ನಡೆದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾದರು. ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನ (೧೯೫೭) ಅಧ್ಯಕ್ಷತೆ ವಹಿಸಿದ್ದರು.  ಪದ್ಮವಿಭೂಷಣ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ,

ರಾಜ್ಯಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾನಿಲಯವು ಗೌರವ ಡಿ.ಲಿಟ್. (೧೯೬೯) ನೀಡಿತ್ತು. ಪಂಪ ಪ್ರಶಸ್ತಿ,  ಕರ್ನಾಟಕ ರತ್ನ ಪ್ರಶಸ್ತಿ ದೊರೆತಿದ್ದವು.

ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ (೧೯೬೮) ಪ್ರಶಸ್ತಿ ಲಭಿಸಿತು. ೧೯೯೫ರಲ್ಲಿ ನಾಡೋಜ (೧೯೯೫) ಪ್ರಶಸ್ತಿಯನ್ನು ಮರಣೋತ್ತರ ನೀಡಲಾಯಿತು. ಮೈಸೂರಿನಲ್ಲಿ ನಡೆದ ಮೊದಲನೇ ವಿಶ್ವಕನ್ನಡ ಸಮ್ಮೇಳನ (೧೯೮೫) ಉದ್ಘಾಟಿಸಿದ್ದರು. ಕುವೆಂಪು ಅವರು ಕವನ ಸಂಕಲನ, ಖಂಡಕಾವ್ಯ, ಮಹಾಕಾವ್ಯಗಳನ್ನು ರಚಿಸಿದರು. ಅನುವಾದಿತ ಮತ್ತು ಸ್ವತಂತ್ರ ನಾಟಕಗಳನ್ನು ಬರೆದರು. ಕಾದಂಬರಿ, ಕಥೆ, ಗದ್ಯಚಿತ್ರ. ಆತ್ಮಚರಿತ್ರೆ, ಭಾಷಾಂತರ ಗ್ರಂಥಗಳನ್ನು ರಚಿಸಿದರು.  ಕುವೆಂಪು ಅವರು ೧೯೯೪ರ ನವೆಂಬರ್ ೧೧ರಂದು ಮೈಸೂರಿನಲ್ಲಿ ನಿಧನರಾದರು.

ಪ್ರಸ್ತುತ ಲೇಖನವು ಕುವೆಂಪುರವರ ಆತ್ಮಶ್ರೀಗಾಗಿ 'ನಿರಂಕುಶಮತಿಗಳಾಗಿ' ವೈಚಾರಿಕ ಕೃತಿಯ ಆಯ್ದಭಾಗವಾಗಿದೆ.

## ೨. ಕೊಳೆಗೇರಿಗಳ ಸುಧಾರಣೆಯ ಸಾಧ್ಯತೆಗಳು

**–ಲಾರಿ ಬೇಕರ್, ಅನು : ಜಸವಂತ ಜಾದವ್**

ನನ್ನನ್ನು ಅಲ್ಪವೆಚ್ಚದ ಗೃಹನಿರ್ಮಾಣ ತಜ್ಞನೆಂದು ಕೆಲವರು ಕರೆಯುವುದುಂಟು. ಈ ಬಗೆಯ ಹೆಸರು ನನಗೆ ಇಷ್ಟವಾಗುವುದಿಲ್ಲ. 'ಅಲ್ಪವೆಚ್ಚ' (ಲೋ ಕಾಸ್ಟ್)ಕ್ಕಿಂತ ವ್ಯಯಕ್ಷಮತೆ' (ಕಾಸ್ಟ್–ಇಫೆಕ್ಟಿವ್) ಎಂಬ ಪದವೆ ಹೆಚ್ಚು ಸೂಕ್ತವಾದುದು, ನನಗೆ ಹೆಚ್ಚು ಇಷ್ಟವಾದುದು. ಆದರೆ, ನನ್ನನ್ನು 'ಅಲ್ಪವೆಚ್ಚದ ತಜ್ಞ'ನೆಂದು ಕರೆಯುವುದರ ಬಗ್ಗೆ ನಾನೇನೂ ವಿಶೇಷವಾಗಿ ತಲೆಕೆಡಿಸಿಕೊಂಡವನಲ್ಲ, ಬದಲಾಗಿ ನನಗೆ ನಿಜವಾಗಿಯೂ ಕಾಳಜಿ ಹುಟ್ಟಿಸುವ ವಿಷಯವೆಂದರೆ ಜನ ಓಹ್, ಬಡವರಿಗಾಗಿ ಕಡಿಮೆ ಖರ್ಚಿನ ಮನೆಗಳ  ನಿರ್ಮಾಣವೆ! ಎಂಥ ಸುಂದರ ಯೋಜನೆ" ಎಂದು ಯೋಚಿಸುವುದು. ಮಾತ್ರವಲ್ಲ, ಹಾಗೆಂದು ಬಾಯಿಬಿಟ್ಟು ಬಡಬಡಿಸುವುದು.

ವಾಸ್ತವದಲ್ಲಿ 'ಬಡವರಿಗೆ ಮಾತ್ರವಲ್ಲ ಪ್ರತಿಯೊಬ್ಬರಿಗೂ ಅದರಲ್ಲೂ ವಿಶೇಷವಾಗಿ ಉಚ್ಚಸ್ತರದ ಶ್ರೀಮಂತರಿಗೆ ಕೂಡ 'ವ್ಯಯಕ್ಷಮತೆಯಲ್ಲಿ "ಕಲ್ಪನೆ. ಎಷ್ಟು ಅತ್ಯಗತ್ಯ ಎಂಬುದನ್ನು, ಆ ಪ್ರಭಾವಶಾಲಿ ವರ್ಗದ ನನ್ನ ಕೆಲವು ಸ್ನೇಹಿತರಿಗೆ ಮನದಟ್ಟು ಮಾಡಿಕೊಡುವುದೇ ನನ್ನ ವೃತ್ತಿಜೀವನದ ಮುಖ್ಯ ಗುರಿಗಳಲ್ಲೊಂದಾಗಿದೆ.

ನಾವು, ಭಾರತೀಯರು ತುಂಬ ಖುಷಿಯಿಂದ ಭಿಕ್ಷೆ ಕೊಡುವುದನ್ನು, ಸಾಲ ಕೇಳುವುದನ್ನು, ರೂಢಿಸಿಕೊಂಡುಬಿಟ್ಟಿದ್ದೇವೆ. ಎಂಥ ನಾಚಿಕೆಗೇಡು ಅಪಾರ ನೈಸರ್ಗಿಕ ಸಂಪತ್ತನ್ನು ಹೊಂದಿರುವ ನಾವು ಅದನ್ನು ಎಚ್ಚರದಿಂದ ಸಮರ್ಥವಾಗಿ ದುಡಿಸಿಕೊಳ್ಳುವುದನ್ನೂ, ದುಂದುವೆಚ್ಚ ಬಳಸಿಕೊಳ್ಳುವುದನ್ನೂ, ಪೋಲುಗಳನ್ನು ಕೈಬಿಡುವುದನ್ನೂ ಮೊತ್ತಮೊದಲು ಕಲಿಯಬೇಕು. ನಮ ಸ್ವಂತದ ಐಷರಾಮಿ ಆಸೆಗಳ ಪೂರೈಕೆಗೆ ಹಣ ಬೇಕು. ಅದಕ್ಕಾಗಿ ಪರದೇಶಗಳಿಂದಲೋ, ವರ್ಲ್ಡ್ ಬ್ಯಾಂಕ್, ಐ.ಎಮ್.ಎಫ್ ನಂತಹ ಸಂಸ್ಥೆಗಳಿಂದಲೋ ಕಾಡಿಬೇಡಿಯಾದರೂ ಸಾಲ ಪಡೆಯಲು ಸಿದ್ದರು ನಾವು. ಅದೇ ನಮ್ಮವರೆ ಆದ ಬಡವರ ಅಗತ್ಯಗಳ ವಿಷಯ ಬಂದಾಕ್ಷಣ 'ವ್ಯರ್ಥವ್ಯಯ'ಏಕೆ? ಅಲ್ಪ ವೆಚ್ಚದ ಜೀವನದಲ್ಲೇ ತೃಪ್ತಿ ಪಡೆಯಬಹುದಲ್ಲ ಅವರು?' ಎಂದು ಪಿಸುಣತನ ತೋರುವ ಅಧಮರು ನಾವು.

ತಾವು ಎಷ್ಟೆಷ್ಟು ಅಲ್ಪವ್ಯಯದ ಜೀವನ ನಡೆಸಬಲ್ಲರು ಎಂಬುದನ್ನು ಕಂಡುಕೊಳ್ಳಬೇಕೆಂದು ಬಡವರನ್ನು ಒತ್ತಾಯಿಸುವ ನಮ್ಮ ಧೋರಣೆಯನ್ನು ನಾವು ಬದಲಾಯಿಸಿಕೊಳ್ಳಬೇಕೆಂಬುದೆ ನನ್ನ ಮೊದಲ ಮುಖ್ಯ ಬಯಕೆ. ಅದರ ಬದಲಾಗಿ ಅವರು ಬಡವರಾಗಿಯೇ ಉಳಿಯದಂತೆ ಅವರಿಗಾಗಿ ಏನೆಲ್ಲ ಮಾಡಬಹುದೆಂಬುದನ್ನು ಕಂಡುಕೊಂಡು ಅಂಥ ಪ್ರಯತ್ನಗಳಲ್ಲಿ ನಾವು ತೊಡಗಬೇಕು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಲ್ಪ ವೆಚ್ಚದ ನಮ್ಮ ಕಲ್ಪನೆಗಳನ್ನೆಲ್ಲ ನಾವು ಮೊದಲು ನಮ್ಮ ಮೇಲೆ, ನಮ್ಮ ಪ್ರಭಾವಶಾಲಿ ವ್ಯಕ್ತಿಗಳ ಮೇಲೆ, ನಾಯಕರ ಮೇಲೆ ಪ್ರಯೋಗಿಸಿ ನೋಡಿಕೊಳ್ಳಬೇಕು; ನಾವು ಮತ್ತು ಅವರು ನಮ್ಮ ದುಂದು ವ್ಯರ್ಥವ್ಯಯದ ಬಗ್ಗೆ ಆತ್ಮಸಾಕ್ಷಿಯ ಮಾತುಗಳನ್ನು ಕೇಳಲು ಕಲಿಯಬೇಕು. ನಮ್ಮ ಮಟ್ಟಿಗೆ ಇಂಥ ಗುರಿಯನ್ನು ಸಾಧಿಸಿಕೊಳ್ಳುವ ಕಾರ್ಯಸಾಧ್ಯ ಮಾರ್ಗಗಳ ವಿಷಯವನ್ನು ನಾನು ಅನಂತರ ಪ್ರಸ್ತಾಪಿಸುತ್ತೇನೆ, ಅದರ ಮುನ್ನ, ನನಗೆ ನಾನೆ ನೆನಪಿಸಿಕೊಳ್ಳುತ್ತಿದ್ದೇನೆ. ನಾವೆಲ್ಲ ಆಲೋಚಿಸಬೇಕಾಗಿರುವುದು, ಮಾತ್ರವಲ್ಲ, ಕ್ರಿಯಾಶೀಲರಾಗಿರಬೇಕಾಗಿರುವುದು, ಬಡತನದ

ವಿಷಯದಲ್ಲಿ ಅಷ್ಟೇ ಅಲ್ಲ. ಅದರ ಜೊತೆಗೆ ಮೂಲಭೂತ ಸೌಕರ್ಯಗಳ ಬಗ್ಗೆ ಕೂಡಾ ನಮ್ಮ ಪರಿಸರದ ಬಗ್ಗೆ ಕೂಡಾ.

'ಬಡತನ'ವೆನ್ನುವುದು ಕೇವಲ ಶ್ರೀಮಂತಿಕೆಯ ಯಾ ಸಮೃದ್ಧಿಯ ವಿರುದ್ಧಾರ್ಥದ ಸ್ಥಿತಿ ಮಾತ್ರವಲ್ಲ; ಅದಕ್ಕಿಂತ ತೀರಾ ವಿಶಾಲ ವ್ಯಾಪ್ತಿಯದು. ಅದು, ಬಡತನವೆಂದರೆ ಈ ಅದ್ಭುತ ಜಗತ್ತಿನ ಸಹಜಸುಂದರ ಅಂಶಗಳಿಂದ ವಂಚಿತರಾಗಿರುವುದು, ಬಡತನವೆಂದರೆ ಈ ಜಗತ್ತಿನ ಭೌತವಸ್ತುಗಳ ಕೊರತೆಗಷ್ಟೆ ಸಂಬಂಧಿಸಿದ್ದಲ್ಲ. ಅದು ಜ್ಞಾನಕ್ಕೂ, ಜೀವನೋತ್ಸಾಹಕ್ಕೂ, ಅನುಭವಕ್ಕೂ ಪ್ರೀತಿ ಮಮತೆಗಳಿಗೂ ಸಂಬಂಧಿಸಿದ್ದು.

'ಪರಿಸರ' ಕೂಡ ಅಷ್ಟೇ ತಪ್ಪು ಅರ್ಥದಲ್ಲಿ ಬಳಕೆಯಾಗುತ್ತಿರುವ ಇನ್ನೊಂದು ಪದ. ಪರಿಸರದ ಕಲ್ಪನೆಯನ್ನು ಬಹಳಷ್ಟು ಬಾರಿ ಅತ್ಯಂಥ ಅಸೂಕ್ತವಾಗಿ ಒಂದು ಆಯುಧವಾಗಿಯೂ ಬಳಸುವುದುಂಟು. ಪರಿಸರವೆಂದರೆ "ನಮ್ಮ ಸುತ್ತಮುತ್ತಲ ಆವರಣ", ಅದು ಕೇವಲ ನಮ್ಮ ಸ್ಪರ್ಶಕ್ಕೆ, ನೋಟಕ್ಕೆ ದಕ್ಕುವಂತಹ ವಸ್ತುಗಳನ್ನಲ್ಲದೆ ಶಬ್ದ–ವಾಸನೆಗಳನ್ನೂ, ಜನರನ್ನೂ ಅನ್ಯ ಜೀವರೂಪಗಳನ್ನೂ, ಭೌಗೋಳಿಕ ಲಕ್ಷಣಗಳನ್ನೂ, ಅಷ್ಟೇ ಅಲ್ಲದೆ ಸನ್ನಿವೇಶ– ಸಂದರ್ಭಗಳನ್ನೂ ಒಳಗೊಂಡಿರುವಂಥದು. ಹಾಗಾಗಿ ಗಿಡ–ಮರ–ಕಾಡುಗಳು ಮತ್ತು ಮನೆ ಕಛೇರಿ–ಕಟ್ಟಡಗಳು ಎಲ್ಲ ಒಟ್ಟು ಪರಿಸರವನ್ನು ಕಟ್ಟಿಕೊಡುವ ಸಾವಿರಾರು ಅಂಶಗಳ ನಡುವಿನ ಕೆಲವು ಅಂಶಗಳಷ್ಟೆ.

ಜೊತೆಗೆ, ಮೂಲಭೂತ ಸೌಕರ್ಯಗಳತ್ತಲೂ ತಾವು ಗಮನ ನೀಡಬೇಕು, ಸೌಕರ್ಯಗಳೆಂದರೆ, ನಗರ ಜೀವನದ ಮಟ್ಟಿಗೆ, ಮುಖ್ಯವಾಗಿ ವಿದ್ಯುತ್, ನೀರು, ಇಂಧನ ಪೂರೈಕೆಗಳು ಮತ್ತು ಒಳಚರಂಡಿ, ನಗರ ನೈರ್ಮಲ್ಯೀಕರಣ ವ್ಯವಸ್ಥೆಗಳು; ಇನ್ನುಳಿದಂತೆ ರಸ್ತೆ, ಬಸ್ಸು, ಲಾರಿ, ರೈಲು, ದೋಣಿ, ವಿಮಾನಗಳ ವ್ಯವಸ್ಥೆಗಳು ಹಾಗೂ ಅಂಚೆ, ತಂತಿ, ಫೋನ್ ಫ್ಯಾಕ್ಸ್ ವ್ಯವಸ್ಥೆಗಳು, ವಾಸ್ತವವಾಗಿ 'ಸೌಕರ್ಯಗಳ' ಅಡಿಯಲ್ಲಿ ಎಲ್ಲ ರೀತಿಯ ಸಂಪರ್ಕ ವ್ಯವಸ್ಥೆಗಳನ್ನೂ ಸೇರಿಸಬೇಕು. ಜೊತೆಗೆ ನಾವು ವಿಶೇಷವಾಗಿ ಅಭಿವೃದ್ಧಿಪಡಿಸಿರುವಂತಹ, ಯಂತ್ರರೂಪದ ಹಾಗೆಯೇ, ಮನುಷ್ಯ ರೂಪದ ಎಲ್ಲ ಲೌಡ್ ಸ್ಪೀಕರ್‌ಗಳನ್ನೂ ಸೇರಿಸಬೇಕು!

ಈ ಮೂಲಭೂತ ಸೌಕರ್ಯಗಳಲ್ಲಿ ಕೆಲವು ದೇವರೇ ನಮಗೆ ಕೊಡುಗೆಯಾಗಿ ನೀಡಿರುವಂಥವು, ನೆಲ, ಜಲ, ಗಾಳಿ, ಬೆಳಕುಗಳು ತಾವಾಗಿ ಬೆಳೆಯುವಂತಹ ನಮಗೆ ಆಹಾರವಾಗುವಂತಹ ವಸ್ತುಗಳು ಹಾಗೂ ವಸ್ತ್ರ – ವಹನಗಳಿಗೆ ಬಳಸಬಲ್ಲಂತಹ ವಸ್ತುಗಳು. ಆದರೆ ಈ ಎಲ್ಲ ದೇವರ ದೇಣಿಗೆಯನ್ನು ನಾವು ಕಲುಷಿತಗೊಳಿಸಿ ಇನ್ನು ಅವನ್ನು, ನಮ್ಮನ್ನು ದೇವರೇ ಕಾಪಾಡಬೇಕಾಂತಹ ಪರಿಸ್ಥಿತಿಯನ್ನು ತಂದುಕೊಂಡಿದ್ದೇವೆ.

'ಬಡತನವೆಂದರೆ ಸಂಪತ್ತಿನ ಕೊರತೆಯೆಂಬ ಕಲ್ಪನೆಯೊಂದಿದೆ. ಹಾಗೆಯೆ ಬಡತನ ನಿರ್ಮೂಲನಕ್ಕೆ ಅಭಿವೃದ್ಧಿ'ಯೊಂದೆ ಮಾರ್ಗವೆಂಬ ಬಲವಾದ ನಂಬಿಕೆಯಿದೆ, ಆದರೆ ನಮ್ಮ ಅದ್ಭುತ ಆಧುನಿಕ ಅಭಿವೃದ್ಧಿ ಯೋಜನೆಗಳಲ್ಲ ನಿಜಕ್ಕೂ ವಿವೇಕದ ಮಾರ್ಗಗಳೊ? ಅವುಗಳ ಸಂಕೀರ್ಣತೆ, ಕ್ಲಿಷ್ಟತೆಗಳ ಕಾರಣಕ್ಕಾಗಿಯೇ ಅವುಗಳಲ್ಲಿ ಬಹಳಷ್ಟು ಯೋಜನೆಗಳು ದುರುಪಯೋಗಕ್ಕೂ, ವೈಫಲ್ಯಕ್ಕೂ ಬಲಿಯಾಗುವಂತಹವು, ಬಡತನಕ್ಕೆ, ಪರಿಸರಕ್ಕೆ, ಮೂಲಭೂತ ಸೇವಾ ಸೌಕರ್ಯಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಬಹುಪಾಲು ಮನುಷ್ಯ ನಿರ್ಮಿತವಾಗಿರುವಂಥವು, ಮಳೆ–ಗಾಳಿಗೊ, ಪ್ರವಾಹ–

ಭೂಕಂಪಗಳಿಗೊ ಹವಾಮಾನದ ವ್ಯತ್ಯಯಗಳಿಗೂ ನಾವು ಕಾರಣರಲ್ಲ, ನಿಜ. ಆದರೆ ಇನ್ನುಳಿದಂತೆ, ನಮ್ಮ ಅಭಿವೃದ್ಧಿ ಯೋಜನೆ'ಗಳ ಹಲವು ಕಡೆ ದೊಡ್ಡ ಬಾಧೆಗಳಾಗಿರುವವು.

ಕೊಳೆಗೇರಿಗಳನ್ನು ಮಾಡಿದ್ದು, ವಿಷಾನಿಲಗಳನ್ನು ಉತ್ಪಾದಿಸಿದ್ದು ದೇವರಲ್ಲ, ಪ್ರಕೃತಿಯಲ್ಲ: ಮಾರಕ ತ್ಯಾಜ್ಯವಸ್ತುಗಳನ್ನು ಸೃಷ್ಟಿಮಾಡಿ ಕೊನೆಗೆ ಅವುಗಳನ್ನು ನೆರೆಮನೆ–ನೆರೆದೇಶದಂಗಳದಲ್ಲಿ ಯಾ ನದಿ–ಸಮುದ್ರಗಳಲ್ಲಿ ಚೆಲ್ಲುವುದನ್ನು ಬಿಟ್ಟು ಬೇರೆ ಏನು ಮಾಡುವುದೆಂದು ತಿಳಿಯದೆ ಕಂಗಾಲಾಗಿರುವುದು ದೇವರಲ್ಲ, ಪ್ರಕೃತಿಯಲ್ಲ.

ಬಡತನವೆನ್ನುವುದು ಒಂದು ಅವಮಾನದ ಸ್ಥಿತಿ, ಆದರೆ ಆ ಅವಮಾನ ನಮ್ಮದೆ ಹೊರತು ಬಡವರದ್ದಲ್ಲ. ಕೊಳೆಗೇರಿಗಳ ನಿರ್ಗತಿಕರದ್ದಲ್ಲ. ನಮ್ಮ ಕೊಳೆಗೇರಿ ನಿವಾಸಿಗಳ ಬಗ್ಗೆ, ಬಡಸಮುದಾಯಗಳ ಬಗ್ಗೆ ನಾವು ಮಾಡುತ್ತಿರುವುದಾದರೂ ಏನು? ಒಂದೊ, ಕಣ್ಣು ಮುಚ್ಚಿ ಅವರೆಲ್ಲ ಇಲ್ಲವೆ ಇಲ್ಲ ಎಂಬಂತೆ ನಟಿಸುತ್ತೇವೆ, ಇಲ್ಲವಾದರೆ ಅಂಥವರ ಸಮಸ್ಯೆಗಳು ಅಪರಿಹಾರ್ಯವಾದವು, ಅದರಲ್ಲಿ ನಮ್ಮ ಜವಾಬ್ದಾರಿಯೇನೂ ಇಲ್ಲವೆಂದು ಜಾರಿಕೊಳ್ಳುತ್ತೇವೆ. ನಮ್ಮ ಕುಟುಂಬವರ್ಗದಲ್ಲೇ ಯಾರಾದರೂ ಬಡತನದಿಂದ ಬಳಲುತ್ತಿದ್ದರೆ ಕೊಂಚ ಅವಮಾನದಿಂದ, ಅಪರಾಧಿ ಪ್ರಜ್ಞೆಯಿಂದ ಬಾಧಿತರಾಗುತ್ತೇವೆ ನಾವು. ಅದೇ ಇಡಿಯಿಡಿ ಸಮುದಾಯಗಳ ಬಡತನಕ್ಕೆ ಬಲಿಯಾದಾಗ 'ಸರ್ಕಾರ ಏನನ್ನಾದರೂ ಮಾಡಬೇಕು' ಎಂದು ಹೇಳುತ್ತೇವೆ.

ಸ್ವತಃ ನಾವು ಮಾತ್ರ ಬೀದಿಯ ಆಚೆಬದಿಗೆ ದಾಟಿಕೊಂಡು ಏನೂ, ಕಂಡಿಲ್ಲವೆಂಬಂತೆ ಕತ್ತು ತಿರುಗಿಸಿ ನಡೆದುಬಿಟುತ್ತೇವೆ. ಕೆಲವೊಮ್ಮೆ 'ಬಡವರಿರಬಹುದು, ಆದರೆ ತಮ್ಮ ಬಟ್ಟೆಬರೆಗಳನ್ನಾದರೂ ಸ್ವಚ್ಛವಾಗಿ ಒಗೆದಿಟ್ಟುಕೊಳ್ಳಬಾರದೆ? ಎಂದು ಸಿಟ್ಟು ಮಾಡುತ್ತೇವೆ. ಅವರ ಬಳಿ ಇರುವ ಒಟ್ಟು ಬಟ್ಟೆಗಳಾದರೂ ಎಷ್ಟು ಎಂಬುದನ್ನು ಅವರಿಗಿರುವ ನೀರಿನ ವ್ಯವಸ್ಥೆಯಾದರೂ ಎಂತಹುದು ಎಂಬುದನ್ನು ನಾವು ಎಂದಾದರೂ ಗಮನಿಸಿದ್ದೇವೆಯೆ? 'ಇಂಥ ಕೊಳಕು ಜಾಗದಲ್ಲಿ ಜೀವಿಸಬೇಕೆಂಬ ಹಠ ಯಾಕೆ ಇವರಿಗೆ? ಬೇರೆ ಸ್ವಚ್ಛ ಜಾಗಗಳನ್ನು ಹುಡುಕಿಕೊಂಡು ಹೋಗಬಾರದೆ?' ಎನ್ನುತ್ತೇವೆ ನಾವು. ಅಂಥ ಜಾಗಗಳು ಎಲ್ಲಿರುವುವು ಎಂಬುದು ಅವರಿಗೆ ಹೋಗಲಿ ನಮಗಾದರೂ ಗೊತ್ತುಂಟೆ? ಅಂಥ ಜಾಗ ಇದ್ದರೂ ಅಲ್ಲಿ ಯಾರು ಬೇಕಾದರೂ ಹೋಗಿ ವಸತಿ ಹೊಡಲು ಸಾಧ್ಯವುಂಟೊ?

'ಆ ಮಗುವಿನ ಮೈಯ ಕೀವುಕಜ್ಜಿಗಳನ್ನು ನೋಡಿ, ಎಷ್ಟು ಹೊಲಸು! ಅದರ ತಾಯಿ–ತಂದೆಯರಾದರೂ ಚಿಕಿತ್ಸೆ ಕೊಡಿಸಬಾರದೆ?' ಎಂದು ಅಸಹಿಸುತ್ತೇವೆ ನಾವು. ಇಂದಿನ ಸನ್ನಿವೇಶದಲ್ಲಿ ವೈದ್ಯರು ಕೇಳುವ ಶುಲ್ಕವನ್ನು ಕೊಡಲು ಆ ತಾಯಿ–ತಂದೆಯರಿಗೆ ಸಾಧ್ಯವಿದೆಯೆ, ಅವರು ಬರೆದುಕೊಡುವ ಔಷಧಿಗಳನ್ನು ಕೊಳ್ಳಲು ಸಾಧ್ಯವಿದೆಯೇ ಎಂದು ಎಂದಾದರೂ ಯೋಚಿಸಿದ್ದೇವೆಯೆ. 'ಆ ಅಪಾಪೋಲಿ ಮಕ್ಕಳನ್ನು ನೋಡಿ, ಕೊಳಕು ಸೊಕ್ಕು ತುಂಬಿದ ಆ ಅರೆಬೆತ್ತಲೆ ಘಟಿಂಗರು ಶಾಲೆಗಾದರೂ ಹೋಗಬಾರದೇಕೆ? ಎಂದು ಗೊಣಗುತ್ತೇವೆ. ಅವರಿಗೆ ಮೈ ಮೇಲಿನದನ್ನು ಬಿಟ್ಟು ಬೇರೆ ಬಟ್ಟೆಗಳ ಇಲ್ಲದಿರುವುದರಿಂದಲೇ ಅವರು ಅರೆಬೆತ್ತಲೆಯಿರುವುದು ಎಂಬುದು, ಕೊಳಕು ಚರಂಡಿಗಳ ಪಕ್ಕದಲ್ಲಿ ಬದುಕಬೇಕಾದ ಅವರು ಸ್ವಚ್ಛವಾಗಿರಲಾರರು ಎಂಬುದು, ಒಂದು ತುಂಡು ಸೋಪನ್ನೂ ಕೊಳ್ಳಲಾರದಷ್ಟು ಬಡವರು ಅವರು ಎಂಬುದು ನಮಗೆ ಹೊಳೆಯುವುದೆ ಇಲ್ಲ. ನಮ್ಮ ಶಾಲೆಗೆ ಹೋಗುವ ಬಗ್ಗೆ – ಅವರನ್ನು ಶಾಲೆಯ ಶಿಕ್ಷಕರು, ಇತರ ಅನುಕೂಲಸ್ಥ ಮಕ್ಕಳು ನಡೆಸಿಕೊಳ್ಳುವ ರೀತಿಯ ಬಗ್ಗೆ ಎಂದಾದರೂ ಯೋಚಿಸಿದ್ದೇವೆಯೆ?

ಹಾಗಾಗಿ ಈ ದಾರುಣ ದಾರಿದ್ರ್ಯದ ಜವಾಬ್ದಾರಿಯಲ್ಲ. 'ನಮ್ಮದೆ' ಹೊರತು 'ಅವರದಲ್ಲ.' 'ನಾವು' ಆರಾಮದ ಜೀವನ ನಡೆಸುತ್ತಿರುವವರು, ಅಗತ್ಯಕ್ಕಿಂತ ಹೆಚ್ಚು ಬಟ್ಟೆ ಬರೆಯನ್ನು, ಸಂಬಳವನ್ನು, ಹಣವನ್ನು, ವಿಸ್ತಾರದ ಮನೆ-ಬಂಗಲೆಗಳನ್ನು ಹೊಂದಿರುವವರು, ಅವಶ್ಯಕ್ಕಿಂತ ಹೆಚ್ಚು ತಿನ್ನುವವರು. ಖರ್ಚು ಮಾಡುವವರು, ಹಸಿವು, ನೀರಡಿಕೆಗಳಿಂದ ನರಳದಿರುವವರು ಆಗಿರಬಹುದು ಅಥವಾ ಸರ್ಕಾರವಾಗಿರಬಹುದು ಅಥವಾ ನಾಯಕರಾಗಿರಬಹುದು, ಎಲ್ಲರಿಗೂ ಅಷ್ಟೆ, ಸಂಪನ್ಮೂಲಗಳ ಹಕ್ಕು ಪಡೆದುಕೊಳ್ಳುವವರು ನಾವು ನಮ್ಮ ಸ್ವಂತದ ಹಾಗೂ ನಮ್ಮ ವರ್ಗಗಳ ಸುಖಕ್ಕೆಂದು ಅವುಗಳನ್ನು ಖರ್ಚು ಮಾಡುವವರು ನಾವು. ಅಧಿಕಾರಿ, ಪ್ರಭಾವ, ಒತ್ತಡಗಳ ಬಲ ಹೊಂದಿರುವವರು ನಾವು, ಶಾಲೆಯ ವಿಷಯದಲ್ಲಿ, ಶಿಕ್ಷಣದ ವಿಷಯದಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಚಲಾಯಿಸಬಲ್ಲಂತಹ ಮಕ್ಕಳನ್ನು ಪಡೆದವರು ನಾವು ಫೋನು, ಫ್ಯಾಕ್ಸ್, ಸ್ಪೀಡ್ ಪೋಸ್ಟ್‌ಗಳನ್ನು ಬಳಸುವಂಥವರು, ವಿಚಾರ ಸಂಕಿರಣಗಳಿಗೆ, ಸಮಾವೇಶಗಳಿಗೆ ಹೋಗುವಂಥವರು ನಾವು. ಅದೇ ನಾವು ನಮ್ಮ ಸುತ್ತಲ ಬಡತನದ ಬಗ್ಗೆ ಏನಾದರೂ ಪರಿಹಾರ ಕಾರ್ಯಗಳನ್ನು ನಡೆಸಿರುವುದಿದೆಯೆ? ಆ ವೇಧಕ ವಾಸ್ತವವನ್ನು ನಿಟ್ಟಿಸಿ ನೋಡಿದ್ದಾದರೂ ಇದೆಯೆ?

ಬಡವರಲ್ಲಿ ನೂರಕ್ಕೆ ತೊಂಬತ್ತೈದರಷ್ಟು ಜನರು ತಮ್ಮ ಬಡತನಕ್ಕೆ, ಇಂಥ ಅವಮಾನಕಾರಿ ಪರಿಸ್ಥಿತಿಗೆ ತಾವು ಸ್ವತಃ ಕಾರಣರಲ್ಲ. ಸ್ವಂತ ಆಯ್ಕೆಯ ಸ್ವಾತಂತ್ರ್ಯವೆ ಇಲ್ಲದೆ ಬಡವರ್ಗದಲ್ಲಿ ಕೊಳೆಗೇರಿಗಳಲ್ಲಿ ಹುಟ್ಟಿದ ಅವರು ಅನಂತರವೂ ಆಯ್ಕೆಯ ಶಕ್ತಿಯಿಲ್ಲದೆ ಅನಿವಾರ್ಯವಾಗಿ ಅಲ್ಲಿಯೆ ಬದುಕಬೇಕಾಗಿರುವವರು, ತಮ್ಮ ಸ್ವಂತ ಆಸೆಯಿಂದಾಗಲಿ, ಯೋಜನೆಗಳಿಂದಾಗಲಿ, ಪ್ರಯತ್ನಗಳಿಂದಾಗಲಿ ಅವರು ಆ ಸ್ಥಿತಿಯಿಂದ ಹೊರಬರಲು ಅಸಾಧ್ಯರು ಎಂಬುದೂ ನಿಜ. ಹಾಗಾಗಿ ನಮ್ಮ ಮುಂದಿರುವ ದೊಡ್ಡ ಪ್ರಶ್ನೆಯೆಂದರೆ ಬಡತನದಿಂದ ಪಾರಾಗಲು ಅವರೇನು ಮಾಡಬಲ್ಲರು ಎಂಬುದಲ್ಲ, ಬದಲಾಗಿ ನಾವೇನು ಮಾಡಬಲ್ಲೆವು ಎಂಬುದು.

ಬಡ ಜೀವನಮಟ್ಟ, ಬಡ ಮೂಲಸೇವಾ ಸೌಕರ್ಯಗಳು, ಬಡ ಪರಿಸರ-ಇವುಗಳ ಹಿಂದಿರುವ ಕಾರಣವಾದರೂ ಏನು? ಅದು ಹಣದ ಕೊರತೆಯೆ? ಆಂಶಿಕವಾಗಿ ಹೌದು; ಹಣವಿಲ್ಲದೆಯೂ ಏನನ್ನಾದರೂ ಸಾಧಿಸಬಲ್ಲೆವು ಎನ್ನುವುದು ಬರಿ ಭ್ರಮೆ. ಆದರೆ ಇವರು ಹಣವನ್ನೇ ಐಷಾರಾಮಕ್ಕೆ ಪೋಲು ಮಾಡದೆ ವಿವೇಚನೆಯಿಂದ ಬಳಸಿದಲ್ಲಿ ನಾವು ಬಹಳಷ್ಟು ಸಾಧಿಸಬಹುದು ಎಂಬುದಂತೂ ಸತ್ಯ.

ನಾನು ಈ ದೇಶಕ್ಕೆ ಬಂದ ಹೊಸತರಲ್ಲಿ, ಕಟ್ಟಡಗಳ ಮೇಲೆ ಅಪಾರ ಹಣವನ್ನು ವ್ಯಯಿಸುವುದು ಅನವಶ್ಯವೆಂದು ಹೇಳತೊಡಗಿದಾಗ, ಅಂಥ ಅಪವ್ಯಯವನ್ನು ತಪ್ಪಿಸುವಂತಹ ಹೊಸ ನಿರ್ಮಾಣ ವಿಧಾನಗಳನ್ನು ಪ್ರಯೋಗಿಸತೊಡಗಿದಾಗ, ನನ್ನ ವಾದ-ವಿಧಾನಗಳೆಲ್ಲ ಮೂರ್ಖವೆಂದೂ, ಅವು ಬಹುಕಾಲ ಬಾಳಲಾರವೆಂದೂ ತೀವ್ರ ವಿರೋಧವೆ ಪ್ರಕಟವಾಯಿತು. ಸುಧೈವವೊ ಎಂಬಂತೆ ನಾನು ಆಗ ಕಟ್ಟಿದ ಹಲವು ರೀತಿಯ ಕಟ್ಟಡಗಳು ಸುಮಾರು ವರ್ಷಗಳ ಅನಂತರವೂ ಸುಭದ್ರವಾಗಿ ನಿಂತಿವೆ.

ನಾನು ಬಳಿಸಿದ್ದು ಒಂದೇ ಒಂದು ಸರಳ ಸೂತ್ರವನ್ನು, ಯಾವುದೇ ವಾಸ್ತು ನಿರ್ಮಾಣಕ್ಕೆ ಮೊದಲು ಇಡೀ ಕಟ್ಟಡದ. ಅದರ ನಿರ್ಮಾಣದ ಹಲವು ಭಾಗಗಳನ್ನು ನಿರ್ಮಾಣಕ್ರಿಯೆಗಳನ್ನು "ನೆಲದ ಅಗೆತ, ತಳಹದಿಯ ನಿರ್ಮಾಣ, ಗೋಡೆಗಳು, ಸೂರು, ಒಳಾಂಗಣದ ನೆಲ, ಪ್ಲಾಸ್ಟರ್ ಮಾಡುವುದು ಇತ್ಯಾದಿಗಳನ್ನೆಲ್ಲ ಬಿಡಿಬಿಡಿಯಾಗಿ ಪರಿಗಣಿಸುತ್ತೇನೆ. ತರುವಾಯ ಪ್ರತಿಯೊಂದು ಭಾಗದ ಬಗ್ಗೆಯೂ 'ಇದು ನಿಜವಾಗಿಯೂ ಅವಶ್ಯವೆ?' ಎಂದು ಪ್ರಶ್ನಿಸಿಕೊಳ್ಳುತ್ತೇನೆ, ಕೆಲವು ಭಾಗಗಳಂತೂ

ಅತ್ಯವಶ್ಯವಾದುವು. ಅವುಗಳನ್ನು ಉಳಿಸಿಕೊಳ್ಳುತ್ತೇನೆ. ಮುಂದಿನ ಹೆಜ್ಜೆಯಾಗಿ ಆ ನಿರ್ದಿಷ್ಟ ಭಾಗವನ್ನು ನಿರ್ಮಿಸುವ ಪ್ರಚಲಿತ ವಿಧಾನಗಳು ವಿವೇಕಯುತವಾದುವೆ, ವ್ಯಯಕ್ಷಮತೆಯವೆ' ಹಾಗೂ ಸೂಕ್ತವಾದುವೆ ಎಂದು ಕೇಳಿಕೊಳ್ಳುತ್ತೇನೆ.

ಯಾವುದೇ ಒಂದು ಭಾಗ ತೀರ ಅವಶ್ಯಕವಲ್ಲ ಎನಿಸಿದರೆ ಅದನ್ನು ಕೈಬಿಡುತ್ತೇನೆ. ಉದಾಹರಣೆಗೆ, ಸಾಮಾನ್ಯ ಮನೆಯೊಂದರಲ್ಲಿ ಗೋಡೆಗಳನ್ನು ಪ್ಲಾಸ್ಟರ್ ಮಾಡುವುದು ತೀರ ಅವಶ್ಯಕವ? ಸ್ನಾನದ ಕೋಣೆ ಯಾ ಅಡಿಗೆ ಕೋಣೆಯಲ್ಲಿ ಪ್ಲಾಸ್ಟರಿಂಗ್ ಅವಶ್ಯಕ ಹೌದು, ಆದರೆ ಎಲ್ಲೆಡೆಯೂ ಅಲ್ಲ. ಇನ್ನುಳಿದ ಕಡೆ ಅದು ಚಂದ ಕಾಣಬಹುದೆ ಹೊರತು ನಿಜವಾಗಿಯೂ ಆನಿವಾರ್ಯವೇನಲ್ಲ. ಮನೆಯ ಹೊರಬದಿಗೂ ಅಷ್ಟೆ, ಇಟ್ಟಿಗೆ ಯಾ ಕಲ್ಲಿನ ಗೋಡೆಯಾಗಿರಲಿ ಅಥವಾ ಮಣ್ಣಿನ ಗೋಡೆಯೆ ಆಗಿರಲಿ, ಉತ್ಕೃಷ್ಟ ಗೋಡೆ ಕೆಲಸವಾಗಿದ್ದಲ್ಲಿ ಪ್ಲಾಸ್ಟರ್ ಮಾಡುವ ಅಗತ್ಯವೇನಿಲ್ಲ. ಹೀಗೆ, ತೀರ ಅತ್ಯಗತ್ಯವಲ್ಲ ಎಂದೆನಿಸಿದ ಅಂಶಗಳನ್ನು ಬಿಟ್ಟುಕೊಡುವುದರ ಮೂಲಕ ಸಾಮಾನ್ಯ ಖರ್ಚಿನ ಸುಮಾರು ೧೦ ರಿಂದ ೨೦ ಶತಾಂಶದಷ್ಟು, ಏಕೆ, ಅರ್ಧದಷ್ಟು ಹಣವನ್ನು ಉಳಿಸಬಹುದು.

ನಾನು ಮತ್ತು ನನ್ನ ವೈದ್ಯ-ಪತ್ನಿ ಸೇರಿ ಹಲವು ವರ್ಷಗಳಿಂದ ಗ್ರಾಮೀಣ ಆಸ್ಪತ್ರೆಯೊಂದನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅಲ್ಲಿ ನಾವೆಂದೂ ಯಾವುದೇ ರೀತಿಯ ಪ್ರವೇಶ ಶುಲ್ಕವನ್ನಾಗಲೀ, ನೋಂದಣಿ ಶುಲ್ಕವನ್ನಾಗಲೀ ವಿಧಿಸಿದ್ದಿಲ್ಲ. ಹೊರಗಿನಿಂದ ಬಂದ ಸಹಾಯವೆಂದರೆ ಆಗೀಗ ಕೆಲವರು ನಮಗೆ ಕಾಣಿಕೆಗಳಾಗಿ ನೀಡಿದ ಆಪರೇಷನ್ ಟೇಬಲು, ಎಕ್ಸ್ –ರೇ, ಯಂತ್ರ ಸೂಕ್ಷ್ಮದರ್ಶಕಗಳಂತಹ ಉಪಕರಣ ವಸ್ತುಗಳು. ನನ್ನ ಪತ್ನಿ ರೋಗಿಗಳ ಸಮಸ್ಯೆಗಳನ್ನು ಅತ್ಯಂತ ನಿಖರವಾಗಿ ಗುರುತಿಸಿ ಅನಂತರ ತೀರ ಸೂಕ್ತವಾದ ಅವಶ್ಯವಾದ ಚಿಕಿತ್ಸೆಯನ್ನು ಮಾತ್ರ ನೀಡುವ ಪದ್ಧತಿ ರೂಢಿಸಿಕೊಂಡವಳು.

ಪ್ರತಿಯೊಬ್ಬ ರೋಗಿಗೂ ಆತನ/ಆಕೆಯ ಚಿಕಿತ್ಸೆಯ ನಿಖರವಾದ ಖರ್ಚು ಎಷ್ಟಾಯಿತೆಂದು ನನ್ನ ಪತ್ನಿ ತಿಳಿಸುತ್ತಿದ್ದಳು, ತರುವಾಯ, ಅವರು ಆ ಮೊತ್ತವನ್ನು ಆಸ್ಪತ್ರೆಗೆ ನೀಡುತ್ತಿದ್ದರು. ಪೂರ್ಣವಲ್ಲದಿದ್ದರೆ ಶಕ್ತಾನುಸಾರವಾಗಿ, ಹಣದ ರೂಪದಲ್ಲಾಗದಿದ್ದರೆ ವಸ್ತು ರೂಪವಾಗಿ. ಒಂದು ಹೆರಿಗೆ ಮಾಡಿಸಿದರೆ ಅದಕ್ಕೆ ಪ್ರತಿಯಾಗಿ ನನ್ನ ಪತ್ನಿಗೆ ಒಂದು ಬುಟ್ಟಿ ಹಣ್ಣೂ, ಒಂದು ಡಬ್ಬಿ ತುಪ್ಪವೂ, ಒಂದು ಹೊರೆ ಕಟ್ಟಿಗೆಯೋ ದೊರಕುತ್ತಿತ್ತು. ನಾವು ಆಸ್ಪತ್ರೆ ಕಟ್ಟಡವನ್ನು ಕಟ್ಟಿದ್ದೂ ಅದೇ ರೀತಿ, ರೋಗಿಗಳ ಸಂಬಂಧಿಗಳು ಒಂದೊಂದು ದಿನದ ಮಟ್ಟಿಗೆ ಕಲ್ಲು-ಮರಳನ್ನು ಹೊತ್ತು ತಂದು ಹಾಕುವ ಕೆಲಸ ಮಾಡಿದರು. ಕಟ್ಟುವ ಕೆಲಸದಲ್ಲಿ ತಮ್ಮ ಶಕ್ತ್ಯಾನುಸಾರ ನನಗೆ ಸಹಾಯ ನೀಡಿದರು.

ನಾವೆಲ್ಲ ಮನಸ್ಸು ಮಾಡಿದಲ್ಲಿ ಇನ್ನಿತರ ಕೆಲಸಗಳಲ್ಲಿ, ಯೋಜನೆಗಳಲ್ಲಿ ಕೂಡಾ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆಯೆ ಅತ್ಯಗತ್ಯವಲ್ಲದ ಅಂಶಗಳನ್ನು ಕೈಬಿಡುವುದರ ಮೂಲಕ ಸಾಕಷ್ಟು ಮಿತವ್ಯಯವನ್ನು ಸಾಧಿಸಬಹುದು. ಇನ್ನು ಹಣದ ಬಗ್ಗೆ ಚಿಂತಿಸಬೇಕಾಗಿಲ್ಲ. ಒಳ್ಳೆಯ ಉದ್ದೇಶಕ್ಕೆ ಒಳಕೆಯಾಗುವುದು ಎಂಬ ವಿಶ್ವಾಸವಿದ್ದಲ್ಲಿ ಜನ ಹಣವನ್ನು ನೀಡುವುದು ಖಚಿತ, ಮರಾಠವಾಡದ ಭೂಕಂಪವಾದ ಕೆಲವೇ ದಿನಗಳಲ್ಲಿ ಎಷ್ಟೊಂದು ಹಣ, ಎಷ್ಟೊಂದು ವಸ್ತುಗಳು ಸಹಾಯರೂಪದಲ್ಲಿ ರಾಶಿರಾಶಿಯಾಗಿ ಬಂದವು ನೋಡಿ. ಮತ್ತದು ಇತ್ತೀಚಿನ ಒಂದು ನಿದರ್ಶನವಷ್ಟೆ. ಆದರೆ, ಬಡವರು ಸ್ವಂತ ಶ್ರಮದಿಂದ ಹಣಗಳಿಸಿ, ಬಾಳುವಂತಹ ಮಾರ್ಗಗಳನ್ನು ನಾವು ರೂಪಿಸಬೇಕು. ಸ್ಥಳೀಯ ಕೆಲಸಗಾರಿಕೆ ಮತ್ತು ಕೌಶಲ್ಯಗಳನ್ನು ಬಳಸಿಕೊಳ್ಳುವಂತಹ ಯೋಜನೆ, ಕಾರ್ಯಕ್ರಮಗಳನ್ನು ಜಾರಿಗೆ ತಂದಲ್ಲಿ, ಹಣ ಆಹಾರ ಹಾಗೂ ಉದ್ಯೋಗಗಳನ್ನು ಸೃಷ್ಟಿಸುವಂತಹ ಹಲವು ದಾರಿಗಳನ್ನು ನಾವು ಕಂಡುಕೊಳ್ಳಬಹುದು.

ನಮ್ಮ ನಗರಗಳಲ್ಲಿ ಗಂಟೆಗಂಟೆಗೆ ಬಂದುಬೀಳುವ ತ್ಯಾಜ್ಯವಸ್ತುರಾಶಿಯಲ್ಲೇ ತೆಗೆದುಕೊಳ್ಳಿ, ಕಾಗದ ಮತ್ತು ಬಟ್ಟೆಯ ತ್ಯಾಜ್ಯ ರೂಪಗಳನ್ನು ಸಂಗ್ರಹಿಸಿ ಮರುಬಳಕೆಗೆ ಅವನ್ನು ಸಿದ್ಧಪಡಿಸಬಹುದು. ಎಲುಬು ತುಂಡುಗಳಿಂದ ಅಂಟು ಮತ್ತು ಗೊಬ್ಬರವನ್ನು ತಯಾರಿಸಬಹುದು. ಟೂತ್‌ಪೇಸ್ಟ್ ಟ್ಯೂಬುಗಳ ಮತ್ತು ಬಾಟಲಿ ಮುಚ್ಚಳಗಳ ಲೋಹವನ್ನು ಮರುಬಳಸಬಹುದು. ಹಳೆಯ ಗೋಲಡಬ್ಬಿ, ಟನ್ನುಗಳಲ್ಲಿ ಪುಟ್ಟ, ಗಿಡಗಳನ್ನು ಬೆಳೆಯಬಹುದು. ಪ್ಲಾಸ್ಟಿಕ್ ವಸ್ತುಗಳನ್ನು ಹಲವು ರೀತಿಯಲ್ಲಿ ಮನರುಪಯೋಗಿಸಬಹುದು. ಕಟ್ಟಡ ನಿರ್ಮಾಣದಲ್ಲಿ ಅಳಿದುಹೋದ ಎಲ್ಲ ಸಣ್ಣಪುಟ್ಟ ವಸ್ತುಗಳನ್ನೂ ಒಟ್ಟುಗೂಡಿಸಿ ಒಂದು ಸಣ್ಣ ಪ್ರೇಕ್ಷಾಂಗಣವನ್ನೂ, ಶಾಮಿಯಾನವನ್ನೂ ಕಟ್ಟಿ ಸಭೆ ಸಮಾರಂಭ, ಮದುವೆ, ಸಾಂಸ್ಕೃತಿಕ ಕಾರ್ಯಕ್ರಮ, ಇತ್ಯಾದಿಗಳಿಗೆ ಬಾಡಿಗೆಗೆ ನೀಡಬಹುದು.

**ಕೊಳಚೆ ನೀರನ್ನು ಶುದ್ಧೀಕರಿಸುವಲ್ಲಿ ಮೀನುಗಳನ್ನು ಬಳಸಿ ಬೆಳಸಬಹುದು.**

ಬಡತನ ನಿವಾರಣೆಯ ಮತ್ತೊಂದು ಮುಖ್ಯ ಅಂಶ–ವಸತಿ ನಿರ್ಮಾಣ, ಸೂಕ್ತ ವಿನ್ಯಾಸ : ಯೋಜನೆಗಳನ್ನು ಅನುಸರಿಸಿದಲ್ಲಿ ನಮ್ಮ ಕೊಳೆಗೇರಿಗಳು ಬಡತನದಿಂದ ಪಾರಾಗುವ ಮಾರ್ಗಗಳನ್ನು ತಾವೇ ಕಂಡುಕೊಳ್ಳುವ ರೀತಿಯಲ್ಲಿ ಆವುಗಳನ್ನು ಕಟ್ಟಬಹುದು; ತಮ್ಮ ಮೂಲ ಸೇವಾ ಸೌಕರ್ಯಗಳನ್ನು ತಾವೇ ಸೃಷ್ಟಿಸಿಕೊಂಡು ಆ ಮೂಲಕ ಉದ್ಯೋಗಾವಕಾಶಗಳನ್ನೂ ಸೃಷ್ಟಿಸಿಕೊಳ್ಳುವ ಹಾಗೂ ಅಂತಿಮವಾಗಿ ಸ್ವತಂತ್ರ ಜೀವನ ನಡೆಸಲು ಸಾಧ್ಯವಾಗುವಂತಹ ರೀತಿಯಲ್ಲಿ ಅವುಗಳನ್ನು ಕಟ್ಟಬಹುದು.

ಈ ನಿಟ್ಟಿನಲ್ಲಿ ನನ್ನದೊಂದು ಯೋಚನೆಯಿದೆ. ನನ್ನ ಹಾಗೂ ನನ್ನಂತಹ ಉಚ್ಚವರ್ಗದವರ ನಿಷ್ಕಾಳಜಿಯ ಬಗ್ಗೆ ನನಗೆ ತೀರ ಬೇಸರ, ಜಿಗುಪ್ಸೆ ಮೂಡಿದಾಗಲೆಲ್ಲ ತಣ್ಣಗೆ ಕೂತು ನಾನು 'ರಿಸೈಕಲ್ಡ್ ಸ್ಲಮ್' ಒಂದರ ಯೋಜನೆ ಹಾಕುವುದುಂಟು. ನಮ್ಮ ದೇಶದ ಸಾವಿರಾರು ವಾಸ್ತುಶಿಲ್ಪಜ್ಞರು ಮತ್ತು ಇಂಜಿನಿಯರರು ಎಲ್ಲ ಕೂತು ಇಂಥ ಒಂದೊಂದು ಯೋಜನೆಯನ್ನು ತಯಾರಿಸಿದರೂ ಸಾಕು. ನಾವು ನಮ್ಮೆಲ್ಲ ಕೊಳೆಗೇರಿಗಳ ಬಡವರ ವಸತಿಪ್ರದೇಶಗಳ ಸ್ವರೂಪವನ್ನೇ ಆಮೂಲಾಗ್ರಹವಾಗಿ ಬದಲಾಯಿಸಬಹುದು. ಇದಕ್ಕೆಲ್ಲ ಹಣ ಬೇಕೆ ಬೇಕು. ಹೌದು, ಆದರೆ ನಾವೆಲ್ಲ ನಿಷ್ಠೆಯಿಂದ ಸಾಮೂಹಿಕ ಪ್ರಯತ್ನದಲ್ಲಿ ತೊಡಗಿಸಿಕೊಂಡಲ್ಲಿ ಹಣದ ಸಂಗ್ರಹ ಹಾಗೂ ಯೋಗ್ಯ ವಿನಿಯೋಗ ಯಾವ ರೀತಿಯಲ್ಲೂ ಸಮಸ್ಯೆಯಾಗಲಾರದು.

ದುರ್ವ್ಯಯ ನಮ್ಮ ಇನ್ನೊಂದು ಮುಖ್ಯ ಸಮಸ್ಯೆಯಾಗಿದೆ. ನಮ್ಮ ಸಂಪನ್ಮೂಲಗಳನ್ನು ನಾಳೆಯ ಯಾವುದೇ ಯೋಚನೆಯಿಲ್ಲದೆ ಪೋಲು ಮಾಡುವುದರಲ್ಲಿ ನಾವು ಸಿದ್ಧಹಸ್ತರಾಗಿಬಿಟ್ಟಿದ್ದೇವೆ. ಎಲ್ಲ ವಸ್ತುಗಳನ್ನೂ ನಾವು
ನಮಗೆ ಬೇಕಾದಷ್ಟು ಮಾತ್ರ ಬಳಸಿಕೊಂಡು ಉಳಿದದ್ದನ್ನೆಲ್ಲ ತ್ಯಾಜ್ಯವಸ್ತುಗಳ ರೀತಿಯಲ್ಲಿ ಬಿಸಾಡುತ್ತಿದ್ದೇವೆ. ಇವೇ ತ್ಯಾಜ್ಯ ವಸ್ತುಗಳನ್ನು ಬೇರೆ, ಮುಖ್ಯ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಬಹುದೆಂಬ ಕಲ್ಪನೆಯೇ ನಮಗಿಲ್ಲ. ಮೊತ್ತಮೊದಲು ನಾವು ಅಂಥ ತ್ಯಾಜ್ಯವಸ್ತುಗಳ ಪರಿಮಾಣವನ್ನು ಕಡಿಮೆ ಮಾಡಬೇಕು. ಎರಡನೆಯದಾಗಿ ಅನಿವಾರ್ಯ ತ್ಯಾಜ್ಯವಸ್ತುಗಳನ್ನು ತ್ಯಾಜ್ಯವಾಗಿ ಪರಿಗಣಿಸದೆ ಒಂದು ಬಳಕೆಯ ಪ್ರಕ್ರಿಯೆಯ ಬೈಪ್ರಾಡಕ್ಟ್ ('ಉಪೋತ್ಪನ್ನ') ಎಂದು ನೋಡಿ ಅವನ್ನು ಬೇರೆ ಉಪಯುಕ್ತ ಕೆಲಸಗಳಿಗೆ ಬಳಸಿಕೊಳ್ಳಲು ಕಲಿಯಬೇಕು. ಇದರ ಮೂಲಕ ನೂರಾರು ಜನರಿಗೆ ಸ್ಥಳೀಯ ಉದ್ಯೋಗಾವಕಾಶಗಳು ದೊರೆಯುವಲ್ಲಿ ಸಂಶಯವಿಲ್ಲ.

ನಮ್ಮ ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಹಾಗೂ ಉನ್ನತ ಮಟ್ಟದ ತಂತ್ರಜ್ಞಾನದ ಆಮಿಷಗಳಿಗೆ ಬಲಿಬೀಳಬಾರದು ಎಂದು ನಂಬಿರುವವನು ನಾನು. ನಮ್ಮ ದಿನನಿತ್ಯದ ಅನೇಕ ಶ್ರಮದ ಕೆಲಸಗಳನ್ನು ಹಗುರಗೊಳಿಸುವಲ್ಲಿ ಆಧುನಿಕ ಯಂತ್ರಗಳು ತುಂಬ ಸಹಾಯಕಾರಿ ಎಂಬ ವಾಸ್ತವ ನನಗೆ ಗೊತ್ತಿಲ್ಲವೆಂದಲ್ಲ, ಉದಾಹರಣೆಗೆ ಒಂದು ಬೃಹತ್ ಯಂತ್ರ – ಅಗಾಧ ಕೊಳರಾಶಿಯೊಂದನ್ನು ಎತ್ತಿ ಸಂಗ್ರಹಿಸಿ ಒತ್ತಿ ಅಚ್ಚುಮಾಡಿ ಅತ್ಯಂತ ಸುಲಭಕ್ಕೆ ಅದನ್ನು ನದಿಗೊ, ಸಮುದ್ರಕ್ಕೊ, ದೊಡ್ಡ ಹೊಂಡವೊಂದಕ್ಕೊ ಒಟ್ಟು ಬಗೆಯಬಲ್ಲದು ನಿಜ. ಆದರೆ ಅದೇ ಯಂತ್ರ ಸಾವಿರಾರು ಜನರನ್ನು ನಿರುದ್ಯೋಗಿ ನಿರ್ಗತಿಕರನ್ನಾಗಿ ಮಾಡುತ್ತಿರುವುದೂ ಅಷ್ಟೇ ನಿಜ. ತಂತ್ರಜ್ಞಾನದ ಬಗ್ಗೆ ನನ್ನ ಅಭಿಪ್ರಾಯ ಓಬೀರಾಯನ ಕಾಲದ್ದೆಂದು ಅನಿಸಬಹುದು. ಆದರೆ ನನಗೆ ಯಂತ್ರಕ್ಕಿಂತ ಮನುಷ್ಯ ಮುಖ್ಯ.

ನಾನು 'ರಿಸೈಕಲ್ ಮಾಡಿದ ಸ್ಲಮ್' ಒಂದರ ನಕಾಶೆ ಹಾಕುತ್ತ ಕೂರುತ್ತೇನೆ ಎಂದೆನಲ್ಲ. ಅಂಥದೊಂದು ಮರುಹುಟ್ಟು ಪಡೆದ ಕೊಳೆಗೇರಿಯ ವಿನ್ಯಾಸ ಹೀಗಿರುತ್ತದೆ: ಅದು ಬಟ್ಟಲಿನ ಆಕೃತಿಯ ಹಳ್ಳಿಯಾಗಿರುತ್ತದೆ: ಮಧ್ಯದಲ್ಲಿ ಗಿಡ, ಮರ, ನೀರಿನಿಂದ ತುಂಬಿರುವ ಕೇಂದ್ರ ಭಾಗವೊಂದಿರುತ್ತದೆ.
ಅಲ್ಲಿ ಪ್ರಾಣಿಗಳನ್ನು ಸಾಕಲೂಬಹುದು; ಕೊಂಚ ದೂರದಲ್ಲಿ ಮನೆಗಳು, ಅವುಗಳಾಚೆ ರಸ್ತೆಗಳು ಹಾಗೂ ಮನೆಗಳ ಸಾಲಿನ ತುಸು ಕೆಲಭಾಗದಲ್ಲಿ ಅಂಗಡಿಗಳು, ಗೋದಾಮುಗಳು, ಕಾರ್ಯಾಗಾರಗಳು, ತರಬೇತಿ ಕೇಂದ್ರಗಳು, ಶಾಲೆಗಳು, ಆಸ್ಪತ್ರೆ, ಗ್ರಂಥಾಲಯ, ಸಾಂಸ್ಕೃತಿಕ ಚಟುವಟಿಕೆಗಳಿಗೆಂದು ಒಂದು ಸಭಾಂಗಣ, ಬಾಡಿಗೆ ಕೋಣೆಗಳು ಇತ್ಯಾದಿಯೆಲ್ಲ ಬರುತ್ತವೆ.

ಇಂಥ ವಿನ್ಯಾಸಗಳಿಗೆ ಸಂಬಂಧಿಸಿದಂತೆ ನನ್ನ ಅಂದಾಜು ಲೆಕ್ಕವನ್ನೂ, ಅಷ್ಟು ಹಣವನ್ನು, ಸಂಗ್ರಹಿಸುವ ನನ್ನ ಮಾರ್ಗೋಪಾಯಗಳನ್ನೂ ನೀವು ಪರಾಂಬರಿಸಬಹುದು. ನನ್ನ ವಾಸ್ತುಶಾಸ್ತ್ರೀಯ ಜ್ಞಾನಕ್ಕೆ ಹೋಲಿಸಿದರೆ, ನನ್ನ ವ್ಯವಹಾರ ಗಣಿತ–ಅರ್ಥಶಾಸ್ತ್ರಗಳ ಜ್ಞಾನವೆಲ್ಲ ಶೋಚನೀಯ ಎಂದೂ ನಿಮಗನಿಸಬಹುದು. ಆದರೆ ನನ್ನ ಅಂದಾಜನ್ನ ದುಪ್ಪಟ್ಟು, ಬೇಕಾದರೂ ಹೆಚ್ಚು ಮಾಡಿ ಇಂದು ನಾವು ವರ್ಲ್ಡ್ ಬ್ಯಾಂಕ್‌ನಿಂದ ಕೇಳುತ್ತಿರುವ ಮೊತ್ತಕ್ಕೆ ಹೋಲಿಸಿದರೆ ಅದು ಅತಿ ಅಲ್ಪವಾಗಿರುವಂಥದು. ಈ ಅಲ್ಪ ಮೊತ್ತವೆ ನಮ್ಮ ಬಡದೇಶಬಾಂಧವರಿಗೆ ಬಲು ದೊಡ್ಡ ವರಗಳನ್ನು ತಂದುಕೊಡುವಂಥದು. ಅತ್ಯಲ್ಪ ವೆಚ್ಚದಲ್ಲಿ ಅವರಿಗೆ ಸಹಜ ಜೀವನದ ಮೂಲಭೂತ ಸುಖಸೌಕರ್ಯಗಳನ್ನು ನೀಡುವಂಥದು.

ಕೊನೆಯದಾಗಿ ಒಂದು ಮಾತು : ಅಲ್ಪವೆಚ್ಚದ ಯಾವುದೂ ಸುಂದರವಾಗಿರಲಾರದು. ಅದು ಅಗ್ಗವಾಗಿ, ಕೆಟ್ಟದಾಗಿ ಕಾಣುವಂಥದು ಎಂದು ಅನೇಕರು ನಂಬಿರುವುದುಂಟು. ಇಂಥ ವಾದವನ್ನು ನಾನು ಯಾವತ್ತೂ ಒಪ್ಪಲಾರೆ. ಪ್ರಪಂಚದ ಯಾವುದೇ ಭಾಗದ ಪ್ರಾಂತೀಯ, ಸ್ಥಳೀಯ ದೇಶೀಯ ವಾಸ್ತುವಿನ್ಯಾಸಗಳನ್ನು ನೋಡಿ, ಎಸ್ಕಿಮೊಗಳ ಇಗ್ಲು ಗಳಿಂದ ನಮ್ಮ ಮಣ್ಣಿನ ಮನೆಗಳ ವಿನ್ಯಾಸಗಳವರೆಗೆ ಕಣ್ಣು ಹಾಯಿಸಿ ನೋಡಿ, ಅಲ್ಲೆಲ್ಲ ಅತ್ಯಂತ ಸರಳವಾದ ಮಿತವ್ಯಯದ ಅಷ್ಟೆ ಚೆಲುವಾದ ಗಾಳಿ, ಬೆಳಕುಗಳ ಸಮತೋಲ ಅವಕಾಶದ ಆರು ಮಹಡಿಗಳಷ್ಟು ಎತ್ತರದ ಕಟ್ಟಡಗಳೂ ಉಂಟು, ಚೆಲುವಿಗೂ, ಹಣಕ್ಕೂ ಯಾವ ನಿಜನಂಟೂ ಇಲ್ಲ ಎಂಬುದಕ್ಕೆ ಆ ಸಾಂಪ್ರದಾಯಿಕ ದೇಶೀ ವಿನ್ಯಾಸದ ಕಟ್ಟಡಗಳೆ ಸಾಕ್ಷಿ, ಇಂದಿನ ನಿರ್ಮಾಣಕ್ರಮ ಮಾತ್ರ ತದ್ವಿರುದ್ಧದ ತತ್ವವನ್ನೇ ಪಾಲಿಸುತ್ತಿದೆ; ಅದು ಹೇರಳ ಹಣ ಸುರಿಸುರಿದು ಹೊಲಸು ರಾಶಿಯನ್ನೆ ಸೃಷ್ಟಿಸುತ್ತಿದೆ.

ನಿರ್ಮಾಣ ವಿಧಾನಗಳ ಬಗ್ಗೆ ಈಗ ನಡೆಯಬೇಕಾದ ಹೊಸ ಹುಡುಕಾಟ ಕೇವಲ ವಾಸ್ತುಶಾಸ್ತ್ರೀಯ ಹುಡುಕಾಟವಲ್ಲ. ಅದು ಅಂತಿಮವಾಗಿ ಸತ್ಯದ ಹುಟುಕಾಟ. ಬಡತನ ನಮ್ಮ ಜೀವನದ ವಸ್ತು ಸತ್ಯಗಳಲ್ಲೊಂದು, ಏನೇ, ಭವ್ಯ ಜಾಹೀರಾತು ಫಲಕಗಳ ಹಿಂದೆ, ಕಾದಿಟ್ಟ ಸಾಮಾಜಿಕ ಅರಣ್ಯಗಳ ಪೊಳ್ಳು ಹಸಿರಿನ ಹಿಂದೆ ನಾವು ಅದನ್ನು ಅಡಗಿಸಿಡಲು ಪ್ರಯತ್ನಿಸಿದರೂ ಬಡತನ ತನ್ನ

ಕ್ರೂರಮುಖವನ್ನು ಎಲ್ಲೊ ಒಂದೆಡೆ ತೋರುತ್ತಲೆ ಇರುತ್ತದೆ. ಬಡತನಕ್ಕೆ ಹಲವು ಕಾರಣಗಳುಂಟು. ಅವನ್ನು ತೆಗೆದು ಬುಡಸಮೇತ ಕಿತ್ತೆಸೆಯುವುದು ನಮ್ಮ ಪ್ರಥಮ ಕರ್ತವ್ಯವಾಗಬೇಕು. ಬಡತನವನ್ನು ನಿರ್ಮೂಲನ ಮಾಡಿ ಅದರ ಜಾಗದಲ್ಲಿ ಆತ್ಮಗೌರವವನ್ನು, ಉದ್ಯೋಗವನ್ನು ಉತ್ಪಾದನೆಯನ್ನು, ಸ್ವಾವಲಂಬನೆಯನ್ನು ಸ್ಥಾಪಿಸಲು ಹಲವು ಮಾರ್ಗಗಳುಂಟು. ಈ ಮಾರ್ಗಗಳು ಸಹಜವಾಗಿಯೆ ಮೂಲಭೂತ ಸೇವಾ ಸೌಕರ್ಯಗಳನ್ನು ಒಳಗೊಳ್ಳುತ್ತವೆ. ನಾವೆಲ್ಲಾ ಅಂಥ ಮಾರ್ಗಗಳನ್ನು ಅನ್ವೇಷಿಸಿಕೊಂಡು ಅವುಗಳ ನಿಷ್ಠ ಅನುಷ್ಠಾನದಲ್ಲಿ ತೊಡಗೋಣ.

**ಲೇಖಕರ ಪರಿಚಯ: ಲಾರಿ ಬೇಕರ್:** ಇವರು ಇಂಗ್ಲೆಂಡಿನಲ್ಲಿ ಜನಿಸಿದ ಭಾರತೀಯ ಮೂಲದ ಖ್ಯಾತ ವಾಸ್ತುಶಾಸ್ತ್ರಜ್ಞ. ಗಾಂಧೀಜಿಯವರ ಪ್ರೇರಣೆಯಿಂದ ಭಾರತಕ್ಕೆ ಬಂದ ಬೇಕರ್ ಸುಮಾರು ವರ್ಷಗಳಿಂದ ಕೇರಳದಲ್ಲಿ ನೆಲೆಸಿ ಸ್ಥಳೀಯ ವಸ್ತುಗಳನ್ನಷ್ಟೇ ಬಳಸಿ ಮಿತವ್ಯಯದ ಕಟ್ಟಡ ನಿರ್ಮಾಣ ವಿಧಾನಗಳನ್ನು ಅಭಿವೃದ್ಧಿಪಡಿಸುತ್ತಾ ಬಂದವರು.ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು.

ಪ್ರಸ್ತುತ ಲೇಖನ ದೆಹಲಿಯ ಇನ್‌ಸ್ಟಿಟ್ಯೂಟ್ ಅಪ್ ಸೋಷಿಯಲ್ ಸೈನ್ಸಸ್ ಸಂಸ್ಥೆ ಏರ್ಪಡಿಸಿದ್ದ ವಿಚಾರ ಸಂಕಿರಣವೊಂದರ ಆಶಯ ಭಾಷಣದ ಆಯ್ದ ಭಾಗ.

# ೩.ಭಾಷೆಯ ಮಾಂತ್ರಿಕತೆ

–ಡಾ. ಕೆ.ವಿ.ನಾರಾಯಣ

ಜಗತ್ತಿನಾದ್ಯಂತ ಎಲ್ಲ ದೇಶಗಳ ಐತಿಹ್ಯಗಳಲ್ಲಿ ಜನಪದ ಸಾಹಿತ್ಯದಲ್ಲಿ ಭಾಷೆಯ ಮಾಂತ್ರಿಕತೆಯ ಉಲ್ಲೇಖಗಳು ದೊರಕುತ್ತವೆ. ಮಾತಿಗೆ ಒಂದು ವಿಶಿಷ್ಟ ಅಲೌಕಿಕ ಶಕ್ತಿಯಿರುವುದನ್ನು ಎಲ್ಲ ಕಾಲದೇಶಗಳ ಜನರು ನಂಬಿ ಬಂದಿದ್ದಾರೆ. ಮಾತು ಬರಹವಾದಾಗ ಆ ಅಕ್ಷರ ರೂಪಕ್ಕೆ ಮತ್ತಷ್ಟು ಹೆಚ್ಚಿನ ಮಾಂತ್ರಿಕತೆ ಲಭಿಸುವುದೆಂಬ ನಂಬಿಕೆಗಳಿವೆ. ಬರಹಗಳನ್ನು ಓದಬಲ್ಲವರು, ಅರಿಯಬಲ್ಲವರು ಮಾತ್ರ ಆ ಮಂತ್ರಶಕ್ತಿಯನ್ನು ಬಳಸಬಲ್ಲರು ಹಾಗೂ ಹಿಡಿತದಲ್ಲಿಟ್ಟುಕೊಳ್ಳಬಲ್ಲರೆಂದು ತಿಳಿಯಲಾಗಿದೆ. ಭಾಷೆಗೆ ಈ ಶಕ್ತಿ ಒದಗಲು ಕಾರಣವೆಂದರೆ ಅದು ಮನುಷ್ಯರಿಗೆ ದೈವವಿತ್ತ ಕೊಡುಗೆಯಾಗಿರುವುದು. ಈ ನಂಬಿಕೆಯಿಂದಾಗಿ ಹಲವಾರು ಧಾರ್ಮಿಕ ಚಟುವಟಿಕೆಗಳು ಆಚರಣೆಗಳು ರೂಪುಗೊಂಡಿವೆ. ಮಾಂತ್ರಿಕೆಯುಳ್ಳ ಮಾತು ಬರೆಹಗಳ ಸುತ್ತಮುತ್ತ ಸಮುದಾಯಗಳ ಜೀವನಕ್ರಮ ಬೆಳೆಯುತ್ತ ಬಂದಿದೆ.

ಮಂತ್ರ, ಸ್ತೋತ್ರ, ನಾಮಾವಳಿ ಮುಂತಾದ ಭಾಷಾರೂಪಗಳಿಗೆ ವಿಶೇಷ ಶಕ್ತಿಯಿದೆಯೆಂದು ತಿಳಿದು ಆ ಶಕ್ತಿಯನ್ನು ಪಡೆಯಲು, ಆ ಮೂಲಕ ಲೋಕದಲ್ಲಿ ಬಲಶಾಲಿಯಾಗಲು ಆ ಭಾಷಾರೂಪಗಳನ್ನು ಉಚ್ಚರಿಸಲಾಗುತ್ತದೆ. ಹಾಗೆ ಉಚ್ಚರಿಸುವುದರಿಂದ ವಸ್ತುಗಳ ಮೇಲೆ ಜೀವಿಗಳ ಮೇಲೆ ಹಿಡಿತ ಸಾಧಿಸಲು ಸಾಧ್ಯವೆಂದು ಜನರು ಭಾವಿಸುತ್ತಾರೆ. ರೋಗಗಳನ್ನು ವಾಸಿಮಾಡಲು, ಅನಿಷ್ಟಗಳನ್ನು ಮೀರಿಸಲು, ಒಳಿತನ್ನು ಕೋರಲು ಇಂಥ ಭಾಷಾರೂಪಗಳನ್ನು ಬಳಸುವುದುಂಟು. ವರ ಮತ್ತು ಶಾಪಗಳೂ ಇಂಥ ವಿಶಿಷ್ಟ ಶಕ್ತಿಯುಳ್ಳ ಭಾಷಾರೂಪಗಳಷ್ಟೆ. ಕಲ್ಲಾಗಿ ಹೋಗು ಎಂದು ಶಪಿಸಿದಾಗ, ಹಾಗೆ ಉಚ್ಚರಿಸಿದಾಗ ವ್ಯಕ್ತಿ ಕಲ್ಲಾಗಿ ಹೋಗುವ ಪ್ರಸಂಗಗಳನ್ನು ಗಮನಿಸಿದರೆ ಶಾಪದ ಸ್ವರೂಪ ತಿಳಿಯುತ್ತದೆ, ಮಯೂರನೆಂಬಾತ ಸೂರ್ಯಶತಕವೆಂಬ ಸ್ತುತಿಯನ್ನು ಪಠಿಸಿದಾಗ ಅವನಿಗೆ ಬಂದಿದ್ದ ರೋಗ ವಾಸಿಯಾಯಿತಂತೆ. ಕೆಟ್ಟ ಕನಸುಗಳು ಬೀಳಬಾರದೆಂದು ಮಲಗುವಾಗ ಮಕ್ಕಳಿಗೆ ನಿರ್ದಿಷ್ಟ ಸ್ತೋತ್ರವೊಂದನ್ನು ಹೇಳಿಕೊಳ್ಳಲು ಕೆಲವರು ಕಲಿಸುವುದುಂಟು, ಮಾಂತ್ರಿಕ ಶಕ್ತಿಯುಳ್ಳ ಭಾಷಾರೂಪಗಳ ಪಾವಿತ್ರ್ಯವನ್ನು ಕಾಪಾಡಬೇಕೆಂದು ತಿಳಿಯುತ್ತದೆ. ಅವುಗಳನ್ನು ಖಚಿತವಾಗಿ ಉಚ್ಚರಿಸದಿದ್ದರೆ ಅಪಾಯಗಳು ಸಂಭವಿಸುತ್ತವೆಂಬ ನಂಬಿಕೆಗಳಿವೆ, ಖಚಿತ ಉಚ್ಚಾರಣೆ, ಪುನರಾವರ್ತನೆಗಳಿಂದ ಮಂತ್ರಶಕ್ತಿ ಹೆಚ್ಚಾಗುವುದೆಂಬ ತಿಳಿವಳಿಕೆಯಿದೆ. ಇಂಥ ಶಕ್ತಿಯುಳ್ಳ ಭಾಷಾರೂಪಗಳಿಗೆ ನಿರ್ದಿಷ್ಟವಾದ ಅರ್ಥವಿರಲೇಬೇಕೆಂದಿಲ್ಲ. ಅವುಗಳನ್ನು ಬಳಸದ ಜನರಿಗಂತೂ ಅವು ನಿರರ್ಥಕ ಶಬ್ದಸರಣಿಯಂತೆ ತೋರುತ್ತವೆ. ಆದರೆ ಸರಿಯಾಗಿ ಬಳಸುವುದರಿಂದ ಪರಿಣಾಮಕಾರಿಯಾಗುತ್ತವೆಂದು ತಿಳಿಯುತ್ತಾರೆ.

ಬರವಣಿಗೆ, ಅಕ್ಷರವನ್ನು ಮೊದಲ ಬಾರಿಗೆ ಕಂಡ ಆದಿವಾಸಿಗಳು ಅದರ ಬಗ್ಗೆ, ಅದರ ಸಾಮರ್ಥ್ಯದ ಬಗ್ಗೆ ಭಯಗ್ರಸ್ತವಾದ ನಿದರ್ಶನಗಳಿವೆ. ಅಕ್ಷರದಲ್ಲಿ ಶಕ್ತಿ ಸುಪ್ತವಾಗಿದ್ದು ಅದನ್ನು ಓದಿದವನಿಗೆ ವರವಾಗಲೂಬಹುದು ಇಲ್ಲವೇ ಶಾಪವಾಗಲೂಬಹುದೆಂದು ತಿಳಿಯುತ್ತಾರೆ. ಶಿಲಾಶಾಸನಗಳನ್ನು ಓದಿದವರು: ರಕ್ತ ಕಾರಿ ಸಾಯುತ್ತಾರೆಂಬ ನಂಬಿಕೆ ಇರುವಂತೆ ಬಹುಪಾಲು ಅಂಥ ಶಾಸನಗಳು ಹುದುಗಿಟ್ಟ 'ನಿಧಿ'ಯ ರಹಸ್ಯವನ್ನು ಸೂಚಿಸುತ್ತವೆಂದು ನಂಬುತ್ತಾರೆ.

ಆಧುನಿಕ ಕಾಲದಲ್ಲೂ ಭಾಷೆಯ ಮಾಂತ್ರಿಕ ಶಕ್ತಿಯ ಬಗ್ಗೆ ನಂಬುಗೆಗಳಿವೆ. ಜಾಹೀರಾತುಗಳು, ಇದಕ್ಕೊಂದು ನಿದರ್ಶನ, ಮಾತಿನ ಮೋಡಿ' ಎನ್ನುವ ಉಕ್ತಿಯಲ್ಲೇ ಮಾತಿಗಿರುವ ವಶೀಕರಣ ಶಕ್ತಿಯನ್ನು

ನಾವು ಸೂಚಿಸುತ್ತೇವೆ, ನೆಪೋಲಿಯನ್‌ನಂಥ ವಿಸ್ತರಣಾಕಾಂಕ್ಷಿಗಳು ಭಾಷೆಯ ಈ ಸಾಮರ್ಥ್ಯವನ್ನು ತಿಳಿದವರಾಗಿದ್ದರು. ಯುದ್ಧಪಡೆಗಳಿಗಿಂತ ವಾರ್ತಾಪತ್ರಿಕೆಗಳು ಶಕ್ತಿಶಾಲಿಯೆಂದು ಅವನು ತಿಳಿದಿದ್ದನು. ಹಾಗೆಯೇ ಒಂದು ರಾಷ್ಟ್ರದ ಪ್ರಭಾವದ ಏರಿಳಿತ ಅದರ ಬರಪಣಿಗೆಯ ವ್ಯಾಪಕತೆಯನ್ನು ಅವಲಂಬಿಸಿರುವುದು ಗೋಚರಿಸುತ್ತದೆ. ಆದ್ದರಿಂದಲೇ, ಅಧೀನ ರಾಷ್ಟ್ರವೊಂದರ ಅಧೀನತೆಯನ್ನು ಗಟ್ಟಿಗೊಳಿಸಲು ಆ ಉದ್ದದ ಗ್ರಂಥ ಭಂಡಾರವನ್ನು ಸುಟ್ಟುಬೂದಿ ಮಾಡುತ್ತಿದ್ದರು.

**ಮಾತಿನಲ್ಲಿ ನಿಷೇಧಗಳು**.

ಎಲ್ಲ ಸಮುದಾಯಗಳು ಕೆಲವು ವ್ಯವಹಾರಗಳನ್ನು, ಆಚರಣೆಗಳನ್ನು, ಸಂಬಂಧಗಳನ್ನು ಒಪ್ಪುವುದಿಲ್ಲ. ಅಥವಾ ಮುಚ್ಚಿಡಲು ಬಯಸುತ್ತದೆ. ಈ ಎಲ್ಲ ವ್ಯವಹಾರ, ಆಚರಣೆಗಳಿಗೆ ಆಯಾ ಭಾಷೆಗಳಲ್ಲಿ ಪ್ರತ್ಯೇಕ ಪದಗಳಿದ್ದರೂ ಆ ಪದಗಳ ಬಳಕೆಯ ಬಗ್ಗೆ ಕೆಲವು ನಿಷೇಧಗಳಿರುತ್ತವೆ, ಈ ನಿಷೇಧವನ್ನು ಉಲ್ಲಂಘಿಸಿ, ಆ ಪದಗಳನ್ನು ಬಳಸುವ ಮೂಲಕ ಆ ಸಾಮಾಜಿಕ ಒಪ್ಪಂದವನ್ನು ಕೆಲವರು ಮುರಿಯಬಹುದು, ಆದರೆ ಸಮುದಾಯ ಇಂಥ ಉಲ್ಲಂಘಟನೆಯನ್ನು ಅಪರಾಧವೆಂದು ತಿಳಿಯುತ್ತದೆ. ಭಾಷೆಯಲ್ಲಿರುವ ನಿಷೇಧಿತ ಪದಗಳು ಸಾಮಾನ್ಯವಾಗಿ ದೇಹದ ಕೆಲವು ಅಂಗಗಳಿಗೆ, ದೇಹ ಸಂಬಂಧಕ್ಕೆ, ಕೆಲವು ಅತೀತ ಶಕ್ತಿಗಳಿಗೆ, ದೇಹದಿಂದ ತ್ಯಾಜ್ಯವಾದ ವಸ್ತುಗಳಿಗೆ,ಸಾವು ಮೊದಲಾದ ಅಶುಭ ಸಂಗತಿಗಳಿಗೆ ಸಂಬಂಧಿಸಿರುತ್ತವೆ. ಕೆಲವು ಸಂಸ್ಥೆಗಳಲ್ಲಿ ಈ ಮೇಲಿನ ಸಂದರ್ಭಗಳಲ್ಲದೆ ಇನ್ನೂ ಕೆಲವು ಬಗೆಯ ಪದಗಳ ಬಳಕೆಯನ್ನು ನಿಷೇಧಿಸಿರುವುದುಂಟು, ನಿಷೇಧಿತ ಪದಗಳ ಬಳಕೆ ಸರ್ವತ್ರವಾಗಿರುವಂತೆ ಕೆಲವೊಮ್ಮೆ ನಿರ್ದಿಷ್ಟ ಸಂದರ್ಭಗಳಿಗೆ ಸೀಮಿತವೂ ಆಗಿರುವುದುಂಟು. ಉಪ್ಪು' ಪದವನ್ನು ಕನ್ನಡಿಗರು ಬಳಸುತ್ತಿದ್ದರೂ ಕೆಲವು ಪ್ರದೇಶಗಳಲ್ಲಿ, ಊಟ ಮಾಡುವಾಗ 'ಉಪ್ಪು' ಎನ್ನುವುದಿಲ್ಲ, 'ಸಕ್ಕರೆ' ಎಂದಾರು. ಎಣಿಸುವಾಗ, ಅದರಲ್ಲೂ ಅಳತೆ ಮಾಡುವಾಗ 'ಒಂದು' 'ಏಳು' ಮತ್ತು 'ಹನ್ನೊಂದು' ಎಂಬ ಸಂಖ್ಯೆಗಳನ್ನು ಉಚ್ಚರಿಸುವುದಕ್ಕೆ ನಿಷೇಧವಿದೆ. ಬದಲಾಗಿ 'ಲಾಭ' ಅಥವಾ ಹಿಂದಿನ ಸಂಖ್ಯೆ ನಂತರ 'ಮತ್ತೊಂದು' ಎಂದೋ ಹೇಳುವುದುಂಟು. (ಐದು, ಆರು, ಮತ್ತೊಂದು, ಎಂಟು, ಒಂಬತ್ತು, ಹತ್ತು, ಮತ್ತೊಂದು, ಹನ್ನೆರಡು..) 'ಹಾವು' ಎನ್ನಬಾರದು. ಹುಲಿಯೆನ್ನಬಾರದು ಅದನ್ನು 'ನರಿ' ಎನ್ನಬೇಕು. ಬೇರೆ ಬೇರೆ ಸಂಸ್ಕೃತಿಗಳಲ್ಲಿ ಇಂಥ ನಿಷೇಧಗಳ ನಿದರ್ಶನಗಳು ಹಲವಾರಿವೆ, ನವ ಮೆಕ್ಸಿಕೋದ ಜುನೀ ಪಂಗಡದ ಜನರು ಆಚರಣೆಗಳ ಸಂದರ್ಭದಲ್ಲಿ ಕಪ್ಪೆಯನ್ನು ಹೆಸರಿಸುವುದಿಲ್ಲ. ದಕ್ಷಿಣ ಅಮೆರಿಕಾದ ಜನರು ಔಪಚಾರಿಕ ಮಾತುಕತೆಗಳಲ್ಲಿ ಗೂಳಿಯನ್ನು ಸೂಚಿಸುವ ಪದವನ್ನು ಬಳಸದೆ ಬದಲಾಗಿ ಗಂಡು ಹಸು, ಗಂಡು ಪ್ರಾಣಿ ಎಂದೆಲ್ಲ ಸುತ್ತು ಬಳಸಿ ಮಾತಾಡುವುದುಂಟು, ಪದಗಳ ಬಳಕೆಗೆ ನಿಷೇಧವಿದ್ದರೂ, ಕೆಲವು ಬಾಯಿ ತಪ್ಪಿಯೋ, ಮರೆವಿನಿಂದಲೇ ಅಥವಾ ಉದ್ದೇಶಪೂರ್ವಕವಾಗಿ ನಿಷೇಧಿತ ಸಂದರ್ಭದಲ್ಲಿ ಆ ಪದಗಳನ್ನು ಬಳಸುವುದುಂಟು, ಹೀಗೆ ಬಳಕೆಯಾದ ಕೂಡಲೇ ಕೆಲವು ಭಾಷಿಕ ಪ್ರತಿಕ್ರಿಯೆಗಳು ಮತ್ತೆ ಕೆಲವು ಭಾಷೇತರ ಪ್ರತಿಕ್ರಿಯೆಗಳು ಉಂಟಾಗುತ್ತದೆ. ಇವು ಬೇರೆ ಬೇರೆಯಾಗಿರುವಂತೆ, ಒಟ್ಟಾಗಿಯೂ ಇರುವುದುಂಟು, ಅಶುಭ ಸೂಚಕ: ನಿಷೇಧಿತ ಪದಗಳನ್ನು ಬಳಸಿದ ಕೂಡಲೇ ಕನ್ನಡಿಗರಲ್ಲಿ ಕೆಲವರು 'ಬಿಡ್ತು" ಅನ್ನುವುದುಂಟು. ಅಲ್ಲದೇ ಆ ಪದಗಳನ್ನು ಹೇಳಿದ ವ್ಯಕ್ತಿಯಿಂದಲೂ 'ಬಿಡ್ತು' ಎಂದು ಹೇಳಿಸುತ್ತಾರೆ, ಮುಸ್ಲಿಮರು ಇಂಥದೇ ಸಂದರ್ಭಗಳಲ್ಲಿ 'ತೋಬಾ' ಎನ್ನುತ್ತ ಕೆನ್ನೆಗಳೆರಡನ್ನೂ ಬೆರಳುಗಳಿಂದ ಮುಟ್ಟಿಕೊಳ್ಳುತ್ತಾರೆ. ಕ್ರಿಶ್ಚಿಯನ್ನರು ಕೇವಲ ಭಾಷೇತರ ಪ್ರತಿಕ್ರಿಯ ಸೂಚಿಸುತ್ತಾರೆ. ದೇಹದ ಮುಂಬದಿಯಲ್ಲಿ ಶಿಲುಬೆಯ ಆಕಾರವನ್ನು ಬರೆದು ಕೊಳ್ಳುವುದೇ ಆ ಪ್ರತಿಕ್ರಿಯೆ.

ನಿಷೇಧಗಳ ಉಲ್ಲಂಘನೆ ಕೆಲವೊಮ್ಮೆ ಜಗಳ, ಬಡಿದಾಟಗಳಿಗೆ ಕಾರಣವಾಗುತ್ತದೆ, ಅಶ್ಲೀಲವೆಂದು ಪರಿಗಣಿಸಲಾದ ಪದಗಳು ಬಳಸಿದರೆ ಇಂಥ ಜಗಳಗಳು ಮಾತ್ರವಲ್ಲದೆ ಕಾನೂನಿನ ಕ್ರಮಗಳನ್ನು ಜರುಗಿಸಲೂಬಹುದು. ನಿಷೇಧಿತ ಪದಗಳ ಉಚ್ಚಾರ ಮತ್ತು ಬರವಣಿಗೆಗಳಿರು ಸಾಮಾಜಿಕವಾಗಿ ಅಪರಾಧ, ಚಲನಚಿತ್ರಗಳಲ್ಲಿ ಇಂಥ ಪದಗಳನ್ನು ಬಳಸುವು ಅಂಥದನ್ನು ಅಳಿಸಿ ಹಾಕುವ ಸೆನ್ಸಾರ್ ಮಂಡಲಿಯಿದೆ, ಶಾಸನ ಸಭೆಗಳಲ್ಲಿ "ಅನ್ ಪಾರ್ಲಿಮೆಂಟರಿ'ಯೆಂದು ಸೂಚಿಸಲಾದ ಪದಗಳನ್ನು ಬಳಸಿದರೆ ಅಂಥ ಉಲ್ಲೇಖಗಳನ್ನು ಅಧಿಕೃತ ದಾಖಲೆಗಳಿಂದ 'ತೆಗೆದು' ಹಾಕಲಾಗುತ್ತದೆ.

ಈಗಾಗಲೇ ಸೂಚಿಸಿದಂತೆ ನಿಷೇಧಿತ ಪದಗಳನ್ನು ಸಂಕಥನದಲ್ಲಿ ನಿವಾರಿಸಲು ಪರ್ಯಾಯ ಪದಗಳನ್ನು ಬಳಸುಮಾತುಗಳನ್ನು ಭಾಷೆಯಲ್ಲಿ ರೂಪಿಸಿಕೊಳ್ಳಲಾಗುತ್ತದೆ, ಸಾಯು ಎಂಬುದನ್ನು ಹೇಳುವ ಬದಲು ಕನ್ನಡದಲ್ಲಿರುವ ಪರ್ಯಾಯಗಳನ್ನು ಗಮನಿಸಿ, ಮೃತಿಹೊಂದು, ಮರಣ ಹೊಂದು, ಶಿವಕ್ಯವಾಗು, ಲಿಂಗೈಕ್ಯವಾಗು, ಸ್ವರ್ಗವಾಸಿಯಾಗು ಕೈಲಾಸವಾಸಿಯಾಗು, ವೈಕುಂಠವಾಸಿಯಾಗು, ಪಂಚಭೂತಗಳಲ್ಲಿ ಲೀನವಾಗು, ದೇಹ ತ್ಯಾಗಮಾಡು, ದೇಹ ಮುಡುಪಿಡು, ಪರಂಧಾಮವನ್ನೈದು, ಮುಕ್ತಿಹೊಂದು, ಭವವಿಮೋಚನೆ ಪಡೆ, ಹೀಗೆ ಇನ್ನೂ ಹಲವು ಔಪಚಾರಿಕ ಉಕ್ತಿಗಳಿವೆ, ಅನೌಪಚಾರಿಕವಾಗಿ ನೆಗೆದು ಬೀಳು, ಗೂಟಕ್ ಅನ್ನು,ಹಳೆರಾಗಿ ತರಲು ಹೋಗು, ಕಂತೆ ಒಗಿ, ಲೆಕ್ಕಮುಗಿಸು, ಅಂಗಡಿ ಮುಚ್ಚು, ಮುಂತಾದ ಮಾತುಗಳಿವೆ.

**ಹೆಸರುಗಳು:**

ಜಗತ್ತಿನಾದ್ಯಾಂತ ಈಗ ತಿಳಿದಿರುವಂತೆ ಎಲ್ಲ ಸಮುದಾಯಗಳಲ್ಲೂ ಪ್ರತಿ ವ್ಯಕ್ತಿಗೂ ಒಂದು ಹೆಸರು ಇರುತ್ತದೆ. ಹೆಸರಿಡುವುದು ಒಂದು ಮುಖ್ಯ ಜಾತಕರ್ಮ, ವ್ಯಕ್ತಿಗೂ ಹೆಸರಿಗೂ ಸಂಬಂಧ ನಿಕಟವಾಗಿರುತ್ತದೆ, ಆದರೆ ಹೆಸರಿಗೆ ವ್ಯಕ್ತಿಯನ್ನು ಹೊರತುಪಡಿಸಿಯೂ ಪ್ರತ್ಯೇಕ ಅಸ್ತಿತ್ವ ಕೆಲವೊಮ್ಮೆ ಲಭಿಸುವುದುಂಟು, ಅಪರಿಚಿತರು, ಕಾಲದೇಶಗಳಲ್ಲಿ ಭಿನ್ನವಾಗಿರುವವರು ವ್ಯಕ್ತಿಯ ಹೆಸರಿಗೆ ಪರಿಚಿತರಾಗಿರುವುದು ಸಾಧ್ಯ. ಎಷ್ಟೋ ಸಂದರ್ಭದಲ್ಲಿ ನಮಗೆ ಹೆಸರಷ್ಟೇ ನಿಜವಾಗಿರುತ್ತದೆ. ವ್ಯಕ್ತಿ ಸಂಪೂರ್ಣ ಗೌಣವಾಗುವುದುಂಟು.

ಹೆಸರಿಗೆ ಇರುವ ಈ ಶಕ್ತಿ ಸಾಮರ್ಥ್ಯವನ್ನು ಜನರು ಬಲ್ಲರು. ತಮ್ಮ ಶಕ್ರಿಯೆಲ್ಲವು ನಮ್ಮ ಹೆಸರಿನಲ್ಲಿ ಅಡಕವಾಗಿದೆಯೆಂದು ತಿಳಿಯುವ ಜನಾಂಗಗಳಿವೆ, ಅವರು ವ್ಯಕ್ತಿಯ ನಿಜನಾಮವನ್ನು ಶತ್ರುಗಳಿಂದ ಬಚ್ಚಿಟ್ಟಿರುತ್ತಾರೆ. ನ್ಯೂಜಿಲೆಂಡಿನ ಒಂದು ಬುಡಕಟ್ಟಿನ ಜನರು ತಮ್ಮ ಪ್ರತಿ ವ್ಯಕ್ತಿಗೂ ಒಂದು ಗುಪ್ತನಾಮವನ್ನು ಇರಿಸಿರುತ್ತಾರೆ. ಆ ಹೆಸರು ಅತ್ಯಂತ ಆಪ್ತರಿಗೆ ಮಾತ್ರ ತಿಳಿದಿರುತ್ತದೆ. ಉಳಿದವರು ಆ ವ್ಯಕ್ತಿಗೆ ಇರುವ ಇನ್ನೊಂದು ಹೆಸರನ್ನು ಬಳಸುತ್ತಿರುತ್ತಾರೆ. ಈ ಗುಪ್ತನಾಮ ಶತ್ರುವಿಗೆ ತಿಳಿಯಿತೆಂದರೆ ಈ ವ್ಯಕ್ತಿಯ ಮೇಲೆ, ಶತ್ರು ಸಂಪೂರ್ಣ ಹಿಡಿತ ಸಾಧಿಸಿದಂತೆ.

ಹೆಸರುಗಳನ್ನು ಹೇಳುವ ಕ್ರಮದಲ್ಲೂ ಕೆಲವು ವಿಶೇಷಗಳಿವೆ. ಹೆಂಗಸರು ತಮ್ಮ ಗಂಡನ ಹೆಸರನ್ನು ಹೇಳುವುದಿಲ್ಲ. ತೋಡರು ತಮ್ಮ ಹೆಸರನ್ನು ಹೇಳಲು ಇಚ್ಛಿಸುವುದಿಲ್ಲ. ಹೇಳಲೇಬೇಕಾಗಿ ಬಂದರೆ ಪರಿಚಿತರು ಆ ಹೆಸರನ್ನು ಹೇಳುವಂತೆ ಮಾಡುತ್ತಾರೆ, ಅಪರಿಚಿತರಿಗೆ ತಮ್ಮ ತಮ್ಮ ಹೆಸರುಗಳನ್ನು ತಿಳಿಯಬಾರದೆಂಬ ಉದ್ದೇಶದಿಂದ ಕೆಲವು ಜನಾಂಗಗಳ ಜನರು ತಾವು ಮಾತನಾಡಿಕೊಳ್ಳುವಾಗ ಪರಸ್ಪರನನ್ನು ಹೆಸರು ಹಿಡಿದು ಕರೆಯುವುದಿಲ್ಲ. ಕತೆಗಳಲ್ಲಿ ದುಷ್ಟರಾದವರನ್ನು ಸದೆ ಬಡಿಯಲು ಅವರ ಹೆಸರನ್ನು ಪತ್ತೆ ಮಾಡುವುದು ಒಂದು ತಂತ್ರವಾಗಿ ಕಂಡುಬರುತ್ತದೆ.

ಹೆಸರುಗಳನ್ನು ಬದಲಿಸುವ ಪ್ರಕ್ರಿಯೆಯೊಂದಿದೆ. ತಮಗೆ ಬೇಕಾದ ಹೆಸರನ್ನು ಇಡುವ ಮೂಲಕ ಆ ವ್ಯಕ್ತಿ, ವಸ್ತು, ಪ್ರದೇಶಗಳ ಮೇಲೆ ಹಿಡಿತ ಸಾಧಿಸಬಹುದೆಂಬ ನಂಬಿಕೆ ಇಂಥ ಬದಲಾವಣೆಗಳ ಹಿಂದೆ ಇರುತ್ತದೆ, ಭೂತಕಾಲದೊಡನೆ ಸಂಬಂಧ ಕಳಚಲು ಹೆಸರನ್ನು ಬದಲಾಯಿಸುವ ತಂತ್ರವನ್ನು ಬಳಸಲಾಗುತ್ತದೆ. ಸನ್ಯಾಸದೀಕ್ಷೆ ಪಡೆದಾಗ ಮೊದಲ ಹೆಸರಿನ ಬದಲು ಇನ್ನೊಂದು ಹೊಸ ಹೆಸರಿಡುವುದು. ಹೀಗೆ ಭೂತಕಾಲದ ಬಿಡುಗಡೆ ಪಡೆಯುವ ಕಾರಣದಿಂದ.

ವ್ಯಕ್ತಿ ಸತ್ತಾಗ ಆ ವ್ಯಕ್ತಿಯ ಹೆಸರು ಮಾತ್ರ ಉಳಿಯುವುದಷ್ಟೆ ಕೆಲವು ಸಂಸ್ಕೃತಿಗಳು ಸತ್ತವರ ಮರೆಯಲು ಯತ್ನಿಸುತ್ತವೆ. ಪಾಲಿನೇಶಿಯನ್ ಜನಾಂಗಗಳಲ್ಲಿ ವ್ಯಕ್ತಿಯೊಬ್ಬರು ಸತ್ತ ಕೂಡಲೇ ಆ ಹೆಸರುಳ್ಳವರೆಲ್ಲರ ಹೆಸರನ್ನು ಬದಲಾಯಿಸುತ್ತಾರೆ. ಇದರಿಂದಾಗಿ ಸತ್ತವರ ಹೆಸರನ್ನು ಉಚ್ಚರಿಸುವುದನ್ನು ತಪ್ಪಿಸುತ್ತಾರೆ. ಮತ್ತೆ ಕೆಲವು ಜನಾಂಗಗಳಲ್ಲಿ ಇದಕ್ಕೆ ವಿರುದ್ಧವಾದ ನಡವಳಿಕೆಯಿದೆ, ಸತ್ತವರ ಹೆಸರನ್ನು ಬೇರೆ ಯಾರಿಗಾದರೂ ಇಡದಿದ್ದಲ್ಲಿ ಆ ವ್ಯಕ್ತಿಯ ಆತ್ಮ ಹಿಂಸೆಪಡುವುದೆಂದು ಅವರು ತಿಳಿಯುತ್ತಾರೆ, ಹೀಗಾಗಿ ಸತ್ತವರ ಹೆಸರನ್ನು ಕುಟುಂಬದ ನವಜಾತ ಶಿಶುವಿಗೆ ಇರಿಸುತ್ತಾರೆ. ಕನ್ನಡ ಭಾಷಿಕರಲ್ಲೂ ಇಂಥ ಪದ್ಧತಿಗಳಿವೆ. ಒಂದು ತಲೆಮಾರಿನ ಹೆಸರನ್ನು ಮೂರನೆ ತಲೆಮಾರಿಗೆ ದಾಟಿಸುತ್ತಾರೆ. ಅಜ್ಜ ಅಜ್ಜಿಯರ ಹೆಸರನ್ನು ಮೊಮ್ಮಗ ಮೊಮ್ಮಗಳಿಗೆ ಇಡುವ ಪದ್ಧತಿಯಿಂದ ಸಾವನ್ನು ದೂರವಿಡಲು ಹೆಸರನ್ನು ಬಳಸುವುದುಂಟು.

ಮಗು ಸಾಯದಿರಲೆಂದು ಅದಕ್ಕೆ ಕ್ಷುಲ್ಲಕವಾದ ಹೆಸರನ್ನು ಇಡುತ್ತಾರೆ, ಆ ಹೆಸರು ಗಹನವಲ್ಲವಾದ್ದರಿಂದ ಆ ಹೆಸರು ಹೊತ್ತ ಮಗುವೂ ಕ್ಷುದ್ರವೆಂದು ಸಾವು ತಿಳಿದು ಆಗ ಆ ಮಗುವನ್ನು ಬದುಕಲು ಬಿಡುವುದೆಂದು ತಿಳಿಯುತ್ತಾರೆ. ಮತ್ತೆ ಕೆಲವರಲ್ಲಿ ಸಾವನ್ನು ದೂರವಿಡಲು 'ಸಾವಿಲ್ಲದ ಹೆಸರನ್ನು ಇಡುತ್ತಾರೆ. ಗುಂಡ, ತಿಪ್ಪೆ, ಮುಂತಾದವು ಇಂಥ ಹೆಸರುಗಳು, ಅಚಲವಾದ ಕಲ್ಲು ಮತ್ತು ಎಂದೂ ಬರಿದಾಗದ ತಿಪ್ಪೆ ಸಾವನ್ನು ದೂರವಿಡುವ ಹೆಸರೆಂದು ಜರ ಬಾರಿಸುತ್ತಾರೆ. ಇಂಥ ನಂಬಿಕೆ ನಡವಳಿಕೆಗಳು ಆದಿವಾಸಿಗಳಿಗೆ ಮಾತ್ರ ಸೀಮಿತವೆಂದು ತಿಳಿಯಬಾರದು. ಪೌರಸಮಾಜಗಳಲ್ಲೂ ಇಂಥ ನಂಬಿಕೆಗಳು ಒಂದಿಲ್ಲೊಂದು ರೀತಿಯಲ್ಲಿ ಕಂಡುಬರುತ್ತವೆ, ಶಕುನಿ, ದುರ್ಯೋಧನ, ದುಶ್ಯಾಸನ ಎಂಬ ಹೆಸರುಗಳನ್ನು ದೂರವಿರಿಸುತ್ತಾರೆ, ಅಶುಭ ಸೂಚಕವೆನಿಸಿದ್ದನ್ನು ನಿವಾರಿಸಿಕೊಳ್ಳುತ್ತಾರೆ. ಹೆಸರುಗಳಿಗೆ ಇರುವ ಇಂಥ ಸಾಮರ್ಥ್ಯದ ಬಗ್ಗೆ ಈಗ ಜನ ಎಷ್ಟೇ ಗೇಲಿ ಮಾಡಿದರೂ ಮೂಲದಲ್ಲಿ ಅಳುಕು ನಂಬಿಕೆ ಹೇಗೋ ಉಳಿಯುತ್ತದೆ. ಕಳೆದ ಶತಮಾನದ ಭೀಕರ ಸಾಗರ ದುರ್ಘಟನೆಗೆ ತುತ್ತಾದ ಹಡಗೊಂದರ ಹೆಸರು ಟೈಟಾನಿಕ್, ಮತ್ತೆ ಯಾರಾದರೂ ಆ ಹೆಸರನ್ನು ಹಡಗೊಂದಕ್ಕೆ ಇಡಬಹುದೆ?

**ಪದಗಳ ಮಂತ್ರ ಶಕ್ತಿ**

ಕೆಲವೊಮ್ಮೆ ಊರಿನ ಹೆಸರುಗಳಿಗೆ ವಿಶಿಷ್ಟ ಸಾಮರ್ಥ್ಯ ಆರೋಪಿತವಾಗುತ್ತದೆ, ಚರಿತ್ರೆಯ ನೆನಪನ್ನು ಅಳಿಸಿಹಾಕುವ ಉದ್ದೇಶದಿಂದ ಸ್ಥಳಗಳ ಹೆಸರನ್ನು ಬದಲಾಯಿಸುವುದುಂಟು, ರೋಡಿಶಿಯಾ ಎಂಬ ವಸಾಹತು ಜಿಂಬಾಬ್ವೆ ಎಂದು ಹೆಸರು ಪಡೆಯಿತು. ಅದರ ರಾಜಧಾನಿ ಸ್ಯಾಲಿಸ್ ಬರಿಗೆ 'ಹರಾರೆ' ಎಂದು ಹೆಸರಿಟ್ಟಿದ್ದಾರೆ. ಬಾಂಬೆಯನ್ನು (ಬೊಂಬಾಯಿ) ಮುಂಬೈಯೆಂದೂ ಪೂನಾವನ್ನು ಪುಣೆಯೆಂದು ಕರೆಯಲುಪಕ್ರಮಿಸಿರುವುದು ನೆರೆಯ ಉದಾಹರಣೆಗಳು, ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಹೆಸರಿಸಲು ಒತ್ತಾಯಿಸುವ ಚಳುವಳಿಯಲ್ಲಿ ಕರ್ನಾಟಕವೆಂದರೆ ಬರಿಯ ಹೆಸರಲ್ಲ, ಅದೊಂದು ಮಂತ್ರವೆಂಬ ಮಾತೂ ಕೇಳಿ ಬಂದಿತ್ತು.

**ಲೇಖಕರ ಪರಿಚಯ: ಕೆ.ವಿ. ನಾರಾಯಣ**

ಕೆ.ವಿ. ನಾರಾಯಣ ಅವರು ಹುಟ್ಟಿದ್ದು ೧೯೪೪ರಲ್ಲಿ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕಂಪಲಾಮರದಲ್ಲಿ, ಕರ್ನಾಟಕದಲ್ಲಿ ಸಮುದಾಯ ಚಳುವಳಿಯನ್ನು ಹುಟ್ಟುಹಾಕಿದವರಲ್ಲಿ ಒಬ್ಬರಾದ ಕೆ.ವಿ.ಎನ್. ಬೋಧಿಸಿದ್ದು ಸಾಹಿತ್ಯ ಸಾಹಿತ್ಯ ಮೀಮಾಂಸೆ ಮತ್ತು ಭಾಷಾವಿಜ್ಞಾನ. ಬರಹಗಾರರಾಗಿ, ವಿಮರ್ಶಕರಾಗಿ, ಭಾಷಾ ವಿಜ್ಞಾನಿಯಾಗಿ, ಚಿಂತಕರಾಗಿ ಅಲ್ಲದೇ ನಟನೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ಸಮುದಾಯಕ್ಕಾಗಿ ರೂಪಿಸಿದ ನಾಟಕಗಳು **'ಹುತ್ತವ ಬಡಿದರೆ'**, ಬೇರು,ಕಾಂಡ,ಚಿಗುರು, ಭಾಷೆಯ ಸುತ್ತಮುತ್ತ, ನಮ್ಮೊಡನೆ ನಮ್ಮ ನುಡಿ, ಧ್ವನ್ಯಾಲೋಕ ಒಂದು ಅಧ್ಯಯನ, ಕನ್ನಡ ಜಗತ್ತು ಅರ್ಧಶತಮಾನ – ಇವು ಇವರು ಬರೆದ ಪುಸ್ತಕಗಳು.

ಇವರ ಸಮಗ್ರ ಬರವಣಿಗೆಯ ಒಂಬತ್ತು ಸಂಪುಟಗಳು 'ತೊಂಡುಮೇವು ಹೆಸರಿನಲ್ಲಿ ಪ್ರಕಟವಾಗಿವೆ.

## ೪. ತೆರೆದ ಮನ –ಎ.ಎನ್.ಮೂರ್ತಿರಾವ್ (ಓದು ಪಠ್ಯ)

ಸಾಮಾನ್ಯವಾಗಿ ಎಲ್ಲ ವಿಷಯಗಳನ್ನು ಎರಡು ದೃಷ್ಟಿಗಳಿಂದ –ಕೊನೆಯಪಕ್ಷ ಎರಡು ದೃಷ್ಟಿಗಳಿಂದಲಾದರೂ ನೋಡುವುದು – ಸಾಧ್ಯ. ಜೀವಾತ್ಮ ಪರಮಾತ್ಮರಿಬ್ಬರೂ ಒಂದೇ ಎನ್ನಬಹುದು, ಬೇರೆಬೇರೆ ಎಂದೂ ಹೇಳಬಹುದು, ಒಬ್ಬ ಮನುಷ್ಯ ಒಳ್ಳೆಯವನು ಎನ್ನಿಸಬಹುದು. ಅದೇ ಮನುಷ್ಯನ ವಿಷಯದಲ್ಲಿ ದುರ್ಗುಣಗಳ ಆರೋಪ ಬರಬಹುದು; ನಾವು ಮಾಡಬೇಕೆಂದಿರುವ ಯಾವುದೋ ಕೆಲಸ ನ್ಯಾಯ ಎಂದು ತೋರಬಹುದು, ಅದೇ ಕೆಲಸ ಮತ್ತೊಂದು ವೇಳೆ ಅಥವಾ ಮತ್ತೊಬ್ಬರಿಗೆ ಅನ್ಯಾಯ ಎಂದು ತೋರಬಹುದು, ಹೀಗೆ ಒಂದಕ್ಕೊಂದು ವಿರುದ್ಧವಾದ ಎರಡು ಅಭಿಪ್ರಾಯಗಳು ಮುಂದಿರುವಾಗ, ನಮ್ಮ ಮನೋಮಾರ್ಗ ಕವಲೊಡೆದು ನಿಂತಾಗ, ಅವೆರಡರಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು ಎಂಬುದು ತೋರದೆ ಮನಸ್ಸು ಹೊಯ್ದಾಟಕ್ಕೆ ಒಳಗಾಗುತ್ತದೆ. ಇಂಥ ಸಮಯದಲ್ಲಿ ಥಟ್ಟನೆ ಒಂದು ನಿರ್ಣಯಕ್ಕೆ ಬರುವುದು ಕಷ್ಟ. ನಮ್ಮ ಮನಸ್ಸು ಮೊದಲೇ ಒಂದು ಕಡೆಗೆ ಬಲವಾಗಿ ಒಲೆದಿರಬಹುದು. ಒಂದು ದಾರಿ ನಮ್ಮ ಸ್ವಭಾವಕ್ಕೆ ಹೆಚ್ಚು ಒಗ್ಗುವಂಥದು, ಮತ್ತೊಂದು ನಮಗೆ ಇಷ್ಟವಲ್ಲದ್ದು, ಆದರೆ ನಮಗೆ ಇಷ್ಟವಲ್ಲದ್ದೇ ಒಳ್ಳೆಯ ಮಾರ್ಗವಿರಬಹುದು; ಅಥವಾ ಕೆಟ್ಟದಲ್ಲದಿರಬಹುದು, ಇಷ್ಟವಾದದ್ದು ಕೆಟ್ಟದಿರಬಹುದು. ಕೆಲವು ಅಮೆರಿಕನ್‌ರಿಗೆ ನೀಗ್ರೊಗಳ ತಲೆ, ಕಂಡರೆ ಆಗುವುದಿಲ್ಲ; ಅಂದಮಾತ್ರಕ್ಕೆ ವರ್ಣದ್ವೇಷ ನ್ಯಾಯವಲ್ಲ, ಇಂದು ಭಾರತದಲ್ಲಿ ಅನೇಕರಿಗೆ ಇಂಗ್ಲಿಷ್ ಭಾಷೆಯ ಹೆಸರೆತ್ತಿದರೆ ಆಗದು; ಅದಕ್ಕಾಗಿ ಇಂಗ್ಲಿಷಿಗೆ ಬಹಿಷ್ಕಾರ ಹಾಕುವುದು ಸರಿಯಲ್ಲ, ಐವತ್ತು ವರ್ಷಗಳ ಹಿಂದಿನ ಹಿರಿಯರಿಗೆ 'ಕ್ರಾಪ್' ಮಾಡಿಸಿಕೊಂಡ ತಲೆಯನ್ನು ಕಂಡರೆ ಕಣ್ಣು ಉರಿಯುತ್ತಿತ್ತು, ಆದರೆ ಕ್ರಾಪ್ ಮಾಡಿಸಿಕೊಂಡವರೆಲ್ಲ ಕೇಡಿಗರಲ್ಲವಷ್ಟೆ! ಇಂದಿನ ಹಿರಿಯರಿಗೆ ಕೆನ್ನೆಯ ಮೇಲೆ ನಾಲ್ಕು ಅಂಗುಲ ಕೂದಲನ್ನು ಬಿಟ್ಟು ಕ್ಷೌರ ಮಾಡಿಸಿಕೊಳ್ಳುವುದು ವಿಕಾರವಾಗಿ ಕಾಣುತ್ತದೆ, ಯುವಕರಿಗೆ ಅದೇ ಸುಂದರವಾಗಿ ಕಾಣುತ್ತದೆ.

ಇಂಥ ಸಂದರ್ಭಗಳಲ್ಲಿ ಯಾವುದು ಸರಿ ಎಂದು ನಿರ್ಣಯಿಸಲು ಸಹಾಯವಾಗುವಂತೆ ಶಾಸ್ತ್ರಜ್ಞರು 'ನಿನ್ನ ಮನಸ್ಸು ತೆರೆದಿರಲಿ' 'Keep an open mind', ಎಂಬ ಸೂತ್ರವನ್ನು ಮುಂದಿಟ್ಟಿದ್ದಾರೆ. ಈ ತೆರೆದ ಮನದ ವಿಷಯವಾಗಿ ನಾವೆಲ್ಲ ಸಾಕಾದಷ್ಟು ಹೊಗಳಿಕೆಯನ್ನು ಕೇಳಿದ್ದೇವೆ, ನಾನೇ ಎಷ್ಟೋ

ವೇಳೆ ನನ್ನೊಡನೆ ವಾದಕ್ಕೆ ನಿಂತವರಿಗೆ ಈ ಬುದ್ಧಿವಾದವನ್ನು ಹೇಳಿದ್ದೇನೆ; ಬಹುಶಃ ಹಾಗೆ ಹೇಳುವುದಕ್ಕೆ ಕಾರಣ: ಅವರ ವಾದ ಮನಸ್ಸಿಗೆ ಬರದಂತೆ ನನ್ನ ಮನೋದ್ವಾರವನ್ನು ಮುಚ್ಚಿರುವುದು! ಲೋಕಾಭಿರಾಮವಾಗಿ ಮಾತನಾಡುತ್ತ ಕುಳಿತಿರುವಾಗ 'ಇದನ್ನು ಯಾರೂ ವಿರೋಧಿಸಲಾರರು, ಇದು ನಿರ್ವಿವಾದವಾದ ತತ್ವ', ಎನ್ನಿಸಬಹುದು, ಆದರೆ ಅದನ್ನು ಕುರಿತು ಆಲೋಚನೆ ಮಾಡಲಾರಂಭಿಸಿದಾಗ ಹತ್ತಾರು ತೊಡಕುಗಳು ಗೋಚರಕ್ಕೆ ಬರುತ್ತವೆ.

'ತೆರೆದ ಮನ' ಎಂದರೇನು? ಅದಕ್ಕೆ ಎರಡು ಬಗೆಯ ಅರ್ಥ ಮಾಡುವುದು ಸಾಧ್ಯ. ಅವೆರಡು ಅರ್ಥಗಳಿಗೂ ಸಂಬಂಧವಿದೆ, ಎರಡೂ ಕೆಲವು ಸಂದರ್ಭಗಳಿಗೆ ಒಟ್ಟಿಗೆ ಅನ್ವಯಿಸಬಹುದು. ಆದರೂ ಅವು ಬೇರೆ ಬೇರೆ ಅರ್ಥಗಳೆಂದೇ ಪರಿಗಣಿಸುವುದು ಉತ್ತಮ, ಮೊದಲನೆಯದಾಗಿ, 'ನಿಮ್ಮ ಮನಸ್ಸು ತೆರೆದಿರಲಿ' ಎನ್ನುವಾಗ ನಮ್ಮ ಅಭಿಪ್ರಾಯ

ತೀರ್ಮಾನಕ್ಕೆ ಬರುವ ಮುನ್ನ, ಅಥವಾ ಯಾವುದಾದರೂ ತತ್ವವನ್ನು ಪೂರ್ಣರೂಪಕ್ಕೆ ತರುವ ಮುನ್ನ, ಆ ಸಂಬಂಧದಲ್ಲಿ ಪರಿಶೀಲಿಸಬೇಕಾದ ಅಂಶಗಳೆಲ್ಲಕ್ಕೂ ನಮ್ಮ ಮನಸ್ಸಿನಲ್ಲಿ ಸ್ಥಳ ಕೊಡಬೇಕು. ಯಾವ ಸಮಸ್ಯೆಯೇ ಆಗಲಿ, ಅದಕ್ಕೆ ಹತ್ತು ಮುಖಗಳಿರುತ್ತವೆ; ಅವೆಲ್ಲವನ್ನೂ ನೋಡಬೇಕು. ನಮ್ಮ ಮನಸ್ಸಿನಲ್ಲಿ ಅದುವರೆಗೆ ಶೇಖರವಾಗಿರುವ ಅಂಶಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಸಮಸ್ಯೆಯನ್ನು ಬಿಡಿಸ ಹೋಗಬಾರದು, ತತ್ವವನ್ನು ಪ್ರತಿಪಾದಿಸಬಾರದು, ತೀರ್ಮಾನಕ್ಕೆ ಬರಬಾರದು, ಸಾಕ್ಷ್ಯವೆಲ್ಲ ಬರುವವರೆಗೆ ಕಾದಿದ್ದು ಅನಂತರ ಅದೆಲ್ಲವನ್ನೂ ಪರಿಶೀಲಿಸಿ ತೀರ್ಮಾನ ಕೊಡಬೇಕು, ನಮ್ಮ ಆತ್ಮದ ಕಿಟಕಿಗಳೆಲ್ಲವನ್ನೂ ತೆರದಿಡೋಣ; ಎಂಟು ದಿಕ್ಕುಗಳಿಂದಲೂ ಗಾಳಿ ಬೀಸಿ ದೊಡ್ಡ ಅನುಭವಗಳನ್ನು ಹೊಸ ಭಾವಗಳನ್ನು ಹೊತ್ತು ತಂದು ನಮ್ಮಲ್ಲಿ ತುಂಬಲಿ, ಅವುಗಳೆಲ್ಲದರ ಸಮನ್ವಯದಿಂದ ನಮ್ಮ ವ್ಯಕ್ತಿತ್ವವೂ ಆಲೋಚನಾ ಶಕ್ತಿಯ ದೃಷ್ಟಿಯಾಗಲಿ.

'ತೆರೆದ ಮನ' ಎನ್ನುವಾಗ ನಮ್ಮ ಮನಸ್ಸಿನಲ್ಲಿ ಈ ಬಗೆಯ ಯೋಚನೆಗಳಿರಬಹುದು. ಈ ದೃಷ್ಟಿಯಿಂದ 'ಮುಚ್ಚಿದ ಮನ' ಎಂದರೆ ಹೊಸ ಸಾಕ್ಷ್ಯ, ಭಾವ, ಅನುಭವ, ಇತ್ಯಾದಿಗಳ ಸಂಪರ್ಕ ಬರದಂತೆ ಮನಸ್ಸನ್ನು ಸೆರೆಯಲ್ಲಿಡುವುದು. ಇಂಥ ಸೆರೆಯಲ್ಲಿದ್ದರೆ ಹೊರಗಿನಿಂದ ಆಲೋಚನೆಗಳು ಒಳಕ್ಕೆ ಬರಲಾರದು ಎನ್ನುವುದು ನಿಜವಾದಂತೆಯೇ ನಮ್ಮ ಮನಸ್ಸು ಹೊರಗಿನ ಪ್ರಪಂಚದಲ್ಲಿ ವಿಹರಿಸಿ ಅನುಭವವನ್ನು ಶೇಖರಿಸಲಾರದು ಎಂಬುದೂ ನಿಜ. ಅದಕ್ಕೆ ಕೊಡಬಹುದಾದ ಹೋಲಿಕೆಯೆಂದರೆ, ತನ್ನಲ್ಲೇ ದೊರೆಯುವ ಸಾಮಗ್ರಿಯಿಂದ ಬಲೆಯನ್ನು ನೇಯುವ ಜೇಡರ ಹುಳುವಿನ ಹೋಲಿಕೆ, ಬನಬನದಲ್ಲಿ ಸಂಚರಿಸಿ ಸಾವಿರ ಹೂವುಗಳಿಂದ ಕಾಣಿಕೆ ಪಡೆದು ಜೇನನ್ನು ಸೃಷ್ಟಿಮಾಡುವ ದುಂಬಿಯದಲ್ಲ, ಅಂಥ ಮನಸ್ಸು ರಚಿಸುವ ವಿಚಾರಸೌಧ ಜೇಡನ ಬಲೆಗಿಂತ ಹೆಚ್ಚು ದೃಢವಲ್ಲ.

ಕೇವಲ ಥಿಯರಿಯ ಮಾತನ್ನೇ ಆಡುವುದಾದರೆ ಮೇಲೆ ಹೇಳಿದ್ದೆಲ್ಲವನ್ನೂ ಚರ್ಚೆಯಿಲ್ಲದೆ ಒಪ್ಪಬಹುದು. ಆದರೆ ಈ ಪ್ರಪಂಚದಲ್ಲಿ ಥಿಯರಿಯ ವಿವೇಚನೆ ಮಾತ್ರವಲ್ಲದೆ ವ್ಯವಹಾರವ ನಡೆಯಬೇಕಷ್ಟೆ. ಆದ್ದರಿಂದ ಈ ವಿಷಯವನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸೋಣ. ಮೇಲೆ ಹೇಳಿದಂತೆ ಸಾಕ್ಷ್ಯವನ್ನೋ ಅನುಭವವನ್ನೋ ಶೇಖರಿಸುವ ಕೆಲಸ ಎಷ್ಟು ಕಾಲ ನಡೆಯಬೇಕು? ಯಾವ ತೀರ್ಮಾನಕ್ಕೂ ಬರದೆ, ಯಾವ ದೃಷ್ಟಿಯನ್ನೂ ರೂಪಿಸಿಕೊಳ್ಳದೆ ಮನಸ್ಸನ್ನು ಎಷ್ಟು ಕಾಲ ತೆರೆದಿಡಬೇಕು? ಮೇಲು ನೋಟಕ್ಕೆ ಈ ಪ್ರಶ್ನೆಗೆ ಉತ್ತರ ಕೊಡುವುದು ಬಹು ಸುಲಭ, ಎಷ್ಟು ಕಾಲ ಎಂದರೆ ಸಮಸ್ಯೆಗೆ ಸಂಬಂಧಪಟ್ಟ ಸಾಕ್ಷ್ಯವೆಲ್ಲ ಒದಗುವವರೆಗೆ, ಅದರ ಎಲ್ಲ ಮುಖಗಳನ್ನೂ ಪರಿಶೀಲಿಸುವವರೆಗೆ.ಅರ್ಥಾತ್ ನಮ್ಮ ಉತ್ತರವನ್ನು ಒಂದೇ ಮಾತಿನಲ್ಲಿ ಮುಗಿಸಬಹುದು. ಅನಂತಕಾಲದವರೆಗೆ: ಅಥವಾ (ಮಾನವನಿಗೆ ಅನಂತತೆಯಿಲ್ಲವಾದ್ದರಿಂದ). ಸಾಯುವವರೆಗೆ! ಏಕೆಂದರೆ ಮನುಷ್ಯ ಮಾತ್ರನಾದ ಯಾವನೇ ಆಗಲಿ, ಯಾವುದೊಂದು ಸಮಸ್ಯೆಯ ಎಲ್ಲ ಮುಖಗಳನ್ನೂ ಪರಿಶೀಲಿಸಲಾರ, ಎಲ್ಲ ಸಾಕ್ಷವನ್ನೂ ಸಂಗ್ರಹಿಸಲಾರ

ತೆರೆದ ಮನ ಎಂದರೆ ಹೊಸ ಅನುಭವಾಂಶಗಳ ಪ್ರವೇಶಕ್ಕಾಗಿ ಮನಸ್ಸನ್ನು ತೆರೆದಿಡುವುದಲ್ಲ, ಅಥವಾ ಅದಷ್ಟು ಮಾತ್ರವಲ್ಲ. ಅದಕ್ಕಿಂತ ಹೆಚ್ಚಾಗಿ, ನಮಗೆ ದೊರಕಿರುವ ಮತ್ತು ಮುಂದೆ ದೊರಕಬಹುದಾದ ಅನುಭವಾಂಶಗಳನ್ನು ನಿಷ್ಪಕ್ಷಪಾತವಾಗಿ ನೋಡತಕ್ಕದ್ದು, ಪೂರ್ವಗ್ರಹಗಳೂ ಸಂಕುಚಿತಭಾವಗಳೂ ತೊಲಗಲೆಂದು ಮನಸ್ಸಿನ ಬಾಗಿಲನ್ನು ತೆರೆಯುವುದು.

ಕಾಕದೃಷ್ಟಿಯಿಂದ ನೋಡಬಹುದಷ್ಟೆ. ನಾವೆಲ್ಲರೂ ಒಂದಲ್ಲ ಒಂದು ಸಲ, ಒಂದು ವಿಧದಲ್ಲಲ್ಲದಿದ್ದರೆ ಮತ್ತೊಂದು ವಿಧದಲ್ಲಿ, ಪೂರ್ವಗ್ರಹಗಳಿಗೆ ವಶವಾಗುತ್ತೇವೆ. ಜೀವನ ನನಗೆ ಎಂದಾದರೂ ಕಹಿಯೂಟವನ್ನು ಉಣ್ಣಿಸಿದ್ದರೆ ನಾನು ಆ ಅನುಭವವನ್ನು ವಿಶ್ವಕ್ಕೆಲ್ಲ ಅನ್ವಯಿಸಿ, 'ಈ ಸಂಸಾರವೆನ್ನುವುದು ವಿಷಮಯ' ಎಂದು ನಿರಾಶೆಯ ನಿರ್ಣಯ ಮಾಡುತ್ತೇನೆ. ನನ್ನ ನಿರಾಶೆಯನ್ನು ಕರಗಿಸುವಂಥ ಸಾಕ್ಷ್ಯ ಬರಬಹುದು, ಅದನ್ನು ನಾನು ಒಳತೆಗೆದುಕೊಳ್ಳಲೂಬಹುದು; ಆದರೆ ಅದನ್ನು ಗಣನೆಗೆ ತಂದುಕೊಳ್ಳುವಾಗ ನನ್ನ ಮನಸ್ಸು ಅದನ್ನು ತಿರುಚಿ, ವಿರೂಪಗೊಳಿಸಿ, ನಿರಾಶೆಗೆ ಪುಷ್ಟಿ ಕೊಡುವಂತೆ ಅದನ್ನು ಮಾರ್ಪಡಿಸುತ್ತದೆ. ನಮಗೆ ಇಷ್ಟರಾದವರ ದೋಷಗಳನ್ನು ಯಾರಾದರೂ ಬೆರಳಿಟ್ಟು ತೋರಿಸಿದರೂ ಅವು ನಮಗೆ ಕ್ಷಮಾರ್ಹವಾಗಿ ಕಾಣುತ್ತವೆ; ಅದೇ ದೋಷಗಳು ಮತ್ತೊಬ್ಬರಲ್ಲಿ ಭೂತಾಕಾರವನ್ನು ತಾಳುತ್ತವೆ. ಅತ್ತೆ ಒಡೆದ ಮಡಕೆಗೆ ಬೆಲೆಯಿಲ್ಲ; ಅದನ್ನು ಒಡೆದವಳು ಸೊಸೆಯಾದರೆ ಆಗಿನ ಮಾತೇ ಬೇರೆ. ಇಂಥ ವಕ್ರದೃಷ್ಟಿಯೋ ಪೂರ್ವಗ್ರಹಗಳೊ ನಮ್ಮಲ್ಲಿ ಮನೆಮಾಡಿದ್ದರೆ ಅವುಗಳಿಂದಾಗಿ ಸತ್ಯದ ಸ್ವರೂಪ ಮಸಕಾಗಬಹುದು. ತೆರೆದ ಮನ ಎಂದರೆ ಇಂಥವುಗಳನ್ನು ತೊಲಗಿಸತಕ್ಕದ್ದು, ಅನುಭವ ವಿರೂಪಗೊಳ್ಳದಂತೆ ವಸ್ತುಸ್ಥಿತಿ ಹೇಗಿದ್ದರೆ ಹಾಗೆಯೇ ನೋಡತಕ್ಕದ್ದು.

ಈ ಬಗೆಯ ತೆರೆದ ಮನವನ್ನು ಯಾವ ಹಿಂಜರಿಕೆಯೂ ಇಲ್ಲದೆ ಸ್ವಾಗತಿಸಿಬಹುದಲ್ಲವೆ? ಹೌದು ಬಹುಮಟ್ಟಿಗೆ, ಆದರೆ ಇದರ ವಿಷಯದಲ್ಲೂ ಆದರೆ ಸ್ವಲ್ಪ ಸಂದೇಹಕ್ಕೆ ಅವಕಾಶವಿದೆ. ಅಷ್ಟೇ ಆದರೆ ಸಾಲದೆಂದು ತೋರುತ್ತದೆ. ಪೂರ್ವಗ್ರಹಗಳಿಂದ ಬಿಡುಗಡೆ ಪಡೆಯುವುದು, ಸಾಕ್ಷವನ್ನು ವಿರೂಪಗೊಳಿಸದಿರುವುದು ಮುಂತಾದ್ದೆಲ್ಲ ಬುದ್ಧಿಶಕ್ತಿಯಿಂದ ನಡೆಯುವ ವ್ಯಾಪಾರ, ಭಾವಶಕ್ತಿಯಿಂದಲ್ಲ. ಆದರೆ ಬಾಹ್ಯವಸ್ತುಗಳ ಗುಣದೋಷಗಳೂ ಕುರೂಪ ಸುರೂಪಗಳ ನಮಗೆ ಹಣವಾಗಿ ಗೋಚರಿಸುವುದೆಂದರೆ ನಮ್ಮ ಮನಸ್ಸು ಅವುಗಳ ಮೇಲೆ ತನ್ನದೊಂದು ಭಾವವನ್ನು ಬೀಸಿದಾಗ, ಪೂರ್ವಾಗ್ರಹಗಳನ್ನು ತೊಲಗಿಸಿದ್ದೇವೆ. ಮನಸ್ಸು ಪರಿಶುದ್ಧವಾಗಿದೆ. ಎಂದರೆ ಸಾಲದು. ರಸಾಯನ ಶಾಸ್ತ್ರಜ್ಞರು, ಪರಿಶುದ್ಧವಾದ ನೀರು ಎಂದರೆ 'ಬಣ್ಣವಿಲ್ಲದ್ದು, ರುಚಿಯಿಲ್ಲದ್ದು, ವಾಸನೆಯಿಲ್ಲದ್ದು' ಎಂದು ಅರ್ಥ ಮಾಡುತ್ತಾರೆ. ಒಟ್ಟಿನಲ್ಲಿ ನಿರ್ಗುಣವಾದದ್ದು. ಇಂಥ ಮನಸ್ಸು ಹೊರಗಿನ ಪ್ರಪಂಚದ ಮೇಲೆ ಆಡಿದರೆ ಆ ಪ್ರಪಂಚದ ಗುಣ, ಚೆಲುವು, ಬಣ್ಣದ ಸೊಬಗು, ಗಂಧ, ರುಚಿ, ಇವುಗಳನ್ನು ಕಾಣಲಾರದು.

ಪೂರ್ವಾಗ್ರಹಗಳನ್ನು ತೊಲಗಿಸುವುದು ನಕಾರಾತ್ಮಕ (negative) ಕ್ರಿಯೆ, ಹೊರಗಿನಿಂದ ಅನುಭವವನ್ನು ಸ್ವೀಕರಿಸುವುದು ನಕಾರಾತ್ಮಕವಲ್ಲವೆಂದರೂ ಮೇಲೆ ಬಣ್ಣಿಸಿದಂಥ ಮನಸ್ಸು ಆ ಕೆಲಸವನ್ನು ಉತ್ಸಾಹವಿಲ್ಲದೆ ಯಾಂತ್ರಿಕವಾಗಿ ಮಾಡುತ್ತದೆ; ಸ್ವೀಕರಿಸುವಾಗ ಅದಕ್ಕೆ ಪ್ರೇಮವೂ, ದ್ವೇಷವೂ ಇಲ್ಲ, ಹೀಗೆ ಭಾವಶೂನ್ಯವಾದ ರೀತಿಯಲ್ಲಿ ನೋಡಿದರೆ ಸತ್ಯದ ಸ್ವರೂಪ ತಿಳಿದೀತೆ? ಡಾಕ್ಟರ್, ಜಾನ್ಸನ್ ಒಂದು ಬಾರಿ ಹೇಳಿದ: 'ಚೆನ್ನಾಗಿ ದ್ವೇಷಿಸುವವರನ್ನು ಕಂಡರೆ ನನಗೆ ಪ್ರೀತಿ' ಎಂದು, ಅವನು ಹಾಗೆಂದದ್ದು ವಿರೋಧಾಭಾಸವನ್ನು ಮೆರಸುವುದಕ್ಕಲ್ಲ, ಎಲ್ಲರೂ ತೆಗೆಳುವುದನ್ನು ತಾನು ಹೊಗಳಬೇಕು ಎಂಬ ಕೊಂಕುಬುದ್ಧಿಯಿಂದಲ್ಲ. ಪ್ರೇಮದ್ವೇಷಗಳೆರಡೂ ನಮ್ಮ ಮನಸ್ಸಿನಲ್ಲಿ ಜೀವಂತವಾದ ಆಸಕ್ತಿಯಿದೆ, ಉತ್ಸಾಹವಿದೆ, ಪ್ರಚೋದಕ ಶಕ್ತಿಯಿದೆ, ಅದು ಜಡವಾಗಿಲ್ಲ' ಎಂಬುದರ ಚಿಹ್ನೆ, ಜಾನ್ಸನ್ನನ ಮಾತಿನಲ್ಲಿ ಅಡಗಿರುವುದು ಈ ಅಭಿಪ್ರಾಯ, ಪ್ರೇಮದ್ವೇಷಗಳು ("ರಾಗದ್ವೇಷಗಳು' ಎಂಬ ಮಾತೇ ಹೆಚ್ಚು ಬಳಕೆಯಲ್ಲಿದೆ) ನಮ್ಮ ದೃಷ್ಟಿಯನ್ನು ಮಸಕು ಮಾಡುತ್ತವೆ ಎಂದಲ್ಲವೆ, ತತ್ವಶಾಸ್ತ್ರಿಗಳು ಹೇಳುವುದು ? ಅವರ ಅಭಿಪ್ರಾಯವನ್ನು ಪೂರ್ತಿ ನಿರಾಕರಿಸುವಂತಿಲ್ಲ, ಆದರೆ ಪ್ರೇಮಿಗಳ ಮತ್ತು ದ್ವೇಷಿಗಳ ಕಣ್ಣಿಗೆ ತಾವು ಯಾವುದನ್ನು

ಪ್ರೀತಿಸುತ್ತಾರೋ ಅಥವಾ ದ್ವೇಷಿಸುತ್ತಾರೋ ಅದರ ರೇಖೆಗಳೂ ವರ್ಣವಿನ್ಯಾಸವೂ ಇತರರಿಗೆ ಕಾಣುವುದಕ್ಕಿಂತ ಹೆಚ್ಚು ಸ್ಫುಟವಾಗಿ ಕಾಣುತ್ತವೆ– ಈ ಮಾತಿನಲ್ಲೂ ಸತ್ಯಾಂಶವಿಲ್ಲದಿಲ್ಲ, ಪ್ರೇಮಿಗೆ ದ್ವೇಷಯೋಗ್ಯವಾದದ್ದು ಕಾಣುವುದಿಲ್ಲ ಎಂದು ಒಪ್ಪೋಣ; ಆದರೆ ಪ್ರೇಮಯೋಗ್ಯವಾದದ್ದು ಹೆಚ್ಚು ಸ್ಫುಟವಾಗಿ ಕಾಣುತ್ತದೆ. ಹಾಗೇ ದ್ವೇಷಿಯ ಕಣ್ಣಿಗೆ ಪ್ರೇಮಯೋಗ್ಯವಾದದ್ದು ಮಸಕಾದರೂ ದ್ವೇಷಯೋಗ್ಯವಾದದ್ದು ಹೆಚ್ಚು ಸ್ಫುಟವಾಗುತ್ತದೆ. ಅವರು ದ್ವೇಷಿಸುವ ಅಥವಾ ಪ್ರೀತಿಸುವ ಗುಣ ಆ ವಸ್ತುವಿನಲ್ಲಿದೆಯೋ ಇಲ್ಲವೊ ಅದು ಬೇರೆ ಮಾತು. 'ಈ ರಾಮಣ್ಣನ ಮೋಸ ಕಂಡರಾಗದು' ಎಂದು ನಾನು ಉದ್ಧರಿಸುವಾಗ ನನಗೆ ನಾನು ದ್ವೇಷಿಸುವ ಮೋಸದ ಸ್ವರೂಪ ಸ್ಪಷ್ಟವಾಗಿ ಕಾಣುತ್ತದೆ; ಆದರೆ ಆ ಮೋಸ ವಾಸ್ತವವಾಗಿ ರಾಮಣ್ಣನಲ್ಲಿ ಇಲ್ಲದಿರಬಹುದು. ಹೀಗೆ ದ್ವೇಷ ಒಂದು ಕಡೆ ನಮ್ಮ ದೃಷ್ಟಿಯನ್ನು ಮಸಕು ಮಾಡಿದೆ, ಮತ್ತೊಂದು ಕಡೆ ಅದನ್ನು ತೀಕ್ಷ್ಣ ಮಾಡಿಯೂ ಇದೆ.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಅಂಶ ಮತ್ತೊಂದಿದೆ. ನಾವು ಯಾವುದೋ ಒಂದನ್ನು ದ್ವೇಷಿಸುತ್ತೇವೆ ಎಂದಿಟ್ಟುಕೊಳ್ಳೋಣ, ಸಾಮಾನ್ಯವಾಗಿ ಆ ದ್ವೇಷಕ್ಕೆ ಕಾರಣ ಅದಕ್ಕೆ ವಿರುದ್ಧವಾದದ್ದರ ಮೇಲಿನ ಪ್ರೇಮ, ದುಷ್ಟತನವನ್ನು ದ್ವೇಷಿಸುವುದಕ್ಕೆ ಕಾರಣ: ಸೌಜನ್ಯವನ್ನು ಕುರಿತ ಪ್ರೇಮ, ಕೊಲೆಯನ್ನು ದ್ವೇಷಿಸುವುದಕ್ಕೆ ಕಾರಣ; ಜೀವದ ಮೇಲಿರುವ ಪ್ರೇಮ, ಈ ಪ್ರಪಂಚದಲ್ಲಿ ದ್ವೇಷಕ್ಕೆ ಗುರಿಯಾಗುವಂಥ ಕೇಡಿಗತನಕ್ಕೆ ಕೊರತೆಯೇನಿಲ್ಲ. ಅದನ್ನು ನಾವು ದ್ವೇಷಿಸುವುದೇತಕ್ಕೆ ಎಂದರೆ ನ್ಯಾಯವಾಗಿ ಒಳ್ಳೆಯದಕ್ಕೆ ಸಲ್ಲಬೇಕಾದ ಸ್ಥಾನವನ್ನು ಅದು ಆಕ್ರಮಿಸಿರುವುದಕ್ಕಾಗಿ, ಒಳ್ಳೆಯದಕ್ಕೆ ಅವಕಾಶ ಕೊಡದೆ ಇರುವುದಕ್ಕಾಗಿ, ವಯಸ್ಸಾದವರು ಇಂದು ಪ್ರಪಂಚ ಕೆಟ್ಟಿತಲ್ಲ ಎಂದು ಗೋಳಿಡುವುದಕ್ಕೆ ಕಾರಣ ಅದು ಹಿಂದಿನ ಪ್ರಪಂಚದಂತಿಲ್ಲದಿರುವುದು, ಆ ಹಿಂದಿನ ಪ್ರಪಂಚಕ್ಕೆ ಅವರು ಇಂದ್ರಧನುವಿನ ವರ್ಣಸಂಪತ್ತನ್ನು ಕೊಟ್ಟು ಅದನ್ನು ಒಳಿತಿನ ಪ್ರತೀಕವಾಗಿ ಮಾಡಿಕೊಂಡಿದ್ದಾರೆ. ಅದರ ಸತ್ಯಚಿತ್ರಕ್ಕೂ ಇವರ ಮನಸಿನಲ್ಲಿನ ಚಿತ್ರಕ್ಕೂ ದೂರವಿದೆ, ನಿಜ, ಆದರೆ ಅವರು ತಮ್ಮ ಪ್ರೇಮದಿಂದಾಗಿ ಹಿಂದಿನ ಕಾಲದಲ್ಲಿದ್ದ ಒಳಿತನ್ನು ಯುವಕರಿಗಿಂತ ಹೆಚ್ಚು ಸ್ಫುಟವಾಗಿ ಕಾಣುತ್ತಾರೆ.

ಹಾಗೇ ಯುವಕರಿಗೆ ಇಂದಿನ ಮತ್ತು ಮುಂದಿನ ಒಳಿತು ಹೆಚ್ಚು ಸ್ಫುಟವಾಗಿ ಕಾಣುತ್ತದೆ. ವೃದ್ಧ ಯುವಕರಿಬ್ಬರೂ ಪ್ರೀತಿಸುವುದು ತಮಗೆ ಒಳಿತೆಂದು ತೋರಿದ್ದನ್ನೇ, ದ್ವೇಷಿಸುವುದು ಕೆಡುಕೆಂದು ತೋರಿದ್ದನ್ನೇ. ಒಳಿತಾದದ್ದು ಬೇಕು ಎನ್ನುವ ವಿಷಯದಲ್ಲಿ ಅವರವರಿಗೆ ಭಿನ್ನಾಭಿಪ್ರಾಯವಿಲ್ಲ. ಅದು ಅವರಿಗೆ ಸ್ಪಷ್ಟವಾಗಿ ಕಾಣುವುದಕ್ಕೆ ಅದರ ವಿಷಯದಲ್ಲಿರುವ ಪ್ರೇಮವೇ ಕಾರಣ. ಆದ್ದರಿಂದ ನಾವು ನಕಾರಾತ್ಮಕವಾದ ನಿರಾಸಕ್ತಿಯನ್ನು ಬಿಟ್ಟು ಪ್ರೇಮವನ್ನು ಬೆಳೆಸಿಕೊಳ್ಳೋಣ.

ದ್ವೇಷಕ್ಕೂ ಒಂದು ಸ್ಥಾನವಿದೆ–ಅದು ಕೇಡು ಮಾಡಿದ ವ್ಯಕ್ತಿಯ ಮೇಲಿನ ದ್ವೇಷವಾಗದೆ ಕೇಡಿಗತನವನ್ನು ಮಾತ್ರ ಕುರಿತ ದ್ವೇಷವಾದರೆ. ಆದರೆ ನಿಜವಾಗಿ ಆ ದ್ವೇಷ ಕೇಡಿಗತನಕ್ಕೆ ವಿರುದ್ಧವಾದ ಸದ್ಗುಣವನ್ನು ಕುರಿತ ಪ್ರೇಮವೆಂದು ಆಗಲೇ ಕಂಡವಷ್ಟೆ. ತಿರುಗಿ ನಾವು ಪ್ರೇಮದ ಬಳಿಗೇ ಬಂದಂತಾಯಿತು. ಅದರಿಂದ ನಮ್ಮ ದೃಷ್ಟಿ ಸ್ವಚ್ಛವಾಗುತ್ತದೆ; ಮಾತ್ರವಲ್ಲ, ಕೇಡನ್ನು

ಮಾಡಿದವನ ವಿಷಯದಲ್ಲಿ ಸಹನೆಯೂ ಅನುಕಂಪವೂ ಉಂಟಾಗುತ್ತವೆ. ಕೇಡನ್ನು ನಾವು ನೋಡುವುದಿಲ್ಲ ಎಂದು ಆಸ್ಟ್ರಿಚ್ ಪಕ್ಷಿಯಂತೆ ಕಣ್ಣು ಮುಚ್ಚಿದ್ದರಿಂದ ಪ್ರಯೋಜನವೇನೂ ಇಲ್ಲ. ಕೇಡನ್ನು ಗಮನಿಸಿದ ಮೇಲೂ ಕೇಡಿಗನನ್ನು ದ್ವೇಷಿಸದಿರಬೇಕು. 'ತೆರೆದ ಮನ' ಎಂದರೆ ಇದಕ್ಕೆ ಅನುಕೂಲವಾಗುವಂಥಾದ್ದು. ಪೂರ್ವಾಗ್ರಹಗಳು ರಾಕ್ಷಸರು; ಪ್ರೀತಿ ಮತ್ತು ಅದಕ್ಕೆ ಸಂಬಂಧಪಟ್ಟ ಅನುಕಂಪ ಇತ್ಯಾದಿ ಗುಣಗಳು ದೇವತೆಗಳು. 'ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಂ' ನಮ್ಮ ಮನವನ್ನು ತೆರೆದಿಡೋಣ.

**ಲೇಖಕರ ಪರಿಚಯ: ಎ.ಎನ್. ಮೂರ್ತಿರಾವ್**

ಲಲಿತ ಪ್ರಬಂಧ ಪ್ರಕಾರಕ್ಕೆ ವಿಶೇಷ ಕೊಡುಗೆ ನೀಡಿದ್ದ ಅಕ್ಕಿ ಹೆಬ್ಬಾಳು ನರಸಿಂಹಮೂರ್ತಿರಾವ್ ೧೯೦೦ರ ಜೂನ್ ೧೬ರಂದು ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಜನಿಸಿದರು. ವಿಮರ್ಶಕರೂ ಆಗಿದ್ದ ಇವರು ವೈಚಾರಿಕ ಗ್ರಂಥ 'ದೇವರು' ಮೂಲಕ ಜನಪ್ರಿಯರಾಗಿದ್ದಾರೆ.

'ಅಪರ ವಯಸ್ಕನ ಅಮೇರಿಕ ಯಾತ್ರೆ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, 'ಚಿತ್ರಗಳು ಮತ್ತು ಪತ್ರಗಳು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ, ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್(೧೯೭೭)), ಸಮಗ್ರ ಸಾಹಿತ್ಯಕ್ಕೆ ಮಾಸ್ತಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಗೌರವ, ಡಿ.ಲಿಟ್. ಪ್ರಶಸ್ತಿ, 'ದೇವರು' ಗ್ರಂಥಕ್ಕೆ ಪಂಪ ಪ್ರಶಸ್ತಿ ಮುಂತಾದವು ಇವರಿಗೆ ಸಂದಿವೆ. ಕೈವಾರಗಳಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೬ನೇ ಕನ್ನಡ ಸಾಹಿತ್ಯ ಸಮ್ಮೇಳನ (೧೯೮೪) ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಇವರು ತಮ್ಮ ೧೦೪ನೇ ವಯಸ್ಸಿನಲ್ಲಿ ೨೦೦೩ರ ಆಗಸ್ಟ್ ೨೩ರಂದು ನಿಧನರಾದರು.

**ಬೆಂಗಳೂರು ನಗರ ವಿಶ್ವವಿದ್ಯಾಲಯ**

**ಮಾದರಿ ಪ್ರಶ್ನೆಪತ್ರಿಕೆ– ವಾಣಿಜ್ಯ ಸೌರಭ–೦೪**

**ಅವಧಿ–೨. ೩೦ ಗಂಟೆಗಳು ನಾಲ್ಕನೇ ಸೆಮಿಸ್ಟರ್ ಬಿ.ಕಾಂ ಅಂಕಗಳು: ೬೦**

**I. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 5*2=10**

೧. ಹಿಡಿಂಬ, ಬಕವೈರಿ ಇವು ಯಾರ ನಾಮಾಂಕಿತಗಳು?
೨. ಹಡಗಿನ ಮೇಲಿನ ಆಂಗ್ಲ ಸ್ತ್ರೀಯರ ವ್ಯವಹಾರ ಹೇಗಿತ್ತು?
೩. ಜಗದೀಶರಿಗೆ ನೆನಪಿಗೆ ಬಂದ ಘಟನೆ ಯಾವುದು?
೪. ಕೆರೆಯನ್ನು ಕಟ್ಟಿಸಿದವರು ಯಾರು?
೫. ಕೊಳಗೇರಿಗಳ ಸುಧಾರಣೆಯ ಸಾಧ್ಯತೆಗಳು ಮೂಲ ಲೇಖಕರ ಪರಿಚಯ.
೬. ಕುವೆಂಪು ಅವರ ಎರಡು ಕೃತಿಗಳು.
೭. ಅಕ್ಕ–ತಂಗಿಯರ ಸಂಭಾಷಣೆ ಕೇಳಿದ ಪಾಹಂಗೆ ಅನಿಸಿದ್ದೇನು?
೮. ಭಾಗೀರತಿಯ ಗಂಡನಿಗೆ ಬಿದ್ದ ಕನಸು

**II. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ 4*5=20**

1. ದುರ್ಯೋಧನ ಸರೋವರದಲ್ಲಿ ಅಡಗಿ ಕುಳಿತುಕೊಳ್ಳಲು ಕಾರಣವೇನು?
2. ಏಡನ್ ಬಂದರಿನ ಸ್ಥಳಗಳ ಬಗ್ಗೆ ವಿವರಿಸಿ
3. ಹೃದಯ ಸಮುದ್ರ ಗೀತೆಯ ಆಶಯವನ್ನು ಬರೆಯಿರಿ.
4. ಜಗದೀಶನ ದೇಹದಲ್ಲಾದ ಬದಲಾವಣೆಯಿಂದಾಗಿ ಅನುಭವಿಸಿದ ಯಾತನೆ ವಿವರಿಸಿ.
5. ಬದುಕನ್ನು ಹಸನುಗೊಳಿಸುವ ಬಗ್ಗೆ ಕಣವಿಯವರ ಕವನದಲ್ಲಿ ಹೇಗೆ ವ್ಯಕ್ತವಾಗಿದೆ?
6. ಭಾಗೀರತಿಯ ಮೇಲೆ ಒಂದು ನಿರ್ಧಾರವನ್ನು ಹೇರಿದಾಗ ಆಕೆಯ ಮನಸ್ಸಿನಲ್ಲುಂಟಾದ ತಲ್ಲಣ ಎಂತಹದು?

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ 2*10=20**

೧. ದುರ್ಯೋಧನನ ಕೋಪಗೊಳ್ಳಲು ಕಾರಣವೇನು ವಿವರಿಸಿ.
೨. ಚೆನ್ನಯ್ಯ ಮತ್ತು ಅಬ್ದುಲ್ ಅಜೀದ್ ಅವರ ಸಾಮರಸ್ಯದ ಬದುಕನ್ನು ಕುರಿತು ವಿಶ್ಲೇಶಿಸಿ
೩. ಭಾಗೀರತಿ ಕೆರೆಗೆ ಹಾರವಾದ ಬಗೆಯನ್ನು ವಿವರಿಸಿ.
೪. ವಿದ್ಯಾರ್ಥಿಗಳು ಮತಿಗೌರವವನ್ನು ಸಾಧಿಸುವ ಬಗೆ ಹೇಗೆ ವಿವರಿಸಿ

**IV. ಯಾವುದಾದರೂ ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ (ಓದುಪಠ್ಯ) 2*5=10**

೧. ಲಕ್ಷದ್ವೀಪದ ಜನರ ಜೀವನ ಕುರಿತು ಬರೆಯಿರಿ?
೨. ಮೂರ್ಕಲ್ ಕೆರೆಗೆ ದಾಹ ತೀರಿಸಿಕೊಳ್ಳಲು ಸರದಿ ಸಾಲಿನಲ್ಲಿ ಬರುತ್ತಿದ್ದ ಪ್ರಾಣಿಗಳ ವರ್ತನೆ
೩. ಎ.ಎನ್ ಮೂರ್ತಿರಾಯರ ದೃಷ್ಟಿಯಲ್ಲಿ ತೆರೆದ ಮನ ಎಂದರೇನು?
೪. ಪರಿಸ್ಥಿತಿ– ಮನಸ್ಥಿತಿಗಳಿಗೆ ಆತ್ಮಹತ್ಯೆಯೇ ಪರಿಹಾರವಲ್ಲ! ಲೇಖನದ ಆಶಯವೇನು?

***

## ಎನ್.ಇ.ಪಿ. ಕನ್ನಡ ಭಾಷಾ ಪಠ್ಯ

## ವಾಣಿಜ್ಯ ಸೌರಭ–III

## ಬಿ.ಕಾಂ. ಮೂರನೇ ಸೆಮಿಸ್ಟರ್

**ಪ್ರಧಾನ ಸಂಪಾದಕರು**

**ಡಾ.ಪ್ರಶಾಂತ ಜಿ. ನಾಯಕ**

**ಪರಿಶೀಲಕರು**


**ಡಾ.ಬೆಳಕೆರೆ ಲಿಂಗರಾಜಯ್ಯ**

ಸಹ ಪ್ರಾಧ್ಯಾಪಕರು,ಕನ್ನಡ ವಿಭಾಗ
ವಿವೇಕಾನಂದ ಪ್ರಥಮ ದರ್ಜೆ ಕಾಲೇಜು
ರಾಜಾಜಿನಗರ, ಬೆಂಗಳೂರು


**ಸಂಪಾದಕರು**


**ಡಾ. ರಿಯಾಜ಼್ ಪಾಷ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು.
ಸಂಪರ್ಕ ಸಂಖ್ಯೆ: ೯೯೦೧೬೦೦೧೭೭

**ಪ್ರೊ. ರಮೇಶ್.ಎಂ**

ಪ್ರಾಂಶುಪಾಲರು
ಜ್ಞಾನ ಜ್ಯೋತಿ ಸಂಜೆ ಪದವಿ ಕಾಲೇಜು, ಯಲಹಂಕ ಉಪನಗರ, ಬೆಂಗಳೂರು.
ಸಂಪರ್ಕ ಸಂಖ್ಯೆ: ೯೯೦೦೧೧೩೫೧೭

**ಡಾ. ಸುಭಾಷ್ ರಾಜಮಾನೆ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು.
ಸಂಪರ್ಕ ಸಂಖ್ಯೆ: ೮೦೭೩೩೯೭೪೬೩